ಕರ್ನಾಟಕ ಸರ್ಕಾರ

# ಕರ್ನಾಟಕ
# ಜೀತದಾಳುಗಳ ಪುನರ್ವಸತಿ : ಒಂದು ಕ್ರಿಯಾಯೋಜನೆ

(ಜೀತದಾಳುಗಳ ಗುರುತಿಸುವಿಕೆ ಮತ್ತು ಅವರ ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕ್ರಮ ಜರುಗಿಸುವುದರ ಬಗ್ಗೆಯೂ ಸಂಕ್ಷಿಪ್ತ ಹಾಗೂ ವ್ಯಾಪಕ ಮಾರ್ಗದರ್ಶನಗಳನ್ನು ಒಳಗೊಂಡಿರುತ್ತದೆ)

**2008**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು

# ಕರ್ನಾಟಕ

# ಜೀತದಾಳುಗಳ ಪುನರ್ವಸತಿ : ಒಂದು ಕ್ರಿಯಾಯೋಜನೆ

(ಜೀತದಾಳುಗಳ ಗುರುತಿಸುವಿಕೆ ಮತ್ತು ಅವರ ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕ್ರಮ ಜರುಗಿಸುವುದರ ಬಗ್ಗೆಯೂ ಸಂಕ್ಷಿಪ್ತ ಹಾಗೂ ವ್ಯಾಪಕ ಮಾರ್ಗದರ್ಶನಗಳನ್ನು ಒಳಗೊಂಡಿರುತ್ತದೆ)

**2008**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು

ರಾಜಭವನ
ಬೆಂಗಳೂರು

ರಾಜ್ಯಪಾಲರು

ಸತ್ಯಮೇವ ಜಯತೇ

ಕರ್ನಾಟಕ

ದಿನಾಂಕ : ಜನವರಿ 2, 2008

ಜಿಎಸ್/2/ಎಂಎಸ್‌ಜಿ/08

## ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು "ಕರ್ನಾಟಕ ಜೀತದಾಳುಗಳ ಪುನರ್ವಸತಿ: ಒಂದು ಕ್ರಿಯಾ ಯೋಜನೆ – ೨೦೦೮" ಎಂಬ ಪುಸ್ತಕವನ್ನು ಹೊರತರುತ್ತಿರುವುದು ಸಂತೋಷದ ಸಂಗತಿ.

ಈ ಪುಸ್ತಕದಲ್ಲಿ ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳನ್ನು ಪುನರ್ವಸತಿಗೊಳಿಸುವ ಕಾರ್ಯಕ್ರಮಗಳ ಕುರಿತು ಮಾರ್ಗದರ್ಶನಗಳಿವೆ. ಪ್ರತಿಯೊಂದು ರೀತಿಯ ಬಲಾತ್ಕಾರದ, ಕಡ್ಡಾಯದ ಪುಕ್ಕಟೆ ದುಡಿಮೆಗಳನ್ನು ರದ್ದು ಮಾಡುವುದು ನಮ್ಮ ಸಂವಿಧಾನದ ಬಹು ಮುಖ್ಯ ಗುರಿಗಳಲ್ಲಿ ಒಂದಾಗಿದೆ. ಇದನ್ನೇ ಗಮನದಲ್ಲಿಟ್ಟು ಜೀತಪದ್ಧತಿ ನಿರ್ಮೂಲನೆ ಕಾಯ್ದೆ 1976 ನ್ನು ಜಾರಿಗೊಳಿಸಲಾಗಿತ್ತು. ಸಮೃದ್ಧ ಮತ್ತು ಶಕ್ತಿಯುತ ಭಾರತವನ್ನು ಕಟ್ಟುವಲ್ಲಿ ಜೀತ ಪದ್ಧತಿ ನಿರ್ಮೂಲನೆಯು ಆದ್ಯತೆ ಮೇಲೆ ಆಗಬೇಕಾದ ಕೆಲಸ.

ಕರ್ನಾಟದಲ್ಲಿಯ ಜೀತಪದ್ಧತಿಯನ್ನು ಹೋಗಲಾಡಿಸುವಲ್ಲಿ ಈ ಕ್ರಿಯಾಯೋಜನೆಯು ಸಂಬಂಧಪಟ್ಟ ಇಲಾಖೆಗೆ ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗುವುದೆಂದು ನಾನು ಆಶಿಸುತ್ತೇನೆ.

ಈ ಪ್ರಯತ್ನಕ್ಕೆ ಗೆಲುವಾಗಲೆಂದು ನನ್ನ ಹಾರೈಕೆಗಳು.

ಸಹಿ
(ರಾಮೇಶ್ವರ್ ಠಾಕೂರ್)

**ಶೋಭಾ ಕರಂದ್ಲಾಜೆ**
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್
ಮತ್ತು ಗ್ರಾಮೀಣ ನೀರು ಸರಬರಾಜು ಹಾಗೂ
ನೈರ್ಮಲ್ಯ ಸಚಿವರು

ದೂರವಾಣಿ: ಕಛೇರಿ: 22252163
22033492

ಕೊಠಡಿ ಸಂಖ್ಯೆ 359,
3ನೇ ಮಹಡಿ, ವಿಧಾನ ಸೌಧ,
ಬೆಂಗಳೂರು-560 001

## ಹಾರೈಕೆ

ನಮ್ಮ ಸಂವಿಧಾನದ ಉದಾತ್ತ ಆಶಯಗಳಲ್ಲಿ ಪ್ರತಿಯೊಂದು ರೀತಿಯ ಬಲಾತ್ಕಾರದ ದುಡಿಮೆ ಮತ್ತು ಪುಕ್ಕಟೆ ದುಡಿಮೆ (ಬೇಗಾರ್) ಗಳನ್ನು ನಿಲ್ಲಿಸುವುದು ಒಂದು. 1976ರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಈ ಆಶಯವನ್ನು ಸಾಕಾರಗೊಳಿಸುವ ಉದ್ದೇಶವನ್ನು ಹೊಂದಿಕೊಂಡಿದೆ. ಸಮೃದ್ಧ ಹಾಗೂ ಸದೃಢ ಭಾರತ ನಿರ್ಮಾಣದಲ್ಲಿ ಜೀತ ನಿರ್ಮೂಲನೆ ಜರೂರಾಗಿ ಆಗಬೇಕಾದ ಕೆಲಸ.

ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಜಾರಿಗೊಂಡ ಆರಂಭದಲ್ಲಿ ಕರ್ನಾಟಕ ಸರ್ಕಾರವು ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಗೋಸ್ಕರ ಇಡೀ ದೇಶದಲ್ಲೇ ಅತ್ಯುತ್ತಮವಾದ ಕೆಲಸವನ್ನು ನಿರ್ವಹಿಸಿದ ಹೆಗ್ಗಳಿಕೆಯನ್ನು ಪಡೆದಿದೆ. ಆದರೆ ಅದೇ ಕಾಳಜಿ ಮತ್ತು ಉತ್ಸಾಹ ನಂತರದ ವರ್ಷಗಳಲ್ಲಿ ಕಂಡು ಬಂದಿರಲಿಲ್ಲ. 2000 ದ ಇಸವಿಯಲ್ಲಿ ಬೆಳಕಿಗೆ ಬಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಹಂಗರಹಳ್ಳಿ ಜೀತ ಪ್ರಕರಣ ನಮ್ಮ ನಾಡನ್ನು ನಾಚಿಕೆಗೆ ಸಿಲುಕಿಸಿತು. ಜೀತ ಪದ್ಧತಿಯು ಜೀವಂತವಿರುವ ತನಕ ಜೀತದಾಳುಗಳನ್ನು ಗುರುತಿಸಿ ಅವರ ಬಿಡುಗಡೆ ಮಾಡಿ ಅವರ ಸಮಗ್ರ ಅಭಿವೃದ್ಧಿಗೋಸ್ಕರ ಅವರಿಗೆ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವ ನಿರ್ಧಾರವನ್ನು ರಾಜ್ಯ ಸರ್ಕಾರವು ಪುನಃ ತಾಳಿತು. ಇಡೀ ರಾಜ್ಯಾದ್ಯಂತ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯಡಿ ಕ್ರಮ ಕೈಗೊಳ್ಳುವ ಪ್ರಕ್ರಿಯೆಗೆ ಪುನಃ ಚಾಲನೆ ಸಿಕ್ಕಿತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಜೀತಪದ್ಧತಿ ನಿರ್ಮೂಲನೆ ಕಾಯ್ದೆಯ ನಿರ್ವಹಣೆಯ ಜವಾಬ್ದಾರಿ ವಹಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು "ಕರ್ನಾಟಕ ಜೀತದಾಳುಗಳ ಪುನರ್ವಸತಿಗೆ ಒಂದು ಕ್ರಿಯಾ ಯೋಜನೆ 2008"ನ್ನು ಹೊರತರುತ್ತಿರುವುದು ಹೆಮ್ಮೆಯ ಸಂಗತಿ. ಈ ಪುಸ್ತಕವನ್ನು ಸಿದ್ಧಪಡಿಸುವಲ್ಲಿ ಸರ್ಕಾರೇತರ ಸಂಸ್ಥೆಯಾದ ವಿಮುಕ್ತಿ ದತ್ತಿಯ ಕಿರಣ ಕಮಲ ಪ್ರಸಾದರು ಶ್ರಮಪಟ್ಟಿದ್ದಾರೆ ಎಂಬುದು ಸಂತೋಷದ ವಿಷಯ. ಈ ಕ್ರಿಯಾ ಯೋಜನೆಯಲ್ಲಿ ವಿಮುಕ್ತ ಜೀತದಾಳುಗಳಿಗೆ ಸೂಕ್ತ ಪುನರ್ವಸತಿ ದೊರಕಿಸುವಲ್ಲಿ ಉತ್ತಮ ಮಾರ್ಗದರ್ಶನಗಳನ್ನು ನೀಡಿರುವುದರ ಜೊತೆಗೆ ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕೈಗೊಳ್ಳಬಹುದಾದ ಕಾನೂನು ರೀತ್ಯಾ ಕ್ರಮಗಳ ಬಗ್ಗೆಯೂ ಅವಶ್ಯಕ ಮಾಹಿತಿ ಸಂಕ್ಷಿಪ್ತವಾಗಿ ಒಳಗೊಂಡಿರುವುದು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದೆ. ಈ ಪುಸ್ತಕವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮತ್ತು ಪೊಲೀಸ್, ನ್ಯಾಯಿಕ ಮತ್ತಿತರೆ ಇಲಾಖೆಯ ಅಧಿಕಾರಿಗಳಿಗೆ ಕರ್ನಾಟಕದಲ್ಲಿಯ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

ಸಹಿ/-
(ಶೋಭಾ ಕರಂದ್ಲಾಜೆ)

ವಿಧಾನ ಸೌಧ, ಬೆಂಗಳೂರು
ದಿನಾಂಕ: ನವೆಂಬರ್ 22, 2008

ಡಾ. ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್
ಸದಸ್ಯರು
(ನಿವೃತ್ತ ನ್ಯಾಯಾಧೀಶರು
ಸರ್ವೋಚ್ಚನ್ಯಾಯಾಲಯ-ಭಾರತ)

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ
ಫರೀದ್‌ಕೋಟ್ ಹೌಸ್,
ಕೋಪರ್ನಿಕಸ್ ರಸ್ತೆ,
ನವದೆಹಲಿ-110 001
ದೂರವಾಣಿ: 91-11-2338 7328
ಫ್ಯಾಕ್ಸ್: 91-11-2338 4863
ಇ-ಮೇಲ್: patilsv@nic.in

ದಿನಾಂಕ: ಆಗಸ್ಟ್ 14, 2006

## ಮುನ್ನುಡಿ

ನಾವೆಲ್ಲಾ ತಿಳಿದಿರುವ ಪ್ರಕಾರ ಜೀತ ಪದ್ಧತಿಯು ಸಾಂಪ್ರದಾಯಿಕ ಕಟ್ಟುಪಾಡುಗಳು, ಬಲತ್ಕಾರದ ದುಡಿಮೆ, ಪುಕ್ಕಟೆ ದುಡಿಮೆ (ಬೇಗಾರ್) ಅಥವಾ ಸಾಲಗಾರಿಕೆಯಿಂದ ಹುಟ್ಟಿರುವಂತಹದ್ದಾಗಿದೆ. ಪ್ರಚಲಿತ ವ್ಯವಸ್ಥೆಯಲ್ಲಿ ಒಬ್ಬ ಸಾಲಗಾರನು ತಾನು ಮಾಡಿದ ಸಾಲವನ್ನು ತೀರಿಸಲಿಕ್ಕಾಗದ ಕಾರಣದಿಂದ ಸಾಲಿಗನಿಗೆ ದುಡಿಮೆ ಸಲ್ಲಿಸಲು ಒಪ್ಪಿಕೊಳ್ಳುತ್ತಾನೆ. ಆದರೆ ಈ ವ್ಯವಸ್ಥೆಗೆ ಅದರ ಆರಂಭದ ಕಾಲದಿಂದಲೂ ಮನ್ನಣೆ ದೊರಕಿರಲಿಲ್ಲ; ಆದಾಗ್ಯೂ ದಮನಕಾರಿ ಜಾತಿ ವ್ಯವಸ್ಥೆ, ಸಾಮಾಜಿಕ ಕಟ್ಟಳೆಗಳು, ಮತ್ತು ಸ್ವಾತಂತ್ರ್ಯಪೂರ್ವದಲ್ಲಿಯ ಜನಸಾಮಾನ್ಯರ ಅನಕ್ಷರತೆ ಹಾಗೂ ಆರ್ಥಿಕ ಹಿಂದುಳಿದಿರುವಿಕೆಯ ಕಾರಣಗಳ ಬೆಂಬಲದಿಂದ ಅದು ಮುಂದುವರಿಯುತ್ತಾ ಇದೆ. ನಾವು ಸ್ವಾತಂತ್ರ್ಯ ಪಡೆದಾಗ ನಮ್ಮ ಸಂವಿಧಾನದ ನೇತಾರರು ನಮ್ಮ ಸಮಾಜದಿಂದ ಜೀತಪದ್ಧತಿಯ ಆಚರಣೆಯನ್ನು ಶಾಶ್ವತವಾಗಿ ತೊಡೆದು ಹಾಕುವಂತೆ ಭಾರತೀಯ ಸಂವಿಧಾನದಲ್ಲಿ ಸೂಕ್ತ ವಿಧಿಗಳನ್ನು ಅಳವಡಿಸಿದರು. ಅಂತರ್ರಾಷ್ಟ್ರೀಯ ಮಟ್ಟದಲ್ಲಿಯೂ ಸಹಾ ಭಾರತೀಯ ಸರ್ಕಾರವು 1954 ರಲ್ಲಿ ಬಲಾತ್ಕಾರ ದುಡಿಮೆ ಕುರಿತಾದ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ 29 ನೇ ಒಡಂಬಡಿಕೆಗೆ ಸಹಿ ಹಾಕಿದೆ.

ಹೀಗಿದ್ದರೂ ಸಹ ಜೀತ ಸಮಸ್ಯೆಯನ್ನು 1975 ರಲ್ಲಿ ಆಗಿನ 20 ಅಂಶದ ಕಾರ್ಯಕ್ರಮದಲ್ಲಿ ಅಳವಡಿಸಿದ್ದಾಗ ಮಾತ್ರ ಅದು ರಾಷ್ಟ್ರೀಯ ಮಟ್ಟದ ಸಮಸ್ಯೆಯಾಗಿ ಬೆಳಕಿಗೆ ಬಂತು. ಜೀತ ಸಮಸ್ಯೆಯ ಮೂಲೋಚ್ಚಾಟನೆ ಮಾಡಲು ಮೊದಲು ಜೀತ ಪದ್ಧತಿ ನಿರ್ಮೂಲನೆ ಸುಗ್ರೀವಾಜ್ಞೆಯನ್ನು ಹೊರತಂದು ನಂತರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ 1976ನ್ನು ಜಾರಿಗೊಳಿಸಲಾಯಿತು. ಈ ಕಾನೂನಿನ ಬೆಂಬಲದಿಂದ ಮತ್ತು ಸಮುದಾಯದ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಒಟ್ಟಾರೆಯಾಗಿ ನಾಗರಿಕ ಸಮಾಜದ ಸಹಾಯದಿಂದ ರಾಜ್ಯ ಸರ್ಕಾರಗಳು ಕಳೆದ ಕೆಲವು ದಶಕಗಳಲ್ಲಿ ಜೀತ ಸಮಸ್ಯೆಯ ಉಪಶಮನಕ್ಕೆ ಕೆಲವೊಂದು ಉಪಯುಕ್ತ ಕ್ರಮಗಳನ್ನು ಕೈಗೊಂಡಿವೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಕೊಡುಗೆ ಗಮನಾರ್ಹವಾದುದಾಗಿದೆ.

ಆದರೆ, ದುರದೃಷ್ಟವಶಾತ್, ಜೀತಸಮಸ್ಯೆಯು ಇನ್ನೂ ಮುಂದುವರಿಯುತ್ತಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಎಲ್ಲಕ್ಕಿಂತಲೂ ಮಹತ್ವದ ಕಾರಣವೆಂದರೆ ಪ್ರತಿಯೊಂದು ರಾಜ್ಯದಲ್ಲಿಯೂ ಉನ್ನತ ಮಟ್ಟದ ಆಡಳಿತ ಶಾಹಿಯು ಜೀತ ಸಮಸ್ಯೆಯು ಇನ್ನೂ ಅಸ್ತಿತ್ವದಲ್ಲಿದೆಯೆಂದು ಒಪ್ಪಲು ಹಿಂಜರಿಯುತ್ತಿರುವುದು. ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ, 1976 ನ್ನು ಜಾರಿಗೊಳಿಸಿದಾಗ ಎಲ್ಲಾ ಜೀತದಾಳುಗಳನ್ನು ಬಿಡುಗಡೆಗೊಳಿಸಲಾಗಿದೆ ಮತ್ತು ಆ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲಾಗಿದೆ ಎಂಬ ಅಭಿಪ್ರಾಯವನ್ನು ಹೆಚ್ಚಿನ ರಾಜ್ಯಗಳು ತಾಳಿವೆ. ಎರಡನೆಯದಾಗಿ, ಜಿಲ್ಲೆ ಮತ್ತು ಉಪವಿಭಾಗ ಮಟ್ಟದಲ್ಲಿ ಕಡ್ಡಾಯವಾಗಿ ರಚಿಸಬೇಕಾಗಿರುವ ಜಾಗೃತ ಸಮಿತಿಗಳು ಬಹುತೇಕ ಕಡೆಗಳಲ್ಲಿ ಅಸ್ತಿತ್ವದಲ್ಲಿರದಿರುವುದು. ಒಂದು ವೇಳೆ ಕಡತಗಳಲ್ಲಿ ಜಾಗೃತ ಸಮಿತಿಗಳನ್ನು ರಚಿಸಿದ್ದರೂ ಒಂದೇ ಅವು ಪರಿಣಾಮ ಕಾರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಅಥವಾ ಕಾಲಕ್ರಮೇಣ ಅವು ನಿಷ್ಕ್ರಿಯವಾಗಿ ಬಿಟ್ಟಿವೆ. ಆ ಜಾಗೃತ ಸಮಿತಿಗಳು ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಕಾರ್ಯಕ್ರಮದಲ್ಲಿ ಯಾವುದೇ ಬೆಲೆಬಾಳುವ ಕೊಡುಗೆಯನ್ನು ನೀಡಿಲ್ಲ. ಮೂರನೆಯದಾಗಿ, ಜಿಲ್ಲಾ ದಂಡಾಧಿಕಾರಿಗಳಿಗೆ ಜೀತದಾಳುಗಳ ಕುರಿತು ಕಾಳಜಿ ಮತ್ತು ಬದ್ಧತೆ ಇಲ್ಲದೇ ಇರುವ ಕಾರಣಗಳಿಂದ ಕೇಂದ್ರ ಪುರಸ್ಕೃತ ಯೋಜನೆಯಡಿ ಭಾರತ ಸರ್ಕಾರವು ಜೀತದಾಳುಗಳ ಪುನರ್ವಸತಿಗೆ ನೀಡುವ ಅನುದಾನಗಳನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಬಳಸಲಾಗಿದೆ. ಜೊತೆಗೆ, ವಲಸೆ ಜೀತದಾಳುಗಳ ಪುನರ್ವಸತಿ ಬಗ್ಗೆ ಸಾಕಷ್ಟು ಗಮನವನ್ನು ಹರಿಸಿದಂತೆ ಕಾಣುತ್ತಿಲ್ಲ. ವಲಸೆ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ನೀಡದೇ ಅವರನ್ನು ಅವರ ಮೂಲ ಪ್ರದೇಶಗಳಿಗೆ ರವಾನಿಸಲಾಗುತ್ತಿದೆ. ನಾಲ್ಕನೆಯದಾಗಿ, ಭಾರತ ಸರ್ಕಾರದ ಕಾರ್ಮಿಕ ಇಲಾಖೆಯು ಜಾಗೃತಿ ಮೂಡಿಸುವ ಮತ್ತಿತರೆ ಕಾರ್ಯಕ್ರಮಗಳಿಗೆ ನೀಡುವ ಅನುದಾನಗಳ ಬಳಕೆಯ ಬಗ್ಗೆ ಹೆಚ್ಚಿನ ರಾಜ್ಯಗಳಿಂದ ಉತ್ತೇಜನಕಾರಿ ಪ್ರತಿಕ್ರಿಯೆ ಬಂದಿಲ್ಲ. ಕೊನೆಯದಾಗಿ, ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ, 1976 ರಡಿ ಅಪರಾಧಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸುವ ಪ್ರಕ್ರಿಯೆ ಮಂದಗತಿಯಲ್ಲಿ ಸಾಗಿದೆ ಮತ್ತು ಕ್ರಮ ಕೈಗೊಂಡಿರುವ ಕಡೆಗಳಲ್ಲೂ ಯಾವುದೇ ಪರಿಣಾಮ ಆಗಿಲ್ಲ.

ಈ ಪ್ರಚಲಿತ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿಯ ಜೀತದಾಳುಗಳ ಪುನರ್ವಸತಿಗೆ ಒಂದು ಕ್ರಿಯಾ ಯೋಜನೆ, 2006 ನ್ನು ರೂಪಿಸುವಲ್ಲಿ ಕರ್ನಾಟಕ ಸರ್ಕಾರವು ಕೈಗೊಂಡಿರುವ ಉಪಯುಕ್ತ ಕ್ರಮವು ಕ್ಷೇತ್ರದಲ್ಲಿ ಪರಿಣಾಮ ಬೀರುವಂತಹ ರೀತಿಯಲ್ಲಿ ಇಟ್ಟಿರುವ ಒಂದು ಅಪೇಕ್ಷಿತ ಮತ್ತು ಸ್ವಾಗತಾರ್ಹ ಹೆಜ್ಜೆಯಾಗಿದೆ. ಪ್ರಜಾತಂತ್ರದಲ್ಲಿಯ ಸರಕಾರದ ಅಥವಾ ಯಾವುದೇ ಸಂಸ್ಥೆಯ ಗುಣಮಟ್ಟ, ಉಪಯುಕ್ತತೆ ಮತ್ತು ಉದ್ದೇಶ ಸಾಧನೆ ಅದರ ವ್ಯವಸ್ಥೆಯನ್ನು ಮತ್ತು ಪ್ರತ್ಯೇಕವಾಗಿ ಆ ವ್ಯವಸ್ಥೆಗೋಸ್ಕರ ಕೆಲಸ ಮಾಡುವ ವ್ಯಕ್ತಿಗಳನ್ನು ಅವಲಂಬಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ವೀ.ಪ.ಬಳಿಗಾರರವರು ರಚನಾತ್ಮಕ ಹಾಗೂ ಕ್ರಿಯಾತ್ಮಕ ಗುಣಗಳಿಂದ ಕೂಡಿದ್ದು ಜೀತದಾಳುಗಳ ಬಗ್ಗೆ ವಿಶಿಷ್ಟ ಕಾಳಜಿಯನ್ನು ಹೊಂದಿದವರಾಗಿದ್ದು ಕಾರ್ಯಸಾಧು ವಾಗಿರುವ ಮತ್ತು ಉಪಯುಕ್ತ ಯೋಜನೆಗಳನ್ನೂ ಸರ್ಕಾರೀ ಆದೇಶಗಳನ್ನೂ ಹೊರತರುವಲ್ಲಿ ಯಶಸ್ವಿಯಾಗಿದ್ದಾರೆ. ಅವುಗಳನ್ನು ಈ ಪುಸ್ತಕದೊಳಗೆ ಅಳವಡಿಸಲಾಗಿದೆ. ಕರ್ನಾಟಕ ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೋಸ್ಕರ ಕರ್ನಾಟಕದಲ್ಲಿಯ ಜೀತದಾಳುಗಳ ಪುನರ್ವಸತಿಗೆ ಒಂದು ಕ್ರಿಯಾ ಯೋಜನೆ, 2006 ನ್ನು ತಯಾರಿಸಲು ಶ್ರೀ ಕಿರಣ ಕಮಲ ಪ್ರಸಾದರವರಿಂದ ಪ್ರತಿನಿಧಿಸಲ್ಪಟ್ಟ ಬೆಂಗಳೂರಿನ 'ವಿಮುಕ್ತಿ ದತ್ತಿ'ಯನ್ನು ನ್ಯಾಯ ಸಮ್ಮತವಾಗಿಯೇ ಆರಿಸಲಾಗಿದೆ. ಜೀತದಾಳುಗಳ ಕುರಿತು ವಿಮುಕ್ತಿ ದತ್ತಿಗಿರುವ ಕಾರ್ಯಾನುಭವ ಮತ್ತು ಅವರಿಗೆ ಅದು ನೀಡಿರುವ ಕೊಡುಗೆಯನ್ನು ಗಮನಿಸಿಯೇ ಕರ್ನಾಟಕ ಸರ್ಕಾರವು ವಿಮುಕ್ತಿ ದತ್ತಿಗೆ ಆ ಅವಕಾಶವನ್ನು ನೀಡಿದೆ.

ಕರ್ನಾಟಕ ರಾಜ್ಯದಲ್ಲಿ, ನಾನು ತಿಳಿದಿರುವ ಪ್ರಕಾರ, ಜಿಲ್ಲೆ ಮತ್ತು ಉಪವಿಭಾಗ ಮಟ್ಟದಲ್ಲಿ ಜಾಗೃತಾ ಸಮಿತಿಗಳನ್ನು ರಚಿಸಿದ್ದರೂ ಅವು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಆ ಜಾಗೃತಾ ಸಮಿತಿಗಳನ್ನು ಪುನಶ್ಚೇತನಗೊಳಿಸಿ ಅವುಗಳು ಪರಿಣಾಮಕಾರಿಯಾಗಿ ಕಾರ್ಯವೆಸಗುವಂತೆ ಮಾಡುವಲ್ಲಿ ಈ ಕ್ರಿಯಾ ಯೋಜನೆಯು ಸಹಕಾರಿಯಾಗುವುದು.

ವಿಮುಕ್ತಿ ದತ್ತಿಯು ಸಿದ್ಧಪಡಿಸಿದ ಕ್ರಿಯಾ ಯೋಜನೆಯು ಈ ಕೆಳಗಿನ ವಿಷಯಗಳನ್ನು ವಿವರವಾಗಿ ಒಳಗೊಂಡಿದೆ: ಕಾನೂನಿನಲ್ಲಿರುವ ವಿಷಯಗಳು, ಜೀತದಾಳುಗಳ ಕಲ್ಯಾಣಕ್ಕೋಸ್ಕರ ಚಾಲ್ತಿಯಲ್ಲಿರುವ ಯೋಜನೆಗಳು, ರಾಜ್ಯಪತ್ರದಲ್ಲಿ ಹೊರಬಂದ ಸೂಚನಾಪತ್ರಗಳು, ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಗೆ ಸಂಬಂಧಪಟ್ಟಂತೆ ಹಾಗೂ ಅಪರಾಧಿಗಳ ವಿರುದ್ಧ ಕ್ರಮ ಜರುಗಿಸಲು ಅವಶ್ಯಕವಾಗಿ ಬೇಕಾಗಿರುವ ಮಾರ್ಗದರ್ಶನಗಳು ಮತ್ತು ಸಮಗ್ರ ವಿವರಗಳು.

ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸುವುದು ಮುಖ್ಯವಾಗಿ ಆಗಬೇಕಾದ ಕೆಲಸ. ಇದಕ್ಕಿಂತಲೂ ಮುಖ್ಯವಾಗಿ ಆಗಬೇಕಾಗಿರುವುದು ವಿಮುಕ್ತಿಗೊಳಿಸಿದ ಜೀತದಾಳುಗಳ ಪುನರ್ವಸತಿ. ಪುನರ್ವಸತಿಯಿಲ್ಲದೇ ಕೇವಲ ವಿಮುಕ್ತಿಗೊಳಿಸುವ ಕಾರ್ಯದಿಂದ ವ್ಯತಿರಿಕ್ತ ಪರಿಣಾಮ ಬೀರುವುದು. ಆ ದೃಷ್ಟಿಯಿಂದ ನೋಡಿದಾಗ, ರಾಜ್ಯ ಸರ್ಕಾರವು ಸಿದ್ಧಪಡಿಸಿದ ಯೋಜನೆಗಳು ಕಾರ್ಯಸಾಧುವಾಗಿವೆ ಮತ್ತು ಉಪಯುಕ್ತವಾಗಿವೆ. ಈ ಪುಸ್ತಕದಲ್ಲಿ ಎಲ್ಲಾ ಸಂಬಂಧಪಟ್ಟ ಕಾನೂನು ವಿಧಿಗಳು, ಸರ್ಕಾರಿ ಆದೇಶಗಳು, ಯೋಜನೆಗಳು ಮತ್ತಿತರ ಉಪಯುಕ್ತ ಮಾಹಿತಿಗಳು ಒಂದೇ ಕಡೆ ಲಭ್ಯವಿವೆ. ಇದೊಂದು ಸಂಗತಿಯೇ ಜೀತದಾಳುಗಳ ಬಗ್ಗೆ ಕೆಲಸ ಮಾಡುವ ಪ್ರತಿಯೊಬ್ಬರಿಗೆ ವಿಶೇಷವಾದ ನೆರವು ನೀಡುತ್ತದೆ. ಈ ಕ್ರಿಯಾ ಯೋಜನೆಯನ್ನು ತಯಾರಿಸುವಲ್ಲಿ ಕರ್ನಾಟಕ ಸರ್ಕಾರವು ತೋರಿಸಿದ ಆಸಕ್ತಿ ಮತ್ತು ನೀಡಿದ ಬೆಂಬಲ ಹಾಗೂ ವಿಮುಕ್ತಿ ದತ್ತಿಯು ಪಟ್ಟ ಶ್ರಮವನ್ನು ನಾನು ಮೆಚ್ಚುತ್ತೇನೆ.

ವಿಮುಕ್ತಿ ದತ್ತಿಯು ಕರ್ನಾಟಕದಲ್ಲಿ ಜೀತದ ಪಿಡುಗನ್ನು ಕೊನೆಗಾಣಿಸುವಂತೆ ರಾಜ್ಯ ಸರ್ಕಾರಕ್ಕೋಸ್ಕರ ತಯಾರಿಸಿದ ಕ್ರಿಯಾ ಯೋಜನೆಯು ಅದನ್ನು ಹೊರತಂದ ಉದ್ದೇಶವನ್ನು ಈಡೇರಿಸುತ್ತದೆ ಎಂದು ನಾನು ನಂಬುತ್ತೇನೆ. ಜೊತೆಗೆ ಇನ್ನೊಂದು ವಿಷಯವನ್ನೂ ನಾನಿಲ್ಲಿ ಪ್ರಸ್ತಾಪಿಸುತ್ತೇನೆ. ಇನ್ನಿತರೆ ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯಗಳಲ್ಲಿಯ ಜೀತದಾಳುಗಳಿಗೋಸ್ಕರ ಕೈಗೊಳ್ಳುವ ಪುನರ್ವಸತಿ ಕಾರ್ಯಕ್ರಮಗಳು ಅವರಿಗೆ ಗೌರವಯುಕ್ತ ಜೀವನ ಖಾತ್ರಿಯಾಗುವ ರೀತಿಯಲ್ಲಿ ಮಾಡುವಂತೆ ಆ ಕಾರ್ಯಕ್ರಮಗಳನ್ನು ಆಳವಾಗಿ ಪರಿಗಣನೆಗೆ ತೆಗೆದುಕೊಳ್ಳುವಂತೆ ಈ ಕ್ರಿಯಾ ಯೋಜನೆಯು ಇತರೆ ರಾಜ್ಯ ಸರ್ಕಾರಗಳಿಗೂ ಸಹಕಾರಿಯಾಗಬಹುದು.

ಸಹಿ/-

(ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ)

ಪಿ.ರವಿಕುಮಾರ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಕರ್ನಾಟಕ ಸರ್ಕಾರ,
ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದಿನಾಂಕ: ನವೆಂಬರ್ 22, 2008

## ಪ್ರಸ್ತಾವನೆ

ಜೀತ ಪದ್ಧತಿ ನಿರ್ಮೂಲನೆ ಕುರಿತಂತೆ ಕರ್ನಾಟಕ ರಾಜ್ಯದಲ್ಲಿ ವಿಶಿಷ್ಟ ಹಾಗೂ ಸಮಂಜಸ ವ್ಯವಸ್ಥೆಯಿದೆ. ನಮ್ಮ
ರಾಜ್ಯದಲ್ಲಿ ಜೀತ ಪದ್ಧತಿ ನಿರ್ಮೂಲನೆ ಕುರಿತು ಕೆಲಸವನ್ನು ನಿರ್ವಹಿಸುವ ಜವಾಬ್ದಾರಿಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆಯದು. ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬೇಕಾದವರು ಕಂದಾಯ ಇಲಾಖೆಯಡಿ
ಬರುವ ಜಿಲ್ಲಾ ಮತ್ತು ಉಪ ವಿಭಾಗದ ದಂಡಾಧಿಕಾರಿಗಳು. ಜೀತವು ಒಂದು ಕಾರ್ಮಿಕ ಸಮಸ್ಯೆಯಾಗಿರುವುದರಿಂದ ಅದನ್ನು
ನಿಭಾಯಿಸುವ ಜವಾಬ್ದಾರಿಯನ್ನು ರಾಷ್ಟ್ರ ಮಟ್ಟದಲ್ಲಿ ಕಾರ್ಮಿಕ ಇಲಾಖೆ ಮತ್ತು ಬಹುತೇಕ ರಾಜ್ಯಗಳಲ್ಲಿ ಆಯಾ ರಾಜ್ಯಗಳ
ಕಾರ್ಮಿಕ ಅಥವಾ ಸಮಾಜ ಕಲ್ಯಾಣ ಇಲಾಖೆಗಳು ವಹಿಸಿಕೊಂಡಿವೆ. ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಹಾಗೂ ತಮಿಳು ನಾಡಿನಲ್ಲಿ ಆದಿ ದ್ರಾವಿಡಾರ್ ಕಲ್ಯಾಣ ಇಲಾಖೆಗಳು ಆ ಜವಾಬ್ದಾರಿಯನ್ನು ಹೊತ್ತಿವೆ.

ಕರ್ನಾಟಕದಲ್ಲಿಯ ವ್ಯವಸ್ಥೆಯು ಜೀತದಾಳುಗಳ ಸಮಗ್ರ ಹಾಗೂ ಪರಿಣಾಮಕಾರಿ ಪುನರ್ವಸತಿಗೆ ವಿಶಿಷ್ಟ ಸಾಧ್ಯತೆಗಳನ್ನು
ಒದಗಿಸಿಕೊಡುತ್ತದೆ. ಇಷ್ಟೇ ಅಲ್ಲದೆ, ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ಅಧಿನಿಯಮ 2000ರನ್ವಯ,
ಹೊಸ ಪ್ರಕರಣ ಸಂ.58ಎಯ ಪ್ರಕಾರ ಜಿಲ್ಲಾಧಿಕಾರಿ ಅಥವಾ ಸರ್ಕಾರದಿಂದ ನೇಮಿಸಲ್ಪಟ್ಟ ಇತರೆ ಯಾವುದೇ ಪ್ರಾಧಿಕಾರಕ್ಕೆ ಪ್ರತಿ
ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು ಯಾವುದೇ ಜೀತ ಪ್ರಕರಣದ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆದ್ದರಿಂದ
ಕರ್ನಾಟಕದಲ್ಲಿ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ನಮ್ಮ ದೇಶದ ಹೀನಾಯ
ಸಾಮಾಜಿಕ ಪಿಡುಗುಗಳಲ್ಲಿ ಒಂದಾಗಿರುವ ಹಾಗೂ ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳಡಿ ಬರುವ ವಿಧಿ 23ರಲ್ಲಿ
ನಿಷೇಧಿಸಲ್ಪಟ್ಟ ಜೀತಪದ್ಧತಿಯನ್ನು ಹೋಗಲಾಡಿಸುವಲ್ಲಿ ಅತ್ಯಂತ ನಿಕಟವರ್ತಿಯಾಗಿ ಸಹಕರಿಸಬೇಕಾಗುತ್ತದೆ. ಕಂದಾಯ ಇಲಾಖೆಯ
ಅಧಿಕಾರಿಗಳು ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸಿ ಅಪರಾಧಿಗಳ ಮೇಲೆ ಕ್ರಮ ಕೈಗೊಂಡರೆ, ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆಯು ವಿಮುಕ್ತಿಗೊಳಿಸಿದ ಜೀತದಾಳುಗಳಿಗೆ ಅರ್ಥಪೂರ್ಣ ಪುನರ್ವಸತಿ ಸೌಲಭ್ಯಗಳನ್ನು
ಒದಗಿಸಿಕೊಡ ಬೇಕಾಗುತ್ತದೆ. ಜೀತದಾಳುಗಳ ಪುನರ್ವಸತಿಗೋಸ್ಕರವಿರುವ ಕೇಂದ್ರ ಪುರಸ್ಕೃತ ಯೋಜನೆ ಜೊತೆ ಬಡತನ
ನಿರ್ಮೂಲನೆಗೆ ಮೀಸಲಿಟ್ಟ ಹಲವಾರು ಯೋಜನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು
ಸುಲಭವಾಗಿ ಸಮೀಕರಿಸಬಹುದು.

2000 ಇಸವಿಯಲ್ಲಿ ಕರ್ನಾಟಕ ಸರ್ಕಾರವು ಜೀತಪದ್ಧತಿ ಕಂಡು ಬಂದಲ್ಲೆಲ್ಲ ಮತ್ತು ಕಂಡು ಬಂದ ಪ್ರತಿ ಸಮಯ
ಅದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಹೊಸ ನಿಲುವನ್ನು ತಾಳಿದೆ. ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆಯು ವಿಮುಕ್ತಿ ದತ್ತಿಯ ಕಿರಣ ಕಮಲ ಪ್ರಸಾದರನ್ನು ಜೀತದಾಳುಗಳ ಪುನರ್ವಸತಿಗೆ ಒಂದು
ಕ್ರಿಯಾಯೋಜನೆಯನ್ನು ರೂಪಿಸಲು ನಿಯೋಜಿಸಿತ್ತು. ಅವರು ತಮ್ಮ ಜವಾಬ್ದಾರಿಯನ್ನು ಮನ:ಪೂರ್ವಕವಾಗಿ ನಿರ್ವಹಿಸಿದ್ದಾರೆ.
ಅವರು ರೂಪಿಸಿದ ಕ್ರಿಯಾ ಯೋಜನೆಯಲ್ಲಿ ಜೀತದಾಳುಗಳನ್ನು ಗುರುತಿಸಲು ಮತ್ತು ಬಿಡುಗಡೆಗೊಳಿಸಲು ಹಾಗೂ ಅಪರಾಧಿಗಳ
ಮೇಲೆ ಕ್ರಮ ಜರುಗಿಸಲು ಸಂಕ್ಷಿಪ್ತ ಮಾರ್ಗ ದರ್ಶನಗಳಿವೆ. ಆದ್ದರಿಂದ ಪ್ರಸ್ತುತ ಕ್ರಿಯಾ ಯೋಜನೆಯು ಸಮಗ್ರವಾಗಿದ್ದು ಜೀತ
ನಿರ್ಮೂಲನೆಗೆ ಕಾನೂನಿನಡಿ ಕೈಗೊಳ್ಳ ಬೇಕಾದ ಪ್ರತಿಯೊಂದು ವಿಚಾರದ ಬಗ್ಗೆ ಎಲ್ಲಾ ಮಾಹಿತಿಗಳನ್ನು ಒಳಗೊಂಡಿದೆ.

ಈ ಕ್ರಿಯಾ ಯೋಜನೆಯನ್ನು ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ
ಪ್ರತಿಯೊಬ್ಬ ಅಧಿಕಾರಿಯು ಕಾಳಜಿಯಿಂದ ಬಳಸಬೇಕಾಗುತ್ತದೆ. ಅದನ್ನು ತಾಲ್ಲೂಕು, ಉಪವಿಭಾಗ, ಜಿಲ್ಲೆ ಮತ್ತು ರಾಜ್ಯ ಮಟ್ಟದ
ಪೋಲೀಸ್, ನ್ಯಾಯಾಂಗ, ಮತ್ತು ಜೀತದ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುವ ಮತ್ತಿತರೆ ಅಧಿಕಾರಿಗಳು ಪರಿಣಾಮಕಾರಿಯಾಗಿ
ಬಳಸಬೇಕಾಗುತ್ತದೆ. ಜೀತದ ವಿರುದ್ಧ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲು ಮತ್ತು ಜೀತದಾಳುಗಳಿಗೆ ಸಮಗ್ರ ಪುನರ್ವಸತಿ
ಕಲ್ಪಿಸಲು ಈ ಕ್ರಿಯಾ ಯೋಜನೆಯು ಸಹಕಾರಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಸಹಿ/–
(ಪಿ.ರವಿಕುಮಾರ್)

**ವಿಮುಕ್ತಿ ದತ್ತಿ**
1289, ಐಸೆಕ್. ರಸ್ತೆ,
ನಾಗರಭಾವಿ ಅಂಚೆ,
ಬೆಂಗಳೂರು-560072.
ದೂರವಾಣಿ: 00 91-80-2321 0194
ಇ-ಮೇಲ್: jeevika90@gmail.com
ದಿನಾಂಕ: ಸೆಪ್ಟಂಬರ್ 6, 2008

## ಕೃತಜ್ಞತೆ ಮತ್ತು ಕಾಳಜಿ

ಮೊತ್ತ ಮೊದಲಿಗೆ ನಾನು ಕೃತಜ್ಞತೆ ಸಲ್ಲಿಸುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ವೀ.ಪ.ಬಳಿಗಾರ್ ರವರಿಗೆ. ಅವರು ನನ್ನನ್ನು ಕರ್ನಾಟಕದಲ್ಲಿಯ ಜೀತದಾಳುಗಳ ಪುನರ್ವಸತಿಗೆ ಕ್ರಿಯಾ ಯೋಜನೆಯೊಂದನ್ನು ರೂಪಿಸಲು ಆಹ್ವಾನಿಸಿದ್ದರು. ಅವರ ನಂತರ ಸ್ಥಾನಕ್ಕೆ ಬಂದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ಈ ಕ್ರಿಯಾ ಯೋಜನೆಗೆ ಯಥಾರ್ಥವಾಗಿ ಮಂಜೂರಾತಿಯನ್ನು ನೀಡಿದ್ದಾರೆ. ನಾನು ಮತ್ತು ನನ್ನ ಸಂಸ್ಥೆಯಾದ ವಿಮುಕ್ತಿ ದತ್ತಿ, ಅದು ಬೆಳೆಸುತ್ತಿರುವ ಸಂಘಟನೆಯಾಗಿರುವ ಜೀವಿಕ ಮತ್ತು ಅದು ಬೆಂಬಲಿಸುತ್ತಿರುವ ಕಾರ್ಮಿಕ ಒಕ್ಕೂಟವಾಗಿರುವ ಕರ್ನಾಟಕ ಜೀತದಾಳು ಮತ್ತು ಕೃಷಿಕಾರ್ಮಿಕರ ಒಕ್ಕೂಟಗಳಿಗೆ ಜೀತ ನಿರ್ಮೂಲನೆ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಲು ಈ ಜವಾಬ್ದಾರಿಯು ಒಳ್ಳೆಯ ಅವಕಾಶವನ್ನು ಒದಗಿಸಿದೆ. ಈಗಿನ ಕಾರ್ಯದರ್ಶಿಗಳಾದ ಶ್ರೀ ಪಿ.ರವಿಕುಮಾರ್ ರವರು ಒಂದು ಮೌಲಿಕ ಪೀಠಿಕೆಯನ್ನು ಕ್ರಿಯಾ ಯೋಜನೆಗೆ ಬರೆದಿದ್ದಾರೆ. ಜೊತೆಗೆ ಇಲಾಖೆಯ ಇತರೆ ಅಧಿಕಾರಿಗಳೂ ಕ್ರಿಯಾ ಯೋಜನೆ ಸಿದ್ಧಪಡಿಸುವಲ್ಲಿ ನೆರವಾಗಿದ್ದಾರೆ. ಶ್ರೀ ಬಿ.ಎನ್.ಕೃಷ್ಣಯ್ಯ, ಶ್ರೀ ಶಾಂತರಾಜ್, ಶ್ರೀ ಜಿ.ಬಿ.ಹಿರೇಮಣಿಯವರ್, ಶ್ರೀ ಟಿ.ಶ್ಯಾಮ್‌ಭಟ್ ಮುಂತಾದ ಈಗಿನ ಮತ್ತು ಮಾಜಿ ಸ್ವ ಉದ್ಯೋಗ ಕಾರ್ಯಕ್ರಮಗಳ ನಿರ್ದೇಶನಾಲಯದ ನಿರ್ದೇಶಕರುಗಳು, ಶ್ರೀ ಕೆ.ಐ.ಗುದಗಿ, ಜಂಟಿ ನಿರ್ದೇಶಕರು, ಸ್ವಉ.ಕಾ., ಶ್ರೀಮತಿ ವಿ.ಮುಕ್ತಾಬಾಯಿ, ಸಹಾಯಕ ನಿರ್ದೇಶಕಿ, ಸ್ವಉ.ಕಾ. ಮುಂತಾದವರು ಸರ್ಕಾರಿ ಆದೇಶಗಳು, ಸುತ್ತೋಲೆಗಳು ಮತ್ತು ಸೂಚನಾ ಪತ್ರಗಳನ್ನು ಒಟ್ಟುಗೂಡಿಸುವಲ್ಲಿ ನನಗೆ ಸಹಾಯಹಸ್ತ ನೀಡಿದ್ದಾರೆ.

ಶ್ರೀ ಕೆ.ಆರ್.ವೇಣುಗೋಪಾಲ್, ಭಾ.ಆ.ಸೇ. (ನಿವೃತ್ತ), ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರರಿಗೆ ನಾನು ಆಭಾರಿಯಾಗಿದ್ದೇನೆ. ಅವರ ನೆರವಿಲ್ಲದಿದ್ದಿದ್ದರೆ ಕ್ರಿಯಾ ಯೋಜನೆಯು ಈಗಿನ ಸ್ವರೂಪವನ್ನು ಪಡೆಯುತ್ತಿರಲಿಲ್ಲ. ಅವರು ಕ್ರಿಯಾ ಯೋಜನೆಯ ಕರಡು ಪ್ರತಿಯನ್ನು ಕೂಲಂಕುಷವಾಗಿ ಓದಿ ಅದಕ್ಕೆ ಸೂಕ್ತವಾದ ಸಲಹೆಗಳನ್ನೂ ಬದಲಾವಣೆಗಳನ್ನೂ ಸೂಚಿಸಿದ್ದರು. ಅವರು 1999 ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರರಾಗಿ ಜವಾಬ್ದಾರಿ ವಹಿಸಿಕೊಂಡಾಗಿನಿಂದ ಕರ್ನಾಟಕ ಸರ್ಕಾರವು ಜೀತ ಸಮಸ್ಯೆಯ ಕುರಿತು ಮುತುವರ್ಜಿ ವಹಿಸಿ ಕಾರ್ಯದಲ್ಲಿ ತೊಡಗು ವಂತೆ ನೋಡಿಕೊಂಡಿದ್ದಾರೆ.

ಡಾ: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರು, ಕ್ರಿಯಾ ಯೋಜನೆಗೆ ಮುನ್ನುಡಿ ಬರೆದು ಮಹತ್ವದ ಉಪಕಾರವೆಸಗಿದ್ದಾರೆ. ಅವರ ಸೂಕ್ತ ಸಲಹೆಗಳು ಮತ್ತು ವಸ್ತುನಿಷ್ಠ ಭರವಸೆಗಳು ಕರ್ನಾಟಕ ಸರ್ಕಾರವನ್ನೊಳಗೊಂಡಂತೆ ಇನ್ನಿತರೆ ರಾಜ್ಯ ಸರ್ಕಾರಗಳೂ ಸಂವಿಧಾನ ಮತ್ತು ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ 1976 ರ ಆದೇಶವನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡುವುವು ಎಂಬ ನಂಬಿಕೆ ನನಗಿದೆ.

ವಿಮುಕ್ತಿ ದತ್ತಿ, ಜೀವಿಕ ಹಾಗೂ ಒಕ್ಕೂಟದ ಸದಸ್ಯರೆಲ್ಲರಿಗೂ ನಾನು ಉಪಕಾರ ಸಲ್ಲಿಸಬೇಕಿದೆ. ಅವರ ಉತ್ಸುಕತೆ ಮತ್ತು ಅರ್ಪಣಾ ಮನೋಭಾವವಿಲ್ಲದಿದ್ದರೆ ವಿಮುಕ್ತಿ ದತ್ತಿ, ಜೀವಿಕ ಹಾಗೂ ಒಕ್ಕೂಟಗಳು ಇಷ್ಟು ಸಾಧನೆಯನ್ನು ಮಾಡಲಿಕ್ಕೆ ಆಗುತ್ತಿರಲಿಲ್ಲ. ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅವು ಮಹತ್ವದ ಪಾತ್ರ ವಹಿಸ ಬೇಕಾಗುತ್ತದೆ. ಕ್ರಿಯಾ ಯೋಜನೆ ಯನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಮಿತ್ರ ಮಂಗ್ಳೂರ ವಿಜಯರವರು ಅನುಸೂಚಿ 9.5 ರ ಪುಟಸಂಖ್ಯೆ 68 ರಿಂದ 77 ರ ತನಕ ಭಾಷಾಂತರಿಸಿ ನೆರವಾಗಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಈ ಸಂದರ್ಭದಲ್ಲಿ ಕ್ರಿಯಾ ಯೋಜನೆ ಕುರಿತು ನನ್ನ ಕೆಲವೊಂದು ಕಾಳಜಿಗಳನ್ನು ಹಂಚಿಕೊಳ್ಳಲು ಇಷ್ಟ ಪಡುತ್ತೇನೆ. ನನ್ನ ಪ್ರಕಾರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ವಿಶಿಷ್ಟವಾದ ಕಾನೂನು. ನಮ್ಮ ದೇಶದಲ್ಲಿಯ ಶಕ್ತಿಯುತ ಹಾಗೂ ಸಂಕ್ಷಿಪ್ತ ಮತ್ತು ಸ್ಪಷ್ಟ ಕಾನೂನುಗಳಲ್ಲಿ ಅದು ಒಂದಾಗಿದೆ. ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳನ್ನು ಒಳಗೊಂಡ ಮೂರನೇ ಭಾಗದಲ್ಲಿಯ ವಿಧಿ 23 ಕಾನೂನಿಗೆ ದೃಢವಾದ ಬುನಾದಿಯಾಗಿದೆ. ಸರ್ವೋಚ್ಚ ನ್ಯಾಯಾಲಯವು ನೀಡಿದ ಕೆಲವು ಮಹತ್ವದ ತೀರ್ಪುಗಳು ಕಾನೂನಿಗೆ ಇನ್ನೂ ಹೆಚ್ಚಿನ ಸ್ಪಷ್ಟತೆ ನೀಡಿವೆ ಮತ್ತು ಕೆಲವೊಂದು ರೀತಿಯಲ್ಲಿ ಅದರ ಕಾರ್ಯ ವ್ಯಾಪ್ತಿಯನ್ನು ಹೆಚ್ಚಿಸಿವೆ. ಕಾನೂನನ್ನು ಅಕ್ಷರಶಃ ಅನುಷ್ಠಾನಗೊಳಿಸಿದರೆ ಮತ್ತು ಅದರ ಆಶಯಗಳನ್ನು ಈಡೇರಿಸಿದರೆ ಅನಿಷ್ಟ ಸಾಮಾಜಿಕ ಪಿಡುಗನ್ನು ಅಳಿಸಿ ಹಾಕುವುದರ ಜೊತೆಗೆ ನಮ್ಮ ಸಮಾಜದ ಅತಿ ಹೆಚ್ಚಿನ ದುರ್ದೆಸೆಗೆ ಒಳಗಾಗಿರುವ ಜನಸಮೂಹದ ಹೆಚ್ಚಿನ ಮಂದಿಯನ್ನು ತಮ್ಮ ನಿರ್ಗತಿಕ ಸ್ಥಿತಿಯಿಂದಲೂ ಸಾಮಾಜಿಕ ಕಿರುಕುಳದಿಂದಲೂ ಹೊರಗೆ ತರಬಹುದು. ಕಾನೂನನ್ನು ಜಾರಿಗೆ ತಂದ ಮುಖ್ಯ ಉದ್ದೇಶವೇನೆಂದರೆ ಭಾರತದ ದುರ್ಬಲ ವರ್ಗದ ಜನರ ಆರ್ಥಿಕ ಮತ್ತು ಭೌತಿಕ ಶೋಷಣೆಯನ್ನು ತಡೆಗಟ್ಟುವುದರ ಮೂಲಕ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡುವುದಾಗಿದೆ.

ಇಷ್ಟೊಂದು ಪ್ರಬಲ ಸಲಕರಣೆಗಳಿದ್ದರೂ ಕಾನೂನನ್ನು ಕಾರ್ಯಗತಗೊಳಿಸುವಲ್ಲಿ ಎದುರಾಗುವ ಮುಖ್ಯ ತೊಡರುಗಳೆಂದರೆ ಜಿಲ್ಲೆ ಮತ್ತು ಅದರ ಕೆಳಗಿನ ಮಟ್ಟಗಳಲ್ಲಿ ಕಾನೂನನ್ನು ಅನುಷ್ಠಾನಗೊಳಿಸುವಲ್ಲಿ ಸೂಕ್ತ ವ್ಯವಸ್ಥೆಗಳ ಅಭಾವ. ಈ ಪರಿಸ್ಥಿತಿಯು ಇನ್ನಿತರ ಸಾಮಾಜಿಕ ಪಿಡುಗುಗಳ ಕುರಿತಾದ ಯೋಜನೆಗಳ ಅನುಷ್ಠಾನಕ್ಕೂ ಅನ್ವಯಿಸುತ್ತದೆ. ಸೂಕ್ತವಾದ ಅನುಷ್ಠಾನಗೊಳಿಸುವ ವ್ಯವಸ್ಥೆಗಳಿದ್ದರೆ ಸಂವಿಧಾನ, ಕಾನೂನು ಮತ್ತು ನ್ಯಾಯಾಲಯದ ತೀರ್ಪುಗಳ ಉದ್ದೇಶಗಳನ್ನು ಕಾರ್ಯಗತಗೊಳಿಸಬಹುದು. ಪ್ರಸ್ತುತ ಕ್ರಿಯಾ ಯೋಜನೆಯು ಆ ಅಗತ್ಯವನ್ನು ತುಂಬಿಸಿ ರಾಜ್ಯದ ಮತ್ತು ದೇಶದ ಅಸಂಖ್ಯಾತ ಜೀತದಾಳುಗಳಿಗೆ ನ್ಯಾಯವನ್ನು ಒದಗಿಸುವಲ್ಲಿ ಅದು ಫಲಕಾರಿಯಾಗುವುದೆಂದು ನಂಬಿದ್ದೇನೆ.

ಸಹಿ/-

(ಕಿರಣ ಕಮಲ ಪ್ರಸಾದ)

ಕಾರ್ಯದರ್ಶಿ

## ಕರ್ನಾಟಕ ಜೀತದಾಳುಗಳ ಪುನರ್ವಸತಿ

## ಒಂದು ಕ್ರಿಯಾ ಯೋಜನೆ : 2008.

(ಜೀತದಾಳುಗಳ ಗುರುತಿಸುವಿಕೆ ಮತ್ತು ಅವರ ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕ್ರಮ ಜರುಗಿಸುವುದರ ಬಗ್ಗೆಯೂ ಸಂಕ್ಷಿಪ್ತ ಹಾಗೂ ವ್ಯಾಪಕ ಮಾರ್ಗದರ್ಶನಗಳನ್ನು ಒಳಗೊಂಡಿರುತ್ತದೆ).


| ಕ್ರ.ಸಂ. | ಪರಿವಿಡಿ | ಪುಟ |
|---|---|---|
| | ಸಂದೇಶ: ಮಾನ್ಯ ಶ್ರೀ ರಾಮೇಶ್ವರ ಠಾಕೂರ್, ಘನತೆವೆತ್ತ ರಾಜ್ಯಪಾಲರು | i |
| | ಹಾರೈಕೆ: ಕುಮಾರಿ ಶೋಭಾ ಕರಂದ್ಲಾಜೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, | ii |
| | ಕರ್ನಾಟಕ ಸರ್ಕಾರ. | iii |
| | ಮುನ್ನುಡಿ: ನ್ಯಾಯಮೂರ್ತಿ (ನಿವೃತ್ತ) ಶಿವರಾಜ್ ವಿ.ಪಾಟೀಲ್, ಸದಸ್ಯರು,<br>ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ. | v |
| | ಪ್ರಸ್ತಾವನೆ: ಶ್ರೀ ಪಿ.ರವಿಕುಮಾರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು,<br>ಗ್ರಾ.ಅ. ಮತ್ತು ಪಂ.ರಾ. ಇಲಾಖೆ, ಕರ್ನಾಟಕ ಸರ್ಕಾರ. | vi |
| | ಕೃತಜ್ಞತೆ ಮತ್ತು ಕಾಳಜಿ: ಶ್ರೀ ಕಿರಣ ಕಮಲ ಪ್ರಸಾದ, ಕಾರ್ಯದರ್ಶಿ, ವಿಮುಕ್ತಿ ದತ್ತಿ (ಜೀವಿಕ). ಬೆಂಗಳೂರು | 1 |
| 0 | ಪೀಠಿಕೆ | 1 |
| 1 | ಜೀತದ ವ್ಯಾಖ್ಯಾನ | 1 |
| 2. | ಜೀತ ಹೆಚ್ಚಾಗಿ ಕಾಣುವ ಕ್ಷೇತ್ರಗಳು, ಸಮುದಾಯಗಳು ಮತ್ತು ಪ್ರದೇಶಗಳು ಹಾಗೂ ಜೀತದ ವ್ಯಾಪ್ತಿ | 2 |
| 3. | ಜೀತ ಪದ್ಧತಿಯನ್ನು ಹೋಗಲಾಡಿಸುವಲ್ಲಿ ಕರ್ನಾಟಕ ರಾಜ್ಯ ವಹಿಸುತ್ತಿದ್ದ ಪ್ರಮುಖ ಪಾತ್ರ ಮತ್ತು ಅದರಲ್ಲಿಯ<br>ಕೆಲವೊಂದು ಲೋಪದೋಷಗಳು | 3 |
| 4. | ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕಾನೂನು ಕ್ರಮ ಜರುಗಿಸುವುದು | 3 |
| 4.1 | ಜೀತದಾಳುಗಳ ಗುರುತಿಸುವಿಕೆ | 7 |
| 4.2 | ಜೀತದಾಳುಗಳ ಬಿಡುಗಡೆ | 7 |
| 4.3 | ಕಾನೂನಿನ ಪ್ರಕಾರ ಅಪರಾಧಿಗಳ ಮೇಲೆ ಕ್ರಮ ಜರುಗಿಸುವುದು | 11 |
| 5. | ಜೀತದಾಳುಗಳ ಪುನರ್ವಸತಿ: ಸಾಮಾನ್ಯ ತತ್ವಗಳು ಮತ್ತು ದೃಷ್ಟಿಕೋನಗಳು | 12 |
| 6. | ಜೀತದಾಳುಗಳ ಪುನರ್ವಸತಿ–ಸಾಮಾನ್ಯ ತತ್ವಗಳುಮತ್ತು ದೃಷ್ಟಿಕೋನಗಳ ಬಗ್ಗೆ ವಿವರ | 12 |
| 6.1 | ಕೇಂದ್ರ ಪುರಸ್ಕೃತ ಯೋಜನೆ (ಕೇ.ಪು.ಯೋ.) | 13 |
| 6.2 | ಜೀತದಾಳುಗಳ ಪುನರ್ವಸತಿಗೆ ಸಮಗ್ರ ದೃಷ್ಟಿ | 13 |
| 6.3 | ವಿಮುಕ್ತ ಜೀತದಾಳುಗಳಿಗೆ ಹಣಕಾಸು ಪೂರೈಕೆ | 14 |
| 6.4 | ಬೇರೆಬೇರೆ ಮೂಲಗಳಿಂದ ಸೌಲಭ್ಯಗಳ ಒಗ್ಗೂಡಿಸುವಿಕೆ | 16 |
| 6.5 | ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಒಗ್ಗೂಡಿಸುವಿಕೆ | 16 |
| 6.6 | ಜೀತ ತಡೆಗಟ್ಟುವಿಕೆ | 18 |
| 6.7 | ಪುನರ್ವಸತಿ ಸೌಲಭ್ಯ ಕಲ್ಪಿಸಲು ಇರಬೇಕಾದ ವ್ಯವಸ್ಥೆಗಳು | 21 |
| 6.8 | ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯ ಪೂರಕ ಪ್ರಕ್ರಿಯೆಗಳು | 21 |
| 7. | ಜೀತದಾಳುಗಳ ಪುನರ್ವಸತಿ ಕ್ರಿಯಾಯೋಜನೆ: ಸಂಕ್ಷಿಪ್ತವಾಗಿ | 23 |
| 8. | ಜೀತದಾಳುಗಳ ಪುನರ್ವಸತಿ ಕ್ರಿಯಾಯೋಜನೆ: ಕೋಷ್ಟಕದಲ್ಲಿ | 25 |
| 9. | ಅನುಸೂಚಿಗಳು: | 25 |
| 9.1 | ಕಾನೂನಿನ ಅಂಶಗಳು: ಅಂತರ್ರಾಷ್ಟ್ರೀಯ ಒಡಂಬಡಿಕೆಗಳು, ಭಾರತೀಯ ಸಂವಿಧಾನ, ಭಾರತೀಯ ದಂಡ ಸಂಹಿತೆ, 1976ರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಇತರೆ ಭಾರತೀಯ ಕಾನೂನುಗಳು, ಸರ್ವೋಚ್ಚನ್ಯಾಯಾಲಯದ ತೀರ್ಪುಗಳು, ಗ್ರಾಮೀಣ ದುಡಿಮೆ ಕುರಿತ ರಾಷ್ಟ್ರೀಯ ಆಯೋಗ ಮತ್ತು ಜೀತ ಪದ್ಧತಿ ಕುರಿತ ಕೇಂದ್ರ ಸಮಿತಿಯ ಶಿಫಾರಸ್ಸುಗಳು – ಇವುಗಳಿಂದ ಆಯ್ದ ಕೆಲವು ಭಾಗಗಳು | 35 |
| 9.2 | ಬೆಂಗಳೂರಿನ ಭಾರತೀಯ ವಿಶ್ವವಿದ್ಯಾಲಯದ ಕರ್ನಾಟದ ಕ್ಷೇತ್ರ ಮಟ್ಟದ ಅಧಿಕಾರಿಗಳ ಸಂವೇದನಾರ್ಥವಾಗಿ ಬೆಂಗಳೂರಿನ ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ 2003ರ ಅಕ್ಟೋಬರ್ 9–10ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ನವದೆಹಲಿಯು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾರ್ಮಿಕ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಿದ ಎರಡು ದಿನಗಳ ಕಾರ್ಯಾಗಾರದ ಫಲಿತಾಂಶ. ಚುಟುಕಾಗಿ "ಫಲಿತಾಂಶ" ಎಂದು ಕರೆಯಲಾಗುವುದು. | 38 |
| 9.3 | ಶ್ರೀ ಎಸ್.ಆರ್.ಶಂಕರನ್‌ರವರು ರೂಪಿಸಿದ ಜೀತದಾಳುಗಳನ್ನು ಗುರುತಿಸಲು ಅನುಸರಿಸಬೇಕಾದ ವಿಧಾನ/ ಮಾರ್ಗದರ್ಶಿಗಳು. ಚುಟುಕಾಗಿ "ಮಾರ್ಗದರ್ಶಿಗಳು" | 41 |
| 9.4 | ಜೀತದಾಳುಗಳ ಪುನರ್ವಸತಿಗೆ ಕೇಂದ್ರ ಪುರಸ್ಕೃತ ಯೋಜನೆ (ಮೇ 2000ರಲ್ಲಿ ಮಾರ್ಪಾಡಿಸಿದ್ದು). ಚುಟುಕಾಗಿ "ಕೇಪುಯೋ" | 50 |
| 9.5 | ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸಲು ಒಂದು ನೀಲಿನಕ್ಷೆ. ಚುಟುಕಾಗಿ "ನೀಲಿನಕ್ಷೆ" | 66 |
| 9.6 | ಕರ್ನಾಟಕ ಸರ್ಕಾರದ ಆದೇಶಗಳು, ಸುತ್ತೋಲೆಗಳು, ಕರ್ನಾಟಕ ಗೆಜೆಟ್‌ನಲ್ಲಿಯ ಸೂಚನಾಪತ್ರಗಳು, ಸೂಚನಾ ಪತ್ರಗಳು; SLBC ಪತ್ರ | 93-98 |
| 9.7 | 1976ರಿಂದ 2005 ಜೀತದಾಳುಗಳ ಕುರಿತು ಅಂಕಿ ಅಂಶಗಳು | |

## ಜೀತದಾಳುಗಳ ಪುನರ್ವಸತಿ
## ಒಂದು ಕ್ರಿಯಾ ಯೋಜನೆ: 2008.

**ಪೀಠಿಕೆ**

ವಿಶ್ವಸಂಸ್ಥೆಯ ವ್ಯಾಖ್ಯಾನದ ಪ್ರಕಾರ ಜೀತಗಾರಿಕೆಯು ಗುಲಾಮಿ ಪದ್ಧತಿಯ ಸಮಕಾಲೀನ ರೂಪವಾಗಿರುತ್ತದೆ. ಇದರ ಸೂಚ್ಯಾರ್ಥ ಆಧುನಿಕ ಸಮಾಜದಲ್ಲಿ ಜೀತ ಪದ್ಧತಿಯು ಇರಲೇಬಾರದು ಎಂದು ಆಗಿರುತ್ತದೆ. ಭಾರತೀಯ ಸಂವಿಧಾನವು ಮಾನವ ವ್ಯಾಪಾರ, ಪುಕ್ಕಟೆ ದುಡಿಮೆ (ಬೇಗಾರ್) ಮತ್ತು ಅದರಂತಹ ಬಲಾತ್ಕಾರದ ದುಡಿಮೆಗಳನ್ನು ನಿಷೇಧಿಸುತ್ತದೆ. ಅದರ ಮೂರನೇ ಭಾಗದಲ್ಲಿ ನಮೂದಿಸಲಾದ ಈ ವಿಷಯವು ಪ್ರತಿ ಭಾರತೀಯನ ಮೂಲಭೂತ ಹಕ್ಕಾಗಿರುತ್ತದೆ. 1975ರ ಅಕ್ಟೋಬರ್ 25ರಿಂದ ಪೂರ್ವಾನ್ವಯವಾಗಿದೆಯೆಂದು ಸೂಚಿಸುವ 1976ರ ಫೆಬ್ರವರಿ 9ನೇ ತಾರೀಖಿನಂದು ಜಾರಿಗೊಳಿಸಲ್ಪಟ್ಟ ಜೀತಪದ್ಧತಿ ನಿರ್ಮೂಲನೆ ಕಾಯ್ದೆ ಬಲಾತ್ಕಾರದ ರೂಪವಾಗಿರುವ ಜೀತಪದ್ಧತಿಯನ್ನು ನಿಷೇಧಿಸುತ್ತದೆ. ಪುರೋಗಾಮಿ ಮತ್ತು ಸಮೃದ್ಧ ಭಾರತ ದೇಶವನ್ನು ನಾವು ಕಟ್ಟಬೇಕಾದರೆ ಜೀತಪದ್ಧತಿಯ ಎಲ್ಲಾ ಪ್ರಭೇದಗಳು ಪರಿಣಾಮಕಾರಿಯಾಗಿ ಮೂಲೋಚ್ಚಾಟನೆಯಾಗಬೇಕು. (ಅಂತರ್ರಾಷ್ಟ್ರೀಯ ಒಡಂಬಡಿಕೆಗಳು, ಭಾರತೀಯ ಸಂವಿಧಾನ, ಭಾರತೀಯ ಕಾನೂನುಗಳು, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು, ಗ್ರಾಮೀಣ ಶ್ರಮದ ಕುರಿತು ರಾಷ್ಟ್ರೀಯ ಆಯೋಗ ಮತ್ತು ಜೀತ ಕುರಿತು ಕೇಂದ್ರ ಸಮಿತಿಯ ವರದಿಗಳು ಇವುಗಳಿಂದ ಆಯ್ದ ಸೂಕ್ತ ಭಾಗಗಳನ್ನು ಅನುಸೂಚಿ 9.1ರಲ್ಲಿ ಕೊಡಲಾಗಿದೆ.)

**1. ಜೀತದ ವ್ಯಾಖ್ಯಾನ**

1.0 1976ರ ಜೀತಪದ್ಧತಿ ನಿರ್ಮೂಲನೆ ಕಾಯ್ದೆಯ ಪ್ರಕರಣ ಸಂ.2 ರಲ್ಲಿ ಜೀತಕ್ಕೆ ಸಂಬಂಧಪಟ್ಟಂತೆ ಹಲವಾರು ವ್ಯಾಖ್ಯಾನಗಳು ಬರುತ್ತವೆ. ಅವನ್ನೆಲ್ಲಾ ಕ್ರೋಢೀಕರಿಸಿ ಜೀತ ಪದ್ಧತಿಯ ಎಲ್ಲಾ ಅಂಶಗಳನ್ನೊಳಗೊಂಡಿರುವಂತೆ ಜೀತವನ್ನು ಸರಳವಾಗಿ ಹಾಗೂ ಸ್ಪಷ್ಟವಾಗಿ ಮುಂದೆ ವಿವರಿಸಲಾಗಿದೆ.

1.1 ಸರಳವಾಗಿ ಹೇಳುವುದಾದರೆ ಜೀತ ಪದ್ಧತಿಯು ಒಂದು ಬಲಾತ್ಕಾರದ ದುಡಿಮೆ. ಅದರಲ್ಲಿ ಒಬ್ಬ ವ್ಯಕ್ತಿಯು ಐದು ಕಾರಣ [1.ಮುಂಗಡ ಅಥವಾ ಸಾಲ ತೆಗೆದುಕೊಂಡಿರುವುದು 2.ಬೇರೆ ತರಹದ ಆರ್ಥಿಕ ಸೌಲಭ್ಯವನ್ನು ಪಡೆದಿರುವುದು 3.ತಂದೆ ಅಥವಾ ಇತರೆ ಪೂರ್ವಜರಿಂದ ಬಂದ ಬಾಧ್ಯತೆ 4.ಸಾಮಾಜಿಕ ಪದ್ಧತಿ ಅಥವಾ 5.ಒಂದು ನಿರ್ದಿಷ್ಟ ಸಮುದಾಯದಲ್ಲಿ ಹುಟ್ಟಿರುವುದು] ಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಕಾರಣಗಳಿಗಾಗಿ ನಾಲ್ಕು ತರಹದ ಹಕ್ಕು ಅಥವಾ ಸ್ವಾತಂತ್ರ್ಯ [1.ಕನಿಷ್ಠ ವೇತನ ಪಡೆಯುವುದು 2.ಇಷ್ಟಪಟ್ಟಲ್ಲಿ ಕೆಲಸಕ್ಕೆ ಹೋಗುವುದು 3.ಸ್ವತಂತ್ರವಾಗಿ ಚಲಿಸುವುದು 4.ತನ್ನ ಶ್ರಮ ಅಥವಾ ಆಸ್ತಿಗೆ ಮಾರುಕಟ್ಟೆಯಲ್ಲಿ ಸಿಗುವ ಮೌಲ್ಯ ಪಡೆಯುವುದು] ಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚಿನ ಹಕ್ಕು ಅಥವಾ ಸ್ವಾತಂತ್ರ್ಯಗಳನ್ನು ಕಳೆದುಕೊಳ್ಳುತ್ತಾನೆ.

1.2 ಇನ್ನೂ ಸರಳವಾಗಿ ಹೇಳುವುದಾದರೆ ತಾನು ಸಾಲ ತೆಗೆದುಕೊಂಡಿರುವುದರಿಂದ (ಅಥವಾ ಇನ್ನಿತರೆ ಆರ್ಥಿಕ ಸೌಲಭ್ಯ ಪಡೆದಿರುವುದರಿಂದ ಅಥವಾ ವಂಶಪಾರಂಪರ್ಯದ ಅಥವಾ ಸಾಮಾಜಿಕ ಅಥವಾ ಸಮುದಾಯದ ನಿರ್ಬಂಧಕ್ಕೊಳಗಾಗಿ ಇರುವುದರಿಂದ) ಕಾನೂನು ಸಮ್ಮತ ರೀತಿಯಲ್ಲಿ ತನ್ನ ಶ್ರಮಕ್ಕೆ ಸಂಬಂಧಪಟ್ಟ ಲಾಭ ಮತ್ತು ಸ್ವಾತಂತ್ರ್ಯಗಳನ್ನು ಕಳೆದುಕೊಂಡಿರುವ ಬಲಾತ್ಕಾರದ ದುಡಿಮೆಯ ಪರಿಸ್ಥಿತಿಯು ಜೀತ ಪದ್ಧತಿ ಆಗಿರುತ್ತದೆ.

1.3 ಜೀತ ಪದ್ಧತಿಯಲ್ಲಿರಬೇಕಾದ ಮೂರು ಮುಖ್ಯ ಅಂಶಗಳು ಈ ಕೆಳಗಿನವಾಗಿರುತ್ತವೆ:

1) ಜೀತದಾಳು ಯಜಮಾನನಿಂದ ಸಾಲ ಪಡೆದಿರುತ್ತಾನೆ ಅಥವಾ ಅವನಿಗೆ ಸೇವೆ ಸಲ್ಲಿಸುವಂತೆ ಯಾವುದೇ ಆರ್ಥಿಕ, ವಂಶಪಾರಂಪರ್ಯದ, ಸಾಮಾಜಿಕ ಅಥವಾ ಸಾಮುದಾಯಿಕ ನಿರ್ಬಂಧಕ್ಕೊಳಗಾಗಿರುತ್ತಾನೆ.

2) ಜೀತದಾಳು ಕೇವಲ ನಾಮಮಾತ್ರ ಮಜೂರಿ ಪಡೆಯುತ್ತಾನೆ ಅಥವಾ ಮಜೂರಿಯನ್ನೇ ಪಡೆಯುವುದಿಲ್ಲ.

3) ಸಾಲ ತೀರುವ ಅಥವಾ ಬೇರೆ ನಿರ್ಬಂಧ ಕೊನೆಗಾಣುವ ತನಕ ಜೀತದಾಳುವು ತನ್ನ ಶ್ರಮವನ್ನು ಬೇರೆಯವರಿಗೆ ಮಾರುವಂತಿಲ್ಲ.

**2. ಜೀತ ಹೆಚ್ಚಿಗೆ ಕಾಣುವ ಕ್ಷೇತ್ರಗಳು, ಸಮುದಾಯಗಳು ಮತ್ತು ಪ್ರದೇಶಗಳು ಹಾಗೂ ಜೀತದ ವ್ಯಾಪ್ತಿ**

2.1 ವ್ಯವಸಾಯ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಜೀತದ ಪ್ರಮಾಣ ಇದೆ. ಇಟ್ಟಿಗೆ ಕಾರ್ಖಾನೆ, ಬಂಡೆ ಹೊಡೆಯುವುದು, ತೋಟಗಾರಿಕೆ, ರೇಷ್ಮೆ, ಮನೆಗೆಲಸ, ಹೋಟೇಲು ಮತ್ತು ಗ್ಯಾರೇಜುಗಳು ಜೀತವಿರುವ ಇನ್ನಿತರೆ ಕ್ಷೇತ್ರಗಳು. ಕಂಪೆನಿ ಮತ್ತು ಫ್ಯಾಕ್ಟರಿಗಳಲ್ಲೂ ಜೀತವಿರಬಹುದು.

2.2 ಶೇಕಡಾ 80ರಿಂದ 95ರಷ್ಟು ಜೀತದಾಳುಗಳು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಅನುಸೂಚಿತ ಜನಾಂಗ ಮತ್ತು ಹಿಂದುಳಿದ ಜಾತಿಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಜೀತದಾಳುಗಳಿದ್ದಾರೆ. ಬಲಿಷ್ಠ ಜಾತಿಗಳಲ್ಲಿ ಅತ್ಯಲ್ಪ ಕಡಿಮೆ ಪ್ರಮಾಣದಲ್ಲಿ ಜೀತದಾಳುಗಳಿರುವುದು ಕಂಡುಬರುತ್ತದೆ.

2.3. ಕರ್ನಾಟಕದ ಎಲ್ಲಾ ಜಿಲ್ಲೆಗಳು ಮತ್ತು ತಾಲೂಕುಗಳಲ್ಲಿ ಜೀತವಿದೆಯೇ? ಇದಕ್ಕೆ ಉತ್ತರವನ್ನು ವಸ್ತುನಿಷ್ಠ ಸಮೀಕ್ಷೆ ಮತ್ತು ಅಧ್ಯಯನಗಳಿಂದ ಪಡೆಯಬೇಕಾಗುತ್ತದೆ. ಜೀತವು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಇರಬಹುದು. ಕರಾವಳಿಯ ತಾಲ್ಲೂಕುಗಳಲ್ಲಿ ಜೀತದ ಪ್ರಮಾಣವು ಬಹಳಷ್ಟು ಕಡಿಮೆ ಇದ್ದು ಉತ್ತರ ಕರ್ನಾಟಕದ ಜಿಲ್ಲೆಗಳು ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗಿಂತ ಅಧಿಕವಾಗಿ ಹಿಂದುಳಿದಿರುವುದರಿಂದ ಅಲ್ಲಿ ಜೀತ ಪ್ರಮಾಣ ಜಾಸ್ತಿ ಇರುವ ಸಾಧ್ಯತೆ ಇದೆ. ಇಷ್ಟರವರೆಗೆ ಸರ್ಕಾರ ನಡೆಸಿದ ಸಮೀಕ್ಷೆಗಳಲ್ಲಿ ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಜೀತದಾಳುಗಳನ್ನು ಗುರುತಿಸಲಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಹಳ ಕಡಿಮೆ ಜೀತದಾಳುಗಳನ್ನು ಗುರುತಿಸಲಾಗಿದೆ (ನೋಡಿ, ಅನುಸೂಚಿ 9.7). ಇದರಿಂದ ದಕ್ಷಿಣ ಕರ್ನಾಟಕದಲ್ಲಿ ಜೀತದಾಳುಗಳ ಸಂಖ್ಯೆ ಹೆಚ್ಚು ಮತ್ತು ಉತ್ತರ ಕರ್ನಾಟಕದಲ್ಲಿ ಕಡಿಮೆ ಎಂದು ತೀರ್ಮಾನಿಸುವುದು ಸರಿಯಲ್ಲ.

2.4 ಭಾರತೀಯ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆಯು 1992ರಲ್ಲಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಕೃಷಿ ಕೂಲಿಗಳಲ್ಲಿ ಶೇಕಡಾ 6 ಮಂದಿ ಜೀತದಾಳುಗಳಾಗಿರುತ್ತಾರೆ. 2001ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ 52,850,562. ಅವರಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆ 23,534,791 (ಒಟ್ಟು ಜನಸಂಖ್ಯೆಯ 44.5ಶೇ.). ಒಟ್ಟು ಕಾರ್ಮಿಕರಲ್ಲಿ ಕೃಷಿಕೂಲಿಯಾಳುಗಳು 6,226,942 (ಒಟ್ಟು ಕಾರ್ಮಿಕರ 26.5 ಶೇ.). ಅವರಲ್ಲಿ ಶೇ. 6 ಅಂದರೆ 3,73,617 ಮಂದಿ ಜೀತದಾಳುಗಳಾಗುತ್ತಾರೆ! ಇನ್ನಿತರೆ ಕ್ಷೇತ್ರಗಳಲ್ಲಿಯ ಜೀತದಾಳುಗಳನ್ನು ಸೇರಿಸಿದರೆ ಕರ್ನಾಟಕದಲ್ಲಿ ಜೀತದಾಳುಗಳ ಒಟ್ಟು ಸಂಖ್ಯೆ ಐದು ಲಕ್ಷದಷ್ಟಿರಬಹುದು. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಪ್ರಕ್ರಿಯೆಗಳು ಕೃಷಿ ಕೂಲಿಯಾಳು ಮತ್ತಿತರ ಅಸಂಘಟಿತ ವಲಯದ ಕಾರ್ಮಿಕರ ಜೀವನವನ್ನು ಹೆಚ್ಚೆಚ್ಚು ದುಸ್ತರಗೊಳಿಸುತ್ತಿವೆ. ಅವರಲ್ಲಿಯ ಹಲವಾರು ಮಂದಿ ಹೊಸ ರೀತಿಯ ಜೀತಸಂಬಂಧಗಳಿಗೆ ಸಿಲುಕಿ ಹಾಕಿಕೊಳ್ಳುತ್ತಿದ್ದಾರೆ. ಮನೆಗೆಲಸ ಮತ್ತು ಲೈಂಗಿಕ ಗುಲಾಮಗಿರಿಗೆ ಮಹಿಳೆಯರು ಹಾಗೂ ಮಕ್ಕಳ ವ್ಯಾಪಾರಗಳು ಇತ್ತೀಚೆಗೆ ಬೆಳೆಯುತ್ತಿರುವ ಜೀತದ ಹೊಸ ರೂಪಗಳೆನಿಸುತ್ತವೆ.

**3. ಜೀತ ಪದ್ಧತಿಯನ್ನು ಹೋಗಲಾಡಿಸುವಲ್ಲಿ ಕರ್ನಾಟಕ ರಾಜ್ಯ ವಹಿಸುತ್ತಿದ್ದ ಪ್ರಮುಖ ಪಾತ್ರ ಮತ್ತು ಅದರಲ್ಲಿಯ ಕೆಲವು ಲೋಪ ದೋಷಗಳು** (ಅಂಕಿ ಅಂಶಗಳಿಗೆ ಅನುಸೂಚಿ 9.7 ನೋಡಿ):

3.1 ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯನ್ನು 1976ರಲ್ಲಿ ಜಾರಿಗೊಳಿಸಿದಾಗ ಕೆಲವೊಂದು ರಾಜ್ಯಗಳು ಮುತುವರ್ಜಿಯಿಂದ ಅದನ್ನು ಅನುಷ್ಠಾನಕ್ಕೆ ತಂದವು. ಆದರೆ 1993ರ ತನಕ ಒಟ್ಟು 27 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇವಲ 12 ರಾಜ್ಯಗಳು ಮಾತ್ರ ಕಾನೂನಿನಡಿ ಸ್ವಲ್ಪ ಮಟ್ಟಿಗೆ ಕ್ರಮ ಜರುಗಿಸಿದ್ದವು. 1993ರೊಳಗೆ ಇಡೀ ದೇಶದಲ್ಲಿ 2,51,069 ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸಲಾಗಿತ್ತು. ಅವರಲ್ಲಿ 2,24,074 ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಿಕೊಡಲಾಗಿತ್ತು. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಜೀತದಾಳುಗಳನ್ನು ಗುರುತಿಸಿ, ಬಿಡುಗಡೆ ಮಾಡಿ, ಪುನವರ್ಸತಿಗೊಳಿಸಲಾಗಿತ್ತು. ಕರ್ನಾಟಕವು 1993ರೊಳಗೆ 62,708 ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸಿತ್ತು. ಇದು ಇಡೀ ದೇಶದಲ್ಲಿ ಗುರುತಿಸಿ ಬಿಡುಗಡೆಗೊಳಿಸಿದ ಜೀತದಾಳುಗಳ ಸಂಖ್ಯೆಯ ಕಾಲು ಭಾಗದಷ್ಟು! ಕರ್ನಾಟಕವು ಈ ಸ್ಥಾನವನ್ನು 1997ರ ತನಕ ಉಳಿಸಿಕೊಂಡು ಬಂತು. (ಇದರರ್ಥ ಕರ್ನಾಟಕದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಜೀತದಾಳುಗಳಿದ್ದಾರೆಂದಲ್ಲ; ಬದಲು ಕರ್ನಾಟಕ ರಾಜ್ಯ ಮಾತ್ರ ಬೇರೆ ರಾಜ್ಯಗಳಿಗಿಂತ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಯತ್ನಿಸಿದೆ ಎಂದು.)

3.2. ಆದರೆ ಕಾಯ್ದೆ ಜಾರಿಗೆ ಬಂದ ಕೂಡಲೇ ಕರ್ನಾಟಕದಲ್ಲಿ ಗುರುತಿಸಿದ ಜೀತದಾಳುಗಳು ಒಟ್ಟಿಗೆ ಪುನರ್ವಸತಿಗೊಂಡಿರುವುದಿಲ್ಲ. ಅವರನ್ನು ಹಂತಹಂತವಾಗಿ 2000ರ ತನಕವೂ ಪುನರ್ವಸತಿಗೊಳಿಸಲಾಗಿರುತ್ತದೆ! ಜೊತೆಗೆ, 1980ರ ನಂತರ ರಾಜ್ಯದಲ್ಲಿ ಹೊಸದಾಗಿ ಜೀತದಾಳುಗಳನ್ನು ಗುರುತಿಸಲಿಕ್ಕೆ ಬಹುತೇಕವಾಗಿ ಪತ್ತೆ ಆಗಲಿಲ್ಲ. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ, ಪುನರ್ವಸತಿಗೊಳಿಸಿದ್ದೇ ಆದರೆ ಅದು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಮತ್ತು ಅದೂ ಕೇವಲ ಎರಡು ಮೂರು ತಾಲ್ಲೂಕುಗಳಲ್ಲಿ ಅಷ್ಟೇ. ಉದಾಹರಣೆಗಾಗಿ 1996ರಲ್ಲಿ ಬಂಗಾರಪೇಟೆಯಲ್ಲಿ 11 ಮತ್ತು ಗೌರಿಬಿದನೂರಿನಲ್ಲಿ 8 ಮತ್ತು 1997ರಲ್ಲಿ ಮಧುಗಿರಿಯಲ್ಲಿ 11.

3.3. ಒಟ್ಟಾರೆಯಾಗಿ ನೋಡುವಾಗ ಕರ್ನಾಟಕವು ಆರಂಭದಲ್ಲಿ ದೇಶದಲ್ಲೇ ದೊಡ್ಡ ಪ್ರಮಾಣದಲ್ಲಿ ಜೀತದಾಳುಗಳನ್ನು ಗುರುತಿಸಿದ್ದರೂ ಗುರುತಿಸಿದ ಜೀತದಾಳುಗಳ ಜಿಲ್ಲಾವಾರು ಹರಡಿರುವಿಕೆಯನ್ನು ತುಲನೆ ಮಾಡಿದಾಗ ಒಂದು ಅಂಶ ಎದ್ದು ಕಾಣುತ್ತದೆ. ಆಗಿನ ಒಟ್ಟು 19 ಜಿಲ್ಲೆಗಳಲ್ಲಿ ಹಿಂದುಳಿದ ಪ್ರದೇಶವಾದ ಉತ್ತರ ಕರ್ನಾಟಕದ ಆಗಿನ 8 ಜಿಲ್ಲೆಗಳಲ್ಲಿ ಗುರುತಿಸಿದ ಜೀತದಾಳುಗಳ ಸಂಖ್ಯೆ ಕೇವಲ 1500! ಈಗಿನ ಗದಗ ಮತ್ತು ಹಾವೇರಿ ಜಿಲ್ಲೆಗಳನ್ನೊಳಗೊಂಡಿದ್ದ ಆಗಿನ ಧಾರಾವಾಡ ಜಿಲ್ಲೆಯಲ್ಲಿ ಒಬ್ಬನೇ ಒಬ್ಬ ಜೀತದಾಳುವನ್ನು ಗುರುತಿಸಿರಲಿಲ್ಲ! ಆದರೆ ಸ್ವಲ್ಪ ಹೆಚ್ಚಿಗೆ ಮುಂದುವರಿದಿರುವ ಕರ್ನಾಟಕದ ದಕ್ಷಿಣ ಭಾಗದ ಆಗಿನ 11 ಜಿಲ್ಲೆಗಳಲ್ಲಿ 60 ಸಾವಿರಕ್ಕಿಂತಲೂ ಹೆಚ್ಚಿನ ಜೀತದಾಳುಗಳನ್ನು ಗುರುತಿಸಲಾಗಿತ್ತು. ಇದರಿಂದ ಎರಡು ರೀತಿಯ ತೀರ್ಮಾನಗಳಿಗೆ ಬರುವ ಸಾಧ್ಯತೆ ಇದೆ. ಒಂದು ಉತ್ತರ ಕರ್ನಾಟಕದಲ್ಲಿ ಜೀತದಾಳುಗಳ ಸಂಖ್ಯೆಯೇ ಕಡಿಮೆ ಅಥವಾ ಆ ಪ್ರದೇಶದಲ್ಲಿ ಜೀತದಾಳುಗಳನ್ನು ಗುರುತಿಸುವ ಪ್ರಕ್ರಿಯೆ ಸಮರ್ಪಕವಾಗಿ ನಡೆದಿಲ್ಲ ಎಂಬುದು. ಉತ್ತರ ಕರ್ನಾಟಕದ ಜಿಲ್ಲೆಗಳು ಹೆಚ್ಚು ಹಿಂದುಳಿದ ಜಿಲ್ಲೆಗಳೆಂದು ಮನಸ್ಸಿನಲ್ಲಿಟ್ಟರೆ ಮೊದಲ ತೀರ್ಮಾನಕ್ಕೆ ಆಸ್ಪದವಿಲ್ಲವೆಂದು ಗೊತ್ತಾಗುತ್ತದೆ.

3.4. ಜೀತದಾಳುಗಳನ್ನು ಗುರುತಿಸಿ ಪುನರ್ವಸತಿಗೊಳಿಸುವ ಪ್ರಕ್ರಿಯೆ ಕರ್ನಾಟಕವನ್ನೊಳಗೊಂಡಂತೆ ಎಲ್ಲಾ 12 ರಾಜ್ಯಗಳಲ್ಲಿ ಆರಂಭದಲ್ಲಿ ಉತ್ಸಾಹದಿಂದ ನಡೆದಿದ್ದರೂ 1980ರಿಂದಲೇ ಆ ಪ್ರಕ್ರಿಯೆಯಲ್ಲಿ ಮಂದಗತಿ ತಲೆದೋರಿತು ಅಥವಾ ಅದು ಸಂಪೂರ್ಣವಾಗಿ ಸ್ಥಗಿತವಾಯಿತೆಂದರೂ ತಪ್ಪಾಗಲಾರದು. ಆದರೆ 1980ರ ನಂತರದ ಎಷ್ಟೋ ಅಧ್ಯಯನಗಳು ಆ 12 ರಾಜ್ಯಗಳಲ್ಲದೇ ಜೀತ ಮುಕ್ತವೆಂದು ಮೊದಲು ತಿಳಿದು ಕೊಂಡಿದ್ದ ಕೇರಳ, ಗುಜರಾತ್, ಪಂಜಾಬ್, ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ, ಮೇಘಾಲಯ, ಮಣಿಪುರ ಮತ್ತು ನಾಗಾಲ್ಯಾಂಡ್ ಮುಂತಾದ ರಾಜ್ಯಗಳಲ್ಲಿಯೂ ಜೀತ ಪದ್ಧತಿ ಜೀವಂತವಿರುವುದನ್ನು ಬೆಳಕಿಗೆ ತಂದಿವೆ.

3.5. ವಾಸ್ತವ ಸ್ಥಿತಿ ಹೀಗಿದ್ದರೂ, ಮೊದಲು ಜೀತ ಪದ್ಧತಿ ಬಗ್ಗೆ ಕೆಲಸ ಮಾಡಿಕೊಂಡಿದ್ದ ಕರ್ನಾಟಕವನ್ನೊಳಗೊಂಡಂತೆ ಮೇಲ್ಕಾಣಿಸಿದ 12 ರಾಜ್ಯಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಜೀತ ಪದ್ಧತಿ ಹಾಲಿ ಅಸ್ತಿತ್ವದಲ್ಲಿ ಇಲ್ಲವೆಂದು ಸರ್ವೋಚ್ಛ ನ್ಯಾಯಾಲಯದಲ್ಲಿ 1985ರ ರಿಟ್ ಅರ್ಜಿ ಸಂ.3922ರ ಸಂಬಂಧದಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದವು. ಆದರೆ ಸರ್ವೋಚ್ಛ ನ್ಯಾಯಾಲಯವು 1995ರ ಜೂನ್ 3ರಂದು ಆ ರಾಜ್ಯಗಳ ಪ್ರಮಾಣ ಪತ್ರಗಳಿಗೆ ಬೆಲೆ ಕೊಡದೇ ಪಶ್ಚಿಮ ಬಂಗಾಳ ಮತ್ತು ಮೇಘಾಲಯ ರಾಜ್ಯಗಳನ್ನೊಳಗೊಂಡಂತೆ ಒಟ್ಟು 13 ರಾಜ್ಯಗಳಲ್ಲಿ ಜೀತ ಕುರಿತು ಅಮೂಲಾಗ್ರ ಸಮೀಕ್ಷೆ ನಡೆಸಿ ವರದಿ ಮಾಡಲು ಪ್ರತಿ ರಾಜ್ಯಕ್ಕೆ ಇಬ್ಬಿಬ್ಬರು ಆಯುಕ್ತರನ್ನು ನೇಮಿಸಿ ಆದೇಶವನ್ನು ಹೊರಡಿಸಿತು. ಆ 13 ರಾಜ್ಯಗಳಲ್ಲಿ ಕೇವಲ

ತಮಿಳುನಾಡು ಆಯೋಗವು ವ್ಯಾಪಕವಾದ ಸಮೀಕ್ಷೆ ಕೈಗೊಂಡು ದೊಡ್ಡ ಪ್ರಮಾಣದಲ್ಲಿ, ಅಂದರೆ ಸುಮಾರು 10 ಲಕ್ಷ
ಜೀತದಾಳುಗಳನ್ನು ಗುರುತಿಸಿತು. ರಾಜ್ಯ ಸರ್ಕಾರವು ಗುರುತಿಸಿದ ಆ ಜೀತದಾಳುಗಳ ಬಗ್ಗೆ ಮುಂದಿನ ಕ್ರಮ ತೆಗೆದು
ಕೊಳ್ಳುವಂತೆ ಆದೇಶಿಸಲ್ಪಟ್ಟಿತ್ತು. ಆದರೆ ತಮಿಳುನಾಡು ಸರ್ಕಾರವು 1996–97ರಲ್ಲಿ ಮರು ತನಿಖೆ ಮಾಡಿ ಇಡೀ ರಾಜ್ಯ
ದಲ್ಲಿ ಸುಮಾರು 25,000 ಮಂದಿ ಮಾತ್ರ ಜೀತದಾಳುಗಳಿದ್ದಾರೆಂಬ ತೀರ್ಮಾನಕ್ಕೆ ಬಂತು. ಇದರಿಂದ ತಮಿಳುನಾಡಿನಲ್ಲಿ
ಗುರುತಿಸಿದ ಒಟ್ಟು ಜೀತದಾಳುಗಳ ಸಂಖ್ಯೆ 65,573ಕ್ಕೆ ಏರಿತು. ಆದ್ದರಿಂದ ಕಾನೂನು ಬಂದಾಗಿನಿಂದ ಇಡೀ ದೇಶದಲ್ಲೇ
ಅತಿ ಹೆಚ್ಚಿನ ಜೀತದಾಳುಗಳನ್ನು ಗುರುತಿಸಿರುವ ರಾಜ್ಯವೆಂಬ ಹೆಗ್ಗಳಿಕೆ 1997ರ ತನಕ ಕರ್ನಾಟಕಕ್ಕಿದ್ದರೆ, 1997ರಿಂದ
ಅದು ತಮಿಳುನಾಡು ರಾಜ್ಯಕ್ಕೆ ಸೇರುತ್ತದೆ.

3.6 ಕರ್ನಾಟಕ ಸರ್ಕಾರವು ಜೀತದಾಳುಗಳನ್ನು ಹೊಸದಾಗಿ ಗುರುತಿಸಲು 1992ರಿಂದ ಹಲವಾರು ಸುತ್ತೋಲೆಗಳನ್ನು
ಹೊರಡಿಸಿದೆ. 1990ರಲ್ಲಿ ಆನೇಕಲ್ ತಾಲೂಕಿನ 656 ಮಂದಿ ಜೀತದಾಳುಗಳು ತಮ್ಮ ಬಿಡುಗಡೆ ಮತ್ತು ಪುನರ್ವಸತಿಗೆ
ಅರ್ಜಿ ಸಲ್ಲಿಸಿದಾಗ ಕರ್ನಾಟಕ ಸರ್ಕಾರವು ಜೀತಪದ್ಧತಿ ಈಗಲೂ ಅಸ್ತಿತ್ವದಲ್ಲಿರುವುದನ್ನು ಮನಗಂಡು ಇಡೀ ರಾಜ್ಯದಲ್ಲಿ
ಹೊಸದಾಗಿ ಜೀತದಾಳುಗಳ ಸಮೀಕ್ಷೆ ಮಾಡಲು 1992ರಲ್ಲಿ ಒಂದು ಸುತ್ತೋಲೆ ಹೊರಡಿಸಿತು. ನಂತರ ಸರ್ವೋಚ್ಚ
ನ್ಯಾಯಾಲಯವು 1985ರ ರಿಟ್ ಅರ್ಜಿ ಸಂ.3922 ಕುರಿತು 1995 ಮತ್ತು 1997ರಂದು ಹೊರಡಿಸಿದ ಆದೇಶದ
ಪರಿಣಾಮವಾಗಿಯೂ ಕರ್ನಾಟಕ ಸರ್ಕಾರವು ಇಡೀ ರಾಜ್ಯದಲ್ಲಿ ಜೀತದಾಳುಗಳ ಸಮೀಕ್ಷೆಯನ್ನು ಪುನಃ ಮಾಡಲು 1999
ರಲ್ಲಿ ಇನ್ನೊಂದು ಆದೇಶವನ್ನು ಹೊರಡಿಸಿತು. ಆದರೆ ಎರಡೂ ಸಮೀಕ್ಷೆಗಳಿಂದ ಜೀತದಾಳುಗಳು ಪತ್ತೆ ಆಗಿರಲಿಲ್ಲ.
2000ರ ಜೂನ್ 22ರಂದು ಆಘಾತಕಾರಿಯಾದ ಜೀತ ಪ್ರಕರಣ ವಾಸ್ತವಾಂಶ ಬೆಳಕಿಗೆ ಬಂತು. ಕಳೆದ ಮೂರೂವರೆ ವರ್ಷ
ಗಳಿಂದ ಐದು ಮಂದಿ ಜೀತದಾಳುಗಳ ಎರಡೂ ಕಾಲುಗಳಿಗೆ ದಪ್ಪ ಸರಪಳಿಗಳನ್ನು ಬಿಗಿದು ಶ್ರೀರಂಗಪಟ್ಟಣದ ಕಲ್ಲು
ಕೋರೆಯೊಂದರಲ್ಲಿ ಅವರಿಂದ ಕೆಲಸ ಮಾಡಿಸಲಾಗುತ್ತಿತ್ತು. ಇದರ ನಂತರ ಇಡೀ ಕರ್ನಾಟಕದಲ್ಲಿ ಜೀತದಾಳುಗಳನ್ನು
ಗುರುತಿಸಿ ಪುನರ್ವಸತಿಗೊಳಿಸುವ ಸಂಕಲ್ಪವನ್ನು ಸರ್ಕಾರವು ತಾಳಿತು. ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯ ಪ್ರಕಾರ
ಕೈಗೊಳ್ಳುವ ಕ್ರಮಗಳ ನಿರ್ವಹಣೆಯನ್ನು ಸರ್ವೋಚ್ಚ ನ್ಯಾಯಾಲಯವು 1997ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ
ಆಯೋಗಕ್ಕೆ ವಿಧಿಸಿದಾಗಿನಿಂದ ಆ ಆಯೋಗವೂ ಕರ್ನಾಟದಲ್ಲಿ ಜೀತ ಮತ್ತು ಬಾಲ ಕಾರ್ಮಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ
ಮುತುವರ್ಜಿಯನ್ನು ವಹಿಸುತ್ತಾ ಬಂದಿದೆ. 2000–03ರಲ್ಲಿ ಕರ್ನಾಟಕ ಸರ್ಕಾರವು 1967 ಹೊಸ ಜೀತದಾಳುಗಳನ್ನು
ಗುರುತಿಸಿ ಅವರಲ್ಲಿ 1890 ಮಂದಿಗೆ 2003–04ರೊಳಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿತು. 2004–05ರಲ್ಲಿ 102
ಹೊಸ ಜೀತದಾಳುಗಳನ್ನು ಗುರುತಿಸಲಾಗಿದ್ದು ಆ ವರ್ಷ 64 ಮಂದಿ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

3.7 ಈ ಹಂತದಲ್ಲಿ ಸರ್ವೋಚ್ಚ ನ್ಯಾಯಾಲಯವು, ಬಂಧುವ ಮುಕ್ತಿ ಮೋರ್ಚಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ
ಮತ್ತಿತರರು ಎಂಬ ಪ್ರಕರಣದಲ್ಲಿ ತನ್ನ ತೀರ್ಪಿನಲ್ಲಿ ದಾಖಲಿಸಿದ ಅಭಿಪ್ರಾಯಗಳನ್ನು ನೆನಪಿಗೆ ತರುವುದು ಒಳಿತು:
"ಆಡಳಿತವು ಜೀತದ ವಾಸ್ತವ್ಯವನ್ನು ಒಪ್ಪಿಕೊಳ್ಳಲು ಏಕೆ ನಾಚುತ್ತದೆ ಎಂಬುದನ್ನು ನಮಗೆ ಅರ್ಥ ಮಾಡಿಕೊಳ್ಳಲು
ಆಗುವುದಿಲ್ಲ. ಏಕೆಂದರೆ ಜೀತದ ವಾಸ್ತವ್ಯ ಆಡಳಿತಕ್ಕೆ ಕಳಂಕವಲ್ಲ. ಆಡಳಿತಕ್ಕೆ ನಿಜವಾಗಿ ಕಳಂಕ ತರುವ ಅಂಶ
ವೇನೆಂದರೆ ಜೀತವನ್ನು ಒಪ್ಪಿಕೊಳ್ಳದೇ ಜೀತದಾಳುಗಳನ್ನು ಶೀಘ್ರಗತಿಯಲ್ಲಿ ಗುರುತಿಸಿ, ಬಿಡುಗಡೆಗೊಳಿಸಿ ಮತ್ತು
ಶಾಶ್ವತವಾಗಿ ಪುನರ್ವಸತಿಗೊಳಿಸಿ, ಜೀತಪದ್ಧತಿಯನ್ನು ಕೊನೆಗಾಣಿಸಲು ಮಾಡಬೇಕಾದ ಎಲ್ಲಾ ಕೆಲಸಗಳನ್ನು ಮಾಡಲು
ನಿರಾಕರಿಸುವುದು. ಆಡಳಿತಕ್ಕೆ ಅಗತ್ಯವಾಗಿ ಇರಬೇಕಾದ ಸಂಗತಿ ಏನೆಂದರೆ ಜೀತದಾಳುಗಳನ್ನು ಗುರುತಿಸಿ, ಬಿಡುಗಡೆ
ಗೊಳಿಸಿ, ಪುನರ್ವಸತಿಗೊಳಿಸಲು ಮತ್ತು ನಮ್ಮ ರಾಷ್ಟ್ರೀಯ ಜೀವನದಲ್ಲಿ ಕಪ್ಪು ಚುಕ್ಕೆಯಂತಿರುವ ಈ ಅಮಾನವೀಯ
ಆಚರಣೆಯನ್ನು ನಿರ್ನಾಮಗೊಳಿಸಲು ಬೇಕಾದ ಇಚ್ಛಾಶಕ್ತಿ, ಕ್ರಿಯಾಶಕ್ತಿ ಮತ್ತು ಸಾಮಾಜಿಕ ಬದ್ಧತೆ." (ಎಐಆರ್ 1984
ಎಸ್‌ಸಿ 802, ಪ್ಯಾರಾ ನಂ.25)

**4. ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ ಹಾಗೂ ಅಪರಾಧಿಗಳ ಮೇಲೆ ಕಾನೂನು ಕ್ರಮ ಜರುಗಿಸುವುದು**

4.0 ಕಾಯಿದೆಯ 12ನೇ ಪ್ರಕರಣದ ಪ್ರಕಾರ ತನ್ನ ಕಾರ್ಯವ್ಯಾಪ್ತಿಯಲ್ಲಿ ಜೀತಪದ್ಧತಿ ಅಥವಾ ಇನ್ನಿತರ ಯಾವುದೇ
ಬಲಾತ್ಕಾರದ ದುಡಿಮೆ ಹೇರಲ್ಪಟ್ಟಿದ್ದರೆ ಅದರ ಬಗ್ಗೆ ವಿಚಾರಣೆ ಮಾಡುವ, ಅಂದರೆ ಜೀತದಾಳುಗಳನ್ನು ಗುರುತಿಸುವ,
ಕರ್ತವ್ಯ ಜಿಲ್ಲಾಧಿಕಾರಿ ಮತ್ತು ಪ್ರಕರಣ 10ರಲ್ಲಿ ನಮೂದಿಸಿದ ಪ್ರತಿ ಅಧಿಕಾರಿಯದ್ದು ಮತ್ತು ಗುರುತಿಸಿದ ಮೇಲೆ
ಅಂತಹ ಬಲಾತ್ಕಾರದ ದುಡಿಮೆಯನ್ನು ನಿರ್ಮೂಲನೆಗೊಳಿಸಲು ಬೇಕಾದ ಕ್ರಮಗಳನ್ನು ಅವರು ಕೈಗೊಳ್ಳಬೇಕು.
ಅಂದರೆ ಗುರುತಿಸಿದ ಜೀತದಾಳುಗಳನ್ನು ಬಿಡುಗಡೆಗೊಳಿಸಿ ಪುನರ್ವಸತಿಗೊಳಿಸಬೇಕು ಮತ್ತು ಜೀತವನ್ನು ಕಾರ್ಯಾಚರಣೆ
ಮಾಡುವ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು.
ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಸಂ.ಎಸ್‌ಡಬ್ಲ್ಯೂಎಲ್.20.ಎಲ್‌ಬಿಡಿ.76(1)
ದಿನಾಂಕ:30–3–1976ರ ಮೂಲಕ ಪ್ರಕರಣ 10ರಲ್ಲಿ ವಿಧಿಸಿದ ಅಧಿಕಾರಗಳನ್ನು ಬಳಸಿ ರಾಜ್ಯದ ಎಲ್ಲಾ ಜಿಲ್ಲಾ
ದಂಡಾಧಿಕಾರಿಗಳಿಗೆ 1–4–1976ರಿಂದ ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಕರಣ 10ರ ಪ್ರಕಾರ ಎಲ್ಲಾ ಅಧಿಕಾರಗಳನ್ನು ಮತ್ತು
ಎಲ್ಲಾ ಕರ್ತವ್ಯಗಳನ್ನು ವಿಧಿಸಿದೆ (ಅನುಸೂಚಿ 9.6 ನೋಡಿ). ಅದೇ ಪ್ರಕರಣವು ಜಿಲ್ಲಾದಂಡಾಧಿಕಾರಿಯು ತನ್ನ ಮೇಲೆ
ವಿಧಿಸಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ತನ್ನ ಕೈಕೆಳಗಿನ ಅಧಿಕಾರಿ
ಯೊಬ್ಬನನ್ನು ನೇಮಿಸಬಹುದು ಎಂದು ಸೂಚಿಸುತ್ತದೆ.

**4. 1 ಜೀತದಾಳುಗಳ ಗುರುತಿಸುವಿಕೆ**

4.1.1 ಜಿಲ್ಲಾ ದಂಡಾಧಿಕಾರಿಗಳು ಅಥವಾ ಅವರು ನೇಮಿಸಲ್ಪಟ್ಟ ಅಧಿಕಾರಿಯು ಜೀತದಾಳುಗಳನ್ನು ಗುರುತಿಸಬೇಕು.
"ಕಾನೂನು ಒಪ್ಪಿಕೊಂಡಿರುವ ಅಪರಾಧಗಳ ಮೇಲೆ ನಿಗಾ ಇಡಲು" ಮತ್ತು ಕಾನೂನು ಒಪ್ಪಿಕೊಂಡಿರುವ

ಯಾವುದಾದರೂ ಅಪರಾಧಗಳು ನಡೆದಿವೆಯೇ ಎಂದು ಸಮೀಕ್ಷೆ ಮಾಡುವ ಉದ್ದೇಶ (ಪ್ರಕರಣ 14) ದಿಂದ ಕಾಯಿದೆಯ 13ನೇ ಪ್ರಕರಣದಡಿ ರಚಿಸಲಾದ ಜಾಗೃತ ಸಮಿತಿಯೂ ಜೀತದಾಳುಗಳನ್ನು ಗುರುತಿಸಬೇಕು. ಜೊತೆಗೆ, ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993ರ ಪ್ರಕರಣ 58A ಪ್ರಕಾರ ಪ್ರತಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗೆ ವರದಿಯನ್ನು ನೀಡಬೇಕು (ಅನುಸೂಚಿ 9.1 ನೋಡಿ). ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ದಿನಾಂಕ:8-11-2004ರಂದು ಹೊರಡಿಸಿದ ಸುತ್ತೋಲೆ ಸಂ:ಗ್ರಾಅಪ.17.ಆರ್‌ಬಿಎಲ್. 2004, (ಅನುಸೂಚಿ 9.6ನೋಡಿ)ರ ಪ್ರಕಾರ ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಉಪವಿಭಾಗಾಧಿಕಾರಿಗೆ ಜೀತದಾಳುಗಳ ಬಗ್ಗೆ ವರದಿಯನ್ನು ಕೊಡಬೇಕು. ದಿನಾಂಕ:15-06-2007ರ ಸುತ್ತೋಲೆಯ ಪ್ರಕಾರ ತಹಶೀಲ್ದಾರರಿಗೆ ವರದಿ ಸಲ್ಲಿಸಬೇಕಾಗುತ್ತದೆ.

4.1.2 ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ನಿಯತಕಾಲಿಕವಾಗಿ, ಅಂದರೆ ಮೂರು ವರ್ಷಗಳಿಗೊಮ್ಮೆ, ಜೀತದಾಳುಗಳ ಸಮೀಕ್ಷೆಯನ್ನು ಮಾಡುತ್ತಿರಬೇಕು. ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ತಮ್ಮ ಕ್ಷೇತ್ರವ್ಯಾಪ್ತಿಯ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ವರ್ಷಕ್ಕೊಮ್ಮೆ ಅಥವಾ ಪ್ರತಿ ಮೂರು ವರ್ಷಕ್ಕೊಮ್ಮೆಯಾದರೂ ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ನೋಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ಅವರವರ ಜಾಗೃತ ಸಮಿತಿಗಳು ಸಮೀಕ್ಷೆ ಕಾರ್ಯದಲ್ಲಿ ನೆರವಾಗಬೇಕು. ಜಾಗೃತ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳನ್ನು ಕಾಯಿದೆಯ 13 ಮತ್ತು 14ನೇ ಪ್ರಕರಣಗಳಲ್ಲಿ ವಿವರಿಸಲಾಗಿದೆ. ಜಾಗೃತ ಸಮಿತಿಗಳು ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು (ಗ್ರಾಅಪ.8.ಆರ್‌ಬಿಎಲ್.2002 ದಿನಾಂಕ:11.11.2002 ನೋಡಿ ಅನುಸೂಚಿ 9.6). ಜಾಗೃತ ಸಮಿತಿಗಳನ್ನು ಎರಡು ವರ್ಷಕ್ಕೆ ಒಮ್ಮೆ ಪುನರ್‌ರಚಿಸಲಾಗುವುದು. ಅವನ್ನು ಪುನರ್‌ರಚಿಸುವಾಗ ಸರಿಯಾದ ತಿಳುವಳಿಕೆ ಮತ್ತು ಪುರೋಗಾಮಿ ಚಿಂತನೆ ಇರುವ ವ್ಯಕ್ತಿಗಳನ್ನೂ ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕಾರ್ಮಿಕ ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮುಖಂಡರನ್ನೂ ಸೇರಿಸುವಂತೆ ನೋಡಿಕೊಳ್ಳಬೇಕು.

4.1.3 ಕರ್ನಾಟಕ ಸರ್ಕಾರವು ಮೂರು ಮಂದಿ ಸದಸ್ಯರಿರುವ ಜಿಲ್ಲಾ ಸಮಿತಿಯೊಂದನ್ನು ರಚಿಸಿದೆ. ಅದರ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರು ವಹಿಸುವರು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿರುವರು. ಜಿಲ್ಲಾಧಿಕಾರಿಯು ಸದಸ್ಯರಾಗಿರುವರು (ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ.13.ಆರ್‌ಬಿಎಲ್ 2003 ದಿನಾಂಕ.06-09-2004 ನೋಡಿ, ಅನುಸೂಚಿ 9.6). ಈ ಸಮಿತಿಯು ಕನಿಷ್ಟ ಪ್ರತಿ ಮೂರು ತಿಂಗಳಿಗೆ ಸಭೆ ಸೇರಬೇಕು. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸುವ ಮತ್ತು ಅಪರಾಧಿಗಳನ್ನು ಶಿಕ್ಷಿಸುವ ಜವಾಬ್ದಾರಿಯು ಜಿಲ್ಲಾಧಿಕಾರಿಗಳದ್ದಾಗಿರುತ್ತದೆ. ಅವರನ್ನು ಗುರುತಿಸಲಿಕ್ಕೆ ನೆರವಾಗುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಜವಾಬ್ದಾರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳದ್ದಾಗಿರುತ್ತದೆ. (ಕರ್ನಾಟಕದ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಜೀತ ಸಮಸ್ಯೆ ಕುರಿತು ತಿಳುವಳಿಕೆ ನೀಡಲು ಬೆಂಗಳೂರಿನ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯಲ್ಲಿ 2003ರ ಅಕ್ಟೋಬರ್ 9-10ರಂದು ಕರ್ನಾಟಕ ಸರ್ಕಾರದ ಕಾರ್ಮಿಕ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳೊಂದಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಆಯೋಜಿಸಿದ ಎರಡು ದಿನಗಳ ಕಮ್ಮಟದ ಫಲಿತಾಂಶ ನಂ.1. ಇನ್ನು ಮುಂದೆ ಇದನ್ನು "ಫಲಿತಾಂಶ" ಎಂದು ಉಲ್ಲೇಖಿಸಲಾಗುವುದು, ಅನುಸೂಚಿ 9.2)

4.1.4 ಜೀತದಾಳು ಮತ್ತು ಬಾಲ ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳು ಕೇಂದ್ರ ಬಿಂದುವಾಗಿರುತ್ತಾರೆ. ("ಫಲಿತಾಂಶ" ನಂ.1, ಅನುಸೂಚಿ 9.2). ಅವರು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ವೇದಿಕೆಯನ್ನು ರಚಿಸಬೇಕು. ಆ ವೇದಿಕೆಯ ಉದ್ದೇಶ ಸರ್ಕಾರೇತರ ಸಂಸ್ಥೆಗಳ ಜೊತೆ ಜೀತದಾಳು ಮತ್ತು ಬಾಲ ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಆಗಿಂದಾಗ್ಗೆ ಸಮಾಲೋಚನೆ ನಡೆಸುವುದು. ಸರ್ಕಾರೇತರ ಸಂಸ್ಥೆಗಳಿಗೆ ಜೀತದಾಳು ಮತ್ತು ಬಾಲ ಕಾರ್ಮಿಕರ ಗುರುತಿಸುವಿಕೆ ಮತ್ತು ಪುನರ್ವಸತಿಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ರೂಪಿಸುವುದು ಮತ್ತು ಅವನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಲಾಗುವುದು ಮತ್ತು ಆ ಕೆಲಸಗಳಿಗೆ ಬೇಕಾಗುವ ಧನಸಹಾಯವನ್ನು ಒದಗಿಸಲಾಗುವುದು ("ಫಲಿತಾಂಶ" ನಂ.3, ಅನುಸೂಚಿ 9.2). ಜೀತದಾಳುಗಳ ಬಗ್ಗೆ ಕೆಲಸಮಾಡುವ ಸರ್ಕಾರೇತರ ಸಂಸ್ಥೆಗಳು ತಮ್ಮ ಸಾಮರ್ಥ್ಯ ಹಾಗೂ ಪ್ರಾಮಾಣಿಕತೆಯನ್ನು ಖಾತ್ರಿ ಮಾಡುವ ರೀತಿಯಲ್ಲಿ ಒಂದು ವೇದಿಕೆ ರಚಿಸಿ ಜೀತದಾಳುಗಳ ಗುರುತಿಸುವಿಕೆ ಮತ್ತು ಪುನರ್ವಸತಿ ಕಾರ್ಯದಲ್ಲಿ ಸರ್ಕಾರವು ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಬಹುದು. ("ಫಲಿತಾಂಶ" ನಂ.3, ಅನುಸೂಚಿ 9.2; ಕೆಳಗಡೆ 6.5.1 ನೋಡಿ).

4.1.5 ಜಿಲ್ಲಾಧಿಕಾರಿಗಳು ಜೀತದಾಳುಗಳನ್ನು ಸ್ವಲ್ಪ ಪ್ರಮಾಣದಲ್ಲಿ ತಾವೇ ಖುದ್ದಾಗಿ ಗುರುತಿಸಬೇಕು ಮತ್ತು ಉಪ ವಿಭಾಗಾಧಿಕಾರಿಗಳು ಜಿಲ್ಲೆಯಲ್ಲಿಯ ಜೀತದಾಳುಗಳ ಗುರುತಿಸುವಿಕೆಯ ಪ್ರಕ್ರಿಯೆಯನ್ನು ಕ್ರಿಯಾಶೀಲವಾಗಿ ಮುನ್ನಡೆಸಬೇಕು. ಪಂಚಾಯತ್ ರಾಜ್ ಸಂಸ್ಥೆಗಳೂ ಜೀತದಾಳುಗಳ ಬಗ್ಗೆ ವರದಿ ಕೊಡುವಂತೆ ಉಪವಿಭಾಗಾಧಿಕಾರಿಗಳು ಮುತು ವರ್ಜೆ ವಹಿಸಬೇಕು. ಈ ರೀತಿ ಕಾನೂನನ್ನು ಪಕ್ಷಪಾತವಿಲ್ಲದೇ ಅನುಷ್ಠಾನಗೊಳ್ಳುವಂತೆ ಅವರು ನೋಡಿಕೊಳ್ಳಬೇಕು ಮತ್ತು ಯಾವುದೇ ರೀತಿಯ ಬಾಹ್ಯ ಒತ್ತಡಗಳಿಗೆ ಅವರು ಮಣಿಯುವಂತಿರಬಾರದು. (ಸುತ್ತೋಲೆ ನಂ.ಗ್ರಾಅಪ.13. ಆರ್‌ಬಿಎಲ್.2003 ದಿನಾಂಕ 29-04-2004, ಅನುಸೂಚಿ 9.6; "ಫಲಿತಾಂಶ" ನಂ.25, ಅನುಸೂಚಿ 9.2 ನೋಡಿ)

4.1.6 ಜೀತದಾಳು ಮತ್ತು ಬಾಲ ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಸಾಂಸ್ಥಿಕ ನೆನಪನ್ನು ಉಳಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಮ್ಮ ವರ್ಗಾವಣೆ ಸಮಯದಲ್ಲಿ ಪದಮುಕ್ತ ಅಧಿಕಾರಿಯು ಪದಗ್ರಾಹಿ ಅಧಿಕಾರಿಗೆ ಪ್ರಭಾರ ವರ್ಗಾವಣೆ ಪ್ರಪತ್ರದಲ್ಲಿ ಆ ವಿಷಯಗಳಿಗೆ ಸಂಬಂಧ

ಪಟ್ಟಂತೆ ಜಿಲ್ಲೆಯಲ್ಲಿ ಕೈಗೊಂಡ ಹಾಗೂ ಕೈಗೊಳ್ಳಲಿರುವ ಕೆಲಸಕಾರ್ಯಗಳ ಬಗ್ಗೆ ವಿವರವಾದ ಟಿಪ್ಪಣಿಯನ್ನು ಕೊಡ
ಪಟ್ಟಂತೆ ಜಿಲ್ಲೆಯಲ್ಲಿ ಕೈಗೊಂಡ ಹಾಗೂ ಕೈಗೊಳ್ಳಲಿರುವ ಕೆಲಸಕಾರ್ಯಗಳ ಬಗ್ಗೆ ವಿವರವಾದ ಟಿಪ್ಪಣಿಯನ್ನು ಕೊಡ ಗ್ರಾಅಪ.13.ಆರ್‌ಬಿವಿಎಲ್.2003 ದಿನಾಂಕ:29-04-2004,
ಬೇಕು ("ಫಲಿತಾಂಶ" ನಂ.2, ಅನುಸೂಚಿ 9.2 ನೋಡಿ; ಜೊತೆಗೆ
ಅನುಸೂಚಿ 9.6 ನೋಡಿ).

4.1.7 ಜೀತದಾಳುಗಳನ್ನು ಗುರುತಿಸುವ ಕೆಲಸವು ಸರಿಯಾಗಿ ನಡೆಯಬೇಕಾದರೆ ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಅಧಿಕಾರಿಗಳು, ಜೀತದಾಳುಗಳನ್ನು ಗುರುತಿಸುವ ಮತ್ತು ಪುನರ್ವಸತಿ
ಗೊಳಿಸುವ ಕೆಲಸಕ್ಕೆ ಸಂಬಂಧಪಟ್ಟ ಇನ್ನಿತರ ಇಲಾಖೆಯ ಅಧಿಕಾರಿಗಳು, ಪಂಚಾಯತಿಗಳ ಚುನಾಯಿತ ಸದಸ್ಯರು,
ನ್ಯಾಯಾಲಯದ ಅಧಿಕಾರಿಗಳು ಮತ್ತು ಆರಕ್ಷಕರು/ಪೋಲೀಸರುಗಳಿಗೆ ಜೀತಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ
ಸಂವೇದನಾ ತರಬೇತಿಗಳನ್ನು ನಡೆಸಬೇಕು. ಜೀತಕ್ಕೆ ಸಂಬಂಧಪಟ್ಟ ವಿಷಯಗಳೆಂದರೆ ಜೀತದ ಬಗ್ಗೆ ಸಂವಿಧಾನದಲ್ಲಿರುವ
ಅಂಶಗಳು, ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯಲ್ಲಿರುವ ಅಂಶಗಳು, ಅವುಗಳಲ್ಲಿ ಮುಖ್ಯವಾಗಿ ಜೀತದ ವ್ಯಾಖ್ಯಾನ
ಮತ್ತು ಅದನ್ನು ಅರ್ಥೈಸುವುದು ಹಾಗೂ ಜೀತದಾಳುಗಳನ್ನು ಸರಿಯಾಗಿ ಗುರುತಿಸುವ ವಿಧಾನ. ("ಫಲಿತಾಂಶ" ನಂ.5, 6
20 ಅನುಸೂಚಿ 9.2 ನೋಡಿ). ಜೀತದಾಳುಗಳನ್ನು ಪುನರ್ವಸತಿಗೊಳಿಸುವ ಕೆಲಸದಲ್ಲಿ ಜೊತೆಗೂಡುವ ಹಣಕಾಸು ಸಂಸ್ಥೆ
ಗಳ ಅಧಿಕಾರಿಗಳಿಗೂ ಸಂವೇದನಾ ತರಬೇತಿಗಳನ್ನು ನಡೆಸಬೇಕು. ("ಫಲಿತಾಂಶ" ನಂ.10, ಅನುಸೂಚಿ 9.2 ನೋಡಿ).

4.1.8 ಜೀತದಾಳುಗಳನ್ನು ಗುರುತಿಸುವ ಮುಂಚೆ ಜೀತದಾಳುಗಳಲ್ಲಿ ಧೈರ್ಯ ತುಂಬಲು ಅವರಿಗೆ ಸಂವೇದನಾ ತರಬೇತಿ
ಗಳನ್ನು ನಡೆಸಬೇಕು. ಬಿಡುಗಡೆಗೊಳಿಸಿದ ಜೀತದಾಳುಗಳಿಗೂ ಸಂವೇದನಾ ತರಬೇತಿಗಳನ್ನು ನಡೆಸಬೇಕು. ಗುರುತಿಸಿದ
ಮತ್ತು ಬಿಡುಗಡೆಗೊಳಿಸಿದ ಜೀತದಾಳು ಮತ್ತು ಬಾಲ ಕಾರ್ಮಿಕರಿರುವ ಕುಟುಂಬಗಳಿಗೆ ಕಾನೂನಿನಲ್ಲಿರುವ ಸೌಲಭ್ಯಗಳು
ಹಾಗೂ ಕರ್ತವ್ಯಗಳು ಮತ್ತು ತಮ್ಮ ಪುನರ್ವಸತಿ ಕಾರ್ಯಕ್ರಮಗಳನ್ನು ಸಂಘಟಿತರಾಗಿ, ಸ್ವಾವಲಂಬಿಯಾಗಿ, ಗುಂಪು
ಆಧಾರದ ಮೇಲೆ ಮತ್ತು ಸಹಕಾರಿ ತತ್ವಗಳ ಮೇಲೆ ನಡೆಸಲು ಬೇಕಾದ ಕೌಶಲ್ಯಗಳ ಬಗ್ಗೆ ಸಂವೇದನಾ ತರಬೇತಿಗಳನ್ನು
ಪುನರ್ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮುಂಚೆ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವಾಗ ನಡೆಸಿಕೊಂಡು
ಹೋಗಬೇಕು. ("ಫಲಿತಾಂಶ" ನಂ.28, ಅನುಸೂಚಿ 9.2 ನೋಡಿ)

4.1.9 ಅಧಿಕಾರಿಗಳು ಮತ್ತು ಜೀತದಾಳುಗಳಿಗೆ ಸಂವೇದನಾ ತರಬೇತಿಗಳನ್ನು ನಡೆಸುವುದು ಅತ್ಯವಶ್ಯಕ. ಏಕೆಂದರೆ
ಇಷ್ಟರವರೆಗೆ ಜೀತದಾಳುಗಳನ್ನು ಗುರುತಿಸುವಲ್ಲಿ ಎದುರುಗೊಳ್ಳುವ ಸಮಸ್ಯೆಗಳಿಗೆ ಕಾರಣಗಳು ಇಂತಿರುವುವು: 1)
ಜೀತದಾಳುಗಳಲ್ಲಿ ಹೆಚ್ಚಿನವರು ಅನುಸೂಚಿತ ಜಾತಿ ಮತ್ತು ಜನಾಂಗಕ್ಕೆ ಸೇರಿದವರಾಗಿದ್ದು ತಮ್ಮ ಮೇಲೆ ದೌರ್ಜನ್ಯ
ವೆಸಗುವ ಮತ್ತು ತಮ್ಮ ಕೆಲಸಕ್ಕೆ ಚ್ಯುತಿ ಬರುವ ಭಯದಿಂದ ತಾವು ಜೀತದಾಳುಗಳೆಂದು ಒಪ್ಪಿಕೊಳ್ಳಲು ಅವರು
ಮುಂದೆ ಬರುವುದಿಲ್ಲ. 2) ಯಥಾಸ್ಥಿತಿಯನ್ನು ಕಾಪಾಡಲು ಮಾಲಿಕರು ದೌರ್ಜನ್ಯದ ವಾತಾವರಣವನ್ನು ನಿರ್ಮಿಸುತ್ತಾರೆ.
3) ಪರ್ಯಾಯ ಉದ್ಯೋಗದ ಅವಕಾಶಗಳು ಇಲ್ಲದೇ ಇರುವುದು. 4) ಜಾಗೃತಿ ಸಮಿತಿಗಳು ಕ್ರಿಯಾಶೀಲವಾಗಿಲ್ಲದೆ
ಇರುವುದು, ಸ್ಥಳೀಯ ಅಧಿಕಾರಿಗಳು ಸಂವೇದನಾ ರಹಿತರಾಗಿರುವುದು ಮತ್ತು ಜೀತ ಕುರಿತು ವಿಚಾರ ಹಾಗೂ ಸಮಸ್ಯೆ
ಗಳ ಬಗ್ಗೆ ಅರಿವು ಇಲ್ಲದೇ ಇರುವುದು ಮತ್ತು ಯಾವುದೇ ಸ್ವಯಂ ಸೇವಾ ಸಂಸ್ಥೆಯು ತಾವಾಗಿ ಜೀತದಾಳುಗಳನ್ನು
ಗುರುತಿಸಲು ಮುಂದೆ ಬರದೇ ಇರುವುದು ಮತ್ತು ತಪ್ಪಾಗಿ ಜೀತದಾಳುಗಳನ್ನು ಗುರುತಿಸಿದಾಗ ಅದನ್ನು ನಿಲ್ಲಿಸದೇ
ಇರುವುದು (ಜೀತ ಪದ್ಧತಿ ನಿರ್ಮೂಲನೆ, ಜೀತದಾಳುಗಳನ್ನು ಗುರುತಿಸುವಿಕೆ, ಬಿಡುಗಡೆಗೊಳಿಸುವುದು ಮತ್ತು
ಪುನರ್ವಸತಿಗೊಳಿಸುವ ಬಗ್ಗೆ ಒಂದು ಕೈಪಿಡಿ, ಕಾರ್ಮಿಕ ಇಲಾಖೆ, ಭಾರತ ಸರ್ಕಾರ, ಇನ್ನು ಮುಂದೆ ಇದನ್ನು "ಕೈಪಿಡಿ"
ಎಂದು ಉದ್ಧರಿಸಲಾಗುವುದು, ಫೆಬ್ರವರಿ 2004, ನಂ.2, 5 ಪುಟ 5).

4.1.10 ಮೇಲೆ ವಿವರಿಸಿದ ಎಲ್ಲಾ ಸಂವೇದನಾ ತರಬೇತಿಗಳನ್ನು ವಿಶ್ವಾಸಾರ್ಹ ಸರ್ಕಾರೇತರ ಸಂಸ್ಥೆಗಳಿಗೂ ಕಾನೂನು
ನೆರವು ಸಮಿತಿಗಳಿಗೂ ವಹಿಸಿ ಕೊಡಬಹುದು.

4.1.11 ಜೀತದಾಳುಗಳನ್ನು ಗುರುತಿಸುವ ಕಾರ್ಯವು ಕಾಯ್ದೆಯಲ್ಲಿ ಮತ್ತು ಮಾರ್ಗಸೂಚಿಗಳಲ್ಲಿ ನಮೂದಿಸಿದ ಪ್ರಕಾರ
ನಡೆಯಬೇಕು ಮತ್ತು ಎಸ್. ಆರ್. ಶಂಕರನ್‌ರವರು ಹಾಕಿಕೊಟ್ಟ ಮಾರ್ಗದರ್ಶಿಗಳನ್ನು ಅನುಸರಿಸಬೇಕು. ಆ ಮಾರ್ಗ
ದರ್ಶಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳು 1999ರಲ್ಲಿ ಕನ್ನಡ
ಭಾಷಾಂತರದೊಂದಿಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ರವಾನಿಸಿದ್ದಾರೆ (ಆ ಮಾರ್ಗದರ್ಶಿಗಳನ್ನು ಇನ್ನು ಮುಂದೆ "ಮಾರ್ಗ
ದರ್ಶಿ" ಎಂದು ಉದ್ಧರಿಸಲಾಗುವುದು, ಅನುಸೂಚಿ 9.3 ನೋಡಿ). ಕಾಯಿದೆಯ ಪ್ರಕಾರ ಕ್ರಮಕ್ಕೈಗೊಳ್ಳುವ ಅಧಿಕಾರಿಗಳು
ಆ ಮಾರ್ಗದರ್ಶಿಗಳನ್ನು ಅನುಸರಿಸಲೇಬೇಕು.

ಆ ಮಾರ್ಗದರ್ಶಿಯಲ್ಲಿರುವ ಮುಖ್ಯಾಂಶಗಳು ಹೀಗಿವೆ:

1) ಜೀತದಾಳುಗಳ ತನಿಖೆಯನ್ನು ದಲಿತ ಅಥವಾ ಗಿರಿಜನ ಕೇರಿಯಲ್ಲಿಯೇ ನಡೆಸಬೇಕು; ಸವರ್ಣೀಯ ಕೇರಿಗಳಲ್ಲಲ್ಲ.
2) ಜೀತದಾಳುಗಳ ತನಿಖೆಯನ್ನು ಯಾವುದೇ ಕಾರಣಕ್ಕೂ ಅವರ ಮಾಲಿಕರ ಎದುರುಗಡೆ ನಡೆಸಲೇಬಾರದು.
3) ತನಿಖಾ ಅಧಿಕಾರಿಗಳು ಕೆಲಸದ ಸಂದರ್ಭಗಳ ಬಗ್ಗೆ ಮಾಹಿತಿ ಪಡೆಯಬೇಕು. ಹಲ ಕೆಲವು ಸೂಕ್ತ ಪ್ರಶ್ನೆಗಳ
ಮೂಲಕ ಆ ಕೆಲಸದ ಸಂದರ್ಭಗಳಲ್ಲಿ ಬಲಾತ್ಕಾರದ ಅಂಶಗಳಿವೆಯೇ ಎಂಬ ತೀರ್ಮಾನಕ್ಕೆ ಬರಬೇಕು. ನೇರವಾಗಿ ನೀವು
ಜೀತದಾಳುಗಳೋ ಎಂದು ಕೇಳುವುದು ಫಲಕಾರಿಯಾಗಲಾರದು. ತನಿಖೆಯಿಂದ ಸರಿಯಾದ ಮಾಹಿತಿ ಸಿಗಬೇಕಾದರೆ
ಜೀತದಾಳು ಅಥವಾ ಮಾಲಿಕರ ಹೇಳಿಕೆಗಳನ್ನೇ ಒಪ್ಪಿಕೊಳ್ಳುವುದು ಎಂದಲ್ಲ ಅಥವಾ ಅವರು ಕೆಲವೊಂದು ಪರಿಭಾಷೆ
ಗಳನ್ನು ಬಳಸುತ್ತಾರೋ ಅಥವಾ ಇಲ್ಲವೋ ಎಂತಲ್ಲ. ಬದಲು ವಾಸ್ತವವಾಗಿ ಕೆಲಸ ಮಾಡುವ ಸಂದರ್ಭಗಳು ಕಾಯಿದೆ
ಯಲ್ಲಿ ನಮೂದಿಸಿದ ಪ್ರಕಾರ ಬಲಾತ್ಕಾರದ ದುಡಿಮೆಯನ್ನು ಸ್ಪಷ್ಟಪಡಿಸುತ್ತವೆಯೋ ಇಲ್ಲವೋ ಎಂದು ವೈಯಕ್ತಿಕ
ತೀರ್ಮಾನಕ್ಕೆ ಬರುವುದು.

F-3*

4.1.12 ಮೇಲ್ಕಾಣಿಸಿದ ಮಾರ್ಗದರ್ಶಿಗಳಿಗೆ ಇನ್ನೊಂದು ಅಂಶವನ್ನು ಸೇರಿಸಬಹುದು. ತನಿಖೆಯನ್ನು ಏಕಾಂತದಲ್ಲಿ, ಒಬ್ಬೊಬ್ಬರಾಗಿ ಮತ್ತು ಗೌಪ್ಯದಲ್ಲಿ ನಡೆಸುವ ಬದಲು ಬಹಿರಂಗ ಪ್ರದೇಶದಲ್ಲಿ ಸಾಮೂಹಿಕವಾಗಿ ಮತ್ತು ದಲಿತರು ಅಥವಾ ಗಿರಿಜನರು ಅಥವಾ ಅವರ ಮುಖಂಡರ ಸಮಕ್ಷಮದಲ್ಲಿ ನಡೆಸುವುದು ಒಳಿತು. ಇದರಿಂದ ಮಾಹಿತಿ ಒಟ್ಟು ಮಾಡುವಾಗಲೇ ಅವುಗಳ ಸತ್ಯಾಸತ್ಯತೆಗಳ ಬಗ್ಗೆ ಮರುಪರಿಶೀಲನೆ ಮಾಡುವ ಅವಕಾಶ ಸಿಗುವುದು ಮತ್ತು ಸುಳ್ಳು ಮಾಹಿತಿಗಳನ್ನು ತಳ್ಳಿಹಾಕಲು ಸಾಧ್ಯವಾಗುವುದು.

4.1.13 ಅಂತಿಮವಾಗಿ ಜೀತದಾಳುಗಳನ್ನು ಸರಿಯಾಗಿ ಅಂದರೆ ಕಾನೂನು ಅಪೇಕ್ಷಿತ ರೀತಿಯಲ್ಲಿ ಗುರುತಿಸಬೇಕಾದರೆ ಜೀತ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಸ್ಪಷ್ಟ ವಿಚಾರಗಳನ್ನು ತನಿಖೆ ಸಮಯದಲ್ಲಿ ನೆನಪಿನಲ್ಲಿಡಬೇಕು:

1) ಬಲಾತ್ಕಾರದ ದುಡಿಮೆ ಎಂದರೆ ದೈಹಿಕ ಬಲಾತ್ಕಾರ ಅಥವಾ ಹಿಂಸೆ ಕಡ್ಡಾಯವಾಗಿ ಇರಬೇಕೆಂದಿಲ್ಲ. ಜೀತದಲ್ಲಿ ದೈಹಿಕ ಬಲಾತ್ಕಾರದ ಒಂದಿಷ್ಟು ಅಂಶ ಇದ್ದೇ ಇರುವುದಾದರೂ ನೇರ ದೈಹಿಕ ಬಲ ಪ್ರಯೋಗ ಎಲ್ಲಾ ಜೀತದ ಪ್ರಕರಣಗಳಲ್ಲಿ ಇರಬೇಕೆಂದಿಲ್ಲ. ಕಾಯಿದೆಯ ಪ್ರಕಾರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ನಾಮಮಾತ್ರ ಮಂಜೂರಿಗೆ ಒಬ್ಬ ವ್ಯಕ್ತಿಯು ಒಪ್ಪಿಕೊಳ್ಳುವಂತೆ ಮಾಡುವುದೇ ಬಲಾತ್ಕಾರದ ದುಡಿಮೆ(ಪೀಪಲ್ಸ್ ಯೂನಿಯನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್ ಮತ್ತಿತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತಿತರರು, ಪ್ಯಾರಾ ಸಂ.1415, AIR 1982 SC 1473).

2) ಕಾಯ್ದೆಯಲ್ಲಿ ಜೀತದಾಳುವಿನ ವಯೋಮಿತಿಯನ್ನು ನಿರ್ಧರಿಸಿಲ್ಲ (ಪ್ರಕರಣ 2g). ಜೀತದಾಳುಗಳು ಯಾವ ವಯಸ್ಸಿನವರೂ ಆಗಿರಬಹುದು. ಬಾಲ ಜೀತದಾಳುಗಳನ್ನು ಜೀತದಾಳುಗಳೆಂದೇ ಗುರುತಿಸಬೇಕು ಮತ್ತು ಅವರ ಪ್ರಯುಕ್ತ ಬಾಲ ಕಾರ್ಮಿಕ ನಿಷೇಧ ಕಾಯ್ದೆಯಡಿಯೂ ಕ್ರಮ ಕೈಗೊಳ್ಳಬೇಕು ("ಫಲಿತಾಂಶ" ನಂ.1,17,23 ಅನುಸೂಚಿ 9.2 ನೋಡಿ).

3) ಜೀತ ಅವಧಿಗೆ ಕಾಲಮಿತಿಯನ್ನೂ ಕಾಯ್ದೆಯಲ್ಲಿ ಹಾಕಿಲ್ಲ (ಪ್ರಕರಣ 2g). ಜೀತವು ಎಷ್ಟು ಕಾಲಕ್ಕೂ ಇರಬಹುದು. ಒಂದು ವರ್ಷ ತನಕವೂ ಅದು ವಿಸ್ತರಿಸಬೇಕೆಂದಿಲ್ಲ. ಆದ್ದರಿಂದ ಜೀತವು ಜೀವನ ಪರ್ಯಂತವಿರಬಹುದು; ಹಲವು ವರ್ಷ ತನಕ ಅದು ಹರಡಬಹುದು ಅಥವಾ ಕೆಲವೇ ಕೆಲವು ವರ್ಷಗಳ ವ್ಯಾಪ್ತಿ ಅದಕ್ಕಿರಬಹುದು; ಕೇವಲ ಒಂದೇ ಒಂದು ವರ್ಷಕ್ಕೆ ಅದು ಸೀಮಿತಗೊಳ್ಳಬಹುದು ಅಥವಾ ಒಂದೇ ಒಂದು ಋತುವಿಗೆ (ಉದಾ: ನಾಟಿಕಾಲ, ಸುಗ್ಗಿಕಾಲಕ್ಕೆ) ಅದು ಅನ್ವಯಿಸಬಹುದು. ಜೀತದ ತೀರ್ಮಾನಕ್ಕೆ ಬರಬೇಕಾದರೆ ಕೆಲಸದ ಸಂದರ್ಭದಲ್ಲಿ ಬಲಾತ್ಕಾರವಿದೆಯೇ ಎಂದು ಕಂಡು ಹಿಡಿಯಬೇಕು. ಕಾನೂನಿನ ಪ್ರಕಾರ ಕಾಲಾವಧಿ ಜೀತದ ತೀರ್ಮಾನಕ್ಕೆ ಬರಲು ನಿರ್ಣಾಯಕವಲ್ಲ (ಎ.ಕೆ.ಚಕ್ರವರ್ತಿ ವರದಿ:2.23 iii ಸಾರಾಂಶ 3.4, ಅನುಸೂಚಿ 9.1 ನೋಡಿ).

4) ಕಾಯ್ದೆಯ ಪ್ರಕಾರ ಜೀತವಿರಲು ಲಿಖಿತ ದಾಖಲೆಯ ಅವಶ್ಯಕತೆಯಿಲ್ಲ (ಪ್ರಕರಣ 2g ನೋಡಿ). ಪ್ರಕರಣ 15ರ ಪ್ರಕಾರ ಜೀತಸಾಲದ ಬಗೆಗಿನ ಯಾವುದೇ ಪ್ರತಿಪಾದನೆಯನ್ನು ಸುಳ್ಳು ಎಂದು ತೋರಿಸುವ ಜವಾಬ್ದಾರಿ ಮಾಲೀಕರದ್ದು. ಜೀತದಾಳು ತನ್ನ ಪ್ರತಿಪಾದನೆಗೆ ಯಾವುದೇ ಆಧಾರ ತೋರಿಸಬೇಕೆಂದಿಲ್ಲ.

5) ಜೀತದಾಳುಗಳನ್ನು ಗುರುತಿಸುವ ಕಾರ್ಯ ಒಂದು ಸಾರಿ ನಡೆದು ಹೋಗಬೇಕಾಗಿರುವ ಪ್ರಕ್ರಿಯೆಯಲ್ಲ. ಬದಲಿಗೆ ಅದು ನಿರಂತರವಾಗಿ ನಡೆಯುತ್ತಾ ಇರಬೇಕು. ಜೀತ ಇರುವಿಕೆಯ ಬಗ್ಗೆ ಅಧಿಕಾರಿಗಳ ಗಮನ ಸೆಳೆದ ಪ್ರತಿ ಸಂದರ್ಭದಲ್ಲೂ ಜೀತದ ತನಿಖೆಯಾಗಬೇಕು. ನಿಯತಕಾಲಿಕವಾಗಿ, ಅಂದರೆ ಮೂರು ವರ್ಷಕ್ಕೊಮ್ಮೆ, ಜೀತ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಗಳು ನಡೆಸುವುದು ಉಚಿತ ("ಫಲಿತಾಂಶ" ನಂ.13 ಅನುಸೂಚಿ 9.2 ನೋಡಿ)

6) ಜೀತದಾಳುಗಳನ್ನು ಗುರುತಿಸುವ ಅಧಿಕಾರಿಗಳು ವಾರ್ತಾಪತ್ರಿಕೆಗಳಲ್ಲಿಯ ವರದಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ನೀಡುವ ದೂರುಗಳನ್ನು ಸೂಕ್ತವಾಗಿ ಪರಿಗಣಿಸಬೇಕು. ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕೃಷಿ ಕಾರ್ಮಿಕರು ಮತ್ತಿತರ ಅಸಂಘಟಿತ ಕಾರ್ಮಿಕರಿಗೆ ಪ್ರಾಮಾಣಿಕ ಹಾಗೂ ಸಮರ್ಥ ಸೇವೆ ಸಲ್ಲಿಸುವ ಸರ್ಕಾರೇತರ ಸಂಸ್ಥೆಗಳ ಸಹಾಯವನ್ನು ಜೀತದಾಳುಗಳನ್ನು ಗುರುತಿಸುವಲ್ಲಿ ಪಡೆಯಬೇಕು. ಅದೇ ರೀತಿ, ಜೀತ ವಿಮುಕ್ತರ ಯಾವುದೇ ಸಂಘಟನೆಗಳು, ವಿದ್ಯಾರ್ಥಿ ಸ್ವಯಂಸೇವಕರು, ಪ್ರತ್ಯೇಕವಾಗಿ ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕೃಷಿಕಾರ್ಮಿಕರು ಮತ್ತಿತರ ಅಸಂಘಟಿತ ಕಾರ್ಮಿಕರ ಸಮುದಾಯಗಳಿಂದ ಬಂದ ವಿದ್ಯಾರ್ಥಿ ಸ್ವಯಂಸೇವಕರನ್ನೂ ಜೀತದಾಳುಗಳನ್ನು ಗುರುತಿಸುವಲ್ಲಿ ತೊಡಗಿಸಿಕೊಳ್ಳಬೇಕು ("ಕೈಪಿಡಿ" ನೋಡಿ, ನಂ.2.9, ಪುಟ 6–7).

7) ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಗಿರಿಜನ ಸಂಶೋಧನಾ ಕೇಂದ್ರ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಮನೆ ನಿವೇಶನ ಹಂಚಿಕೆ, ಮನೆ ಹಂಚಿಕೆ ಮುಂತಾದ ವಿಷಯಗಳಿಗೆ ನಡೆಸುವ ಕೌಟುಂಬಿಕ ಸಮೀಕ್ಷೆಗಳಲ್ಲಿ ಜೀತದಾಳುಗಳನ್ನು ಗುರುತಿಸುವ ಕೆಲಸವೂ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ ನಡೆಸುವ ಸಮೀಕ್ಷೆಗಳ ಮಾದರಿಯಲ್ಲಿ ಕಡ್ಡಾಯವಾಗಿ ನಡೆಯಬೇಕು ("ಕೈಪಿಡಿ" ನಂ.2.9, ಪುಟ 7 ನೋಡಿ).

**4.1.14 ಜೀತದಾಳುಗಳನ್ನು ಗುರುತಿಸಲು ಕಾಲಮಿತಿ:**

ಕರ್ನಾಟಕದಲ್ಲಿ ಸಾಮಾನ್ಯವಾಗಿ ಉಗಾದಿಯ ಸ್ವಲ್ಪ ಸಮಯದ ನಂತರ ಜೀತ ಸಂಬಂಧಗಳ ಬಗ್ಗೆ ಒಪ್ಪಂದಗಳಾಗುತ್ತವೆ. ಆದ್ದರಿಂದ ನಿಯತಕಾಲಿಕವಾಗಿ ಮೂರು ವರ್ಷಗಳಿಗೊಮ್ಮೆ ನಡೆಸುವ ಸಮೀಕ್ಷೆಗಳನ್ನು ಏಪ್ರಿಲ್ ತಿಂಗಳಿಂದ ನಡೆಸುವುದು ಸೂಕ್ತ. ಮೊದಲು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಏಪ್ರಿಲ್‌ನಿಂದ ಒಂದು ತಿಂಗಳೊಳಗಾಗಿ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ಜೀತದಾಳುಗಳ ಬಗ್ಗೆ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ಮುಂದಿನ ಒಂದು ತಿಂಗಳೊಳಗಾಗಿ ಜಾಗೃತಿ ಸಮಿತಿಯ ನೆರವಿನಿಂದ ಆ ವರದಿಗಳ ಆಧಾರದ ಮೇಲೆ ಮತ್ತು ಸ್ವತಂತ್ರವಾಗಿ ಸಮೀಕ್ಷೆ ನಡೆಸಬೇಕು. ಸಮರ್ಥ ಮತ್ತು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳ ಜೊತೆ ಗೂಡಿ ಸಮೀಕ್ಷೆ ಮಾಡುವುದು ಅಥವಾ ಅವರಿಂದಲೇ ಸಮೀಕ್ಷೆ ನಡೆಸುವುದು ಒಳ್ಳೆಯದು.

## 4.2 ಜೀತದಾಳುಗಳ ಬಿಡುಗಡೆ

4.2.1. ಜೀತ ಗುರುತಿಸುವ ಪ್ರಕ್ರಿಯೆ ಮೂಲಕ ಒಬ್ಬ ವ್ಯಕ್ತಿಯು ಜೀತದಾಳು ಎಂದು ಖಾತ್ರಿ ಆದ ಮೇಲೆ ಜಿಲ್ಲಾ ದಂಡಾಧಿಕಾರಿ ಅಥವಾ ಉಪವಿಭಾಗೀಯ ದಂಡಾಧಿಕಾರಿಯು ಅವನನ್ನು ಬಿಡುಗಡೆ ಮಾಡಲು ಆದೇಶ ಕಳುಹಿಸಿ ಜೀತದಾಳುವಿಗೆ ಬಿಡುಗಡೆ ಪತ್ರವೊಂದನ್ನು ನೀಡಬೇಕು. ಬಿಡುಗಡೆ ಪತ್ರಗಳ ನಕಲನ್ನು ಆಯಾ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರಿಗೆ ಕಳುಹಿಸಬೇಕು.

4.2.2. ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ ಏಕಕಾಲಕ್ಕೆ ನಡೆಯಬೇಕು. ಅದರಿಂದ ಜೀತದಾಳುಗಳ ಪುನರ್ ವಸತಿಯಲ್ಲಿ ವಿಳಂಬವನ್ನು ನಿಲ್ಲಿಸಿ ಅವರು ಜೀತಕ್ಕೆ ಮರಳಿ ಹೋಗುವುದನ್ನು ತಡೆಗಟ್ಟಬಹುದು ("ಕೈಪಿಡಿ" ನಂ.4.10–11, ಪುಟ 12 ನೋಡಿ). ಜೀತದಾಳುವನ್ನು ಗುರುತಿಸಿದ ಎರಡು ವಾರಗಳಲ್ಲಿ ಅವರ ಬಿಡುಗಡೆಯೂ ಆಗಬೇಕು ಮತ್ತು ಅವರ ಪುನರ್ವಸತಿಯನ್ನು ಆ ಕೂಡಲೇ ಕೈಗೊಳ್ಳಬೇಕು. ಬಿಡುಗಡೆ ಪತ್ರವು ಮುಕ್ತ ಜೀತದಾಳುವಿಗೆ ಕೇಂದ್ರ ಪುರಸ್ಕೃತ ಯೋಜನೆ (ಕೇಪುಯೋ)ಯಡಿ ಪುನರ್ವಸತಿ ಸೌಲಭ್ಯ ಹಾಗೂ ಎಲ್ಲಾ ಬಡತನ ನಿರ್ಮೂಲನೆಯ ಯೋಜನೆಗಳು, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಮುಂದುವರಿಕೆಗೋಸ್ಕರ ಯೋಜನೆಗಳ ಸೌಲಭ್ಯ ಪಡೆಯುವ ಅರ್ಹತೆ ನೀಡುತ್ತದೆ.

4.2.3. ಕೇಪುಯೋಯಡಿ ಪುನರ್ವಸತಿ ಸೌಲಭ್ಯಕ್ಕೆ ನಿರ್ಧರಿಸಲಾಗಿದ್ದ 20,000 ರೂಪಾಯಿಗಳಿಂದ 1,000 ರೂಪಾಯಿಗಳನ್ನು ಬಿಡುಗಡೆ ಮಾಡಿದಾಗಲೇ ಪ್ರತಿ ಮುಕ್ತ ಜೀತದಾಳುವಿಗೆ ಅವರ ದಿನನಿತ್ಯದ ಖರ್ಚಿಗೆಂದು ನೀಡಬೇಕು.

4.2.4. ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಜಾರಿಗೆ ತಂದಿರುವ "ಜೀತದಾಳುಗಳ ಪುನರ್ವಸತಿ ಸಹಾಯ ಧನ" ಯೋಜನೆಯಡಿಯಲ್ಲಿ ಪ್ರತಿ ಮುಕ್ತ ಜೀತದಾಳುವಿಗೆ ಅವರು ಬಿಡುಗಡೆ ಹೊಂದಿದ ದಿನ ದಿಂದ ಮುಂದಿನ ಎರಡು ವರ್ಷಗಳ ತನಕ ಪ್ರತಿ ತಿಂಗಳಿಗೆ 300 ರೂಪಾಯಿಗಳ ಸಹಾಯಧನವನ್ನು ನೀಡಬೇಕು (ಸರ್ಕಾರ ಆದೇಶ ಸಂ.ಗ್ರಾಅಪ.15.ಆರ್‌ಬಿಎಲ್.2004 ಬೆಂಗಳೂರು, ದಿನಾಂಕ 21–01–2006, ಅನುಸೂಚಿ 9.6 ನೋಡಿ).

4.2.5. ಬಿಡುಗಡೆ ಆದ ತಕ್ಷಣ ಅಥವಾ ಬಹು ಬೇಗನೆ ಕಾಯ್ದೆಯ ಪ್ರಕಾರ ಜೀತದಾಳುವಿಗೆ ಒದಗುವ ಪರಿಣಾಮಗಳು

1) ಜೀತದ ಯಾವುದೇ ಒಪ್ಪಂದವು ಅನೂರ್ಜಿತವಾಗುತ್ತದೆ (ಪ್ರಕರಣಗಳು 4–5).

2) ಜೀತಸಾಲವನ್ನು ತೆರುವ ಹೊಣೆಯು ಇಲ್ಲವಾಗುತ್ತದೆ (ಪ್ರಕರಣ 6).

3) ತೊಡೆದು ಹಾಕಿದ ಜೀತಸಾಲದ ಬಗ್ಗೆ ಯಾವುದೇ ಪಾವತಿಯನ್ನು ಸಾಲಗಾರನು ಪಡೆಯಲಾಗದು (ಪ್ರಕರಣ 9).

4) ಜೀತದಾಳುವಿನ ಯಾವುದೇ ಆಸ್ತಿಯು ಅಡಮಾನದಿಂದ ಮುಕ್ತವಾಗುತ್ತದೆ (ಪ್ರಕರಣ 7).

5) ಜೀತ ಸಮಯದಲ್ಲಿ ಜೀತದಾಳುವಿಗೆ ವಾಸವಾಗಿರಲು ನೀಡಲಾಗಿದ್ದ ಹೊಲ-ಮನೆಯಿಂದ ಮುಕ್ತ ಜೀತದಾಳುವನ್ನು ಹೊರದೂಡುವಂತಿಲ್ಲ (ಪ್ರಕರಣ 8).

6) ಕಾಯ್ದೆಯ ಪ್ರಕಾರ 30 ದಿನಗಳೊಳಗೆ ಮುಕ್ತ ಜೀತದಾಳುವಿನ ಆಸ್ತಿಯನ್ನು ಆತನಿಗೆ ಮರಳಿಸದಿದ್ದರೆ ಮರಳಿಸದ ವ್ಯಕ್ತಿಯ ಮೇಲೆ 1000 ರೂಪಾಯಿ ದಂಡ ವಿಧಿಸಬಹುದು ಮತ್ತು ಆ ದಂಡದಿಂದ ಮರಳಿಸದ ಪ್ರತಿ ದಿನವೊಂದಕ್ಕೆ 5 ರೂಪಾಯಿಯಂತೆ ಮುಕ್ತ ಜೀತದಾಳುವಿಗೆ ನೀಡಬೇಕು (ಪ್ರಕರಣ 19).

4.2.6. ಒಬ್ಬ ಜೀತದಾಳುವಿನ ಬಿಡುಗಡೆ ಕುರಿತು ಒಂದು ಮುಖ್ಯವಾದ ಸ್ಪಷ್ಟತೆಯನ್ನು ಇಲ್ಲಿ ಒದಗಿಸುವುದು ಸೂಕ್ತ. ಮೇಲಿನ ಎಲ್ಲಾ ವಿವರಗಳಿಂದ ಖಚಿತವಾಗುವುದೇನೆಂದರೆ ಒಬ್ಬ ಜೀತದಾಳುವನ್ನು ಬಿಡುಗಡೆಗೊಳಿಸುವುದೆಂದರೆ ಅವರ ಕೆಲಸದ ಮೂಲದಿಂದ ಬಿಡುಗಡೆಗೊಳಿಸುವುದಲ್ಲ; ಬದಲಾಗಿ ಸ್ವಾತಂತ್ರ್ಯವಿಲ್ಲದಿರುವಿಕೆ, ಬಲಾತ್ಕಾರ ಮತ್ತು ಶೋಷಣೆ ಯನ್ನು ಒಳಗೊಂಡಿರುವ ಕೆಲಸದ ಸಂದರ್ಭಗಳಿಂದ ಮುಕ್ತಗೊಳಿಸುವುದು. ಒಬ್ಬ ಜೀತದಾಳುವನ್ನು ಬಿಡುಗಡೆಗೊಳಿಸಿದ ಮೇಲೆ, ಜೀತದಾಳುವು ಒಪ್ಪಿದರೆ, ಅವರನ್ನು ಕೆಲಸದಿಂದ ಬಿಡಿಸದಂತೆಯೂ ಮತ್ತು ಮುಕ್ತವಾದ ಹಾಗೂ ಶೋಷಣೆ ಇಲ್ಲದ ರೀತಿಯಲ್ಲಿಯೂ ಶಾಸನಾತ್ಮಕವಾಗಿಯೂ ಅವರು ಅದೇ ಮಾಲೀಕರಲ್ಲಿ ಕೆಲಸ ಮುಂದುವರೆಸುವಂತೆಯೂ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಎಸ್.ಮುರುಳೀಧರರವರು 1998ರ ಮೇ 14ರಂದು ಸಲ್ಲಿಸಿದ "ಜೀತ ಕುರಿತ ಮೊಕದ್ದಮೆಯ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವರದಿ"ಯಿಂದ ಉದ್ಧರಿಸುವುದು ಔಚಿತ್ಯಪೂರ್ಣವಾಗಿದೆ. "ಬಿಡುಗಡೆ ಅಂದರೆ ದೈಹಿಕವಾಗಿ ಬೇರೆಡೆ ಸಾಗಿಸಬೇಕೆಂದಿಲ್ಲ. ಜೀತ ಕಾಯ್ದೆಯ ಪ್ರಕರಣ 8: ಒಬ್ಬ ಜೀತದಾಳು ಜೀತದ ಸಮಯದಲ್ಲಿ ಪಡೆದಿರುವ ವಸತಿ ಪ್ರದೇಶದ ಸ್ವಾಮ್ಯತೆಯನ್ನು ರಕ್ಷಿಸುತ್ತದೆ. ಬಿಡುಗಡೆ ಅಂದರೆ ಸಾಲದಿಂದ ವಿಮೋಚನೆಗೊಳಿಸುವಿಕೆ (ಪ್ರಕರಣ 6), ಅಡಮಾನದಿಂದ ವಿಮೋಚನೆಗೊಳಿಸುವಿಕೆ (ಪ್ರಕರಣ 7) ಮತ್ತು ಶೋಷಣೆಯಿಂದ ವಿಮೋಚನೆಗೊಳಿಸುವಿಕೆಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಬಿಡುಗಡೆಯ ಮುಂಚೆ ಜೀತದಾಳುವಾಗಿದ್ದ ಕೆಲಸಗಾರ ತನ್ನ ಕೆಲಸವನ್ನು ಕಳೆದುಕೊಳ್ಳದೇ ಹಲವಾರು ಕಾರ್ಮಿಕ ಕಾಯಿದೆಗಳ ಪ್ರಕಾರ ಅವರು ಕೆಲಸವನ್ನು ಮುಂದುವರಿಸುವಂತೆ ನೋಡಿಕೊಳ್ಳುವ ಒಂದು ವ್ಯವಸ್ಥೆ ಇರಬೇಕು. ಆ ಕಾರ್ಮಿಕ ಕಾಯಿದೆಗಳಲ್ಲಿ ಮುಖ್ಯವಾದವೆಂದರೆ ಕನಿಷ್ಟ ವೇತನ ಕಾಯಿದೆ ಮತ್ತು ವೇತನ ನೀಡುವ ಕಾಯಿದೆ. ಜೀತದಿಂದ ಬಿಡುಗಡೆಗೊಳಿಸಿ ಕೆಲಸದಲ್ಲಿ ಮುಂದುವರಿಯುತ್ತಿರುವ ಕೆಲಸಗಾರರಿಗೆ ಜೀತ ಮಾಡುತ್ತಿದ್ದಷ್ಟು ವರ್ಷ ಕನಿಷ್ಟ ವೇತನದಡಿ ದೊರಕಬೇಕಾಗಿರುವ ವೇತನವನ್ನು ಅದರ ಬಡ್ಡಿ ಜೊತೆ ದೊರಕಿಸುವಂತೆ ಬಿಡುಗಡೆಗೊಳಿಸುವ ಅಧಿಕಾರಿ ಗಳು ನೋಡಿಕೊಳ್ಳಬೇಕು." (ಪುಟ 8)

## 4.3. ಕಾನೂನಿನ ಪ್ರಕಾರ ಅಪರಾಧಿಗಳ ಮೇಲೆ ಕ್ರಮ ಜರುಗಿಸುವುದು

4.3.1. ತೀರ ಕಠೋರ ಅಪರಾಧಿಗಳ ಮೇಲೆ ಮಾತ್ರ ಕ್ರಮ ಜರುಗಿಸಬೇಕು:

ಮಾಲೀಕರಿಂದ ದೌರ್ಜನ್ಯ ಹಾಗೂ ಕೆಲಸ ಕಳಕೊಳ್ಳುವ ಭಯ ಜೀತದಾಳುಗಳಲ್ಲಿರುವುದರಿಂದ ಮತ್ತು ಮಾಲೀಕರು ದೌರ್ಜನ್ಯದ ವಾತಾವರಣವನ್ನು ನಿರ್ಮಿಸುವುದರಿಂದ ಎಲ್ಲಾ ಜೀತ ಪ್ರಕರಣಗಳಲ್ಲೂ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳ ಬೇಕೆಂದಿಲ್ಲ. ಅದನ್ನು ತೀರ ಕಠೋರ ಅಪರಾಧಿಗಳ ಮೇಲೆ ಮಾತ್ರ ಜರುಗಿಸಬೇಕು ("ಫಲಿತಾಂಶ" ನಂ.16, ಅನುಸೂಚಿ

9.2 ನೋಡಿ) ಮತ್ತು ಅದರ ಉದ್ದೇಶ ಬೇರೆಯವರಿಗೆ ಎಚ್ಚರಿಕೆ ಕೊಟ್ಟು ಜೀತ ಅಪರಾಧಗಳನ್ನು ತಡೆಗಟ್ಟುವುದಾಗಿದೆ ("ಫಲಿತಾಂಶ" ನಂ.23, ಅನುಸೂಚಿ 9.2 ನೋಡಿ).

**4.3.2. ನೋಟೀಸುಗಳನ್ನು ಕಳುಹಿಸುವುದು:**

ಜೀತದಾಳುಗಳನ್ನು ಇಟ್ಟುಕೊಂಡಿರುವ ಎಲ್ಲಾ ಮಾಲೀಕರ ವಿರುದ್ಧ ಜೀತ ಅಪರಾಧಗಳ ಮೇಲೆ ಆಗುವ ಶಿಕ್ಷೆಗಳ ಬಗ್ಗೆ ಪ್ರಸ್ತಾಪ ಮಾಡಿ ನೋಟೀಸುಗಳನ್ನು ಕಳುಹಿಸಬಹುದು ("ಫಲಿತಾಂಶ" ನಂ.17 ಅನುಸೂಚಿ 9.2 ನೋಡಿ). ಆದರೆ ಆ ನೋಟೀಸುಗಳನ್ನು ಜೀತದಾಳುಗಳನ್ನು ಬಿಡುಗಡೆಗೊಳಿಸಿ ಅವರಿಗೆ ಸೂಕ್ತ ಪುನರ್ವಸತಿ ಸೌಲಭ್ಯ ಕಲ್ಪಿಸಿದ ಮೇಲೆಯೇ ಕಳುಹಿಸಬೇಕು.

4.3.3. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಕಾಯ್ದೆಯಲ್ಲಿ ಜೀತ ಆಚರಣೆಯ ವಿರುದ್ಧ ವಿಧಿಸಲಾದ ಶಿಕ್ಷೆಗಳನ್ನು ವಿವರಿಸುವ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕರಿಗೂ ಪೊಲೀಸ್ ಠಾಣೆಗಳಿಗೂ ಹಂಚಬೇಕು ("ಫಲಿತಾಂಶ" ನಂ.20, ಅನುಸೂಚಿ 9.2 ನೋಡಿ).

**4.3.4. ಕಾಯ್ದೆಯಲ್ಲಿ ವಿಧಿಸಲಾದ ಶಿಕ್ಷೆಗಳು:**

1) ಮನ್ನಾ ಆದ ಜೀತಸಾಲದ ಕುರಿತು ಯಾವುದೇ ಸಾಲಗಾರನು ಯಾವುದೇ ಪಾವತಿಯನ್ನು ಪಡೆದರೆ ಅವನಿಗೆ ಮೂರು ವರ್ಷಗಳ ತನಕ ಜೈಲು ಶಿಕ್ಷೆ ಮತ್ತು ದಂಡವನ್ನೂ ವಿಧಿಸಬಹುದು. ಸಾಲಗಾರನು ಪಡೆದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟು ಅದನ್ನು ಜೀತದಾಳುವಿಗೆ ಒದಗಿಸುವಂತೆ ನ್ಯಾಯಾಲಯವು ಆದೇಶಿಸಬಹುದು (ಕಾಯಿದೆಯ ಪ್ರಕರಣ 9 ನೋಡಿ).

2) ಯಾವನೇ ವ್ಯಕ್ತಿಯು ಮತ್ತು ಯಾವುದೇ ಕಂಪೆನಿಯು ಈ ಕೆಳಗೆ ನಮೂದಿಸಿದ ಅಪರಾಧಗಳನ್ನು ಎಸಗಿದರೆ ಅವನಿಗೆ ಮೂರು ವರ್ಷ ತನಕ ಜೈಲು ಶಿಕ್ಷೆ ಮತ್ತು 2,000 ರೂಪಾಯಿ ತನಕ ದಂಡ ವಿಧಿಸಬಹುದು (ಕಾಯಿದೆಯ ಪ್ರಕರಣ 16-18,20,23 ನೋಡಿ):

(1) ಯಾವನೇ ವ್ಯಕ್ತಿಗೆ ಜೀತ ಸೇವೆ ಮಾಡಲು ಒತ್ತಾಯಿಸುವುದು (2) ಯಾವುದೇ ಜೀತಸಾಲವನ್ನು ನೀಡುವುದು (3) ಒಬ್ಬ ವ್ಯಕ್ತಿಯು ಜೀತಸೇವೆಯನ್ನು ನೀಡುವಂತೆ ಒತ್ತಾಯಿಸುವ ಯಾವುದೇ ಸಂಪ್ರದಾಯ, ರೂಢಿ, ಒಪ್ಪಂದ, ಕರಾರು ಅಥವಾ ಇತರ ಸಲಕರಣೆಯನ್ನು ಕಡ್ಡಾಯಗೊಳಿಸುವುದು (4) ಕಾಯ್ದೆಯಲ್ಲಿ ನಮೂದಿಸಿದ ರೀತಿಯಲ್ಲಿ ಜೀತದಾಳುವಿನ ಆಸ್ತಿಯನ್ನು ಮರಳಿಸದಿರುವುದು (5) ಬೇರೆಯವರು ಜೀತ ಅಪರಾಧವನ್ನು ಎಸಗುವಂತೆ ನೆರವು ನೀಡುವುದು.

3) ಕಾಯ್ದೆಯ ಪ್ರಕಾರ 30 ದಿನಗಳೊಳಗೆ ಜೀತದಾಳುವಿನ ಆಸ್ತಿಯನ್ನು ಜೀತದಾಳುವಿಗೆ ಮರಳಿಸದಿದ್ದರೆ ಮರಳಿಸದ ವ್ಯಕ್ತಿಗೆ ಒಂದು ವರ್ಷದ ತನಕ ಜೈಲು ಶಿಕ್ಷೆ ಮತ್ತು 1,000 ರೂಪಾಯಿ ತನಕ ದಂಡ ವಿಧಿಸಬಹುದು (ಕಾಯ್ದೆಯ ಪ್ರಕರಣ 19).

4) ವಸೂಲಿ ಮಾಡಿದ ಕೆಲವು ದಂಡಗಳಿಂದ ಜೀತಸೇವೆ ಮಾಡಿಸಿದ ದಿನವೊಂದಕ್ಕೆ 5 ರೂಪಾಯಿಯಂತೆ (ಕಾಯ್ದೆಯ ಪ್ರಕರಣ 18) ಮತ್ತು ಜೀತದಾಳುವಿನ ಆಸ್ತಿಯನ್ನು ಮರಳಿಸದ ಪ್ರತಿ ದಿನವೊಂದಕ್ಕೆ 5 ರೂಪಾಯಿಯಂತೆ (ಕಾಯ್ದೆಯ ಪ್ರಕರಣ 19) ಮುಕ್ತ ಜೀತದಾಳುವಿಗೆ ನೀಡಬೇಕು.

**4.3.5. ಕಾರ್ಯನಿರ್ವಾಹಕ ದಂಡಾಧಿಕಾರಿಗಳಿಗೆ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರಗಳನ್ನು ನೀಡಿರುವುದು:**

ಕಾಯ್ದೆಯ ಪ್ರಕರಣ 21ರಂತೆ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯಂತೆ (ಸಂ. SWL.20.LBD.76 ದಿನಾಂಕ 30 ಮಾರ್ಚ್ 1976, ಅನುಸೂಚಿ 8.6 ನೋಡಿ) ಜಿಲ್ಲಾ ದಂಡಾಧಿಕಾರಿಗಳಿಗೆ ಮೊದಲನೇ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರಗಳನ್ನು ನೀಡಿದೆ.

**4.3.6. ವಿಚಾರಣೆಯ ವಿಧಾನಗಳು:**

ಅಪರಾಧಗಳ ವಿಚಾರಣೆಯನ್ನು ಒಬ್ಬ ದಂಡಾಧಿಕಾರಿಯು ಸಂಕ್ಷಿಪ್ತ ವಿಧಾನದಲ್ಲಿ ಮಾಡಬಹುದು (ಪ್ರಕರಣ 21(2) ನೋಡಿ). ದಂಡ ಪ್ರಕ್ರಿಯಾ ಸಂಹಿತೆಯ ಅನುಚ್ಛೇದ 262-65ರಲ್ಲಿ ಸೂಚಿಸಿದ ವಿಧಾನಗಳನ್ನು ಸಂಕ್ಷಿಪ್ತ ವಿಚಾರಣೆಗೆ ಬಳಸಬಹುದು. ಸಂಕ್ಷಿಪ್ತ ವಿಚಾರಣೆಯನ್ನು ದಪ್ರಸಂಯ ಅನುಚ್ಛೇದ 263-65ರಲ್ಲಿ ನಮೂದಿಸಿದ ವಿಚಾರಗಳನ್ನು ಹೊರತುಪಡಿಸಿ ಸಮನ್ಸ್ ವಿಚಾರಣೆಯಂತೆ ನಡೆಸಬೇಕು (ದಪ್ರಸಂಯ ಅನುಚ್ಛೇದ 262). ವಿವರವಾಗಿ ವಿಚಾರಣೆ ನಡೆಸಬೇಕೆಂದಿದ್ದರೆ ಸಮನ್ಸ್ ವಿಚಾರಣೆಯಂತೆ (ದಪ್ರಸಂಯ ಅನುಚ್ಛೇದ 251-59) ಅಥವಾ ವಾರಂಟ್ಸ್ ವಿಚಾರಣೆಯಂತೆ (ದಪ್ರಸಂಯ ಅನುಚ್ಛೇದ 238-50) ನಡೆಸಬೇಕು. ಸಂಕ್ಷಿಪ್ತ ವಿಚಾರಣೆಗೂ ಇನ್ನಿತರ ವಿಚಾರಣೆಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಸಂಕ್ಷಿಪ್ತ ವಿಚಾರಣೆಯಲ್ಲಿ ವಾದಿ ಅಥವಾ ಪ್ರತಿವಾದಿಗಳ ಪರ ಇರುವ ಸಾಕ್ಷಿಗಳನ್ನು ಕೂಲಂಕುಷವಾಗಿ ವಿಚಾರಿಸುವುದಿಲ್ಲ.

4.3.7 ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಕಾಯಿದೆಯ ಯಾವುದೇ ಪ್ರಕರಣದಲ್ಲಿರುವ ವಿಷಯಗಳ ಮೇಲೆ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ ಮತ್ತು ಕಾಯ್ದೆಯಡಿ ಕೈಗೊಂಡ ಅಥವಾ ಕೈಗೊಳ್ಳಲು ಇಚ್ಛಿಸಿರುವ ಯಾವುದೇ ಕ್ರಮದ ಬಗ್ಗೆ ತಡೆಯಾಜ್ಞೆಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ನೀಡತಕ್ಕದ್ದಲ್ಲ (ಕಾಯ್ದೆಯ ಪ್ರಕರಣ 25).

**4.3.8 ಜೀತಕ್ಕೆ ಪೂರಕವಾಗಿರುವ ಅಪರಾಧಗಳ ಮೇಲೆ ಕ್ರಮ ಜರುಗಿಸುವುದು:**

ಜೀತದ ಅಪರಾಧಗಳ ಮೇಲೆ ಕ್ರಮ ಜರುಗಿಸುವಾಗ ಅಧಿಕಾರಿಗಳು ಪರಿಣಾಮಕಾರಿಯಾದ ರೀತಿಯಲ್ಲಿ ಮತ್ತು ಅತಿ ಹೆಚ್ಚಿನ ಶಿಕ್ಷೆ ಸಿಗುವಂತಾಗಲು ಇನ್ನಿತರೆ ಯಾವ ಕಾನೂನುಗಳನ್ನು ಏಕ ಪಕ್ಷೀಯವಾಗಿ ಅಥವಾ ಬೇರೆ ಕಾನೂನುಗಳ ಜೊತೆಗೂಡಿಸಿ ಬಳಸಿ ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ಪರಿಗಣಿಸಿ ಅದರ ಪ್ರಕಾರ ತೀರ್ಮಾನ ತೆಗೆದುಕೊಳ್ಳಬೇಕು("ಫಲಿತಾಂಶ" ನಂ.23, ಅನುಸೂಚಿ 9.2 ನೋಡಿ). ಜೀತಪದ್ಧತಿ ನಿರ್ಮೂಲನೆ ಕಾಯಿದೆ ಜೊತೆಗೆ ಸೇರಿಸಬಹುದಾದ ಕಾನೂನುಗಳೆಂದರೆ: 1) ಕನಿಷ್ಟ ವೇತನ ಕಾಯಿದೆ, 1948; 2) ಬಾಲ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 1986; ಮತ್ತು 3) ಅನುಸೂಚಿತ ಜಾತಿ ಮತ್ತು ಅನುಸೂಚಿತ ಜನಾಂಗಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ, 1989.

1) ಕನಿಷ್ಟ ವೇತನ ಕಾಯಿದೆ, 1948ರಲ್ಲಿ ನಮೂದಿಸಿದ ಪ್ರಕ್ರಿಯೆಗಳನ್ನು ಅನುಸರಿಸಿ ಜೀತ ಮಾಲಿಕರಿಂದ ನ್ಯಾಯವಾಗಿ ಸಿಗಬೇಕಾಗಿದ್ದ ಕೂಲಿಯನ್ನು ವಸೂಲಿ ಮಾಡಬೇಕು. ಆ ಕಾಯ್ದೆಯ ಪ್ರಕರಣ 20ರಂತೆ ಹಕ್ಕು ಪ್ರತಿಪಾದನೆಯ ಅರ್ಜಿಯನ್ನು ಹಕ್ಕು ಪ್ರತಿಪಾದಿಸುವ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಆ ಪ್ರಾಧಿಕಾರವು ಜಿಲ್ಲಾ ಕಾರ್ಮಿಕ ಅಧಿಕಾರಿಯಾಗಿರುತ್ತಾರೆ. ಆ ಅರ್ಜಿಯನ್ನು ಒಂದೇ ಜೀತದಾಳು ಖುದ್ದಾಗಿ ನೀಡಬಹುದು ಅಥವಾ ಹಲವು ಜೀತದಾಳುಗಳ ಪರವಾಗಿ ಮತ್ತು ಅವರಿಂದ ಅನುಮೋದಿಸಲ್ಪಟ್ಟ ಒಂದು ಕಾರ್ಮಿಕ ಸಂಘ ಅಥವಾ ಸರ್ಕಾರೇತರ ಸಂಸ್ಥೆಯು ಸಲ್ಲಿಸಬಹುದು. ಅರ್ಜಿಯಲ್ಲಿ ಇಷ್ಟರವರೆಗೆ ಕೊಟ್ಟಿದ್ದ ಕೂಲಿ ಮತ್ತು ನ್ಯಾಯಯುತವಾಗಿ ಕೊಡಬೇಕಾಗಿದ್ದ ಕೂಲಿಗಳ ಮಧ್ಯೆ ಇರುವ ವ್ಯತ್ಯಾಸದ ಮೊತ್ತದ ಮೇಲೆ ಹಕ್ಕು ಪ್ರತಿಪಾದಿಸಬೇಕು. ಹಕ್ಕು ಪ್ರತಿಪಾದಿಸುವ ಪ್ರಾಧಿಕಾರವು ಆ ಪ್ರತಿಪಾದನೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ಅದರ ಹತ್ತು ಪಾಲಿನಷ್ಟು ದಂಡವನ್ನೂ ವಿಧಿಸಬಹುದು.

2) ಅಪಾಯಕಾರಿ ಕೆಲಸಗಳಲ್ಲಿ ಕೆಲಸ ಮಾಡುವ ಬಾಲ ಜೀತದಾಳುವಿನ ಸಂದರ್ಭದಲ್ಲಿ ಆಕೆಯ/ಆತನ ಮಾಲಿಕನ ಮೇಲೆ 20,000 ರೂಪಾಯಿ ದಂಡವನ್ನು ವಿಧಿಸಿ ಆ ಹಣಕ್ಕೆ ಇನ್ನೊಂದು 5,000 ರೂಪಾಯಿಯನ್ನು ಸರ್ಕಾರವು ಸೇರಿಸಿ ಒಟ್ಟು ಮೊತ್ತವನ್ನು ಮಗುವಿನ ಹೆಸರಿನಲ್ಲಿ ಬ್ಯಾಂಕ್ ಒಂದರಲ್ಲಿ ಠೇವಣಿ ಇಡಬೇಕು ಮತ್ತು ಮಾಲಿಕನ ಮೇಲೆ ದಾವೆ ಹೂಡಬೇಕು.

3) ಜೀತದಾಳು ಅನುಸೂಚಿತ ಜಾತಿ ಅಥವಾ ಜನಾಂಗಕ್ಕೆ ಸೇರಿದವರಾಗಿದ್ದರೆ ದೌರ್ಜನ್ಯ ತಡೆಗಟ್ಟುವ ಕಾಯಿದೆ, 1989ರ ಪ್ರಕರಣ 3ರಡಿ ದಾವೆ ಹಾಕಿ ಕರ್ನಾಟಕ ಸಮಾಜ ಕಲ್ಯಾಣ ಇಲಾಖೆಯಿಂದ ಸೂಕ್ತ ಪರಿಹಾರವನ್ನು ಕೇಳಬಹುದು. ಕನಿಷ್ಟ 25,000 ರೂಪಾಯಿಗಳನ್ನು ಜೀತದಾಳುವೊಬ್ಬನಿಗೆ ಮಂಜೂರು ಮಾಡಬೇಕಾಗಿರುವುದು. ಅದರಲ್ಲಿ ಕಾಲು ಭಾಗದ ಮೊತ್ತವನ್ನು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದಾಗ ಜೀತದಾಳುವಿಗೆ ಕೊಡಬೇಕಾಗುತ್ತದೆ ಮತ್ತು ಉಳಿದ ಹಣವನ್ನು ಅಪರಾಧ ನಿರ್ಣಯದ ನಂತರ ಕೊಡಬೇಕಾಗುತ್ತದೆ.

**4.3.9 ಜೀತದ ಅಪರಾಧಗಳ ಮೇಲೆ ಕ್ರಮ ಜರುಗಿಸುವಲ್ಲಿರುವ ವಿವಿಧ ಹಂತಗಳು:**

1) ಜೀತದಾಳುಗಳ ಬಿಡುಗಡೆಯಾದ ಮೇಲೆ, ಕಠಿಣವಾದ ಅಪರಾಧವೆಸಗಿರುವ ಮಾಲೀಕರ ಮೇಲೆ ಮಾತ್ರ ಜಿಲ್ಲಾ ದಂಡಾಧಿಕಾರಿಯು ಕ್ರಮ ಜರುಗಿಸಬಹುದು. ಅದಕ್ಕೆ ಮೊದಲ ಹಂತವಾಗಿ ಜಿಲ್ಲಾ ದಂಡಾಧಿಕಾರಿಯು ಅಪರಾಧ ನಡೆದಿರುವ ಪ್ರದೇಶಕ್ಕೆ ಅನ್ವಯಿಸುವ ಪೊಲೀಸ್ ಠಾಣೆಯಲ್ಲಿ ಆ ಪ್ರದೇಶಕ್ಕೆ ಸಂಬಂಧಪಟ್ಟ ಮತ್ತು ಮೊದಲ ಹಂತದಲ್ಲಿ ಜೀತದಾಳುವನ್ನು ಗುರುತಿಸಿದ ತಹಸೀಲ್ದಾರ್ ಅಥವಾ ರಾಜಸ್ವ ನಿರೀಕ್ಷಕರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಂತೆ ನೋಡಿಕೊಳ್ಳಬೇಕು. ಜಿಲ್ಲಾ ದಂಡಾಧಿಕಾರಿ ಅಥವಾ ಜಾಗೃತ ಸಮಿತಿಯ ಸದಸ್ಯರೊಬ್ಬರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಬಹುದು. ಆದರೆ ಜಿಲ್ಲಾ ದಂಡಾಧಿಕಾರಿಯು ವಿಚಾರಣಾಧಿಕಾರಿಯೂ ಆಗಿರುವುದರಿಂದ ಅವರೇ ಫಿರ್ಯಾದಿಯಾಗುವುದು ನ್ಯಾಯಸಮ್ಮತವಲ್ಲ. ಏಕೆಂದರೆ ಫಿರ್ಯಾದಿಯಾಗಿ ಅವರು ಸಾಕ್ಷಿದಾರರೂ ಆಗಬೇಕಾಗುತ್ತದೆ. ಈ ಕಾರಣದಿಂದ ಅವರ ಕೈಕೆಳಗಿನ ಅಧಿಕಾರಿಯೊಬ್ಬರು, ಉದಾಹರಣೆಗೆ ಜೀತ ಗುರುತಿಸಿದ ಪ್ರದೇಶದ ತಹಸೀಲ್ದಾರರು, ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. ಭಾರತೀಯ ಕಾನೂನಿನ ಪ್ರಕಾರ ಪ್ರಥಮ ಮಾಹಿತಿ ವರದಿಯು ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ದಂಡ ಪ್ರಕ್ರಿಯೆಗೆ ಚಾಲನೆ ನೀಡುತ್ತದೆ (Abolition of Bonded Labour System, Hand Book for Release and Rehabilitation of Bonded Labourers," People's Watch – Tamil Nadu, Madurai, 2001, Sections 4.1-4.11, pp.22-24 (ನೋಡಿ).

2) ಕೇವಲ ಕಠಿಣ ಅಪರಾಧವೆಸಗಿದವರ ಮೇಲೆ ಮಾತ್ರ ದಾವೆ ಹೂಡಬೇಕೆಂದಿದ್ದರೂ ಗುರುತಿಸಿದ ಜೀತದಾಳುವಿನ ಪ್ರತಿ ಮಾಲೀಕರಿಗೂ ಜೀತ ಅಪರಾಧದ ಬಗ್ಗೆ ನಮೂದಿಸಿದ ಶಿಕ್ಷೆಗಳನ್ನು ವಿವರಿಸಿ ನೊಟೀಸೊಂದನ್ನು ಕಳುಹಿಸಬಹುದು. ಅದರಲ್ಲಿ ಅತಿ ಹೆಚ್ಚಿನ ಶಿಕ್ಷೆಯು ಮೂರು ವರ್ಷದ ಜೈಲುವಾಸ ಮತ್ತು 2,000 ರೂಪಾಯಿಗಳ ದಂಡವನ್ನೊಳಗೊಂಡು ಇರುತ್ತದೆ ಎಂದು ಪ್ರಸ್ತಾವಿಸಬೇಕು.

3) ಕಾನೂನಿನಡಿಯಲ್ಲಿ ಪ್ರತಿ ಅಪರಾಧವು ಸಂಜ್ಞೇಯ ಮತ್ತು ಜಾಮೀನೀಯವಾದದ್ದರಿಂದ (ಕಾಯ್ದೆಯ ಪ್ರಕರಣ 20) ಅಪರಾಧಿಯನ್ನು ಬಂಧಿಸಲು ಪೋಲೀಸ್ ಅಧಿಕಾರಿಗೆ ಆಜ್ಞಾಪತ್ರ ಬೇಕೆಂದಿಲ್ಲ. ಅಪರಾಧಿಯನ್ನು ಬಂಧಿಸಿದ ಮೇಲೆ ಅವನನ್ನು ನ್ಯಾಯಿಕ ದಂಡಾಧಿಕಾರಿ ಮುಂದೆ ಒಪ್ಪಿಸಬೇಕು. ಅಪರಾಧಿಗೆ ಅಪರಾಧದ ಪೂರ್ತಿ ವಿವರವನ್ನು ನೀಡಬೇಕು. ಅಪರಾಧಿಯು ತನ್ನ ಅಪರಾಧವನ್ನು ಒಪ್ಪಿಕೊಂಡರೆ, ಅವನ ಹೇಳಿಕೆಯನ್ನು ಸಹಿಯೊಂದಿಗೆ ದಾಖಲಿಸಿ ಕಾಯ್ದೆಯ ಪ್ರಕಾರ ಸೂಕ್ತ ಶಿಕ್ಷೆಯನ್ನು ವಿಧಿಸಬೇಕು. ಅವನು ಒಪ್ಪಿಕೊಳ್ಳಲು ನಿರಾಕರಿಸಿದರೆ ವಿಚಾರಣೆಯ ದಿನಾಂಕವನ್ನು ಗೊತ್ತುಪಡಿಸಿ ಅವನನ್ನು ನ್ಯಾಯಿಕ ಅಭಿರಕ್ಷೆಗೆ ಒಪ್ಪಿಸಬೇಕು. ಅಪರಾಧಿಯು ದಪ್ರಸಂಯ ಅನುಚ್ಛೇದ 436ರ ಪ್ರಕಾರ ಜಾಮೀನುದಾರನನ್ನು ಒದಗಿಸಿ ಜಾಮೀನಿಗೆ ಅರ್ಜಿ ಹಾಕಿದರೆ ಜಾಮೀನನ್ನು ನೀಡಬಹುದು. ಜಾಮೀನುದಾರನು ತನ್ನ ವಿಳಾಸವನ್ನು ಖಾತ್ರಿಪಡಿಸುವ ದಾಖಲೆ (ಪಡಿತರ ಚೀಟಿ ಅಥವಾ ಚುನಾವಣೆ ಚೀಟಿ) ಹಾಗೂ ಭದ್ರತಾಪತ್ರವನ್ನು ಒದಗಿಸಬೇಕು. ಒಬ್ಬ ನ್ಯಾಯವಾದಿಯು ಅಪರಾಧಿಯ ಪರವಾಗಿ ದಾವೆ ನಡೆಸಲು ಅರ್ಜಿ ಹಾಕಿದರೆ ಅವರಿಗೆ ಅವಕಾಶ ನೀಡಬೇಕು.

4) ಜೀತ ಸಾಲಕ್ಕೆ ಲಿಖಿತ ದಾಖಲೆಯ ಅವಶ್ಯಕತೆ ಇಲ್ಲ (ಕಾಯ್ದೆಯ ಪ್ರಕರಣ 2g). ಜೀತ ಸಾಲವನ್ನು ರುಜುವಾತು ಪಡಿಸುವ ಜವಾಬ್ದಾರಿ ಸಾಲಿಗನದು (ಕಾಯ್ದೆಯ ಪ್ರಕರಣ 15). ಆದ್ದರಿಂದ ಜೀತದ ವಿಚಾರಣೆ ಮಾಡುವಾಗ ಜೀತದಾಳು ಹಾಜರಿರುವ ಅವಶ್ಯಕತೆ ಇಲ್ಲ. ("ಕೈಪಿಡಿ" ಪುಟ 16 ನೋಡಿ).

5) ಸರ್ಕಾರದ ಪರವಾಗಿ ದಾವೆ ನಡೆಸಲು ನಿಯೋಜಿತರಾಗಿದ್ದ ಹೆಚ್ಚುವರಿ ಅಥವಾ ಸಹಾಯಕ ಸಾರ್ವಜನಿಕ ಅಭಿಯೋಜಕರು ಜಿಲ್ಲಾ ದಂಡಾಧಿಕಾರಿಯ ನ್ಯಾಯಾಲಯದಲ್ಲಿ ಜೀತ ದಾವೆಗಳನ್ನು ನಡೆಸಬಹುದು (ದಂಪ್ರಸಂ

ಅನುಚ್ಛೇದ 25). ಅಂತಹ ಅಭಿಯೋಜಕರು ಲಭ್ಯವಿಲ್ಲದಿದ್ದಾಗ ಜಿಲ್ಲಾ ದಂಡಾಧಿಕಾರಿಯು ಬೇರೆ ಯಾವುದೇ ವ್ಯಕ್ತಿಯನ್ನು ನೇಮಿಸಬಹುದು.

6) ಅಪರಾಧಿಯು ವಿಚಾರಣೆಯ ದಿನಾಂಕವನ್ನು ಮುಂದಕ್ಕೆ ತಳ್ಳಲು ಅರ್ಜಿ ಹಾಕಿದರೆ ಮತ್ತು ಅದಕ್ಕೆ ಬಲವಾದ ಕಾರಣಗಳಿದ್ದರೆ ಆ ಕಾರಣಗಳನ್ನು ದಾಖಲಿಸಿ ವಿಚಾರಣೆಯ ಮುಂದಿನ ದಿನಾಂಕವನ್ನು ಖಚಿತ ಪಡಿಸಬಹುದು [ದಂಪ್ರಸಂ ಅನುಚ್ಛೇದ 309(2)].

7) ವಿಚಾರಣೆಯ ನಂತರ ಅಪರಾಧಿಯು ಆರೋಪಣೆಯನ್ನು ಒಪ್ಪಿಕೊಳ್ಳದಿದ್ದರೆ ವಿಚಾರಣೆಯ ಒಟ್ಟು ಸಾರಾಂಶ, ಕೊಟ್ಟ ತೀರ್ಪು ಮತ್ತು ಆ ತೀರ್ಪಿಗೆ ಬರಲು ಕಾರಣಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು (ದಂಪ್ರಸಂ ಅನುಚ್ಛೇದ 264).

8) ಆರೋಪಿಯು ಸ್ವಂತವಾಗಿ ಅಪರಾಧವನ್ನು ಒಪ್ಪಿಕೊಂಡ ಸಂದರ್ಭ ಬಿಟ್ಟು ಉಳಿದ ಸಂದರ್ಭಗಳಲ್ಲಿ ಅವನಿಗೆ ಶಿಕ್ಷೆಯಾದರೆ, ಅವನು ಜಿಲ್ಲಾ ಸತ್ರ (ಸೆಷನ್ಸ್) ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು (ದಂಪ್ರಸಂ ಅನುಚ್ಛೇದ 374–75). ಕಾಲಪರಿಮಿತಿ ಕಾನೂನು 1963ರ ಅನುಸೂಚಿ ಸಂ.115(b)(iii)ರ ಪ್ರಕಾರ ತೀರ್ಪು ಅಥವಾ ಶಿಕ್ಷೆ ನೀಡಿದ 30 ದಿನಗಳೊಳಗೆ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು. ಆರೋಪಿಯು ಮೇಲ್ಮನವಿ ಕೊಡಲು ನಿಶ್ಚಯಿಸಿದಾಗ ಜಿಲ್ಲಾ ದಂಡಾಧಿಕಾರಿಯು ಆರೋಪಿಗೆ ಮೇಲ್ಮನವಿ ಕೊಟ್ಟು ಮೇಲ್ಮನವಿ ಕೊಟ್ಟ ನ್ಯಾಯಾಲಯದಿಂದ ಆದೇಶ ಪಡೆಯಲು ತಗಲುವ ಸಮಯದ ತನಕ ಜಾಮೀನು ಕೊಡಬಹುದು. ಜಾಮೀನು ಕೊಟ್ಟ ಸಮಯದ ತನಕ ಅವನ ಜೈಲು ಶಿಕ್ಷೆಯನ್ನು ಅಮಾನತುಗೊಳಿಸಬಹುದು [ದಂಪ್ರಸಂ ಅನುಚ್ಛೇದ 389 (3)].

9) ವಿಚಾರಣೆಗೆ ಸಂಬಂಧಪಟ್ಟ ದಾಖಲೆ ಮತ್ತು ತೀರ್ಪುಗಳು ನ್ಯಾಯಾಲಯದ ಭಾಷೆಯಲ್ಲಿಯೇ ಇರಬೇಕು. ಅವನ್ನು ದಂಡಾಧಿಕಾರಿಗಳು ನೇಮಿಸಿದ ಅಧಿಕಾರಿಯೊಬ್ಬರು ತಯಾರಿಸಿ ವಿಚಾರಣೆ ನಡೆಸುವ ದಂಡಾಧಿಕಾರಿಗಳು ಅವುಗಳ ಮೇಲೆ ಸಹಿ ಹಾಕಬಹುದು (ದಂಪ್ರಸಂ ಅನುಚ್ಛೇದ 265).

10) ದಂಡಾಧಿಕಾರಿಗಳು ಸಾಂಕೇತಿಕ ಜೈಲು ಶಿಕ್ಷೆ ಕೊಡಲು ನಿರ್ಧರಿಸಿದರೆ ಆ ಶಿಕ್ಷೆಯು "ನ್ಯಾಯಾಲಯವು ಏದ್ದೇಳುವ ತನಕ" ಎಂದು ವಿಧಿಸಬಹುದು. ಜೊತೆಗೆ ಕಾಯ್ದೆಯ ಪ್ರಕರಣ 9, 16ರಿಂದ 19ರಲ್ಲಿ ನಮೂದಿಸಿದಂತೆ ದಂಡವನ್ನೂ ವಿಧಿಸಬಹುದು. ಆ ಸನ್ನಿವೇಶದಲ್ಲಿ ಅಪರಾಧಿಯು ದಂಡ ತೆತ್ತ ನಂತರ ಮತ್ತು ನ್ಯಾಯಾಲಯವನ್ನು ಆ ದಿವಸಕ್ಕೆ ಮುಚ್ಚಿದ ನಂತರ ಅವನನ್ನು ಬಿಡುಗೊಡೆಗೊಳಿಸಬಹುದು.

11) ಅದಕ್ಕಿಂತಲೂ ಹೆಚ್ಚಿನ ಜೈಲು ಶಿಕ್ಷೆ ನೀಡಿದರೆ ಅಪರಾಧಿಯನ್ನು ನ್ಯಾಯಿಕ ಅಭಿರಕ್ಷೆಯಲ್ಲಿ ಇಡಬೇಕು.

12) ನ್ಯಾಯಿಕ ದಂಡಾಧಿಕಾರಿಯು ಕೊಟ್ಟ ತೀರ್ಪು ಅಥವಾ ಆದೇಶವನ್ನು ಆರೋಪಿಗೆ ಅವನಿಂದ ಸ್ವೀಕೃತಿ ಪತ್ರ ಪಡೆದು ನೀಡಬೇಕು. ಅಪರಾಧಿಗೆ ಜೈಲು ಶಿಕ್ಷೆ ನೀಡಿದರೆ, ತೀರ್ಪಿನ ಪ್ರತಿಯೊಂದನ್ನು ಜೈಲು ನಿರೀಕ್ಷಕರಿಗೆ ರವಾನಿಸಬೇಕು (ಇನ್ನು ಹೆಚ್ಚಿನ ವಿವರಗಳಿಗೆ "ಕೈಪಿಡಿ" ಪುಟ 14–16 ನೋಡಿ).

**13) ಸಂಕ್ಷಿಪ್ತ ವಿಚಾರಣೆಯಲ್ಲಿ ಸಿದ್ಧಪಡಿಸಬೇಕಾದ ದಾಖಲೆಗಳು:**

ರಾಜ್ಯ ಸರ್ಕಾರವು ತಯಾರಿಸಿದ ನಮೂನೆಗಳಲ್ಲಿ ಈ ಕೆಳಗಿನ ವಿವರಗಳು ದಾಖಲಾಗಿರಬೇಕು:

(1) ದಾವೆಯ ಕ್ರಮ ಸಂಖ್ಯೆ.

(2) ಅಪರಾಧ ಜರುಗಿದ ದಿನಾಂಕ.

(3) ಅಪರಾಧದ ಬಗ್ಗೆ ವರದಿ / ದೂರು ನೀಡಿದ ದಿನಾಂಕ.

(4) ಫಿರ್ಯಾದಿಯ ಹೆಸರು.

(5) ಆರೋಪಿಯ ಹೆಸರು, ಅವನ ತಂದೆಯ ಹೆಸರು ಮತ್ತು ಅವನ ವಾಸ ಸ್ಥಳದ ವಿಳಾಸ.

(6) ದೂರಿನಲ್ಲಿರುವ ಆರೋಪ ಮತ್ತು ಸಾಬೀತಾದ ಆರೋಪ.

(7) ದಾವೆಯು ಯಾವುದೇ ಆಸ್ತಿಗೆ ಸಂಬಂಧಪಟ್ಟಿದ್ದರೆ ಆಸ್ತಿಯ ಮೌಲ್ಯ.

(8) ಆರೋಪಿಯು ಆರೋಪವನ್ನು ಸ್ವೀಕರಿಸಿದರೆ ಅಥವಾ ನಿರಾಕರಿಸಿದರೆ ಅವುಗಳ ಬಗ್ಗೆ ವಿವರ.

(9) ವಿಚಾರಣೆಯಿಂದ ಸಾಬೀತಾದ ವಿಷಯಗಳು.

(10) ತೀರ್ಪು ಅಥವಾ ಅಂತಿಮ ಆದೇಶ.

(11) ವಿಚಾರಣೆ ಮುಕ್ತಾಯವಾದ ದಿನಾಂಕ (ದಂಪ್ರಸಂ ಅನುಚ್ಛೇದ 263).

**4.3.10 ಕಂದಾಯ ಇಲಾಖೆಯ ಅಧಿಕಾರಿಗೆ ಹೊರತಾಗಿರುವ ವ್ಯಕ್ತಿಯಿಂದ ದೂರು ದಾಖಲೆ:**

1) ಕೇವಲ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮಾತ್ರ ಆರಕ್ಷಕ ಠಾಣೆಯಲ್ಲಿ ದೂರನ್ನು ದಾಖಲಿಸುವ ಜವಾಬ್ದಾರಿ ಇದೆಯೆಂದು ಕಾನೂನು ಹೇಳುವುದಿಲ್ಲ. ಜೀತದಾಳುವೇ ಅಥವಾ ಅವನ ಪರವಾಗಿ ಇನ್ನಿತರ ಯಾವುದೇ ವ್ಯಕ್ತಿಯು ದೂರನ್ನು ದಾಖಲಿಸಬಹುದು. ದೂರನ್ನು ಮೌಖಿಕವಾಗಿ ಆರಕ್ಷಕ ಠಾಣೆಯ ಜವಾಬ್ದಾರಿಯುಳ್ಳ ವ್ಯಕ್ತಿಗೆ ನೀಡಿದರೆ ಆ ವ್ಯಕ್ತಿಯು ಅದನ್ನು ಖುದ್ದಾಗಿ ಅಥವಾ ಇನ್ನೊಬ್ಬರ ಮೂಲಕ ಲಿಖಿತವಾಗಿ ದಾಖಲಿಸಬೇಕು. ಲಿಖಿತ ದಾಖಲೆಯನ್ನು ದೂರು ನೀಡಿದವರಿಗೆ ಓದಿ ಹೇಳಿ ಅದರಲ್ಲಿ ಅವರಿಂದ ಸಹಿ ಪಡೆಯಬೇಕು [ದಂಪ್ರಸಂ ಅನುಚ್ಛೇದ 154(1)]. ದೂರು ನೀಡಿದವರಿಗೆ ದಾಖಲೆಯ ಪ್ರತಿಯೊಂದನ್ನು ಶುಲ್ಕವಿಲ್ಲದೇ ನೀಡಬೇಕು [ದಂಪ್ರಸಂ ಅನುಚ್ಛೇದ 154(2)]. ಆರಕ್ಷಕ ಠಾಣೆಯ ಜವಾಬ್ದಾರಿಯುಳ್ಳ ವ್ಯಕ್ತಿಯು ದೂರನ್ನು ದಾಖಲಿಸಲು ನಿರಾಕರಿಸಿದರೆ ದೂರನ್ನು ಆರಕ್ಷಕ ನಿರೀಕ್ಷಕರಿಗೆ ಅಂಚೆಯ ಮೂಲಕ ಕಳುಹಿಸಬಹುದು [ದಂಪ್ರಸಂ ಅನುಚ್ಛೇದ 154(3)].

2) ಆರಕ್ಷಕ ಠಾಣೆಯ ಜವಾಬ್ದಾರಿಯುಳ್ಳ ವ್ಯಕ್ತಿಯು ಅಥವಾ ಆರಕ್ಷಕ ನಿರೀಕ್ಷಕರು ಖುದ್ದಾಗಿ ಅಥವಾ ಅವರ ಕೈಕೆಳಗಿನ ಅಧಿಕಾರಿಯೊಬ್ಬರಿಂದ ನ್ಯಾಯಿಕ ದಂಡಾಧಿಕಾರಿಯ ಆದೇಶವಿಲ್ಲದೇ ಜೀತ ಅಪರಾಧದ ಬಗ್ಗೆ ಅನ್ವೇಷಣೆ ನಡೆಸಬಹುದು

[ದಂಪ್ರಸಂ ಅನುಚ್ಛೇದ 154 (1), 156]. ಅವರಿಬ್ಬರೂ ಅನ್ವೇಷಣೆ ನಡೆಸದಿದ್ದರೆ ಮತ್ತು ತಮಗೆ ದೂರು ಬಂದಿದ್ದರೆ
ಅಥವಾ ಆರಕ್ಷಕರು ವರದಿ ತಮಗೆ ಸಲ್ಲಿಸಿದ್ದರೆ ಅಥವಾ ಆರಕ್ಷಕರಲ್ಲದ ಇನ್ನಿತರ ವ್ಯಕ್ತಿ ದೂರು ನೀಡಿದ್ದರೆ ಅಥವಾ
ಅಪರಾಧ ನಡೆದಿದೆ ಎಂದು ತಮಗೆ ವೈಯಕ್ತಿಕವಾಗಿ ತಿಳಿದು ಬಂದರೆ ನ್ಯಾಯಿಕ ದಂಡಾಧಿಕಾರಿಯೇ ಅನ್ವೇಷಣೆ ನಡೆಸು
ವಂತೆ ಆರಕ್ಷಕ ಠಾಣೆಯ ಜವಾಬ್ದಾರಿಯುಳ್ಳ ವ್ಯಕ್ತಿಗೆ ಆದೇಶಿಸಬಹುದು (ದಂಪ್ರಸಂ ಅನುಚ್ಛೇದ 190).

**5. ಜೀತದಾಳುಗಳ ಪುನರ್ವಸತಿ: ಸಾಮಾನ್ಯ ತತ್ವಗಳು ಮತ್ತು ದೃಷ್ಟಿಕೋನಗಳು**

5.1 ಕಾನೂನಿನ ಅನುಚ್ಛೇದ 11ರ ಪ್ರಕಾರ ಸಂಬಂಧಪಟ್ಟ ಅಧಿಕಾರಿಯ ಜವಾಬ್ದಾರಿ ಏನಂದರೆ ಜೀತದಾಳುಗಳು ಪುನಃ
ಜೀತಕ್ಕೆ ಮರಳದ ರೀತಿಯಲ್ಲಿ ಅವರ ಆರ್ಥಿಕ ಹಿತಾಸಕ್ತಿಗಳನ್ನು ಬೆಳೆಸುವುದು. ಆದರೆ ಕಾನೂನು ಯಾವ ರೀತಿಯ
ಪುನರ್ವಸತಿ ಸೌಲಭ್ಯಗಳನ್ನು ಜೀತದಾಳುಗಳಿಗೆ ಒದಗಿಸಬೇಕು ಎಂಬುದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಅವುಗಳ
ಬಗ್ಗೆ ಕೇಂದ್ರ ಪುರಸ್ಕೃತ ಯೋಜನೆ (ಕೇಪುಯೋ)ಯು ವಿವರವಾಗಿ ಮಾರ್ಗದರ್ಶನಗಳನ್ನು ಕೊಡುತ್ತದೆ.

5.2 **ಸಮಗ್ರ ದೃಷ್ಟಿ:** ಪರಿಣಾಮಕಾರಿಯಾದ ಪುನರ್ವಸತಿ ಕಲ್ಪಿಸಲು ಸಮಗ್ರ ದೃಷ್ಟಿಯ ಅವಶ್ಯಕತೆಯಿದೆ. ಆರ್ಥಿಕ ಮಟ್ಟದ
ಪುನರ್ವಸತಿ ಜೊತೆ ಜೀತದಾಳುಗಳಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ನೀಡುವ ಮಾನಸಿಕ ಪುನರ್ವಸತಿಯೂ ಆಗಬೇಕು.
ಇಂತಹ ಪ್ರಯತ್ನಗಳನ್ನು ಸಂಘಟನಾತ್ಮಕವಾಗಿ ಮಾಡುವುದು ಒಳ್ಳೆಯದು. ಅಂದರೆ ಬಿಡುಗಡೆ ಹೊಂದಿದ ಜೀತದಾಳುಗಳ
ಬೇರೆಬೇರೆ ತರಹದ ಗುಂಪುಗಳನ್ನು ಕಟ್ಟಿ ಅವನ್ನು ಶ್ರದ್ಧೆಯಿಂದ ಬೆಳೆಸಬೇಕು. ಅವು ಕಾರ್ಮಿಕ ಒಕ್ಕೂಟಗಳಾಗಬಹುದು;
ಸಹಕಾರ ಸಂಘಗಳಾಗಬಹುದು; ಸ್ವ ಸಹಾಯ ಗುಂಪುಗಳಾಗಬಹುದು; ಅಥವಾ ಸ್ವಯಂ ಸೇವಾ ಸಂಸ್ಥೆಗಳಾಗಬಹುದು.
ಸಂಘಟನಾತ್ಮಕ ಪ್ರಯತ್ನದಲ್ಲಿಯೂ ಕೇವಲ ಜೀತದಾಳುಗಳನ್ನು ಒಬ್ಬೊಬ್ಬ ವ್ಯಕ್ತಿಯಾಗಿ ಪರಿಗಣಿಸುವುದರ ಜೊತೆಗೆ ಅವರ
ಇಡೀ ಕುಟುಂಬವನ್ನೇ ಲೆಕ್ಕಕ್ಕೆ ತೆಗೆದುಕೊಳ್ಳುವುದು ಉತ್ತಮ. ಅದರಲ್ಲಿಯೂ ಕುಟುಂಬದಲ್ಲಿಯ ಮಕ್ಕಳ ಬಗ್ಗೆ ವಿಶೇಷ
ಗಮನ ಹರಿಸುವುದು ಸೂಕ್ತ.
ಕೇಂದ್ರ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳು 1982ರ ಸಪ್ಟೆಂಬರ್ 2ರಲ್ಲೇ ಕಳುಹಿಸಿದ ಸುತ್ತೋಲೆಯು ಆರ್ಥಿಕ
ಪುನರ್ವಸತಿಯ ಜೊತೆಗೆ ಮಾನಸಿಕ ಪುನರ್ವಸತಿಯ ಮಹತ್ವವನ್ನು ವಿವರಿಸುತ್ತದೆ. ಮಾನಸಿಕ ಪುನರ್ವಸತಿಯು
ಜೀತದಾಳುವಿಗೆ ತೀರ ಪ್ರಸ್ತುತವಾಗಿದೆ. ಇಷ್ಟರವರೆಗೆ ಅವರು ದಮನ ಹಾಗೂ ದಾಸ್ಯದ ಪ್ರಪಂಚಕ್ಕೆ ಹೊಂದಿಕೊಂಡಿದ್ದರು.
ತನ್ನ ಹಕ್ಕುಗಳ ಬಗ್ಗೆ ಪೂರ್ತಿ ಕತ್ತಲಲ್ಲಿರುವವರು. ಸಾಲವೇ ಅವರ ವಿಧಿಯಾಗಿದೆ. ಇಂತಹ ಪರಿಸ್ಥಿಯಲ್ಲಿರುವ ಅವರಿಗೆ
ತಾನು ಒಬ್ಬ ಮನುಷ್ಯ ಎಂಬುದನ್ನು ಖಾತ್ರಿಪಡಿಸಬೇಕು. ಆರ್ಥಿಕ ಜೀವನೋಪಾಯ ಪಡೆಯುವುದು ತನ್ನ ಹಕ್ಕು;
ಯಾವುದೇ ಕಾರಣಕ್ಕೂ ತಾನು ದುಬಾರಿ ಬಡ್ಡಿಗೆ ಸಾಲ ನೀಡುವ ಸಾಲಿಗರ ಮೇಲೆ ಅವಲಂಬಿತವಾಗಿರಬೇಕೆಂದಿಲ್ಲ
ಎಂಬುದನ್ನು ಅವರಿಗೆ ಧೃಡಪಡಿಸಬೇಕು (ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿಗೆ ಒಂದು ನೀಲಿನಕ್ಷೆ
ಕಾರ್ಮಿಕ ಇಲಾಖೆ, ಭಾರತ ಸರ್ಕಾರ, ನವದೆಹಲಿ, 2 ಸೆಪ್ಟೆಂಬರ್ 1982. ಇನ್ನು ಮುಂದೆ ಇದನ್ನು "ನೀಲಿನಕ್ಷೆ" ಎಂದು
ಉದ್ಧರಿಸಲಾಗುವುದು, ಅನುಸೂಚಿ 9.5 ನೋಡಿ).

5.3 ದಿನನಿತ್ಯ ಅವಶ್ಯಕತೆಗಳಿಗೆ ಬೇಕಾಗುವ ಹಣದ ಪೂರೈಕೆ: ಬಿಡುಗಡೆ ಹೊಂದಿದ ಜೀತದಾಳುಗಳ ದಿನನಿತ್ಯದ ಅವಶ್ಯ
ಕತೆಗಳ ಪೂರೈಕೆಗೆ ಹಣವನ್ನು ಸುಲಭ ರೀತಿಯಲ್ಲಿ ಒದಗಿಸುವುದು ಮುಖ್ಯವಾಗಿ ಆಗಬೇಕಾದ ಕೆಲಸ. ಏಕೆಂದರೆ ಆ
ರೀತಿಯ ಹಣದ ಕೊರತೆಯಿಂದಲೇ ಸಮಾಜದಲ್ಲಿಯ ತೀರ ಬಡವರು ಜೀತದ ತೆಕ್ಕೆಗೆ ಬೀಳುತ್ತಾರೆ. ಆದ್ದರಿಂದ
ಪರಿಣಾಮಕಾರಿಯಾದ ಪುನವರ್ಸತಿ ಕಾರ್ಯವು ಬಿಡುಗಡೆ ಹೊಂದಿದ ಜೀತದಾಳುಗಳ ದಿನನಿತ್ಯದ ಖರ್ಚುಗಳ ಹಣಕಾಸು
ಅವಶ್ಯಕತೆಗಳನ್ನು ವ್ಯವಸ್ಥಿತವಾಗಿ ಪೂರೈಸುವಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು,
ಗ್ರಾಮೀಣ ಬ್ಯಾಂಕುಗಳು, ನಬಾರ್ಡ್ ಮತ್ತು ರಿಸರ್ವ್ ಬ್ಯಾಂಕ್‌ಗಳ ಪಾತ್ರ ಮಹತ್ವದ್ದು. ಅವುಗಳು ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆಯ ಜೊತೆಗೆ ಅಡವು ಅಥವಾ ಆಧಾರ ಕೊಡದೇ ಅಥವಾ ತೀರಾ ಕಡಿಮೆ
ಬಡ್ಡಿದರದ ಪ್ರಮಾಣದಲ್ಲಿ ದಿನ ನಿತ್ಯ ಅನುಭೋಗಕ್ಕೆ ದುರ್ಬಲ ವರ್ಗದ ಜನರಿಗೆ ಸುಲಭ ರೀತಿಯಲ್ಲಿ ಸಣ್ಣ ಪ್ರಮಾಣದ
ಹಣ ಸಹಾಯ ನೀಡುವ ಧೋರಣೆಗಳನ್ನೂ ಯೋಜನೆಗಳನ್ನೂ ಹಾಕಿಕೊಳ್ಳಬೇಕು.

5.4 ಬೇರೆ ಬೇರೆ ಮೂಲಗಳಿಂದ ಸಿಗುವ ಸೌಲಭ್ಯಗಳನ್ನು ಒಗ್ಗೂಡಿಸಿ ಕೊಡುವ ದೃಷ್ಟಿ ಜೀತದಾಳುಗಳ ಆರ್ಥಿಕ
ಅಭಿವೃದ್ಧಿಯನ್ನು ಕೇಪುಯೋಗೆ ಮಾತ್ರ ಸೀಮಿತಗೊಳಿಸಬಾರದು. ಸರ್ಕಾರದ ಬೇರೆ ಬೇರೆ ಇಲಾಖೆಗಳು ಮತ್ತು ಸರ್ಕಾರಿ
ಸ್ವಾಯತ್ತ ಸಂಸ್ಥೆಗಳಿಂದ ಸಿಗುವ ವಿವಿಧ ಯೋಜನೆಗಳ ಲಾಭ ಪಡೆಯಬೇಕು. ಉದಾಹರಣೆಗಾಗಿ ವಸತಿ ಸೌಲಭ್ಯಗಳು,
ಸಾಲ ಸೌಲಭ್ಯಗಳು ಇತ್ಯಾದಿ. ಆರ್ಥಿಕ ಅಭಿವೃದ್ಧಿಯ ಯೋಜನೆಗಳೊಂದಿಗೆ ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೂ
ಬೇರೆ ಬೇರೆ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಸಿಗುವ ವಿವಿಧ ಯೋಜನೆಗಳ ಪ್ರಯೋಜನಗಳು ಲಭಿಸುವಂತೆ
ಆಗಬೇಕು. ಆ ಎಲ್ಲಾ ಯೋಜನೆಗಳಲ್ಲಿ ಜೀತದಾಳುಗಳಿಗೆ ಪ್ರಥಮ ಆದ್ಯತೆ ಸಿಗಬೇಕು.

5.5 ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಒಗ್ಗೂಡುವಿಕೆ: ಒಗ್ಗೂಡುವಿಕೆ ಕೇವಲ ಸರ್ಕಾರಿ ಇಲಾಖೆಗಳಲ್ಲಿ ಮಾತ್ರವಲ್ಲ
ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿಯೂ ಇರಬೇಕು. ಸರ್ಕಾರೇತರ ಸಂಸ್ಥೆಗಳು ಅವುಗಳಲ್ಲಿಯೂ ಬಿಡುಗಡೆ
ಹೊಂದಿದ ಜೀತದಾಳುಗಳ ನೇತೃತ್ವದಲ್ಲಿರುವ ಸಂಘಗಳು, ಭೂರಹಿತ ಕಾರ್ಮಿಕರು, ದಲಿತರು ಮತ್ತು ಗಿರಿಜನರ
ಸಂಘಟನೆಗಳನ್ನು ಜೀತ ನಿರ್ಮೂಲನೆಯ ಪ್ರಮುಖ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬೇಕು. ಪ್ರತ್ಯೇಕವಾಗಿ ಜೀತದಾಳುಗಳ
ಶಿಕ್ಷಣ, ಆರೋಗ್ಯ ಮತ್ತು ಮಾನಸಿಕ ಪುನರ್ವಸತಿ ಕಾರ್ಯಗಳಲ್ಲಿ ಸರ್ಕಾರೇತರ ಸಂಸ್ಥೆಗಳ ನೆರವನ್ನು ಪಡೆಯುವುದು
ಹೆಚ್ಚು ಸೂಕ್ತ.

5.6 ಜೀತದಾಳುಗಳ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಕೋನದೊಂದಿಗಿನ ಪುನರ್ವಸತಿ ಕಾರ್ಯವನ್ನು ಜೀತ ತಡೆಗಟ್ಟುವ
ಪ್ರಯತ್ನಗಳೊಂದಿಗೆ ಸಮೀಕರಿಸುವುದು: ಜೀತ ಕೇವಲ ಆರ್ಥಿಕ ಶೋಷಣೆಯ ಪ್ರಶ್ನೆಯಲ್ಲ. ಅದಕ್ಕೆ ಸಾಮಾಜಿಕ ತಾರ
ತಮ್ಯ, ಮಾನಸಿಕ ದಮನ, ರಾಜಕೀಯವಾಗಿ ಅಧಿಕಾರದಿಂದ ಹೊರಗಿಟ್ಟಿರುವಿಕೆ ಮತ್ತು ಸಾಂಸ್ಕೃತಿಕ ನಿರಾಕರಣೆಗಳ

ಕ.ಜೀ.ಪು. F-4

6.3.1 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಿಡುಗಡೆ ಹೊಂದಿದ ಜೀತದಾಳುಗಳ ದಿನನಿತ್ಯದ ಖರ್ಚುಗಳ ಹಣಕಾಸು ಅವಶ್ಯಕತೆಗಳ ಪೂರೈಕೆಗೆ "ಜೀತವಿಮುಕ್ತರ ಪುನರ್ವಸತಿ ಸಹಾಯಧನ" ಎಂಬ ನೂತನ ಯೋಜನೆಯನ್ನು 2006ರಲ್ಲಿ ಅನುಷ್ಠಾನಕ್ಕೆ ತಂದಿದೆ (ಸರ್ಕಾರಿ ಆದೇಶ ಸಂ:ಗ್ರಾಅಪ.15.ಆರ್‌ಬಿಎಲ್.2004 ಬೆಂಗಳೂರು, ದಿನಾಂಕ:21.01.2006, ಅನುಸೂಚಿ 9.6 ನೋಡಿ). ಅದರ ಪ್ರಕಾರ ಜೀತದಾಳುವನ್ನು ಬಿಡುಗಡೆಗೊಳಿಸಿದ ತಿಂಗಳಿಂದ ಮೊದಲ ಎರಡು ವರ್ಷಗಳ ತನಕ ಪ್ರತಿ ತಿಂಗಳಿಗೆ 300 ರೂಪಾಯಿಗಳ ಸಹಾಯಧನವನ್ನು ಅವರಿಗೆ ಒದಗಿಸಬೇಕು. ಇದರ ಜವಾಬ್ದಾರಿ ಜಿಲ್ಲಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳು, ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, (ಅಂದು) ಯೋಜನೆ, ಸಮನ್ವಯ & ಮೇಲ್ವಿಚಾರಣಾ ಘಟಕ (ಇಂದು), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು ಇವರಿಗೆ ಸೇರಿರುತ್ತದೆ.

6.3.2 ಮೇಲೆ ಸೂಚಿಸಿದ ವಿವಿಧ ಹಣಕಾಸು ಸಂಸ್ಥೆಗಳು 2003ರಲ್ಲಿ ಜರುಗಿದ ಜೀತ ಸಮಸ್ಯೆ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಮೂಡಿ ಬಂದ ಮಾರ್ಗದರ್ಶನಗಳಂತೆ, ದುರ್ಬಲ ವರ್ಗದ ಜನರ ದಿನನಿತ್ಯದ ಖರ್ಚುಗಳಿಗೆ ಹಣ ಕಾಸು ಅವಶ್ಯಕತೆಗಳನ್ನು ಪೂರೈಸಲು ಅವರಿಗೆ ಆಧಾರ ರಹಿತ ಸಾಲಗಳನ್ನು ನೀಡುವ ಧೋರಣೆಗಳನ್ನು ತಾಳಬೇಕು ("ಫಲಿತಾಂಶ" ನಂ.7–9, ಅನುಸೂಚಿ 9.2 ನೋಡಿ). ರಿಸರ್ವ್ ಬ್ಯಾಂಕ್, ನಬಾರ್ಡ್, ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಮತ್ತು ಲೀಡ್ ಡಿಸ್ಟ್ರಿಕ್ಟ್ ಬ್ಯಾಂಕ್ ಮ್ಯಾನೇಜರ್‌ಗಳು ತಮ್ಮ ಸಂಸ್ಥೆಗಳಲ್ಲಿ ಬಿಡುಗಡೆ ಹೊಂದಿದ ಜೀತದಾಳುಗಳು ಮತ್ತಿತರ ದುರ್ಬಲ ವರ್ಗಗಳಿಗೆ ಆಧಾರರಹಿತವಾಗಿ ದಿನನಿತ್ಯ ಖರ್ಚುಗಳಿಗೆ ಸಾಲ ಮತ್ತು ಅವರಿಗೆ ಮಾತ್ರ ಅನ್ವಯಿಸುವ ಕಡಿಮೆ ಪ್ರಮಾಣದ ಬಡ್ಡಿ ದರಗಳಲ್ಲಿ ಸಾಲ ಪಡೆಯುವ ನೀತಿಗಳನ್ನು ರೂಪಿಸಬೇಕು.

6.3.3 ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯಗಳ ರೂಪರೇಷೆಗಳ ಬಗ್ಗೆ ರಾಜ್ಯ, ಜಿಲ್ಲೆ, ತಾಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಂತಿಮ ತೀರ್ಮಾನ ತೆಗೆದು ಕೊಳ್ಳುವಾಗ ನಬಾರ್ಡ್ ಮತ್ತು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಅಧಿಕಾರಿಗಳು ಹಾಗೂ ಲೀಡ್ ಡಿಸ್ಟ್ರಿಕ್ಟ್ ಬ್ಯಾಂಕ್ ಮ್ಯಾನೇಜರ್‌ಗಳನ್ನು ಕೂಡಾ ಒಟ್ಟಿಗೆ ಸೇರಿಸಿ ಅವರ ಸಂಸ್ಥೆಗಳಿಂದ ಸಿಗಬಹುದಾದ ಸಹಾಯದೊಂದಿಗಿನ ಸಾಲಸೌಲಭ್ಯಗಳ ಬಗ್ಗೆ ಖಚಿತ ಪಡಿಸಬೇಕು ("ಫಲಿತಾಂಶ" ನಂ.7–11, ಅನುಸೂಚಿ 9.2 ನೋಡಿ).

**6.4 ಬೇರೆ ಬೇರೆ ಮೂಲಗಳಿಂದ ಸಿಗುವ ಸೌಲಭ್ಯಗಳನ್ನು ಒಗ್ಗೂಡಿಸಿ ದೊರಕಿಸುವುದು.**

6.4.0 ಬಿಡುಗಡೆ ಹೊಂದಿದ ಜೀತದಾಳುಗಳ ಆರ್ಥಿಕ ಪುನರ್ವಸತಿಯನ್ನು ಕೇಪುಯೋಯ ಅನುದಾನಕ್ಕೆ ಸೀಮಿತಗೊಳಿಸ ಬಾರದು. ಕೇಪುಯೋಯ ಅನುದಾನದ ಜೊತೆಗೆ ಸರ್ಕಾರದ ಬೇರೆ ಬೇರೆ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಲಭ್ಯವಿರುವ ಆರ್ಥಿಕ ಸೌಲಭ್ಯಗಳನ್ನು ಒಗ್ಗೂಡಿಸಿ ಜೀತದಾಳುಗಳಿಗೆ ಸಿಗುವಂತೆ ಮಾಡಬೇಕು. ಆರ್ಥಿಕ ಸೌಲಭ್ಯಗಳ ಜೊತೆ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೋಸ್ಕರ ಇರುವ ಯೋಜನೆಗಳ ಲಾಭವೂ ಜೀತದಾಳುಗಳಿಗೆ ಸಿಗುವಂತೆ ನೋಡಿ ಕೊಳ್ಳಬೇಕು.

**6.4.1 ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದ ದೊರಕಿಸಬಹುದಾದ ಯೋಜನೆ/ಸೌಲಭ್ಯಗಳನ್ನು ಈ ಕೆಳಗೆ ನಮೂದಿಸಲಾಗಿದೆ:**

1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ;

(1) ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ (SGSY) (2)ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆ (SGRY) (3) ಜೀತದಾಳುಗಳ ಪುನರ್ವಸತಿ ಸಹಾಯಧನ ಯೋಜನೆ (4) ನಮ್ಮ ಭೂಮಿ ನಮ್ಮ ತೋಟ ಯೋಜನೆ – ಎರಡು ತಲೆಮಾರಿನಿಂದ (ಸ್ವಂತ ಮತ್ತು ತಂದೆ ತಾಯಿಯವರಿಂದ) ಭೂರಹಿತರಾಗಿರುವ ಕೃಷಿಕಾರ್ಮಿಕರಿಗೆ ತಮ್ಮ ವಾಸಸ್ಥಳದ ಒಂದು ಕಿಲೊ ಮೀಟರ್ ಒಳಗೆ ಪ್ರತಿಯೊಬ್ಬರಿಗೆ 5 ಗುಂಟೆ ಖರೀದಿಸಲು 6,000 ರೂಪಾಯಿ ಸಹಾಯಧನ ಕೊಡುವ ಯೋಜನೆ (5) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

2) ಕಂದಾಯ ಇಲಾಖೆ;

(1) ಕೂಲಿಗಾಗಿ ಕಾಳು ಯೋಜನೆ. (ಬರಗಾಲ ಪೀಡಿತ ಪ್ರದೇಶಗಳಿಗೆ ಅನ್ವಯಿಸುವುದು).

3) ಕಾರ್ಮಿಕ ಇಲಾಖೆ;

(1) ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ (NCLP) (2) ರಾಜ್ಯ ಬಾಲಕಾರ್ಮಿಕ ಯೋಜನೆ (SCLP)

4) ಯೋಜನಾ ಇಲಾಖೆ:

(1) ಒಣ ಭೂಮಿ ಅಭಿವೃದ್ಧಿ ಕಾರ್ಯಕ್ರಮ

5) ಕೃಷಿ ಇಲಾಖೆ;

(1) ಸುಜಲ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ (WB) (2) ಕರ್ನಾಟಕ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ (DFID) (3) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪರಿಹಾರ ಕೊಡುವ ಯೋಜನೆ.

6) ತೋಟಗಾರಿಕೆ ಇಲಾಖೆ;

(1) ಬಿತ್ತನೆ ಸಾಮಾಗ್ರಿಗಳ ತಯಾರಿ ಮತ್ತು ಪೂರೈಕೆ

7) ಅರಣ್ಯ ಇಲಾಖೆ;

(1) ವನವಿಕಾಸ ಯೋಜನೆ

8) ಜಲಾನಯನ ಅಭಿವೃದ್ಧಿ ಇಲಾಖೆ;

(1) ಬರ ಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ (2) ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ

(3) ಸಮಗ್ರ ಬಂಜರುಭೂಮಿ ಅಭಿವೃದ್ಧಿ ಕಾರ್ಯಕ್ರಮ

9) ಮೀನುಗಾರಿಕೆ ಇಲಾಖೆ;

(1) ಮೀನುಗಾರರ ಅಭಿವೃದ್ಧಿ ಏಜನ್ಸಿಗಳು

10) ಪಶು ಸಂಗೋಪನೆ ಮತ್ತು ಪಶು ವೈದ್ಯ ಇಲಾಖೆ;

(1) ದನಕರು ಅಭಿವೃದ್ಧಿ (2) ಕುರಿ ಮತ್ತು ಉಣ್ಣೆ ಅಭಿವೃದ್ಧಿ (3) ಕೋಳಿ ಅಭಿವೃದ್ಧಿ (4) ಹಂದಿ ಅಭಿವೃದ್ಧಿ (5) ಮೊಲ ಸಾಕಣಿಕೆ (6) ಮೇವು (ಫೀಡ್ ಎಂಡ್ ಫಾಡರ್) ಅಭಿವೃದ್ಧಿ (7) ಹೈನುಗಾರಿಕೆ ಅಭಿವೃದ್ಧಿ

11) ಕೈಗಾರಿಕೆ ಇಲಾಖೆ;

(1) ಸಣ್ಣ ಪ್ರಮಾಣದ ಉದ್ದಿಮೆಗಳು (2) ರೇಷ್ಮೆ

12) ಶಿಕ್ಷಣ ಇಲಾಖೆ;

(1) ಉಚಿತ ಸಮವಸ್ತ್ರ ಮತ್ತು ಪಠ್ಯ ಪುಸ್ತಕಗಳು (2) ಅಕ್ಷರ ದಾಸೋಹ ಯೋಜನೆ (3) ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿಯ ಯೋಜನೆಗಳು – ಅವುಗಳಲ್ಲಿ ಪ್ರತ್ಯೇಕವಾಗಿ ಶಾಲೆಯಿಂದ ಹೊರಗಿರುವ 6 ರಿಂದ 14 ವರ್ಷದೊಳಗಿನ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗಳಿಗೆ ತರುವಂತಹ ಯೋಜನೆಗಳು – ಮಕ್ಕಳ ಜನಗಣತಿ, ಮಕ್ಕಳನ್ನು ಶಾಲೆಗೆ ಸೇರಿಸುವ ಆಂದೋಲನ, ಚಿಣ್ಣರ ಅಂಗಳ, ಕೂಲಿಯಿಂದ ಶಾಲೆಗೆ, ಬೀದಿಯಿಂದ ಶಾಲೆಗೆ, ಬಾ ಬಾಲೆ ಶಾಲೆಗೆ, ಬಾ ಮರಳಿ ಶಾಲೆಗೆ, ಫ್ಲೆಕ್ಸಿ ಶಾಲೆಗಳು (4) ಸಮುದಾಯ ಆಧಾರಿತ ಶೈಕ್ಷಣಿಕ ಕಾರ್ಯಕ್ರಮಗಳು – ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ (5) ವಯಸ್ಕರ ಶಿಕ್ಷಣ – ನಿರಂತರ ಕಲಿಕಾ ಕಾರ್ಯಕ್ರಮ, ಕರ್ನಾಟಕ ರಾಜ್ಯ ಸಾಕ್ಷರತೆ ಮಿಷನ್ ಪ್ರಾಧಿಕಾರ – ಜಿಲ್ಲಾ ಸಾಕ್ಷರ ಸಮಿತಿ.

13) ಸಹಕಾರ ಇಲಾಖೆ;

(1) ಯಶಸ್ವಿನಿ ರೈತ ಆರೋಗ್ಯ ಯೋಜನೆ – ಭೂ ಹಿಡುವಳಿದಾರರಾಗಿರುವ ಸಹಕಾರ ಸಂಘಗಳ ಸದಸ್ಯರಿಗೆ ಆರೋಗ್ಯ ವಿಮಾ ಯೋಜನೆ.

14) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ;

(1) ಆಶ್ರಯ (2) ಇಂದಿರ ಆವಾಸ್ ಯೋಜನೆ (3) ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆ (4) ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆ.

15) ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ;

(1) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ (ವಿಶ್ವ ಬ್ಯಾಂಕ್ ನೆರವಿನಿಂದ) (2) ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ (ನೆದರ್‌ಲ್ಯಾಂಡ್ ನೆರವಿನಿಂದ) (3) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ (ಡ್ಯಾನಿಡ ನೆರವಿನಿಂದ)

**16) ಕೊಳಗೇರಿ ಅಭಿವೃದ್ಧಿ ಇಲಾಖೆ;**

(1) ಆರ್ಥಿಕವಾಗಿ ದುರ್ಬಲ ವರ್ಗಗಳ ಜನರಿಗೆ ಮನೆ ಕಟ್ಟಿಸುವಿಕೆ (2) ಕೇಂದ್ರದ ನೆರವಿನ ಕೊಳಚೆಗೇರಿ ಅಭಿವೃದ್ಧಿ ಕಾರ್ಯಕ್ರಮ (3) ಬೆಂಗಳೂರು ನಗರ ಕೊಳಚೆಗೇರಿ ನಿವಾಸಿಗಳಿಗೆ ಸಮುದಾಯ ಕಕ್ಕಸು ನಿರ್ಮಾಣ (4) ನಿರ್ಮಲ ಜ್ಯೋತಿ ಯೋಜನೆ (5) ಕೇಂದ್ರ ಪುರಸ್ಕೃತ ಅಂಬೇಡ್ಕರ್ ಮಾಲಿನ್ಯ ಬಸ್ತಿ ಆವಾಸ್ ಯೋಜನೆ.

17) ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ;

(1) ಸ್ತ್ರೀ ಶಕ್ತಿ (2) ಬಾಲಿಕಾ ಸಮೃದ್ಧಿ ಯೋಜನೆ (3) ಉದ್ಯೋಗಿನಿ (4) ಸಾಂತ್ವನ (5) ಕಠಿಣ ಪರಿಸ್ಥಿತಿ ಎದುರಿಸುವ ಮಕ್ಕಳಿಗೆ ಸಹಾಯಧನ

18) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ;

(1) ಪೂರಕ ಪೌಷ್ಟಿಕಾಂಶಗಳ ಪೂರೈಕೆ ಕಾರ್ಯಕ್ರಮ (2) ಕಡಿಮೆ ದರದಲ್ಲಿ ಬಡವರಿಗೆ ಆಹಾರ ಧಾನ್ಯಗಳ ಹಂಚಿಕೆ

(3) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪಡಿತರ ಚೀಟಿ ಹಂಚಿಕೆ.

19) ಸಮಾಜ ಕಲ್ಯಾಣ ಇಲಾಖೆ ಮತ್ತು ಗಿರಿಜನ ಉಪ ಯೋಜನೆ;

(1) ಮಹಿಳೆಯರಿಗೆ ಹೊಲಿಗೆ ತರಬೇತಿ ಕೇಂದ್ರಗಳು (2) ಮೂರು ತಿಂಗಳ ಲಘು ವಾಹನ ಮತ್ತು ಆಟೋ ರಿಕ್ಷಾ ಚಾಲನೆ ತರಬೇತಿ (3) ನವಚೇತನ ಯೋಜನೆಯಲ್ಲಿ ವಿವಿಧ ಕಸುಬುಗಳಿಗೆ ತರಬೇತಿಗಳು (4) ಕೌಶಲ್ಯ ಅಡಿ ಮಹಿಳೆಯರಿಗೆ ತರಬೇತಿಗಳು (5) 25,000ದಿಂದ ಒಂದು ಲಕ್ಷ ರೂಪಾಯಿ ತನಕ ದೌರ್ಜನ್ಯಕ್ಕೊಳಗಾಗಿದ್ದವರಿಗೆ ಪರಿಹಾರ

(6) ಉತ್ತರ ಕರ್ನಾಟಕದ 8 ಜಿಲ್ಲೆಗಳಲ್ಲಿಯ ದೇವದಾಸಿ ಪದ್ಧತಿ ನಿರ್ಮೂಲನೆ ಯೋಜನೆ

20) ಅನುಸೂಚಿತ ಜಾತಿ ಮತ್ತು ಅನುಸೂಚಿತ ಜನಾಂಗದ (ಅಂಬೇಡ್ಕರ್) ಅಭಿವೃದ್ಧಿ ನಿಗಮ ಮತ್ತು ಗಿರಿಜನ ಅಭಿವೃದ್ಧಿ ಯೋಜನೆ;

(1) ಭೂಮಿ ಖರೀದಿ ಯೋಜನೆ – ಎರಡು ಎಕರೆ ಖರೀದಿಸಲು 50,000 ರೂಪಾಯಿಗಳ ಸಹಾಯಧನ

21) ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆ;

(1) ಹೊಲಿಗೆ ತರಬೇತಿ ಕೇಂದ್ರಗಳು (2) ಅನಾಥರು ಮತ್ತು ನಿರ್ಗತಿಕರಿಗೆ ಆಹಾರ ಮತ್ತು ವಸತಿ ಸೌಕರ್ಯ

(3) ಆಶ್ರಮ ಶಾಲೆಗಳು (4) ಸಮುದಾಯ ಕಟ್ಟಡ ಮತ್ತು ಕಲ್ಯಾಣ ಮಂಟಪಗಳು

22) ಅಂಗವಿಕಲರ ಕಲ್ಯಾಣ ಇಲಾಖೆ;

(1) ದೂರವಾಣಿ ಕೇಂದ್ರ (2) ವೈದ್ಯಕೀಯ ನೆರವು ನಿಧಿ (3) ಸಲಕರಣೆಗಳು ಮತ್ತು ಪರಿಕರಗಳು (4) ಮಾಸಾಶನ

(5) ಆಧಾರ ಸ್ವ ಉದ್ಯೋಗ ಯೋಜನೆ

**6.5 ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಒಗ್ಗೂಡುವಿಕೆ**

6.5.0 ಜೀತ ತಡೆಗಟ್ಟಲು ವಿವಿಧ ಸಂಸ್ಥೆಗಳು ಒಟ್ಟಿಗೆ ಸೇರಬೇಕು. ಸರ್ಕಾರಿ ಸಂಸ್ಥೆಗಳು ಮಾತ್ರವಲ್ಲದೆ ಸರ್ಕಾರೇತರ ಸಂಸ್ಥೆಗಳನ್ನೂ ಜೀತ ಪುನರ್ವಸತಿಯ ಕಾರ್ಯದಲ್ಲಿ ಜೊತೆಗೂಡಿಸಿ ಎಲ್ಲಾ ಶಕ್ತಿಗಳನ್ನು ಜೀತ ನಿರ್ಮೂಲನೆಯಲ್ಲಿ ತೊಡಗಿಸಿಕೊಳ್ಳುವುದು ಒಳ್ಳೆಯದು.

6.5.1 ಸರ್ಕಾರೇತರ ಸಂಸ್ಥೆಗಳು ತಮ್ಮಲ್ಲಿ ಚೆನ್ನಾಗಿ ಕೆಲಸ ಮಾಡುವ ಸಂಸ್ಥೆಗಳನ್ನು ಗುರುತಿಸಿ ಅವು ಒಟ್ಟಿಗೆ ಬರುವಂತೆ ಮಾಡುವ ಒಂದು ವ್ಯವಸ್ಥೆಯನ್ನು ಹುಟ್ಟುಹಾಕಬೇಕು. ಆ ವ್ಯವಸ್ಥೆಯು ಚೆನ್ನಾಗಿ ಕೆಲಸ ಮಾಡುವ ಸಂಸ್ಥೆಗಳಿಗೆ ಮಾನ್ಯತೆ ಕೊಡಬೇಕು. ಅಂತಹ ವ್ಯವಸ್ಥೆಯಿಂದ ಸರ್ಕಾರಿ ಇಲಾಖೆಗಳಿಗೆ ಉತ್ತಮ ಸಂಸ್ಥೆಗಳನ್ನು ಗುರುತಿಸಲು ಸುಲಭವಾಗುವುದು ಮತ್ತು ಅವುಗಳಿಗೆ ಸುಲಭ ರೀತಿಯಲ್ಲಿ ಧನಸಹಾಯ ಕೊಡುವಂತಾಗುತ್ತದೆ ("ಫಲಿತಾಂಶ" ನಂ.3, ಅನುಸೂಚಿ 9.2 ನೋಡಿ).

6.5.2 ಸರ್ಕಾರೇತರ ಸಂಸ್ಥೆಗಳನ್ನು ಮುಖ್ಯವಾಗಿ ಜೀತದಾಳುಗಳನ್ನು ಗುರುತಿಸುವ ಮತ್ತು ಪುನರ್ವಸತಿಗೊಳಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಪುನರ್ವಸತಿಯಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಮಾನಸಿಕ ಪುನರ್ವಸತಿಯನ್ನು ಸರ್ಕಾರೇತರ ಸಂಸ್ಥೆಗಳಿಗೆ ವಹಿಸಿ ಕೊಡುವುದು ಸೂಕ್ತ.

**6.6. ಜೀತದಾಳುಗಳ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಕೋನದೊಂದಿಗೆ ಅವರ ಪುನರ್ವಸತಿ ಕಾರ್ಯವನ್ನು ಜೀತ ತಡೆಗಟ್ಟುವ ಪ್ರಯತ್ನಗಳೊಂದಿಗೆ ಸಮೀಕರಿಸುವುದು:**

6.6.0 ಸಂಕೀರ್ಣವಾದ ಜೀತ ಸಮಸ್ಯೆಯ ನಿರ್ಮೂಲನೆಗೆ ಸರ್ವಾಂಗೀಣ ದೃಷ್ಟಿಯ ಅವಶ್ಯಕತೆಯಿದ್ದು ಅದು ಹಲವಾರು ರೀತಿಯ ಪ್ರಯತ್ನಗಳನ್ನು ಒಳಗೊಂಡಿರಬೇಕು. ಪುನರ್ವಸತಿ ಪ್ರಯತ್ನವು ಭಾಗಶ: ಆಗಿರಬಾರದು ಅಥವಾ ಜೀತ ಸಮಸ್ಯೆಯ ಹೊರ ಲಕ್ಷಣಗಳನ್ನು ಮಾತ್ರ ಉದ್ದೇಶಿಸಬಾರದು. ಬದಲು ಅದು ಅಮೂಲಾಗ್ರ ಪ್ರಯತ್ನವಾಗಿದ್ದು ಇಡೀ ಸಮಸ್ಯೆಯ ಬೇರಿಗೆ ಚಿಕಿತ್ಸೆ ನೀಡುವಂತಿರಬೇಕು.

ಈ ದೃಷ್ಟಿಯನ್ನಿಟ್ಟುಕೊಂಡು ಜೀತ ಸಮಸ್ಯೆಗೆ ಸಂಬಂಧವಿರುವ ಇತರ ಸಮಸ್ಯೆಗಳನ್ನು ಎತ್ತಿಕೊಳ್ಳಬೇಕು ಮತ್ತು ಜೀತಕ್ಕೆ ಅನ್ವಯವಾಗುವ ಎಲ್ಲಾ ಹಕ್ಕುಗಳನ್ನು ಪಡೆಯುವಂತೆ ನೋಡಿಕೊಂಡರೆ ಜೀತ ಪದ್ಧತಿಯನ್ನು ಪೂರ್ತಿಯಾಗಿ ತೊಡೆದು ಹಾಕಬಹುದು. ಆ ಹಕ್ಕುಗಳು ಈ ಕೆಳಗಿನಂತಿರುವುವು: ಶಿಕ್ಷಣದ ಹಕ್ಕು ಮತ್ತು 18 ವರ್ಷ ಅಥವಾ 10ನೇ ತರಗತಿವರೆಗೆ ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣ; ಸಂಪೂರ್ಣ ಸಾಕ್ಷರತೆ; ಕೆಲಸದ ಹಕ್ಕು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನ; ಕನಿಷ್ಟ ಮತ್ತು ಸಮಾನ ವೇತನ; ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಸೂದೆ 2002 ಹಾಗೂ ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಮಸೂದೆ 2003 ಇವುಗಳನ್ನು ಜಾರಿಗೆ ತರುವುದು; ಭೂಸುಧಾರಣೆ ಕಾನೂನಿನಡಿ ಕ್ರಮ ಕೈಗೊಂಡು ಹೆಚ್ಚುವರಿ ಭೂಮಿಯನ್ನು ಭೂರಹಿತ ಕೃಷಿಕಾರ್ಮಿಕರಿಗೆ ಹಂಚುವುದು; ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪ್ರತಿನಿಧಿಸುವುದು ಮತ್ತು ಮಾಹಿತಿ ಹಕ್ಕು ಚಲಾಯಿಸುವುದು; ಆಹಾರದ ಹಕ್ಕು ಮತ್ತು ಶುದ್ಧ ಕುಡಿಯುವ ನೀರಿನ ಹಕ್ಕು; ವಸತಿ ಹಕ್ಕು ಮತ್ತು ಆರೋಗ್ಯದ ಹಕ್ಕು.

ಭಾರತ ಸರ್ಕಾರದ ಕಾರ್ಮಿಕ ಇಲಾಖೆ 1982ರಲ್ಲಿ ಕಳುಹಿಸಿದ "ಬಿಡುಗಡೆ ಹೊಂದಿದ ಜೀತದಾಳುಗಳ ಪುನರ್ವಸತಿಗೆ ನೀಲಿನಕ್ಷೆ" ಎಂಬ ಸುತ್ತೋಲೆಯಲ್ಲಿ ಸೂಚಿಸಿರುವ 15 ಅಂಶಗಳ ಕಾರ್ಯಕ್ರಮಗಳು ಜೀತದಾಳುಗಳ ಪುನರ್ವಸತಿಯಲ್ಲಿ ಬೇರೆಬೇರೆ ಇಲಾಖೆಗಳ ಒಟ್ಟುಗೂಡುವಿಕೆ/ಒಮ್ಮುಖತೆಯ ಅವಶ್ಯಕತೆಯನ್ನೂ ಸಮಗ್ರ ದೃಷ್ಟಿಕೋನದ ಪ್ರಾಮುಖ್ಯತೆಯನ್ನೂ ಎತ್ತಿ ತೋರಿಸುತ್ತವೆ ("ನೀಲಿನಕ್ಷೆ", ಅನುಸೂಚಿ 9.5 ನೋಡಿ). ಆ 15 ಅಂಶಗಳ ಕಾರ್ಯಕ್ರಮಗಳು ಈ ರೀತಿ ಇವೆ:

1) ಮನೆ ನಿವೇಶನ ಮತ್ತು ಕೃಷಿಯೋಗ್ಯ ಭೂಮಿಯ ಹಂಚಿಕೆ
2) ಮೊದಲೇ ಒಡೆತನದಲ್ಲಿ ಇದ್ದ ಮತ್ತು ಹೊಸದಾಗಿ ಮಂಜೂರುಗೊಳಿಸಿದ ಭೂಮಿಯ ಅಭಿವೃದ್ಧಿ. ಇದರಲ್ಲಿ ನೀರಾವರಿ ಸೌಲಭ್ಯಗಳನ್ನೂ ಸೇರಿಸಿಕೊಳ್ಳಬೇಕು.
3) ಕಡಿಮೆ ವೆಚ್ಚದಲ್ಲಿ ವಸತಿ ಸೌಕರ್ಯಗಳು
4) ವ್ಯವಸಾಯ
5) ದಿನನಿತ್ಯ ಖರ್ಚಿಗೆ ಮತ್ತಿತರ ಅವಶ್ಯಕತೆಗಳಿಗೆ ಸಾಲ ಸೌಲಭ್ಯ
6) ತೋಟಗಾರಿಕೆ
7) ಪಶು ಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಣೆ, ಹಂದಿ ಸಾಕಣೆ, ಮೇವು ಕೃಷಿ ಇತ್ಯಾದಿ
8) ಹೊಸ ಕೌಶಲ್ಯಗಳನ್ನು ಪಡೆಯಲು ಮತ್ತು ಅಭಿವೃದ್ಧಿ ಪಡಿಸಲು ತರಬೇತಿ – ಟ್ರೈಸಂನ ಪಾತ್ರ
9) ಸಾಂಪ್ರದಾಯಿಕ ಕಲೆ ಮತ್ತು ಕಸುಬುಗಳು
10) ಕೂಲಿ ಕೆಲಸ ಒದಗಿಸುವುದು ಮತ್ತು ಕನಿಷ್ಟ ವೇತನ ಕೊಡಿಸುವುದು
11) ಸಣ್ಣ ಪ್ರಮಾಣದ ಕಾಡು ಉತ್ಪನ್ನಗಳ ಶೇಖರಣೆ ಮತ್ತು ಪರಿಷ್ಕರಣೆ
12) ಆರೋಗ್ಯ, ಚಿಕಿತ್ಸೆ ಸೌಲಭ್ಯ ಮತ್ತು ನೈರ್ಮಲ್ಯ
13) ಜೀವನೋಪಾಯದ ಅಗತ್ಯ ವಸ್ತುಗಳ ಪೂರೈಕೆ
14) ಜೀತದಾಳುಗಳ ಮಕ್ಕಳಿಗೆ ಶಿಕ್ಷಣ
15) ನಾಗರಿಕ ಹಕ್ಕುಗಳ ರಕ್ಷಣೆ

6.6.1 ಶಿಕ್ಷಣದ ಹಕ್ಕು ಮತ್ತು ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣ
ರಾಜ್ಯ ಸರ್ಕಾರವು ತ್ವರಿತವಾಗಿ ಉತ್ತಮ ಮಟ್ಟದ ಶಿಕ್ಷಣವನ್ನು ಹಿರಿಯ ಪ್ರಾಥಮಿಕ ಹಂತದವರೆಗೆ ಸಿಗುವಂತೆ ಖಾತ್ರಿ
ಪಡಿಸಬೇಕು. ಗುಣಾತ್ಮಕ ಶಿಕ್ಷಣದಲ್ಲಿ ಈ ಎಲ್ಲಾ ಅಂಶಗಳೂ ಸೇರಿರಬೇಕು: ಶಾಲೆ ಸೇರಲು ಮುಕ್ತ ಅವಕಾಶ, ಕಿರಿಯ
ಪ್ರಾಥಮಿಕ ಶಾಲೆಯಲ್ಲಿ ಕನಿಷ್ಠ ಇಬ್ಬರು ಉಪಾಧ್ಯಾಯರು ಇರುವುದು, ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನಿಷ್ಠ ನಾಲ್ಕು
ಉಪಾಧ್ಯಾಯರು ಇರುವುದು, ಪ್ರತಿ ಉಪಾಧ್ಯಾಯರಿಗೆ ಒಂದು ಶಾಲಾ ಕೊಠಡಿ ಇರುವುದು ಮತ್ತು ಉಪಾಧ್ಯಾಯರಿಗೆ
ಪ್ರತಿ ವರ್ಷ 20 ದಿನಗಳ ತರಬೇತಿ ನೀಡುವುದು. ಶಿಕ್ಷಣವು ಅರಿವು ಹಾಗೂ ಘನತೆ ತುಂಬಿದ ಜೀವನಕ್ಕೆ ದಾರಿ; ಕೇವಲ
ಉದ್ಯೋಗಕ್ಕಲ್ಲ ("ಫಲಿತಾಂಶ" ನಂ.24, ಅನುಸೂಚಿ 9.2 ನೋಡಿ).
ಕರ್ನಾಟಕ ಸರ್ಕಾರವು ಬಾಲಕಾರ್ಮಿಕ ಪದ್ಧತಿಯನ್ನು 2007ರೊಳಗೆ ನಿರ್ಮೂಲನೆ ಮಾಡಲು ಹಾಕಿದ್ದ ಮಾರ್ಗನಕ್ಷೆಯ
ಪ್ರಕಾರ ಕಾರ್ಮಿಕ ಇಲಾಖೆಯು ಬಿಡುಗಡೆಗೊಳಿಸಿದ ಬಾಲ ಕಾರ್ಮಿಕರ ಶೈಕ್ಷಣಿಕ ಪುನರ್ವಸತಿಗೆ ಬೇಕಾದ ಹೆಚ್ಚುವರಿ
ಪ್ರಾಥಮಿಕ ಶಾಲೆಗಳು ಮತ್ತು ವಸತಿ ನಿಲಯಗಳನ್ನು ಖಚಿತಪಡಿಸಿ ನಡೆಸಿಕೊಂಡು ಹೋಗಬೇಕು. ವಸತಿನಿಲಯಗಳು
ಮಕ್ಕಳಿಗೆ ಪ್ರೋತ್ಸಾಹ ಕೊಡುವ ವಾತಾವರಣವನ್ನು ನಿರ್ಮಿಸುವಂತೆ ವಸತಿ ನಿಲಯ ಪಾಲಕರಿಗೆ ಸೂಕ್ತ ತರಬೇತಿ
ನೀಡಬೇಕು ("ಫಲಿತಾಂಶ" ನಂ 15, ಅನುಸೂಚಿ 9.2 ನೋಡಿ).

6.6.2 ಬಿಡುಗಡೆಗೊಳಿಸಿದ ವಯಸ್ಕ ಜೀತದಾಳುಗಳಿಗೆ ಸಾಕ್ಷರತೆಯನ್ನು ನೀಡುವುದು
ಬಹುತೇಕ ಎಲ್ಲಾ ಜೀತದಾಳುಗಳು ದಲಿತ, ಗಿರಿಜನ ಹಾಗೂ ಹಿಂದುಳಿದ ಜಾತಿಗಳಲ್ಲಿಯ ತೀರ ಬಡ ಕುಟುಂಬಗಳಿಗೆ
ಸೇರಿದವರಾಗಿದ್ದು ಅವರು ಒಂದೇ ಅನಕ್ಷರಸ್ಥರಾಗಿರುತ್ತಾರೆ ಅಥವಾ ಅರೆ ಅಕ್ಷರಸ್ಥರಾಗಿರುತ್ತಾರೆ. ಪುನರ್ವಸತಿಯಲ್ಲಿ
ಜೀತದಾಳುಗಳನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮವೂ ಸೇರಿರಬೇಕು. ವಯಸ್ಕರ ಶಿಕ್ಷಣ ಇಲಾಖೆಯ ಕಾರ್ಯ
ಕ್ರಮಗಳನ್ನು ಜೀತದಾಳುಗಳು ಅಕ್ಷರಸ್ಥರನ್ನಾಗಿ ಮಾಡುವಂತೆ ಬಳಸಬೇಕು.

6.6.3 ಕನಿಷ್ಠ ಮತ್ತು ಸಮಾನ ವೇತನಗಳನ್ನು ಅನುಷ್ಠಾನಕ್ಕೆ ತರುವುದು
ಕನಿಷ್ಠ ಮತ್ತು ಸಮಾನ ವೇತನಗಳು ಅಸಂಘಟಿತ ವಲಯದಲ್ಲಿ ಸಿಗದಿರುವುದರಿಂದಲೇ ಜೀತವು ಮುಂದುವರಿಯುತ್ತಿದೆ.
ಕನಿಷ್ಠ ಮತ್ತು ಸಮಾನ ವೇತನಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತಂದರೆ ಜೀತ ಪದ್ಧತಿಯು ಹೇಳ ಹೆಸರಿಲ್ಲದಂತೆ
ಆಗುವುದು.

6.6.4 ಕೆಲಸದ ಹಕ್ಕು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಆಧುನಿಕ ಸಮಾಜದಲ್ಲಿ ಪ್ರತಿ ನಾಗರಿಕನಿಗೆ ಉದ್ಯೋಗ ಲಭ್ಯವಂತಾಗುವುದು ಮತ್ತು ನಿರುದ್ಯೋಗಿಗೆ ಸೂಕ್ತ ಸಾಮಾಜಿಕ
ಭದ್ರತೆ ಸಿಗುವಂತಾಗುವುದು ಆ ವ್ಯಕ್ತಿಯ ಹಕ್ಕು. 2006ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ
ಯೋಜನೆ ಅಸಂಘಟಿತ ವಲಯದ ಕಾರ್ಮಿಕರ ಕೆಲಸದ ಹಕ್ಕನ್ನು ರಕ್ಷಿಸುತ್ತದೆ. ಆ ಯೋಜನೆ ಮೊದಲ ವರ್ಷದಲ್ಲಿ
ದೇಶದ 200 ಜಿಲ್ಲೆಗಳಿಗೆ ಸೀಮಿತವಾಗಿದ್ದು, 2008-09ನೇ ಸಾಲಿನಿಂದ ಇಡೀ ದೇಶಾದ್ಯಂತ ಅನುಷ್ಠಾನಗೊಳ್ಳುತ್ತಿದೆ.
ಉದ್ಯೋಗ ಖಾತರಿಯಿಂದ ಜೀತವನ್ನು ಪರಿಣಾಮಕಾರಿಯಾಗಿ ನಿಲ್ಲಿಸಬಹುದು. ಉದ್ಯೋಗ ಖಾತರಿ ಯೋಜನೆಯಡಿ
ಯಲ್ಲಿಯ ಕಾರ್ಯಗಳನ್ನು ಚಾಚೂತಪ್ಪದೇ ಮಧ್ಯವರ್ತಿಗಳಿಲ್ಲದೇ ನೇರವಾಗಿ ಬಿಡುಗಡೆಹೊಂದಿದ ಜೀತದಾಳುಗಳು
ಮತ್ತು ಭೂರಹಿತ ಕೃಷಿಕಾರ್ಮಿಕರ ಸಂಘಟನೆಗಳ ಮೂಲಕವೂ ಅನುಷ್ಠಾನಗೊಳಿಸಬೇಕು.

6.6.5 ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಸೂದೆ 2002 ಹಾಗೂ ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಮಸೂದೆ
2003 ಇವುಗಳನ್ನು ಜಾರಿಗೆ ತರುವುದು
ಅಸಂಘಟಿತ ಕಾರ್ಮಿಕರಿಗೆ ಸೂಕ್ತ ಕಾನೂನುಗಳ ರಕ್ಷಣೆ ಇಲ್ಲದಿರುವುದರಿಂದ ಜೀತ ಪದ್ಧತಿ ಮತ್ತು ಬಾಲಕಾರ್ಮಿಕ
ಪದ್ಧತಿಗಳು ಮುಂದುವರಿಯುತ್ತಿವೆ. ಅಸಂಘಟಿತ ವಲಯದ ಕಾರ್ಮಿಕರ ಉದ್ಯೋಗವನ್ನು ಸಕ್ರಮಗೊಳಿಸಲು, ಜೀವನೋ
ಪಾಯದ ಹಕ್ಕುಗಳನ್ನು ಖಾತ್ರಿಗೊಳಿಸಲು, ಕೆಲಸದ ನಿಯಮಗಳು, ಕನಿಷ್ಠ ವೇತನ, ಹೆರಿಗೆ ಭತ್ಯೆ, ಕಾರ್ಮಿಕರಿಗೆ ಅನಾನು
ಕೂಲಗಳಾದರೆ ಪರಿಹಾರ, ಆರೋಗ್ಯ ವಿಮೆ, ಭವಿಷ್ಯ ನಿಧಿ, ಪಿಂಚಣಿ ಮತ್ತು ನಿರುದ್ಯೋಗಕ್ಕೆ ಸಹಾಯಧನ ಇವುಗಳನ್ನು
ಒಳಗೊಂಡ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣಗಳನ್ನು ನೋಡಿಕೊಳ್ಳುವಂತೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ವ್ಯಾಪಕ
ಕಾನೂನುಗಳು ಜಾರಿಗೊಳ್ಳಬೇಕು (ಫಲಿತಾಂಶ ನಂ.29, ಅನುಸೂಚಿ 9.2 ನೋಡಿ). ಆ ಸಂಬಂಧ ರಾಜ್ಯ ಮತ್ತು ರಾಷ್ಟ್ರ
ಮಟ್ಟದಲ್ಲಿ ಈಗಾಗಲೇ ಸಿದ್ಧಪಡಿಸಿರುವ ಕರಡು ಮಸೂದೆಗಳು 2005ರ ಮೇ 5ರಂದು ಅಸಂಘಟಿತ ಕ್ಷೇತ್ರದ ಕಾರ್ಮಿಕರ
ರಾಷ್ಟ್ರೀಯ ಆಂದೋಲನ ಸಮಿತಿಯ ಅಧ್ಯಕ್ಷರಾಗಿರುವ ನಿವೃತ್ತ ನ್ಯಾಯಮೂರ್ತಿ ಶ್ರೀ.ವಿ.ಆರ್.ಕೃಷ್ಣಅಯ್ಯರ್ ರವರು
ಲೋಕಸಭೆಯ ಸಭಾಪತಿಗಳಿಗೆ ಸಲ್ಲಿಸಿದ ಮನವಿಯಲ್ಲಿಯ ವಿಷಯಗಳನ್ನು ಅಂಗೀಕರಿಸುವುದು ಸೂಕ್ತ.

6.6.6 ಭೂಸುಧಾರಣೆ ಕಾಯ್ದೆಯಡಿ ಕ್ರಮ ಕೈಗೊಂಡು ಹೆಚ್ಚುವರಿ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಹಂಚುವುದು
ಗ್ರಾಮೀಣ ಪ್ರದೇಶದ ಜೀತದಾಳುಗಳಲ್ಲಿ ಹೆಚ್ಚಿನವರು ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವವರು ಮತ್ತು ಕೃಷಿ ಸಂಬಂಧಿತ
ಎಲ್ಲಾ ಕೆಲಸಗಳನ್ನು ಬಲ್ಲವರು. ಒಂದು ರೀತಿಯಲ್ಲಿ ನಿಜವಾಗಿ ಭೂಮಿಯನ್ನು ಉಳುವವರೇ ಅವರು. ಆದ್ದರಿಂದ ಭೂ
ಸುಧಾರಣೆಗಳ ಮೂಲ ಆಶಯವಾದ "ಉಳುವವನಿಗೇ ಭೂಮಿ" ಎಂಬ ಧ್ಯೇಯ ವಾಕ್ಯದ ಪ್ರಕಾರ ಜೀತದಾಳು ಸತತ
ವಾಗಿ ಉಳುತ್ತಿದ್ದ ಭೂಮಿ ಅವರಿಗೇ ಸೇರಬೇಕು. ಇದು ಕಷ್ಟಸಾಧ್ಯವಾದ್ದರಿಂದ ಈಗಿರುವ ಭೂಸುಧಾರಣೆ ಕಾಯ್ದೆ
ಯನ್ನಾದರೂ ಸರಿಯಾಗಿ ಅನುಷ್ಠಾನಕ್ಕೆ ತಂದು ಭೂ ಮಿತಿಗಿಂತ ಹೆಚ್ಚು ಹೊಂದಿರುವ ಭೂಮಿಯನ್ನು ಬಿಡುಗಡೆಗೊಳಿಸಿದ
ಜೀತದಾಳುಗಳಿಗೆ ಆದ್ಯತೆ ಮೇರೆಗೆ ನೀಡಬೇಕು.

6.6.7 ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪ್ರತಿನಿಧಿಸುವುದು ಮತ್ತು ಮಾಹಿತಿ ಹಕ್ಕು ಚಲಾಯಿಸುವುದು
ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ನೀಡಬೇಕು. ಸಾಧ್ಯವಾದರೆ
ಅವರು ಪಂಚಾಯತಿಗಳಲ್ಲಿ ಪ್ರತ್ಯೇಕವಾಗಿ ಗ್ರಾಮ ಪಂಚಾಯತಿಗಳಲ್ಲಿ ಸದಸ್ಯರಾಗುವಂತಾಗಬೇಕು. ಅವರು ಗ್ರಾಮ ಸಭೆ

ಮತ್ತು ವಾರ್ಡ್ ಸಭೆಗಳಲ್ಲಿ ಭಾಗವಹಿಸಿ ಗ್ರಾಮ ಪಂಚಾಯತಿಯಿಂದ ಸಿಗುವ ಸೌಲಭ್ಯಗಳನ್ನೆಲ್ಲಾ ಪಡೆಯುವಂತಾಗಬೇಕು. ಅದಕ್ಕಾಗಿ ರಾಜ್ಯದ ಮತ್ತು ದೇಶದ ಮಾಹಿತಿ ಹಕ್ಕಿನ ಕಾಯ್ದೆಯ ಪ್ರಯೋಜನವನ್ನು ಅವರು ಪಡೆಯಬೇಕು.

**6.6.8 ಆಹಾರದ ಹಕ್ಕು**

ಆಹಾರದ ಅವಶ್ಯಕತೆಯನ್ನು ಪೂರೈಸಲಿಕ್ಕಾಗಿಯೇ ದುರ್ಬಲ ವರ್ಗದ ಹೆಚ್ಚಿನವರು ಜೀತದ ಬಂಧನಕ್ಕೆ ಒಳಗಾಗುತ್ತಾರೆ. ಜೀತದಿಂದ ಬಿಡುಗಡೆಗೊಳಿಸುವಾಗ ಅವರಿಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ಸಿಗಬೇಕಾಗಿದ್ದ ಪಡಿತರ ಚೀಟಿ ಕೊಡಿಸುವುದರಿಂದ ಅವರ ಆಹಾರ ಭದ್ರತೆಯನ್ನು ಸ್ವಲ್ಪ ಮಟ್ಟಿಗಾದರೂ ರಕ್ಷಿಸಬಹುದು.

ಕೇಂದ್ರ ಸರ್ಕಾರದ ಕೂಲಿಗಾಗಿ ಕಾಳು ಯೋಜನೆಯಡಿ, ಜೀತವಿಮುಕ್ತರುಗಳಿಗೆ ಕೆಲಸ ಒದಗಿಸಿ, ಕೂಲಿಯೊಂದಿಗೆ ಸರಿಯಾದ ಪ್ರಮಾಣದಲ್ಲಿ ಆಹಾರ ಕಾಳುಗಳೂ ಸಿಗುವಂತೆ ನೋಡಿಕೊಳ್ಳಬಹುದು.

**6.6.9 ಶುದ್ಧ ಕುಡಿಯುವ ನೀರಿನ ಹಕ್ಕು**

ಹಳ್ಳಿಗಳಿಗೆ ಇರುವ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ ಬಿಡುಗಡೆಗೊಳಿಸಿದ ಜೀತದಾಳು ಕುಟುಂಬಗಳಿಗೆ ಆದ್ಯತೆ ಮೇಲೆ ಕುಡಿಯುವ ನೀರು ಸಿಗುವಂತಾಗಬೇಕು.

**6.6.10 ವಸತಿ ಹಕ್ಕು**

ಹೆಚ್ಚಿನ ಜೀತದಾಳುಗಳಿಗೆ ಸೂಕ್ತ ವಸತಿ ಸೌಕರ್ಯಗಳಿರುವುದಿಲ್ಲ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ದಿಂದ ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವಾಗ ಸೂಕ್ತ ವಸತಿ ಸೌಕರ್ಯ ಸಿಗುವಂತೆ ನೋಡಿಕೊಳ್ಳು ವುದು ಆದ್ಯತೆ ಮೇಲೆ ಆಗಬೇಕಾದ ಕೆಲಸ. ಜೀತದಾಳುಗಳಿಗೆ ನೀಡಿದ ವಸತಿ ನಿವೇಶನ ಮತ್ತು ವಸತಿಗಳನ್ನು ಗಂಡ ಹೆಂಡಿರ ಜಂಟಿ ಖಾತೆಯಲ್ಲಿ ನೋಂದಾಯಿಸಬೇಕು.

**6.6.11 ಆರೋಗ್ಯದ ಹಕ್ಕು**

ಕಡಿಮೆ ಖರ್ಚಿನಲ್ಲಿ ಆರೋಗ್ಯ ಚಿಕಿತ್ಸೆಗಳು ಒದಗದಿರುವುದರಿಂದಲೇ ಆ ಚಿಕಿತ್ಸೆಗಳ ಹಣ ಪೂರೈಸಲು ಕೆಲವರು ಜೀತಕ್ಕೆ ಸೇರುತ್ತಾರೆ. ಬಡತನ ರೇಖೆಯಿಂದ ಕೆಳಗಿರುವವರು ಮತ್ತು ಬಿಡುಗಡೆ ಹೊಂದಿದ ಜೀತದಾಳುಗಳು ಹಾಗೂ ಅವರ ಕುಟುಂಬಗಳು ಸಹಕಾರಿ ಇಲಾಖೆಯ ಯಶಸ್ವಿನಿ ಯೋಜನೆಯಿಂದ (ಗ್ರಾಅಪ.13.ಆರ್‌ಬಿಎಲ್.2003 ದಿನಾಂಕ:17-09-04, ಅನುಸೂಚಿ 9.6 ನೋಡಿ) ಮತ್ತು ಭಾರತೀಯ ಜೀವ ವಿಮಾ ನಿಗಮದ ಜನಶ್ರೀ ವಿಮಾ ಯೋಜನೆಯಿಂದ (ಗ್ರಾಅಪ.10. ಎಸ್‌ಜೆವೈ.2006 ದಿನಾಂಕ:31-03-04, ಅನುಸೂಚಿ 9.6 ನೋಡಿ) ಆರೋಗ್ಯ ಚಿಕಿತ್ಸಾ ಸೌಲಭ್ಯ ಪಡೆಯಬಹುದು.

**6.7 ಪುನರ್ವಸತಿ ಸೌಲಭ್ಯ ಕಲ್ಪಿಸಲು ಇರಬೇಕಾದ ವ್ಯವಸ್ಥೆಗಳು**

6.7.0 ಪರಿಣಾಮಕಾರಿಯಾದ ಪುನರ್ವಸತಿ ಸೌಲಭ್ಯಗಳನ್ನು ಆಯೋಜಿಸಲು ಜೀತದಾಳುಗಳ ಬಿಡುಗಡೆಯಾದ ತಕ್ಷಣ ಅವರ ಮತ್ತು ಅವರ ಕುಟುಂಬದ ಪರಿಸ್ಥಿತಿಗಳು ಮತ್ತು ಅವಶ್ಯಕತೆಗಳು, ಅವರ ಸಾಮರ್ಥ್ಯಗಳು ಮತ್ತು ಕೌಶಲ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಅವರಿಗೆ ಜಾಗೃತಿ ಶಿಬಿರ ಮತ್ತು ತರಬೇತಿ ಗಳನ್ನು ನಡೆಸಬಹುದು. ಬಿಡುಗಡೆ ಹೊಂದಿದ ಜೀತದಾಳುಗಳ ಸಂಘಟನೆಗಳಿರದಿದ್ದರೆ ಸರ್ಕಾರೇತರ ಸಂಸ್ಥೆಗಳು ಅಥವಾ ದಲಿತ ಮತ್ತು ಗಿರಿಜನರ ಸಂಘಟನೆಗಳ ನೆರವಿನಿಂದ ಅವರ ಒಂದು ಸಂಘಟನೆಯನ್ನು ಕಟ್ಟಬಹುದು. ಅದು ಸ್ವಸಹಾಯ ಗುಂಪಾಗಬಹುದು, ಕಾರ್ಮಿಕ ಒಕ್ಕೂಟವಾಗಬಹುದು, ಸಹಕಾರ ಸಂಘವಾಗಬಹುದು ಅಥವಾ ಸ್ವಯಂ ಸೇವಾ ಸಂಸ್ಥೆ ಯಾಗಬಹುದು. ಸಂಬಂಧಪಟ್ಟ ಬೇರೆ ಬೇರೆ ಇಲಾಖೆಗಳು ಮತ್ತು ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು, ಬಿಡುಗಡೆ ಹೊಂದಿದ ಜೀತದಾಳುಗಳು, ದಲಿತರು ಮತ್ತ ಗಿರಿಜನರ ಸಂಘಟನೆಗಳ ಮುಖಂಡರನ್ನು ಸೇರಿಸಿ ಮೇಲೆ ವಿವರಿಸಿದ ಸಮಗ್ರ, ಒಗ್ಗೂಡುವಿಕೆಯ, ಒಮ್ಮುಖ ಮತ್ತು ಸರ್ವಾಂಗೀಣ ದೃಷ್ಟಿಗಳು ಮತ್ತು ಸಾಲ ಅವಶ್ಯಕತೆ ಗಳನ್ನು ಗಮನದಲ್ಲಿಟ್ಟು ಅರ್ಥಪೂರ್ಣ ಪುನರ್ವಸತಿ ಸೌಲಭ್ಯಗಳನ್ನು ರೂಪಿಸಬೇಕು.

6.7.1 ಇಡೀ ರಾಜ್ಯದಲ್ಲಿ ಜೀತದಾಳುಗಳನ್ನು ಮೂರು ವರ್ಷಕ್ಕೆ ಒಂದು ಸಾರಿಯಂತೆ ನಿಯತಕಾಲಿಕವಾಗಿ ಗುರುತಿಸಿದ ನಂತರ, ರಾಜ್ಯ ಮಟ್ಟದ ಉನ್ನತ ಅಧಿಕಾರ ಸಮಿತಿ ಸಭೆಯನ್ನು ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವ ದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳು ಕರೆಯಬೇಕು. ಬೇರೆ ಬೇರೆ ಇಲಾಖೆಗಳ ಕಾರ್ಯದರ್ಶಿಗಳು, ಪ್ರಮುಖ ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಬಿಡುಗಡೆ ಹೊಂದಿದ ಜೀತದಾಳುಗಳ ಸಂಘಟನೆಗಳ ಮುಖಂಡರು ಆ ಸಮಿತಿಯನ್ನೊಳಗೊಂಡಿರುತ್ತಾರೆ. ಬೇರೆ ಬೇರೆ ಇಲಾಖೆಗಳ ಕಾರ್ಯದರ್ಶಿಗಳು ತಮ್ಮ ತಮ್ಮ ಇಲಾಖೆಯ ಕೆಳಮಟ್ಟದ ಅಧಿಕಾರಿಗಳು ಬಿಡುಗಡೆ ಹೊಂದಿದ ಜೀತದಾಳು ಗಳಿಗೆ ಸಮಗ್ರ ಒಗ್ಗೂಡುವಿಕೆಯ ಒಮ್ಮುಖ ಮತ್ತು ಸರ್ವಾಂಗೀಣ ದೃಷ್ಟಿಗಳನ್ನು ಗಮನದಲ್ಲಿಟ್ಟು ಅರ್ಥಪೂರ್ಣ ಪುನರ್ವಸತಿ ಸೌಲಭ್ಯಗಳನ್ನು ರೂಪಿಸುವಂತೆ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ಸಹಕಾರ ನೀಡಲು ಆದೇಶಿಸಬೇಕು. ರಾಜ್ಯ ಮಟ್ಟದ ಉನ್ನತ ಅಧಿಕಾರ ಸಮಿತಿಯು ಕನಿಷ್ಠ ಆರು ತಿಂಗಳಿಗೆ ಒಂದು ಸಾರಿಯಾದರೂ ಸಭೆ ಸೇರಬೇಕು.

**6.7.2. ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳಿಂದ ಪುನರ್ವಸತಿ ಯೋಜನೆಯ ತಯಾರಿ**

1) ಗ್ರಾಮ ಪಂಚಾಯತಿ ಕಾರ್ಯದರ್ಶಿಯು ತಮಗೆ ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿಯಿಂದ ಜೀತದಾಳುಗಳ ಬಿಡುಗಡೆ ಪತ್ರ ತಲುಪಿದ ತಕ್ಷಣ, ಅಂದರೆ 15 ದಿನಗಳೊಳಗಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ದಿನಾಂಕ:08-11-2004ರ ಸುತ್ತೋಲೆಯಂತೆ ಗ್ರಾಮ ಪಂಚಾಯತಿಯ ಒಂದು ವಿಶೇಷ ಸಭೆಯನ್ನು ಕರೆಯಬೇಕು. ಮೇಲೆ ಸೂಚಿಸಿದ ಎಲ್ಲಾ ವ್ಯಕ್ತಿಗಳ ಜೊತೆಗೆ, ಅಂದರೆ ಬೇರೆ ಬೇರೆ ಇಲಾಖೆಯ ಅಧಿಕಾರಿಗಳು, ವಿವಿಧ ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾಗೇತರ ಸಂಸ್ಥೆಗಳು ಮತ್ತು ಬಿಡುಗಡೆ ಹೊಂದಿದ ಜೀತದಾಳುಗಳ ಸಂಘಟನೆಗಳು, ದಲಿತರು ಮತ್ತು ಗಿರಿಜನರ ಸಂಘಟನೆಗಳ ಮುಖಂಡರ ಜೊತೆಗೆ ಬಿಡುಗಡೆ ಹೊಂದಿದ ಜೀತದಾಳುಗಳು ಆ ಸಭೆಯಲ್ಲಿರಬೇಕು. ಬಿಡುಗಡೆ ಹೊಂದಿದ ಜೀತದಾಳುಗಳ ಅಭಿಪ್ರಾಯಗಳು ಮತ್ತು ಅವರ ಅವಶ್ಯಕತೆಗಳನ್ನು ಕೇಳಿ ತಿಳಿದುಕೊಂಡು ಇತರೆ

ಸದಸ್ಯರ ಸಲಹೆಗಳನ್ನು ಪಡೆದು ಯೋಜನೆಯೊಂದನ್ನು ತಯಾರಿಸಬೇಕು. ಯೋಜನೆಯೊಂದನ್ನು ತಯಾರಿಸುವಾಗ ಕೇಪುಯೋಯ 19,000 ರೂಪಾಯಿಗಳ ಜೊತೆಗೆ ಎಸ್‌ಜಿಎಸ್‌ವೈನಡಿ 30000 ರೂಪಾಯಿಗಳ ಸಹಾಯಧನದ ಜೊತೆಗೆ ಸಾಲವನ್ನೂ ಸೇರಿಸಿಕೊಳ್ಳುವುದು ಸೂಕ್ತ. ಇತರೆ ಇಲಾಖೆಗಳಿಂದ ಒದಗಿಸಬಹುದಾದ ಯೋಜನೆಗಳನ್ನೂ ಗುರುತಿಸಿ ಅವುಗಳ ಪ್ರಯೋಜನವು ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಸಿಗುವಂತೆ ಮಾಡಬೇಕು. ಬೇರೆ ಸಾಲದ ಅವಶ್ಯಕತೆಗಳನ್ನು ಗಮನಿಸಿ ಹಣಕಾಸು ಸಂಸ್ಥೆಗಳಿಂದ ಸಹಾಯಧನದೊಂದಿಗಿನ ಸಾಲ ಪಡೆಯುವ ಯೋಜನೆ ಹಾಕಬಹುದು.

2) ಕೇಪುಯೋ– ಪುನರ್ವಸತಿ ಯೋಜನೆಯ 19000 ರೂಪಾಯಿಗಳ ಜೊತೆ ಕಡ್ಡಾಯವಾಗಿ ಪರಿಗಣಿಸಲೇಬೇಕಾದ ಕೆಲವು ಪ್ರಮುಖ ಯೋಜನೆಗಳು ಈ ಕೆಳಗಿನಂತಿವೆ:

(1) ಎಸ್‌ಜಿಎಸ್‌ವೈ ಅಡಿಯಲ್ಲಿ ಹೆಚ್ಚುವರಿ 30,000 ರೂಪಾಯಿಗಳ ಸಹಾಯಧನದೊಂದಿಗಿನ ಸಾಲವನ್ನು ವೈಯಕ್ತಿಕವಾಗಿ ಅಥವಾ ಸ್ವ ಸಹಾಯ ಗುಂಪಿನ ಮೂಲಕ ನೀಡುವುದು.

(2) ಜೀತದಾಳುಗಳ ಪುನರ್ವಸತಿ ಸಹಾಯಧನ ಯೋಜನೆಯಡಿ ಪ್ರತಿ ತಿಂಗಳಿಗೆ 300 ರೂಪಾಯಿಯಂತೆ 24 ತಿಂಗಳುಗಳಿಗೆ ಮಂಜೂರು ಮಾಡುವುದು (ಸರ್ಕಾರಿ ಆದೇಶ ಸಂ:ಗ್ರಾಅಪ.15.ಆರ್‌ಬಿಎಲ್.2004 ದಿನಾಂಕ:21-01-2006, ಅನುಸೂಚಿ 9.6 ನೋಡಿ).

(3) ಮನೆ ನಿವೇಶನ ಮತ್ತು ಮನೆ ಕಟ್ಟಲು ಸಹಾಯಧನವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ ಒದಗಿಸಿಕೊಡುವುದು.

(4) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 100 ದಿನಕ್ಕೆ ಉದ್ಯೋಗ ಕಲ್ಪಿಸುವುದು ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಸ್‌ಜಿಆರ್‌ವೈ ಮತ್ತು ಕಂದಾಯ ಇಲಾಖೆಯ ಕೂಲಿಗಾಗಿ ಕಾಳು ಯೋಜನೆಯ ಮೂಲಕ ಕೆಲಸದ ಜೊತೆಗೆ ದವಸ ಧಾನ್ಯಗಳನ್ನು ಒದಗಿಸುವಂತೆ ನೋಡಿಕೊಳ್ಳಬೇಕು.

(5) ಸಹಕಾರ ಇಲಾಖೆಯ ಯಶಸ್ವಿನಿ ವಿಮೆ ಯೋಜನೆಯಡಿ ಆರೋಗ್ಯ ಸೌಲಭ್ಯ ಕಲ್ಪಿಸುವುದು. ಇದಕ್ಕಾಗಿ ಬಿಡುಗಡೆಗೊಳಿಸಿದ ಜೀತದಾಳುವಿಗೆ ಜಮೀನಿರಬೇಕು ಮತ್ತು ಸ್ಥಳೀಯ ಸಹಕಾರ ಸಂಘವೊಂದರಲ್ಲಿ ನೋಂದಾಯಿತರಾಗಿರಬೇಕು (ಸುತ್ತೋಲೆ ನಂ.ಗ್ರಾಅಪ.13.ಆರ್‌ಬಿಎಲ್ 2003 ದಿನಾಂಕ:17-09-2004, ಅನುಸೂಚಿ 9.6 ನೋಡಿ). ಈ ವಿಮೆ ಸೌಲಭ್ಯ ಲಭ್ಯವಿಲ್ಲದಿದ್ದರೆ ಭಾರತೀಯ ಜೀವ ವಿಮೆ ನಿಗಮದ ಜನಶ್ರೀ ವಿಮಾ ಯೋಜನೆಯಿಂದ ಪ್ರಯೋಜನ ಪಡೆಯಬಹುದು. ಇದಕ್ಕೆ ಎಸ್‌ಜಿಎಸ್‌ವೈನಿಂದ ಇಷ್ಟರವರೆಗೆ ಸೌಲಭ್ಯ ಪಡೆದ ಸ್ವ ಸಹಾಯ ಗುಂಪೊಂದರ ಸದಸ್ಯರಾಗಿರಬೇಕು ಅಥವಾ ಸರ್ಕಾರೇತರ ಸಂಸ್ಥೆ ಅಥವಾ ಬಿಡುಗಡೆಗೊಂಡ ಜೀತದಾಳುಗಳ ಸಂಘಟನೆ ಮೂಲಕವೂ ಪ್ರಯೋಜನ ಪಡೆಯಬಹುದು. ಅಭ್ಯರ್ಥಿಯು ವರ್ಷಕ್ಕೆ 100 ರೂಪಾಯಿಗಳನ್ನು ತೆರಬೇಕು (ಸುತ್ತೋಲೆ ನಂ.ಗ್ರಾಅಪ.10.ಎಸ್‌ಜೆವೈ.2006 ದಿನಾಂಕ: 31-03-2006, ಅನುಸೂಚಿ 9.6 ನೋಡಿ).

(6) ವಯಸ್ಕರ ಶಿಕ್ಷಣ ಇಲಾಖೆಯಿಂದ ಬಿಡುಗಡೆಗೊಳಿಸಿದ ಜೀತದಾಳುಗಳನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು.

(7) ಬಾಲ ಜೀತದಾಳುಗಳನ್ನು ಒಂದೇ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (NCLP) ಯ ದಿನದ ಸೇತು ಶಾಲೆ ಅಥವಾ ರಾಜ್ಯ ಬಾಲ ಕಾರ್ಮಿಕ ಯೋಜನೆ (SCLP) ಯ ವಸತಿ ಸೇತು ಶಾಲೆಯಲ್ಲಿ ಸೇರಿಸಿ ಒಂದು ವರ್ಷದ ನಂತರ ಮುಖ್ಯ ವಾಹಿನಿ ಶಾಲೆಗೆ ಸೇರುವಂತೆ ನೋಡಿಕೊಳ್ಳಬೇಕು.

(8) ನಮ್ಮ ಭೂಮಿ ನಮ್ಮ ತೋಟ ಯೋಜನೆಯಡಿ ಬಿಡುಗಡೆ ಹೊಂದಿದ ಜೀತದಾಳುವಿಗೆ ಎರಡು ತಲೆಮಾರಿನಿಂದ (ಅವರು ಮತ್ತು ಅವರ ತಂದೆ ತಾಯಿಗಳಿಂದ) ಭೂಮಿ ಇಲ್ಲದೇ ಇದ್ದರೆ ಅವರ ವಾಸಸ್ಥಳದ ಒಂದು ಕಿಲೊ ಮೀಟರ್ ಒಳಗಡೆ ಕೈತೋಟ ಮಾಡಲು ಐದು ಗುಂಟೆ ಕೃಷಿ ಯೋಗ್ಯ ಜಮೀನನ್ನು ಖರೀದಿಸಲು 6,000 ರೂಪಾಯಿಗಳನ್ನು ಮಂಜೂರು ಮಾಡುವುದು (ಸರ್ಕಾರದ ಆದೇಶ ಸಂ.ಗ್ರಾಅಪ.5.ಸ್ವಉಕಾ.2005, ಬೆಂಗಳೂರು ದಿನಾಂಕ:28-09-2005, ಅನುಸೂಚಿ 9.6 ನೋಡಿ).

(9) ಅನುಸೂಚಿತ ಜಾತಿ ಮತ್ತು ಜನಾಂಗ (ಅಂಬೇಡ್ಕರ್) ಅಭಿವೃದ್ಧಿ ನಿಗಮದ ಭೂಮಿ ಖರೀದಿ ಯೋಜನೆಯಡಿ ಬಿಡುಗಡೆ ಹೊಂದಿದ ಜೀತದಾಳುಗಳು ಅನುಸೂಚಿತ ಜಾತಿ ಮತ್ತು ಜನಾಂಗಕ್ಕೆ ಸೇರಿದ್ದರೆ ಅವರಲ್ಲಿ ಪ್ರತಿಯೊಬ್ಬರಿಗೆ ಎರಡು ಎಕರೆ ಭೂಮಿ ಖರೀದಿಸಲು 50,000 ರೂಪಾಯಿಗಳನ್ನು ಮಂಜೂರು ಮಾಡಿಸುವುದು.

(10) ಅತ್ಯವಶ್ಯಕವಾಗಿರುವ ಸಾಲದ ಅಗತ್ಯಗಳನ್ನು ಗುರುತಿಸಿ ಆಯಾ ಪ್ರದೇಶದಲ್ಲಿಯ ಹಣಕಾಸು ಸಂಸ್ಥೆಗಳಿಂದ ಆಧಾರವಿಲ್ಲದೇ ಅಥವಾ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವಂತೆ ನೋಡಿಕೊಳ್ಳುವುದು.

3) ಮೇಲಿನ ಭೂಮಿ ಮಂಜೂರಾತಿಯ ಎರಡು ಯೋಜನೆಗಳನ್ನು ಸಾಮೂಹಿಕವಾಗಿ ಅನುಷ್ಠಾನಗೊಳಿಸಿದರೆ ಒಳ್ಳೆಯದು. ಬಿಡುಗಡೆ ಹೊಂದಿದ ಜೀತದಾಳುಗಳು ಒಬ್ಬರಿಗಿಂತ ಹೆಚ್ಚು ಮಂದಿ ಒಂದು ಗ್ರಾಮ ಪಂಚಾಯತಿಯಲ್ಲಿದ್ದರೆ ಅಕ್ಕಪಕ್ಕದಲ್ಲಿರುವ ಭೂಮಿಯನ್ನು ಖರೀದಿಸುವಂತೆ ನೋಡಿಕೊಂಡು ಎಲ್ಲಾ ಜಮೀನುಗಳಿಗೆ ಒಟ್ಟಾಗಿ ನೀರಾವರಿ ಸೌಲಭ್ಯ ಮತ್ತಿತರ ಕೃಷಿ ಅಭಿವೃದ್ಧಿ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು. ನಮ್ಮ ಭೂಮಿ ನಮ್ಮ ತೋಟ ಯೋಜನೆಯಡಿ ಬಿಡುಗಡೆ ಹೊಂದಿದ ಜೀತದಾಳುಗಳನ್ನು ಅವರ ಊರಿನ ಇತರೆ ಭೂರಹಿತ ಕೃಷಿ ಕಾರ್ಮಿಕರ ಜೊತೆಗೆ ಸೇರಿಸಿ ಎಲ್ಲರಿಗೂ ಸಿಗಬೇಕಾಗಿರುವ ಜಮೀನು ಅಕ್ಕಪಕ್ಕದಲ್ಲಿರುವಂತೆ ನೋಡಿಕೊಳ್ಳಬಹುದು. ಅದೇ ರೀತಿ ಅನುಸೂಚಿತ ಜಾತಿ ಮತ್ತು ಜನಾಂಗ (ಅಂಬೇಡ್ಕರ್) ಅಭಿವೃದ್ಧಿ ನಿಗಮದ ಭೂಮಿ ಖರೀದಿ ಯೋಜನೆಯಡಿ ಬಿಡುಗಡೆ ಹೊಂದಿದ ಅನುಸೂಚಿತ ಜಾತಿ ಮತ್ತು ಜನಾಂಗಕ್ಕೆ ಸೇರಿದ ಜೀತದಾಳುಗಳ ಜೊತೆ ಅನುಸೂಚಿತ ಜಾತಿ ಮತ್ತು ಜನಾಂಗದ ಇತರೆ ಭೂರಹಿತರನ್ನು ಸೇರಿಸಿ ಎಲ್ಲರಿಗೂ ಸಿಗಬೇಕಾಗಿರುವ ಜಮೀನು ಅಕ್ಕಪಕ್ಕ

ದಲ್ಲಿರುವಂತೆ ನೋಡಿಕೊಳ್ಳಬಹುದು. ಎಲ್ಲಾ ಜಮೀನುಗಳಿಗೆ ಒಟ್ಟಿಗೆಯಾಗಿ ನೀರಾವರಿ ಸೌಲಭ್ಯ ಮತ್ತಿತರ ಕೃಷಿ ಅಭಿವೃದ್ಧಿ ಸೌಲಭ್ಯಗಳು ದೊರಕುವಂತೆಯೂ ನೋಡಬಹುದು.

4) ಮೇಲಿನ ಯೋಜನೆಗಳು ಬಿಡುಗಡೆ ಹೊಂದಿದ ಪ್ರತಿ ಜೀತದಾಳುವಿಗೆ ಸಿಗುವಂತಾದರೆ ಬೇರೆ ಇಲಾಖೆಗಳ ಕೆಲವೊಂದು ನಿರ್ದಿಷ್ಟ ಯೋಜನೆಗಳನ್ನು ಜೀತದಾಳುಗಳ ಅವಶ್ಯಕತೆಗಳಿಗೆ ತಕ್ಕಂತೆಯೂ ಆಯಾ ಪ್ರದೇಶದ ಅನುಕೂಲತೆಗೆ ತಕ್ಕಂತೆಯೂ ಮತ್ತು ಬಹಳ ಮುಖ್ಯವಾಗಿ ಜೀತದಾಳುಗಳ ಸಮಗ್ರ ಹಾಗೂ ಸರ್ವಾಂಗೀಣ ಒಳಿತಿನ ದೃಷ್ಟಿಯಿಂದಲೂ ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಸಿಗುವಂತೆ ನೋಡಿಕೊಳ್ಳಬೇಕು. ಆ ಯೋಜನೆಗಳು ಈ ತೆರನಿರಬಹುದು: ಕೌಶಲ್ಯ ಅಭಿವೃದ್ಧಿ ಮತ್ತು ಸ್ವ ಉದ್ಯೋಗ, ಕೃಷಿ ಮತ್ತು ತೋಟಗಾರಿಕೆ, ಅರಣ್ಯ ಮತ್ತು ಮೀನುಗಾರಿಕೆ, ಒಣ ಭೂಮಿ ಅಭಿವೃದ್ಧಿ ಮತ್ತು ಜಲಾನಯನ ಅಭಿವೃದ್ಧಿ, ಪಶು ಸಂಗೋಪನೆ ಮತ್ತು ಹೈನುಗಾರಿಕೆ, ರೇಷ್ಮೆ ಮತ್ತು ಸಣ್ಣ ಪ್ರಮಾಣದ ಉದ್ದಿಮೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆಹಾರ ಮತ್ತು ಪೌಷ್ಠಿಕತೆ, ಕುಡಿಯುವ ನೀರು ಮತ್ತು ನೈರ್ಮಲ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ ಮತ್ತು ಗಿರಿಜನ ಉಪ ಯೋಜನೆ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು, ಅಂಗವಿಕಲರ ಕಲ್ಯಾಣ ಮತ್ತು ಕೊಳಚೆಗೇರಿ ಅಭಿವೃದ್ಧಿ.

5) ಅನುಸೂಚಿತ ಜಾತಿ ಮತ್ತು ಜನಾಂಗಗಳಿಗೆ ಸೇರಿದ ಜೀತದಾಳುಗಳಿಗೆ ಸಂಬಂಧಪಟ್ಟಂತೆ ವಿಶೇಷ ಘಟಕ ಯೋಜನೆ (SCP) ಮತ್ತು ಗಿರಿಜನ ಉಪಯೋಜನೆ [Tribal Sub-Plan] ಗಳ ಪ್ರಯೋಜನವನ್ನು ಪ್ರತ್ಯೇಕವಾಗಿ ಪಡೆಯಬಹುದು.

6) ಸಿದ್ಧಪಡಿಸಿದ ಯೋಜನೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸಿ ಕೊಡಬೇಕು. ಅದರ ಪ್ರತಿಯೊಂದನ್ನು ತಾಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳಿಗೂ ಮಾಹಿತಿಗಾಗಿ ಮತ್ತು ಪುನರ್ವಸತಿ ಸೌಲಭ್ಯಗಳ ಅನುಷ್ಠಾನವನ್ನು ತಾಲೂಕು ಮಟ್ಟದಲ್ಲಿ ನಿರ್ವಹಿಸಲು ಕಳುಹಿಸಬೇಕು.

6.7.3 ಪ್ರತಿ ಗ್ರಾಮ ಪಂಚಾಯತಿಯಿಂದ ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿ ಕಾರ್ಯ ಯೋಜನೆಗಳನ್ನು ತಾಲೂಕು ಮಟ್ಟದಲ್ಲಿ ಆಯಾ ತಾಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳು ಒಟ್ಟುಗೂಡಿಸಬೇಕು. ಅವು ತಾಲೂಕು ಮಟ್ಟದಲ್ಲಿ ಜೀತದಾಳುಗಳ ಸಮಗ್ರ ಹಾಗೂ ಸರ್ವಾಂಗೀಣ ಒಳಿತಿನ ದೃಷ್ಟಿಯನ್ನೂ ಅವರ ಜೀವನೋಪಾಯದ ಸಾಲ ಅವಶ್ಯಕತೆಯನ್ನೂ ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸ್ವಾಯತ್ತ ಸಂಸ್ಥೆಗಳ ಒಗ್ಗೂಡುವಿಕೆಯನ್ನೂ ಒಳಗೊಂಡಿರುವಂತೆ ನೋಡಿಕೊಳ್ಳಬೇಕು.

6.7.4 ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳಿಂದ ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿ ಕಾರ್ಯಯೋಜನೆಗಳನ್ನು ಪಡೆದ ಮೇಲೆ ಜಿಲ್ಲಾ ಪರಾಮರ್ಶಕ ಸಮಿತಿಯ ವಿಶೇಷ ಸಭೆಯನ್ನು ಕರೆಯಬೇಕು. ಆ ಸಭೆಯನ್ನು ಜಿಲ್ಲಾಧಿಕಾರಿಗಳ ನೇತೃತ್ವದ ಜಾಗೃತ ಸಮಿತಿಯೊಂದಿಗೆ ನಡೆಸುವುದು ಹೆಚ್ಚು ಸೂಕ್ತ. ಜಿಲ್ಲಾ ಪರಾಮರ್ಶಕ ಸಮಿತಿಯು ಗ್ರಾಮ ಪಂಚಾಯತಿಗಳ ಪುನರ್ವಸತಿ ಕಾರ್ಯಯೋಜನೆಗಳನ್ನು ಪುರಸ್ಕರಿಸಿ ಕೇಪುಯೋ ನೀಡಿರುವ ನಮೂನೆಯಲ್ಲಿ ಸರ್ಕಾರಕ್ಕೆ ಕಳುಹಿಸಬೇಕು. ಪುನರ್ವಸತಿ ಕಾರ್ಯಯೋಜನೆಗಳನ್ನು ಪುರಸ್ಕರಿಸುವ ಸಭೆಯಲ್ಲಿ ಜೀತದಾಳುಗಳ ಸಮಗ್ರ ಹಾಗೂ ಸರ್ವಾಂಗೀಣ ಒಳಿತಿನ ದೃಷ್ಟಿಯನ್ನೂ ಅವರ ಜೀವನೋಪಾಯದ ಸಾಲ ಅವಶ್ಯಕತೆಯನ್ನೂ ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸ್ವಾಯತ್ತ ಸಂಸ್ಥೆಗಳ ಒಗ್ಗೂಡುವಿಕೆಯನ್ನೂ ಒಳಗೊಳ್ಳುವಂತೆ ಎಲ್ಲಾ ಸಂಬಂಧಪಟ್ಟ ಇಲಾಖೆಗಳು ಮತ್ತು ಹಣಕಾಸು ಸಂಸ್ಥೆಗಳ ಜಿಲ್ಲಾ ಮುಖ್ಯಸ್ಥರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಬಿಡುಗಡೆ ಹೊಂದಿದ ಜೀತದಾಳುಗಳು, ದಲಿತರು ಮತ್ತು ಗಿರಿಜನರ ಸಂಘಟನೆಗಳ ಮುಖಂಡರು ಇರುವಂತೆ ನೋಡಿಕೊಳ್ಳಬೇಕು.

6.7.5 ರಾಜ್ಯ ಸರ್ಕಾರವು ಕೇಂದ್ರ ಮತ್ತು ರಾಜ್ಯದ ಪಾಲಿನ ಶೇ.50:50ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಂಡಿರುವ ಪುನರ್ವಸತಿ ಸಹಾಯ ಧನವನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಡಬೇಕು. ಜಿಲ್ಲಾ ಪಂಚಾಯತಿಯು ಆ ಸಹಾಯ ಧನವನ್ನು ಗ್ರಾಮ ಪಂಚಾಯತಿಗಳಿಗೆ ಕಳುಹಿಸಿ ಕೊಡಬೇಕು.

6.7.6 ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನ ಬರುವ ತನಕ ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ಒದಗಿಸಲು ಕಾಯಬಾರದು. ತಮ್ಮಲ್ಲಿ ಲಭ್ಯವಿದ್ದ ಮತ್ತು ಜಾರಿಯಲ್ಲಿರುವ ಇತರೆ ಕಾರ್ಯಕ್ರಮಗಳಿಂದ ಜೀತದಾಳುಗಳ ಪುನರ್ವಸತಿ ಕಾರ್ಯವನ್ನು ಅವರನ್ನು ಬಿಡುಗೊಡೆಗೊಳಿಸಿದ ತಕ್ಷಣವೇ ಕೈಗೊಳ್ಳಬೇಕು (ಸುತ್ತೋಲೆ ಸಂ.ಗ್ರಾಅಪ.13.ಆರ್‌ಬಿಎಲ್.2003 ದಿನಾಂಕ:18-08-2004, ಅನುಸೂಚಿ 9.6 ನೋಡಿ).

6.7.7 ಅನುಷ್ಠಾನದಲ್ಲಿರುವ ಸರ್ಕಾರದ ಎಲ್ಲಾ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಬಿಡುಗಡೆ ಹೊಂದಿದ ಜೀತದಾಳುಗಳು ಮತ್ತು ಬಾಲಕಾರ್ಮಿಕರ ಕುಟುಂಬಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮೊದಲ ಆದ್ಯತೆ ಕೊಡಬೇಕು (ಸುತ್ತೋಲೆ ಸಂ.ಗ್ರಾಅಪ.13.ಆರ್‌ಬಿಎಲ್.2003 ದಿನಾಂಕ:29-04-2004, ಅನುಸೂಚಿ 9.6 ನೋಡಿ).

6.7.8 ಪುನರ್ವಸತಿ ಸಹಾಯ ಧನವನ್ನು ಪಡೆದ ಕೂಡಲೇ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಗ್ರಾಮ ಪಂಚಾಯತಿಯ ಒಂದು ವಿಶೇಷ ಸಭೆಯನ್ನು ಕರೆದು ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಪುನರ್ವಸತಿ ಕಾರ್ಯ ಯೋಜನೆಯಂತೆ ಸೌಲಭ್ಯಗಳನ್ನು ನೀಡಬೇಕು.

6.7.9 ಬಿಡುಗಡೆ ಹೊಂದಿದ ಜೀತದಾಳುಗಳ ಸ್ವ ಸಹಾಯ ಗುಂಪುಗಳು ಅಥವಾ ಇತರೆ ಸಂಘಟನೆಗಳನ್ನು ತಾವಾಗಿ ಅಥವಾ ತಮ್ಮ ಹಳ್ಳಿಯ ಇತರೆ ಭೂರಹಿತ ಕಾರ್ಮಿಕರೊಂದಿಗೆ ಕಟ್ಟುವ ಜವಾಬ್ದಾರಿಯನ್ನು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳು ಅಥವಾ ಬಿಡುಗಡೆಗೊಂಡ ಜೀತದಾಳುಗಳ ಸಂಘಟನೆಗಳಿಗೆ ವಹಿಸಿ ಕೊಡಬಹುದು. ಅದಕ್ಕೋಸ್ಕರ ಎಸ್‌ಜಿಎಸ್‌ವೈನಲ್ಲಿ ಸ್ವ ಸಹಾಯ ಗುಂಪೊಂದು ಕಟ್ಟಲು ಮೀಸಲಿಟ್ಟ 9,000 ರೂಪಾಯಿಗಳನ್ನು ಸ್ವ ಸಹಾಯ ಗುಂಪು

ಕಟ್ಟುವ ಜವಾಬ್ದಾರಿ ವಹಿಸಿಕೊಂಡ ಸಂಸ್ಥೆ ಅಥವಾ ಸಂಘಟನೆಗೆ ನೀಡಬೇಕು. ಇದನ್ನು ನೋಡಿಕೊಳ್ಳುವ ಜವಾಬ್ದಾರಿ ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳದ್ದಾಗಿರುತ್ತದೆ.

6.7.10 ಪುನರ್ವಸತಿ ಕಾರ್ಯಕ್ರಮದ ಪರಿಣಾಮ ಹಾಗೂ ಅಭಿವೃದ್ಧಿಯನ್ನು ನಿರಂತರವಾಗಿ ನಿರ್ವಹಿಸಲು ಅನುವು ಮಾಡಿಕೊಡುವಂತೆ ಗುರುತಿಸಿದ, ಬಿಡುಗಡೆ ಮಾಡಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ವಿವರಗಳನ್ನು ನಮೂದಿಸುವ ಪ್ರತ್ಯೇಕ ದಾಖಲೆ ಪುಸ್ತಕಗಳನ್ನು ಗ್ರಾಮ ಪಂಚಾಯತಿ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಇಡಬೇಕು.

6.7.11 ಪುನರ್ವಸತಿ ಕಾರ್ಯಕ್ರಮಗಳ ಬಗ್ಗೆ ಮೌಲ್ಯಮಾಪನ ಮಾಡುವ ಅಧ್ಯಯನಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಗಾಗ್ಗೆ ನಡೆಸಬೇಕು. ಜೀತದಾಳುಗಳನ್ನು ಗುರುತಿಸುವ ಮತ್ತು ಬಿಡುಗಡೆಗೊಳಿಸುವ ಪ್ರಕ್ರಿಯೆಗಳ ಬಗ್ಗೆಯೂ ಆಗಾಗ್ಗೆ ಅಧ್ಯಯನ ನಡೆಸಬೇಕು. ಅವುಗಳಿಂದ ಜೀತ ಸಮಸ್ಯೆಯನ್ನು ಹೋಗಲಾಡಿಸುವಲ್ಲಿ ಕೈಗೊಳ್ಳಬೇಕಾಗಿರುವ ಮುಂದಿನ ಕ್ರಮಗಳಿಗೆ ಸೂಕ್ತ ಮಾರ್ಗದರ್ಶನ ಪಡೆಯಬೇಕು.

**6.8 ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯ ಪೂರಕ ಪ್ರಕ್ರಿಯೆಗಳು:**

6.8.0 ಪುನರ್ವಸತಿ ಕಾರ್ಯಕ್ರಮದ ಅನುದಾನಗಳ ಜೊತೆ ಇತರೆ ಪೂರಕ ಪ್ರಕ್ರಿಯೆಗಳಿಗೆ ಅನುದಾನಗಳನ್ನೂ ಅದು ಒದಗಿಸುತ್ತದೆ. ಅವು ಈ ಮುಂದಿನಂತಿವೆ: ಜೀತದಾಳುಗಳ ಸಮೀಕ್ಷೆ ಕಾರ್ಯ, ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ಮತ್ತು ಪುನರ್ವಸತಿ ಕಾರ್ಯಕ್ರಮಗಳ ಮೌಲ್ಯಮಾಪನ ಕಾರ್ಯ.

6.8.1 ಆಂಧ್ರ ಪ್ರದೇಶ, ಬಿಹಾರ, ಕರ್ನಾಟಕ, ಮಧ್ಯ ಪ್ರದೇಶ, ಒರಿಸ್ಸಾ, ರಾಜಸ್ಥಾನ, ತಮಿಳು ನಾಡು, ಮಹಾರಾಷ್ಟ್ರ, ಉತ್ತರ ಪ್ರದೇಶ, ಕೇರಳ, ಹರ್ಯಾಣ, ಗುಜರಾತ್, ಮತ್ತು ಅರುಣಾಚಲ ಪ್ರದೇಶ ಹೀಗೆ 13 ರಾಜ್ಯಗಳ 172 ಜಿಲ್ಲೆಗಳಲ್ಲಿ ಹೆಚ್ಚಿನ ಜೀತದಾಳುಗಳಿದ್ದಾರೆಂದು ಕೇಂದ್ರ ಸರ್ಕಾರವು ಅಂದಾಜು ಮಾಡಿದೆ. ಇಂತಹ ಜಿಲ್ಲೆಗಳಲ್ಲಿ ಜೀತದಾಳುಗಳ ಸಮೀಕ್ಷೆ ಮಾಡಲು ಪ್ರತಿ ಜಿಲ್ಲೆಗೆ 2 ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ. ಪ್ರತಿ ಜಿಲ್ಲೆಗೆ ಮೂರು ವರ್ಷಕ್ಕೆ ಒಂದು ಸಾರಿ ಆ ಹಣವನ್ನು ಒದಗಿಸಲಾಗುತ್ತದೆ.

6.8.2. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತಮ್ಮ ನ್ಯಾಯಯುತ ಮತ್ತು ಅತ್ಯವಶ್ಯಕ ಹಕ್ಕುಗಳಿಂದ ವಂಚಿಸಲ್ಪಟ್ಟ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲು ಪ್ರತಿ ರಾಜ್ಯಕ್ಕೆ ಪ್ರತಿ ವರ್ಷಕ್ಕೆ 10 ಲಕ್ಷ ರೂಪಾಯಿಗಳನ್ನು ಒದಗಿಸಲಾಗುತ್ತದೆ.

6.8.3. ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಜೀತ ಪದ್ಧತಿ ಮೇಲೆ ಪರಿಣಾಮ ಬೀರುವಂತಹ ಭೂಮಿ ಹಾಗೂ ಸಾಲಗಳಿಗೆ ಸಂಬಂಧಪಟ್ಟ ವಿಷಯಗಳು ಮತ್ತು ಇಷ್ಟರವರೆಗೆ ಅನುಷ್ಠಾನಗೊಳಿಸಿದ ಪುನರ್ವಸತಿ ಕಾರ್ಯಕ್ರಮಗಳಿಂದ ಜೀತದಾಳುಗಳ ಮೇಲಾದ ಪರಿಣಾಮಗಳನ್ನು ಅಧ್ಯಯನ ಮಾಡುವ ಮೌಲ್ಯಮಾಪನಗಳನ್ನು ನಡೆಸುವ ಅಗತ್ಯವಿದೆ. ಪ್ರತಿ ರಾಜ್ಯದಲ್ಲಿ ಪ್ರತಿ ವರ್ಷ ಅಂತಹ ಐದು ಮೌಲ್ಯಮಾಪನಗಳನ್ನು ನಡೆಸಲು ಪ್ರತಿ ರಾಜ್ಯಕ್ಕೆ ಪ್ರತಿ ಮೌಲ್ಯಮಾಪನಕ್ಕೆ ಒಂದು ಲಕ್ಷ ರೂಪಾಯಿಗಳಂತೆ ಒಟ್ಟು 5 ಲಕ್ಷ ರೂಪಾಯಿಗಳನ್ನು ಒದಗಿಸಲಾಗುತ್ತದೆ.

**7. ಜೀತದಾಳುಗಳ ಪುನರ್ವಸತಿ ಯೋಜನೆ: ಸಂಕ್ಷಿಪ್ತವಾಗಿ**

7.0. ಕಾರ್ಯಯೋಜನೆಯನ್ನು ರೂಪಿಸುವ ಮುಂಚೆ ಆಗಬೇಕಾದ ಪ್ರಕ್ರಿಯೆಗಳು:

1) ಜೀತದಾಳುಗಳ ಸಮೀಕ್ಷೆ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯಬೇಕು. ಉಗಾದಿ ನಂತರದ ಏಪ್ರಿಲ್‌ನಿಂದ ಎರಡು ತಿಂಗಳುಗಳೊಳಗಡೆ ಅದನ್ನು ನಡೆಸಿದರೆ ಒಳ್ಳೆಯದು. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿ ಇರುವ ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಹಾಗೂ ತಹಶೀಲ್ದಾರರಿಗೆ ಏಪ್ರಿಲ್‌ನಿಂದ ಒಂದು ತಿಂಗಳೊಳಗೆ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಆ ವರದಿಗಳನ್ನು ಆಧರಿಸಿ ಮತ್ತು ಸ್ವತಂತ್ರವಾಗಿ ತಮ್ಮ ಜಾಗೃತಿ ಸಮಿತಿಯೊಂದಿಗೆ ಹಾಗೂ ತಹಶೀಲ್ದಾರರೊಂದಿಗೆ ನಂತರದ ಒಂದು ತಿಂಗಳಲ್ಲಿ ತನಿಖೆ ನಡೆಸಬೇಕು. ಸಮೀಕ್ಷೆಯನ್ನು ಸಮರ್ಥ ಮತ್ತು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ನಡೆಸುವುದೇ ಸೂಕ್ತ ಅಥವಾ ಅವರೇ ನಡೆಸಲು ಅವರಿಗೆ ವಹಿಸಿಕೊಡಬಹುದು. ಜೀತ ಪ್ರಕರಣಗಳ ಬಗ್ಗೆ ತಮ್ಮ ಗಮನ ಸೆಳೆದ ಪ್ರತಿ ಸಾರಿ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ಅವುಗಳ ಬಗ್ಗೆ ತನಿಖೆ ನಡೆಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಗಿರಿಜನ ಅಧ್ಯಯನ ಕೇಂದ್ರಗಳು ನಡೆಸುವ ಕೌಟುಂಬಿಕ ಸಮೀಕ್ಷೆಗಳಲ್ಲಿ ಜೀತದಾಳುಗಳ ತನಿಖೆಯನ್ನೂ ನಡೆಸಬೇಕು.

2) ಜೀತದಾಳುಗಳ ಗುರುತಿಸುವಿಕೆ ಮತ್ತು ಸಮೀಕ್ಷೆಯ ಅಂಗವಾಗಿ ಜೀತ ಎಂದರೇನು ಮತ್ತು ಜೀತದಾಳುಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸುವುದು ಹೇಗೆ ಎಂಬುದರ ಬಗ್ಗೆ ಸಮೀಕ್ಷೆ ನಡೆಸುವವರಿಗೆ ಜಾಗೃತಿ ಮತ್ತು ಸಂವೇದನಾ ತರಬೇತಿಗಳನ್ನು ನಿಯತಕಾಲಿಕವಾಗಿ ನಡೆಸಬೇಕು. ಜೀತದಾಳುಗಳು ಮತ್ತಿತರ ದುರ್ಬಲ ವರ್ಗಗಳ ಜನರಿಗೂ ಅಂತಹ ತರಬೇತಿಗಳನ್ನು ನಡೆಸಬೇಕು.

3) ಗುರುತಿಸಿದ ಜೀತದಾಳುಗಳನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ಗುರುತಿಸಿದ 15 ದಿನಗಳ ಒಳಗೆ ಬಿಡುಗಡೆ ಪತ್ರದೊಂದಿಗೆ ಬಿಡುಗಡೆಗೊಳಿಸಬೇಕು.ಅವುಗಳ ಪ್ರತಿಯನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ಮತ್ತು ತಾಲೂಕು ಪಂಚಾಯತಿಗಳ ಕಾರ್ಯನಿರ್ವಹಣಾಧಿಕಾರಿಗಳಿಗೂ ಕಳುಹಿಸಿ ಕೊಡಬೇಕು.

4) ಜೀತದಾಳುವನ್ನು ಬಿಡುಗಡೆಗೊಳಿಸಿದ ಕೂಡಲೇ ಅವರಿಗೆ ಕೇಪುಯೋಜಿ 1,000 ರೂಪಾಯಿಗಳನ್ನು ನೀಡಬೇಕು. ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆಯಡಿ ಪ್ರತಿ ಜೀತದಾಳುವಿಗೆ ಪ್ರತಿ ತಿಂಗಳು 300 ರೂಪಾಯಿಗಳನ್ನು ಬಿಡುಗಡೆಗೊಳಿಸಿದ ತಿಂಗಳಿಂದ ಎರಡು ವರ್ಷದ ತನಕ ಮಂಜೂರು ಮಾಡಬೇಕು.

F-5*

5) ಜೀತದ ಕ್ರೂರ ಪ್ರಕರಣಗಳಲ್ಲಿ ಅಪರಾಧಿಗಳ ವಿರುದ್ಧ ದಾವೆ ಹೂಡಬೇಕು. ಬೇರೆ ಪ್ರಕರಣಗಳಲ್ಲಿ ಮಾಲೀಕರಿಗೆ ನೋಟೀಸನ್ನು ಕಳುಹಿಸಬಹುದು.

1. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಮಗೆ ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳಿಂದ ಜೀತ ದಾಳುಗಳ ಬಿಡುಗಡೆ ಪತ್ರ ತಲುಪಿದ ತಕ್ಷಣ ಜೀತದಾಳುಗಳು, ಬೇರೆ ಬೇರೆ ಇಲಾಖೆಗಳು ಹಾಗೂ ಹಣಕಾಸು ಸಂಸ್ಥೆ ಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಬಿಡುಗಡೆಗೊಂಡ ಜೀತದಾಳುಗಳು, ದಲಿತರು ಹಾಗೂ ಗಿರಿಜನ ಸಂಘಟನೆಗಳ ಮುಖಂಡರುಗಳನ್ನು ಕರೆದು ಸಭೆ ಸೇರಿಸಬೇಕು. ಸಭೆಯಲ್ಲಿ ಕೇಪುಯೋಯ 19,000 ರೂಪಾಯಿ ಗಳು ಮತ್ತು ಎಸ್‌ಜಿಎಸ್‌ವೈ ಸಹಾಯಧನದಿಂದ ಕೂಡಿದ 30,000 ರೂಪಾಯಿಗಳನ್ನು ಸೇರಿಸಿ ಪುನರ್ವಸತಿಗೋಸ್ಕರ ಕಾರ್ಯಯೋಜನೆಯನ್ನು ರೂಪಿಸಬೇಕು. ಜೊತೆಗೆ ಈ ಮುಂದಿನ ಸೌಲಭ್ಯಗಳನ್ನೂ ದೊರಕಿಸಿ ಕೊಡಬೇಕು: ಮನೆ ನಿವೇಶನ ಮತ್ತು/ಅಥವಾ ಮನೆ; ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಥವಾ ಎಸ್‌ಜಿಆರ್‌ವೈ ಅಥವಾ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಕೂಲಿ ಕೆಲಸ ಒದಗಿಸುವುದು; ನಮ್ಮ ಭೂಮಿ ನಮ್ಮ ತೋಟ ಯೋಜನೆ ಅಥವಾ ಅನುಸೂಚಿತ ಜಾತಿ ಮತ್ತು ಜನಾಂಗಗಳ (ಅಂಬೇಡ್ಕರ್) ಅಭಿವೃದ್ಧಿ ನಿಗಮದ ಭೂ ಖರೀದಿ ಯೋಜನೆಗಳಡಿ ಭೂಮಿ ಮಂಜೂರು ಮಾಡುವುದು; ಯಶಸ್ವಿನಿ ಅಥವಾ ಜನಶ್ರೀ ವಿಮಾ ಯೋಜನೆಯಡಿ ಆರೋಗ್ಯ ವಿಮೆ ಕಲ್ಪಿಸುವುದು; ವಯಸ್ಕರ ಶಿಕ್ಷಣ ಸೌಲಭ್ಯ ದೊರಕಿಸುವುದು; ಬಾಲ ಜೀತದಾಳುಗಳನ್ನು ಎನ್‌ಸಿಎಲ್‌ಪಿ ಅಥವಾ ಎಸ್‌ಸಿಎಲ್‌ಪಿ ಯೋಜನೆ ಗಳಲ್ಲಿ ಸೇತು ಶಾಲೆಗಳಿಗೆ ಸೇರಿಸಿ ಒಂದು ವರ್ಷದ ನಂತರ ಮುಖ್ಯ ವಾಹಿನಿ ಶಾಲೆಗಳಿಗೆ ಸೇರಿಸುಂತೆ ವ್ಯವಸ್ಥೆ ಮಾಡುವುದು; ಮತ್ತು ಕೌಶಲ್ಯ ತರಬೇತಿಗಳನ್ನೂ ಜಾಗೃತಿ ತರಬೇತಿಗಳನ್ನೂ ನಡೆಸಲು ಯೋಜಿಸುವುದು. ಜೀತದಾಳು ಗಳನ್ನು ಬಿಡುಗೊಡೆಗೊಳಿಸಿದ ಎರಡು ತಿಂಗಳುಗಳೊಳಗೆ ಪುನರ್ವಸತಿಗೋಸ್ಕರ ಕಾರ್ಯಯೋಜನೆಯನ್ನು ರೂಪಿಸಿ ಜಾರಿಗೆ ತರುವ ಪ್ರಕ್ರಿಯೆಯು ಪೂರ್ಣವಾಗಬೇಕು.

2. ರೂಪಿಸಿದ ಕಾರ್ಯಯೋಜನೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸಿಕೊಡ ಬೇಕು. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪರಾಮರ್ಶಕ ಸಮಿತಿಯ (ಬೇರೆ ಬೇರೆ ಇಲಾಖೆಗಳು ಹಾಗೂ ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಬಿಡುಗಡೆಗೊಂಡ ಜೀತದಾಳುಗಳು, ದಲಿತರು ಹಾಗೂ ಗಿರಿಜನ ಸಂಘಟನೆಗಳ ಮುಖಂಡರುಗಳನ್ನು ಕರೆದು) ಸಭೆ ಸೇರಿಸಬೇಕು. ಸಭೆಯಲ್ಲಿ ಸಾಧ್ಯವಾದ ಎಲ್ಲಾ ಮೂಲಗಳಿಂದ ಜೀತದಾಳುಗಳ ಪುನರ್ವಸತಿಗೆ ಸೌಲಭ್ಯಗಳನ್ನು ಒಟ್ಟುಗೂಡಿಸುವಂತೆ ನೋಡಿಕೊಳ್ಳಬೇಕು.

3. ಪುನರ್ವಸತಿ ಕಾರ್ಯಯೋಜನೆಯ ಪ್ರತಿಯೊಂದನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಾಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸಬೇಕು. ಇದರಿಂದ ತಾಲೂಕು ಮಟ್ಟದಲ್ಲಿಯ ಎಲ್ಲಾ ಯೋಜನೆ ಗಳನ್ನು ಸಂಯೋಜಿಸಿ ನಿರ್ವಹಿಸಲು ಅನುಕೂಲವಾಗುವುದು ಮತ್ತು ತಾಲೂಕು ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲ ಗಳನ್ನು ಪುನರ್ವಸತಿಗೆ ಬಳಸಲು ಅನುಕೂಲವಾಗುವುದು.

4. ರಾಜ್ಯ ಮಟ್ಟದ ಉನ್ನತ ಅಧಿಕಾರ ಸಮಿತಿಯು ಪ್ರತಿ 6 ತಿಂಗಳಿಗೊಮ್ಮೆ ಸೇರಿ ಎಲ್ಲಾ ಇಲಾಖೆಗಳು ಮತ್ತು ಹಣ ಕಾಸು ಸಂಸ್ಥೆಗಳು ಬಿಡುಗಡೆಗೊಂಡ ಜೀತದಾಳುಗಳ ಅವಶ್ಯಕತೆಗಳಿಗೆ ಆದ್ಯತೆ ಕೊಡುತ್ತಿದ್ದಾರೆಂದು ನೋಡಿಕೊಳ್ಳಬೇಕು.

5. ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ಮಂಜೂರು ಮಾಡುವ ಮುಂಚೆ ಅವರು ತಮ್ಮ ಸ್ವ ಸಹಾಯ ಗುಂಪು ಇಲ್ಲವೇ ಸಹಕಾರ ಸಂಘ ಇಲ್ಲವೇ ಒಂದು ಕಾರ್ಮಿಕ ಒಕ್ಕೂಟ ಇಲ್ಲವೇ ಬೇರೆ ರೀತಿಯ ಸಂಸ್ಥೆ ಯೊಂದನ್ನು ತಮ್ಮಷ್ಟಕ್ಕೆ ಅಥವಾ ತಮ್ಮ ಹಳ್ಳಿಯ ಬೇರೆ ಭೂರಹಿತ ಕೃಷಿ ಕಾರ್ಮಿಕರ ಜೊತೆಗೂಡಿ ಕಟ್ಟುವಂತೆ ನೋಡಿ ಕೊಳ್ಳಬೇಕು. ಅದರ ಜವಾಬ್ದಾರಿಯನ್ನು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳು ಅಥವಾ ಬಿಡುಗಡೆಗೊಂಡ ಜೀತದಾಳುಗಳ ಸಂಘಟನೆಗಳಿಗೆ ವಹಿಸಿ ಕೊಡಬಹುದು. ಅದಕ್ಕೋಸ್ಕರ ಎಸ್‌ಜಿಎಸ್‌ವೈನಲ್ಲಿ ಸ್ವ ಸಹಾಯ ಗುಂಪೊಂದು ಕಟ್ಟಲು ಮೀಸಲಿಟ್ಟ 9,000 ರೂಪಾಯಿಗಳನ್ನು ಸ್ವ ಸಹಾಯ ಗುಂಪು ಕಟ್ಟುವ ಜವಾಬ್ದಾರಿ ವಹಿಸಿಕೊಂಡ ಸಂಸ್ಥೆ ಅಥವಾ ಸಂಘಟನೆಗೆ ನೀಡಬೇಕು. ಇದನ್ನು ನೋಡಿಕೊಳ್ಳುವ ಜವಾಬ್ದಾರಿ ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳದ್ದಾಗಿರುತ್ತದೆ.

6. ಜೀತದಾಳುಗಳ ಮಾನಸಿಕ ಪುನರ್ವಸತಿಗೂ ಒತ್ತು ಕೊಡಬೇಕು. ಸಮರ್ಥ ಹಾಗೂ ಪ್ರಾಮಾಣಿಕ ಸರ್ಕಾರೇತರ ಸಂಸ್ಥೆ ಗಳ ಸಹಾಯದೊಂದಿಗೆ ಸರ್ಕಾರದ ಪ್ರತಿ ಯೋಜನೆಗಳಲ್ಲಿ ಮಾಹಿತಿ, ಸಂವಹನ ಮತ್ತು ಶಿಕ್ಷಣಗಳಿಗೋಸ್ಕರ ವಿನಿ ಯೋಗಿಸಬಹುದಾದ ಶೇ.5ರಷ್ಟು ಹಣದ ಸ್ವಲ್ಪ ಭಾಗವನ್ನು ಅದಕ್ಕೋಸ್ಕರ ಬಳಸಬೇಕು. ಸಂಬಂಧಪಟ್ಟ ಎಲ್ಲಾ ಅಧಿಕಾರಿ ಗಳು ಇವುಗಳ ಬಗ್ಗೆ ಜವಾಬ್ದಾರಿ ವಹಿಸಬೇಕು.

7. ಪುನರ್ವಸತಿ ಕಾರ್ಯಕ್ರಮದ ಪರಿಣಾಮ ಹಾಗೂ ಅಭಿವೃದ್ಧಿಯನ್ನು ನಿರಂತರವಾಗಿ ನಿರ್ವಹಿಸಲು ಅನುವು ಮಾಡಿಕೊಡುವಂತೆ ಗುರುತಿಸಿದ, ಬಿಡುಗಡೆ ಮಾಡಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ವಿವರಗಳನ್ನು ನಮೂದಿಸುವ ಪ್ರತ್ಯೇಕ ದಾಖಲೆ ಪುಸ್ತಕಗಳನ್ನು ಗ್ರಾಮ ಪಂಚಾಯತಿ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಇಡಬೇಕು. ಆರು ತಿಂಗಳುಗಳಿಗೊಮ್ಮೆ ಪುನರ್ವಸತಿ ಕಾರ್ಯಕ್ರಮಗಳ ಪರಾಮರ್ಶಕ ಸಭೆಗಳನ್ನು ನಡೆಸಬೇಕು.

8. ಪುನರ್ವಸತಿ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವ ಅಧ್ಯಯನಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಗಾಗ್ಗೆ ನಡೆಸಬೇಕು. ಜೀತದಾಳುಗಳನ್ನು ಗುರುತಿಸುವ ಮತ್ತು ಬಿಡುಗಡೆಗೊಳಿಸುವ ಪ್ರಕ್ರಿಯೆಗಳ ಬಗ್ಗೆಯೂ ಆಗಾಗ್ಗೆ ಅಧ್ಯಯನ ನಡೆಸಬೇಕು. ಅವುಗಳಿಂದ ಜೀತ ಸಮಸ್ಯೆಯನ್ನು ಹೋಗಲಾಡಿಸುವಲ್ಲಿ ಕೈಗೊಳ್ಳ ಬೇಕಾಗಿರುವ ಮುಂದಿನ ಕ್ರಮಗಳಿಗೆ ಸೂಕ್ತ ಮಾರ್ಗದರ್ಶನ ಪಡೆಯಬೇಕು.

9. ಜೀತ ತಡೆಗಟ್ಟುವ ಕಾರ್ಯಕ್ರಮಗಳಿಗೂ ಆದ್ಯತೆ ಕೊಡಬೇಕು.

೮. ಕೋಷ್ಟಕದಲ್ಲಿ ನಿಗದಿಪಡಿಸಿದ ಕಾಲದೊಂದಿಗೆ ಜೀತದಾಳುಗಳ ಪುನರ್ವಸತಿಗೆ ಪ್ರಸ್ತಾಪಿತ ಕ್ರಿಯಾ ಯೋಜನೆ *

| ಕ್ರ.ಸಂ. | ಕಾರ್ಯಕ್ರಮ | ಅವಧಿ |
|---|---|---|
| 1. | ಜೀತದಾಳುಗಳ ಗುರುತಿಸುವಿಕೆ – ಕೇಂದ್ರ ಪುರಸ್ಕೃತ ಯೋಜನೆ (ಕೇಪುಯೋ) ಅಡಿ ಜೀತದಾಳುಗಳ ಸಮೀಕ್ಷೆ ನಡೆಸಬೇಕು. | ಒಂದು ತಿಂಗಳು (ಉಗಾದಿ ನಂತರ ಏಪ್ರಿಲ್ ತಿಂಗಳು) |
| 2. | ಗುರುತಿಸುವ ಅಧಿಕಾರಿಗಳಿಗೆ ಸಂವೇದನಾ ತರಬೇತಿ ನಡೆಸುವುದು – ಕೇಪುಯೋಯಡಿ ಜೀತ ಸಮೀಕ್ಷೆ ಕೈಗೊಳ್ಳುವ ಮುಂಚೆ ತರಬೇತಿ ನಡೆಸಬೇಕು. | ಒಂದು ವಾರ (ಏಪ್ರಿಲ್ ಮೊದಲ ವಾರ) |
| 3. | ಗುರುತಿಸಿದ ಜೀತದಾಳುಗಳ ವಿವರಗಳನ್ನು ಜಿಲ್ಲಾಧಿಕಾರಿಗಳು / ಉಪವಿಭಾಗಾಧಿಕಾರಿಗಳಿಗೆ ಮತ್ತು ತಹಶೀಲ್ದಾರರಿಗೆ ಸಲ್ಲಿಸುವುದು. | ಒಂದು ವಾರ (ಮೇ ಮೊದಲ ವಾರ) |
| 4. | ಗ್ರಾ.ಪಂ.ಕಾರ್ಯದರ್ಶಿಗಳು/ಸಮೀಕ್ಷಾ ತಂಡವು ಸಲ್ಲಿಸಿದ ಜೀತದಾಳುಗಳ ವಿವರದಂತೆ ತಪಾಸಣೆ / ಪರಿಶೀಲನಾ ಕಾರ್ಯ – ಮಾದರಿಯಾಗಿ | ಮೂರು ವಾರ (ಮೇ ತಿಂಗಳ 2, 3 ಮತ್ತು 4ನೇ ವಾರಗಳು) |
| 5. | ಜೀತದಾಳುಗಳ ಬಿಡುಗಡೆ ಹಾಗೂ ಬಿಡುಗಡೆಗೊಳಿಸಿದ ಜೀತದಾಳುಗಳ ಬಿಡುಗಡೆ ಪತ್ರಗಳನ್ನು ಗ್ರಾ.ಪಂ. ಕಾರ್ಯದರ್ಶಿಗಳಿಗೆ ಕಳುಹಿಸುವುದು ಮತ್ತು ಅವುಗಳ ಪಟ್ಟಿಯನ್ನು ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ಗ್ರಾ.ಅ.ಮತ್ತುಪಂ.ರಾ. ಇಲಾಖೆಗೆ ಕಳುಹಿಸುವುದು. | 15 ದಿವಸಗಳು (1–15 ಜೂನ್) |
| 6. | ಬಿಡುಗಡೆಗೊಳಿಸಿದ ಪ್ರತಿ ಜೀತದಾಳುವಿಗೆ ಕೇಪುಯೋ ಯಿಂದ ಒಂದು ಸಾವಿರ ರೂಪಾಯಿಗಳನ್ನುನೀಡುವುದು. | 15 ದಿವಸಗಳು (16–30 ಜೂನ್) |
| 7. | ಬಿಡುಗಡೆಗೊಳಿಸಿದ ಪ್ರತಿ ಜೀತದಾಳುವಿಗೆ ಕರ್ನಾಟಕ ಸರ್ಕಾರದ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆಯಿಂದ ತಲಾ ಮುನ್ನೂರು ರೂಪಾಯಿಗಳನ್ನು ಎರಡು ವರ್ಷ ತನಕ ಪ್ರತಿ ತಿಂಗಳು ನೀಡುವುದು. | 15 ದಿವಸಗಳು (1–15 ಜುಲೈ) |
| 8. | ಹೆಚ್ಚಿನ ಕ್ರೂರ ಪ್ರಕರಣಗಳಲ್ಲಿ ಅಪರಾಧಿಗಳ ಮೇಲೆ ರೀತ್ಯಾ ಕ್ರಮ ಜರುಗಿಸುವುದು | ಒಂದು ತಿಂಗಳು (ಜುಲೈ) |
| 9. | ವಿಮುಕ್ತ ಜೀತದಾಳುಗಳನ್ನು ಸೇರಿಸಿ ಸ್ವ ಸಹಾಯ ಗುಂಪು ಕಟ್ಟುವುದು. ಗುಂಪು ಕಟ್ಟಲು ಎಸ್.ಜಿ.ಎಸ್.ವೈ. ಅಡಿ ಪ್ರತಿ ಗುಂಪಿಗೆ 4 ವರ್ಷಕ್ಕೆ 9,000 ರೂಪಾಯಿಗಳಂತೆ ಧನ ಸಹಾಯ ನೀಡುವುದು. | ಆರಂಭಿಕ ಹಂತ: 6 ತಿಂಗಳು (ಜುಲೈ– ಡಿಸೆಂಬರ್) ಬಲಪಡಿಸುವಿಕೆ (ಮುಂದಿನ ತಿಂಗಳುಗಳು) |
| 10 | ಪುನರ್ವಸತಿ ಸೌಲಭ್ಯಗಳ ಯೋಜನೆಯನ್ನು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಅವುಗಳ ಪ್ರತಿಯನ್ನು ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು | ಯೋಜನೆ ರೂಪಿಸಿದ ಕೂಡಲೇ (31 ಜುಲೈ ಒಳಗಡೆ) |
| 11 | ಜಿಲ್ಲಾ ಪರಾಮರ್ಶಕ ಸಮಿತಿಯ ಸಭೆ ಕರೆಯುವುದು. ಜೊತೆಗೆ ಹಣಕಾಸು ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳ ಪ್ರತಿನಿದಿಗಳನ್ನೂ ಕರೆದು ಜೀತದಾಳುಗಳ ಪುನರ್ವಸತಿ ಯೋಜನೆಗಳನ್ನು ಪರಾಮರ್ಶಿಸಿ ಬೇರೆ ಬೇರೆ ಇಲಾಖೆಗಳ ಸೌಲಭ್ಯಗಳನ್ನು ಒಗ್ಗೂಡಿಸುವ ರೀತಿಯಲ್ಲಿ ಮತ್ತು ಸಮಗ್ರ ದೃಷ್ಟಿಕೋನವನ್ನು ಗಮನದಲ್ಲಿಟ್ಟು ಅವುಗಳಲ್ಲಿ ಸೂಕ್ತ ಬದಲಾವಣೆ ತರುವುದು. | ಒಂದು ವಾರ (2ನೇ ವಾರ ಆಗಸ್ಟ್) |

| | | |
|---|---|---|
| 12 | ಜೀತದಾಳುಗಳ ಪುನರ್ವಸತಿ ಯೋಜನೆಗಳನ್ನು ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಗ್ರಾ.ಅ.ಮತ್ತು ಪಂ.ರಾ. ಇಲಾಖೆ, ಅವರಿಗೆ ಮಂಜೂರಾತಿಗೆ ಕಳುಹಿಸಿ ಕೊಡುವುದು | ಒಂದು ವಾರ (4ನೇ ವಾರ ಆಗಸ್ಟ್) |
| 13 | ಜೀತದಾಳುಗಳ ಪುನರ್ವಸತಿ ಕುರಿತ ರಾಜ್ಯ ಮಟ್ಟದ ಉನ್ನತ ಅಧಿಕಾರ ಸಮಿತಿಯ ಸಭೆಯನ್ನು ಕರೆಯುವುದು. ಅದರಲ್ಲಿ ವಿವಿಧ ಇಲಾಖೆಗಳ ಕಾರ್ಯದರ್ಶಿಗಳು, ಹಣಕಾಸು ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನೂ ಕರೆದು ಜೀತದಾಳುಗಳ ಪುನರ್ವಸತಿ ಯೋಜನೆ ಪರಾಮರ್ಶಿಸಿ, ಅಗತ್ಯವೆನಿಸಿದರೆ ಬೇರೆ ಬೇರೆ ಇಲಾಖೆಗಳ ಸೌಲಭ್ಯಗಳನ್ನು ಒಗ್ಗೂಡಿಸುವ ರೀತಿಯಲ್ಲಿ ಮತ್ತು ಸಮಗ್ರ ದೃಷ್ಟಿಕೋನವನ್ನು ಗಮನದಲ್ಲಿಟ್ಟು ಅವುಗಳಲ್ಲಿ ಸೂಕ್ತ ಬದಲಾವಣೆ ತರುವುದು. | ಪ್ರತಿ ಆರು ತಿಂಗಳುಗಳಿಗೊಮ್ಮೆ (ಸೆಪ್ಟೆಂಬರ್ ಮತ್ತು ಮಾರ್ಚ್ ತಿಂಗಳ ಎರಡನೇ ವಾರ) |
| 14. | ಗ್ರಾಮ ಪಂಚಾಯತಿಗಳಿಗೆ ಪುನರ್ವಸತಿ ಧನ ಸಹಾಯ ಬಿಡುಗಡೆ | ಒಂದು ವಾರ (2ನೇ ವಾರ ಅಕ್ಟೋಬರ್) |
| 15 | ಜೀತದಾಳುಗಳಿಗೆ ಅವರ ಪುನರ್ವಸತಿ ಧನ ಸಹಾಯವನ್ನು ಒದಗಿಸುವುದು | ಒಂದು ವಾರ (4ನೇ ವಾರ ಅಕ್ಟೋಬರ್) |
| 16. | ಕೇಪುಯೋಯಡಿ 19,000 ರೂ.ಗಳ ಮತ್ತು ಎಸ್.ಜಿ.ಎಸ್.ವೈ. ಅಡಿ 30,000 ರೂ.ಗಳ ಸಹಾಯ ಧನ ಬಳಸಿ ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ | ಎರಡು ತಿಂಗಳು (ನವೆಂಬರ್–ಡಿಸೆಂಬರ್) |
| 17. | ದಾಖಲೆಗಳನ್ನು ಅಂತಿಮಗೊಳಿಸುವುದು | ಒಂದು ವಾರ (4ನೇ ವಾರ ಡಿಸೆಂಬರ್) |
| 18. | ವಿಮುಕ್ತ ಜೀತದಾಳುಗಳಿಗೆ ಸಂವೇದನಾ ಮತ್ತು ಕೌಶಲ್ಯ ತರಬೇತಿಗಳನ್ನು ನಡೆಸುವುದು | ಪುನರ್ವಸತಿ ಸೌಲಭ್ಯ ಮಂಜೂರಾದ ನಂತರದ ಎರಡು ತಿಂಗಳು (ಅಕ್ಟೋಬರ್ ಮತ್ತು ನವೆಂಬರ್) |
| 19. | ನಿರ್ವಹಣಾ ಸಭೆಗಳನ್ನು ನಡೆಸುವುದು- ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲಿ. | ಆರು ತಿಂಗಳುಗಳಿಗೊಮ್ಮೆ (ಡಿಸೆಂಬರ್/ಜೂನ್ ಮೊದಲ ವಾರ) |
| 20. | ಜಾಗೃತ ಸಮಿತಿಗಳ ಸಭೆಯನ್ನು ಕರೆಯುವುದು. ಉಪವಿಭಾಗ ಮತ್ತು ಜಿಲ್ಲಾ ಮಟ್ಟದಲ್ಲಿ | ಮೂರು ತಿಂಗಳುಗಳಿಗೊಮ್ಮೆ (ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್) |
| 21. | ಮೌಲ್ಯಮಾಪನಾ ಅಧ್ಯಯನಗಳು- ಕೇ.ಪು.ಯೋ.ಯಡಿ | ಪುನರ್ವಸತಿ ಕಲ್ಪಿಸಿದ ಒಂದು ವರ್ಷದ ನಂತರ (ಸೆಪ್ಟೆಂಬರ್‌ನಿಂದ) |
| 22. | ಜೀತ ಪದ್ಧತಿ ಬಗ್ಗೆ ಜಾಗೃತ ಕಾರ್ಯಕ್ರಮಗಳು- ಕೇ.ಪು.ಯೋ.ಯಡಿ | ವರ್ಷವಿಡೀ |

* ಅನುಷ್ಠಾನವು ಅನುದಾನ ಲಭ್ಯತೆಗೆ ಒಳಪಟ್ಟು

# ೯. ಅನುಬಂಧಗಳು

## ಅನುಬಂಧಗಳು ೯.1

**ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ**

**29 ಬಲಾತ್ಕಾರದ ದುಡಿಮೆಯ ಒಡಂಬಡಿಕೆ, 1930**

**ಅನುಚ್ಛೇದ 2:**

"1. ಈ ಒಡಂಬಡಿಕೆಯಲ್ಲಿ 'ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆ' ಅಂದರೆ ಯಾವುದೇ ದಂಡ ಹೇರುವ ಬೆದರಿಕೆಯ ಮೇರೆಗೆ ಯಾವುದೇ ವ್ಯಕ್ತಿಯಿಂದ ಮತ್ತು ಆತನ ಸ್ವ ಇಚ್ಛೆ ಇಲ್ಲದೆ ಪಡೆದ ಎಲ್ಲಾ ಕೆಲಸ ಅಥವಾ ಸೇವೆ.

2. ಆದರೂ ಈ ಒಡಂಬಡಿಕೆಯ ಅರ್ಥವ್ಯಾಪ್ತಿಯಲ್ಲಿ 'ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆ' ಪದಗಳು... ಸೈನಿಕ ಸೇವೆ ಸಲ್ಲಿಸಲು, ಸಾಮಾನ್ಯ ನಾಗರಿಕ ಕರ್ತವ್ಯಗಳನ್ನು ಈಡೇರಿಸಲು, ನ್ಯಾಯಾಲಯದಲ್ಲಿ ಸಿಕ್ಕಿದ ಶಿಕ್ಷೆಯ ಪರಿಣಾಮವಾಗಿ, ಯುದ್ಧ ಅಥವಾ ಬೆಂಕಿ ಅನಾಹುತ, ನೆರೆ, ಬರಗಾಲ, ಭೂಕಂಪ, ತೀವ್ರತರವಾದ ಸಾಂಕ್ರಾಮಿಕ ರೋಗ, ಪ್ರಾಣಿ ಸಾಂಕ್ರಾಮಿಕ ರೋಗ, ಪ್ರಾಣಿ, ಕೀಟ ಅಥವಾ ಬೆಳೆಗಳ ಪೀಡೆಗಳ ಹಾವಳಿಗಳು ಮುಂತಾದ ವಿಪತ್ತುಗಳ ತುರ್ತು ಪರಿಸ್ಥಿತಿಗಳ ಸಂದರ್ಭಗಳಲ್ಲಿ ಮತ್ತು ಚಿಕ್ಕ ಪುಟ್ಟ ಸಮುದಾಯ ಸೇವೆಗಳಿಗೆ ನೀಡಿದ ಕೆಲಸ ಅಥವಾ ಸೇವೆಗಳನ್ನು ಒಳ ಗೊಂಡಿರುವುದಿಲ್ಲ."

**105 ಬಲಾತ್ಕಾರದ ದುಡಿಮೆ ರದ್ದತಿಯ ಒಡಂಬಡಿಕೆ 1957**

**ಪೀಠಿಕೆ**

"ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸರ್ವಸಾಮಾನ್ಯ ಸಮ್ಮೇಳನವು ಕಡ್ಡಾಯದ ಅಥವಾ ಬಲಾತ್ಕಾರದ ದುಡಿಮೆಯು ಗುಲಾಮಿತನಕ್ಕೆ ಸದೃಶವಾದ ಪರಿಸ್ಥಿತಿಗಳಾಗಿ ಬೆಳೆಯುವುದನ್ನು ತಡೆಗಟ್ಟಲು ಅವಶ್ಯಕವಾದ ಎಲ್ಲಾ ಕ್ರಮ ಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುತ್ತದೆ ಮತ್ತು ಸಾಲ ಜೀತ ಹಾಗೂ ಬೇರೆಯವರಿಗೆ ಅಡಿಯಾಳಾಗಿ ಸೇವೆ ಸಲ್ಲಿಸುವುದನ್ನು ಸಂಪೂರ್ಣವಾಗಿ ರದ್ದುಗೊಳಿಸಲು ಆಗ್ರಹಿಸುತ್ತದೆ. . . ."

**ಅನುಚ್ಛೇದ 1:**

"ಈ ಒಡಂಬಡಿಕೆಯನ್ನು ರುಜುಮಾಡಿದ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರತಿಯೊಬ್ಬ ಸದಸ್ಯರು –

(a) ರಾಜಕೀಯ ಒತ್ತಡದ ಸಾಧನವಾಗಿ ಅಥವಾ ಶಿಕ್ಷಣದ ಸಾಧನವಾಗಿ ಅಥವಾ ಸ್ಥಾಪಿತ ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ವ್ಯವಸ್ಥೆಗೆ ತದ್ವಿರುದ್ಧವಾದ ರಾಜಕೀಯ ವಿಚಾರಗಳನ್ನು ಅಥವಾ ಸೈದ್ಧಾಂತಿಕ ವಿಚಾರಗಳನ್ನು ಒಪ್ಪಿ ಕೊಳ್ಳುವುದನ್ನು ಅಥವಾ ವ್ಯಕ್ತಪಡಿಸುವುದನ್ನು ಶಿಕ್ಷಿಸುವ ಸಾಧನವಾಗಿ;

(b) ಆರ್ಥಿಕ ಅಭಿವೃದ್ಧಿಗೆ ದುಡಿಮೆಯನ್ನು ಸಜ್ಜುಗೊಳಿಸುವ ಮತ್ತು ಬಳಸುವ ವಿಧಾನವಾಗಿ;

(c) ದುಡಿಮೆಗಾರರನ್ನು ಹತೋಟಿಯಲ್ಲಿಡುವ ಸಾಧನವಾಗಿ;

(d) ಮುಷ್ಕರಗಳಲ್ಲಿ ಭಾಗವಹಿಸಿದವರಿಗೆ ಶಿಕ್ಷೆಯಾಗಿ;

(e) ಜನಾಂಗೀಯವಾಗಿ, ಸಾಮಾಜಿಕವಾಗಿ, ರಾಷ್ಟ್ರೀಯವಾಗಿ ಅಥವಾ ಧಾರ್ಮಿಕವಾಗಿ ಪಕ್ಷಪಾತ ಮಾಡುವ ಸಾಧನವಾಗಿ ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆಯನ್ನು ನಿಗ್ರಹಿಸಲು ಮತ್ತು ಅದರ ಯಾವುದೇ ರೂಪವನ್ನು ಬಳಸದಿರಲು ವಾಗ್ದಾನ ಮಾಡುತ್ತಾರೆ."

**ಕೆಲಸದ ಮೂಲಭೂತ ತತ್ವಗಳು ಮತ್ತು ಹಕ್ಕುಗಳ ಕುರಿತು ಘೋಷಣೆ, ಜೂನ್ 1998:**

"ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆಯು... 2. ಘೋಷಿಸುವುದೇನೆಂದರೆ ಎಲ್ಲಾ ಸದಸ್ಯರು ಈ ಒಡಂಬಡಿಕೆಯನ್ನು ರುಜುಪಡಿಸದಿದ್ದರೂ ಅವರು ಈ ಸಂಘಟನೆಯಲ್ಲಿ ಸದಸ್ಯರಾಗಿದ್ದಾರೆ ಎಂಬ ಒಂದು ಕಾರಣದಿಂದಲೇ ಈ ಒಡಂಬಡಿಕೆಯ ವಿಷಯವಾದ ಮೂಲಭೂತ ಹಕ್ಕುಗಳ ಕುರಿತಾದ ತತ್ವಗಳನ್ನು ಪ್ರಾಮಾಣಿಕತೆಯಿಂದ ಮತ್ತು (ಸಂಘಟನೆಯ) ಸಂವಿಧಾನಕ್ಕೆ ತಕ್ಕುದಾಗಿ ಗೌರವಿಸುವ, ಉತ್ತೇಜಿಸುವ ಮತ್ತು ಕಾರ್ಯರೂಪಕ್ಕೆ ತರುವ ನಿರ್ಬಂಧ ಅವರ ಮೇಲೆ ಇದೆ.

(ಆ ತತ್ವಗಳು) ಯಾವುವೆಂದರೆ –

(a)ಸಂಘಟನಾ ಸ್ವಾತಂತ್ರ್ಯ ಮತ್ತು ಒಟ್ಟಾಗಿ ಚೌಕಾಶಿ ಮಾಡುವ ಹಕ್ಕಿಗೆ ಪರಿಣಾಮಕಾರಿ ರೀತಿಯಲ್ಲಿ ಒಪ್ಪಿಗೆ ನೀಡುವುದು;

(b) ಎಲ್ಲಾ ತರಹದ ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆಗಳ ನಿರ್ಮೂಲನೆ ಮಾಡುವುದು;

(c) ಬಾಲಕಾರ್ಮಿಕತೆಯನ್ನು ಪರಿಣಾಮಕಾರಿಯಾಗಿ ರದ್ದು ಮಾಡುವುದು; ಮತ್ತು

(d) ಉದ್ಯೋಗ ಮತ್ತು ವೃತ್ತಿಗಳಲ್ಲಿ ತೋರಿಸುವ ಭೇದಭಾವವನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವುದು."

**182 ಅತ್ಯಂತ ಕೆಟ್ಟ ರೀತಿಯ ಬಾಲಕಾರ್ಮಿಕತೆಯ ಕುರಿತು ಒಡಂಬಡಿಕೆ, 1999**

**ಅನುಚ್ಛೇದ 3:**

"ಈ ಒಡಂಬಡಿಕೆಯ ಅರ್ಥವ್ಯಾಪ್ತಿಯಲ್ಲಿ ಅತ್ಯಂತ ಕೆಟ್ಟ ರೀತಿಯ ಬಾಲಕಾರ್ಮಿಕತೆ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

(1) ಮಕ್ಕಳ ಮಾರಾಟ ಹಾಗೂ ವ್ಯಾಪಾರ, ಸಾಲ ಜೀತ ಹಾಗೂ ಬೇರೆಯವರಿಗೆ ಅಡಿಯಾಳಾಗಿ ಸಲ್ಲಿಸುವ ಸೇವೆ ಮತ್ತು ಸಶಸ್ತ್ರ ಘರ್ಷಣೆಯ (ಯುದ್ಧದ) ಸಂದರ್ಭದಲ್ಲಿ ಮಕ್ಕಳನ್ನು ಬಲಾತ್ಕಾರದಿಂದ ಅಥವಾ ಕಡ್ಡಾಯದಿಂದ ಸೇನೆಗೆ

ಸೇರಿಸುವುದನ್ನೂ ಒಳಗೊಂಡ ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆಯಂತಹ ಎಲ್ಲಾ ತರಹದ ಗುಲಾಮಿತನ ಅಥವಾ ಗುಲಾಮಿತನವನ್ನು ಹೋಲುವ ಕಾರ್ಯಾಚರಣೆಗಳು;

(2) ವೇಶ್ಯಾವಾಟಿಕೆಗೆ, ಲಂಪಟ ಸಾಹಿತ್ಯ/ಪುಸ್ತಕಗಳನ್ನು ತಯಾರಿಸಲು ಅಥವಾ ಅಶ್ಲೀಲ ಪ್ರದರ್ಶನಗಳಲ್ಲಿ ಒಂದು ಮಗುವನ್ನು ಬಳಸುವುದು, ಪಡೆಯುವುದು ಅಥವಾ ಒಪ್ಪಿಸುವುದು;

(3) ಕಾನೂನು ವಿರೋಧಿ ಕಾರ್ಯಗಳಲ್ಲಿ, ಅವುಗಳಲ್ಲಿ ವಿಶಿಷ್ಟವಾಗಿ ಅಂತರ್ರಾಷ್ಟ್ರೀಯ ಒಪ್ಪಂದಗಳಲ್ಲಿ ವ್ಯಾಖ್ಯಾನಿಸಿದಂತಹ ಮಾದಕ ವಸ್ತುಗಳ ತಯಾರಿಕೆ ಮತ್ತು ವ್ಯಾಪಾರಗಳಲ್ಲಿ ಒಂದು ಮಗುವನ್ನು ಬಳಸುವುದು, ಪಡೆಯುವುದು ಅಥವಾ ಒಪ್ಪಿಸುವುದು;

(4) ಕೆಲಸದ ಸ್ವರೂಪ ಮತ್ತು ಅದನ್ನು ಕಾರ್ಯಗತಗೊಳಿಸುವಾಗ ಇರುವ ಪರಿಸ್ಥಿತಿಗಳಿಂದ ಮಕ್ಕಳ ಆರೋಗ್ಯ, ರಕ್ಷಣೆ ಮತ್ತು ಶೀಲಕ್ಕೆ ಹಾನಿ ತರುವ ಸಾಧ್ಯತೆ ಇದ್ದರೆ ಅಂತಹ ಕೆಲಸ."

**ವಿಶ್ವ ಸಂಸ್ಥೆಯ ಒಡಂಬಡಿಕೆಗಳು**

**ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ, 1948**

**ಅನುಚ್ಛೇದ 4:**

"ಗುಲಾಮಗಿರಿ ಅಥವಾ ದಾಸ್ಯದಲ್ಲಿ ಯಾರನ್ನೂ ಹಿಡಿದಿಡಬಾರದು; ಪ್ರತಿಯೊಂದು ಸ್ವರೂಪದ ಗುಲಾಮ ಪದ್ಧತಿ ಮತ್ತು ಗುಲಾಮರ ಮಾರಾಟ ನಿಷೇಧಿಸಲ್ಪಟ್ಟಿದೆ."

**ಅನುಚ್ಛೇದ 23:**

"(1) ಪ್ರತಿಯೊಬ್ಬರಿಗೂ ಕೆಲಸದ ಹಕ್ಕು, ಒಂದು ಉದ್ಯೋಗವನ್ನು ಸ್ವತಂತ್ರವಾಗಿ ಆಯ್ಕೆ ಮಾಡುವ ಹಕ್ಕು, ನ್ಯಾಯಯುತ ವಾದ ಮತ್ತು ಅನುಕೂಲಕರ ಕೆಲಸದ ಪರಿಸ್ಥಿತಿಗಳನ್ನು ಹೊಂದುವ ಹಕ್ಕು ಮತ್ತು ನಿರುದ್ಯೋಗದ ಸಂದರ್ಭದಲ್ಲಿ ರಕ್ಷಣೆಯ ಹಕ್ಕುಗಳು ಇವೆ. ...

(3) ಕೆಲಸ ಮಾಡುವ ಪ್ರತಿಯೊಬ್ಬರಿಗೂ ತನ್ನ ಹಾಗೂ ತನ್ನ ಕುಟುಂಬದ ಮಾನವ ಘನತೆಗೆ ತಕ್ಕುದಾದ ಜೀವನವನ್ನು ಒದಗಿಸುವಂತಹ ನ್ಯಾಯಯುತವಾದ ಮತ್ತು ಅನುಕೂಲಕರ ಮಜೂರಿಯನ್ನು ಪಡೆಯುವ ಮತ್ತು ಅವಶ್ಯಕತೆ ಇದ್ದರೆ ಇತರ ಸಾಮಾಜಿಕ ರಕ್ಷಣೆಗಳನ್ನು ಪೂರಕವಾಗಿ ಪಡೆಯುವ ಹಕ್ಕು ಇದೆ."

**ಅನುಚ್ಛೇದ 24:**

"ಪ್ರತಿಯೊಬ್ಬರಿಗೂ ವಿಶ್ರಾಂತಿ ಮತ್ತು ವಿರಾಮದ ಹಕ್ಕು ಇದೆ. ಅದು ಕೆಲಸದ ಕಾಲಾವಧಿಗೆ ಸಮಂಜಸವಾದ ಮಿತಿ ಯನ್ನೂ ನಿಯತಕಾಲಿಕವಾಗಿ ವೇತನ ಸಮೇತ ರಜಾದಿನಗಳನ್ನೂ ಒಳಗೊಂಡಂತಿರಬೇಕು."

**ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಕುರಿತು ಅಂತರ್ರಾಷ್ಟ್ರೀಯ ಒಡಂಬಡಿಕೆ** (ಜಾರಿಗೆ ಬಂದಿರುವುದು 23 ಮಾರ್ಚ್ 1976ರಂದು)

**ಅನುಚ್ಛೇದ 8:**

"1. ಗುಲಾಮಗಿರಿಯಲ್ಲಿ ಯಾರನ್ನೂ ಹಿಡಿದಿಡಬಾರದು; ಪ್ರತಿಯೊಂದು ಸ್ವರೂಪದ ಗುಲಾಮಗಿರಿ ಮತ್ತು ಗುಲಾಮರ ವ್ಯಾಪಾರ ನಿಷೇಧಿಸಲ್ಪಟ್ಟಿದೆ.

2. ದಾಸ್ಯದಲ್ಲಿ ಯಾರನ್ನೂ ಹಿಡಿದಿಡಬಾರದು.

3. (a) ಯಾರೂ ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆಯನ್ನು ಸಲ್ಲಿಸುವಂತಿರಬಾರದು;

(b) 3(a) ಪ್ಯಾರಾವು ಅಪರಾಧವೊಂದಕ್ಕೆ ಕಠಿಣ ಕೆಲಸದೊಂದಿಗೆ ಜೈಲುವಾಸದ ಶಿಕ್ಷೆ ವಿಧಿಸಬಹುದಾದ ದೇಶಗಳಲ್ಲಿ ಅರ್ಹ ನ್ಯಾಯಾಲಯವೊಂದು ವಿಧಿಸಿದ ಅಂತಹ ಶಿಕ್ಷೆಯನ್ನು ಕಾರ್ಯಗತಗೊಳಿಸಲು ಮಾಡುವ ಕೆಲಸವನ್ನು ಪ್ರತಿ ಬಂಧಿಸುವುದಿಲ್ಲ;

(c) ಈ ಪ್ಯಾರಾದ ಅರ್ಥವ್ಯಾಪ್ತಿಯಲ್ಲಿ 'ಬಲಾತ್ಕಾರದ ಅಥವಾ ಕಡ್ಡಾಯದ ದುಡಿಮೆಯು' ಈ ಕೆಳಗಿನವುಗಳನ್ನು ಒಳಗೊಂಡಿರುವುದಿಲ್ಲ:

(i) (b) ಪ್ಯಾರಾದಲ್ಲಿ ಉಲ್ಲೇಖಿಸಲಾದ ಕೆಲಸ ಬಿಟ್ಟು ನ್ಯಾಯಾಲಯವೊಂದರ ನ್ಯಾಯಸಮ್ಮತ ಆದೇಶವೊಂದರ ಪರಿಣಾಮವಾಗಿ ಸೆರೆವಾಸದಲ್ಲಿದ್ದ ಅಥವಾ ಅಂತಹ ಸೆರೆವಾಸದಿಂದ ಷರತ್ತಿನ ಮೇಲೆ ಬಿಡುಗಡೆಯಾದ ಸಮಯದಲ್ಲಿ ಒಬ್ಬ ವ್ಯಕ್ತಿಗೆ ವಿಧಿಸಬಹುದಾದ ಯಾವುದೇ ಕೆಲಸ ಅಥವಾ ಸೇವೆ;

(ii) ಸೈನಿಕ ಸೇವೆಯಡಿ ಸಲ್ಲಿಸುವ ಸೇವೆ ಮತ್ತು ಅಂತಃಕರಣದ ನಿಮಿತ್ತ ಸೈನಿಕ ಸೇವೆಯನ್ನು ಒಪ್ಪದಿರುವುದನ್ನು ಮಾನ್ಯ ಮಾಡಿರುವ ದೇಶಗಳಲ್ಲಿ, ಅಂತಃಕರಣದ ನಿಮಿತ್ತ ಸೈನಿಕ ಸೇವೆಯನ್ನು ಒಪ್ಪದಿರುವವರಿಗೆ ಕಾನೂನಿನಲ್ಲಿ ವಿಧಿಸಬಹುದಾದ ರಾಷ್ಟ್ರೀಯ ಸೇವೆ;

(iii) ಒಂದು ಸಮುದಾಯದ ಜೀವನ ಅಥವಾ ಕ್ಷೇಮವನ್ನು ನಾಶಗೊಳಿಸುವಂತಿದ್ದ ತುರ್ತು ಪರಿಸ್ಥಿತಿ ಅಥವಾ ಆಪತ್ತಿನ ಸಂದರ್ಭದಲ್ಲಿ ಪಡೆದ ಯಾವುದೇ ಸೇವೆ;

(iv) ಸಾಮಾನ್ಯ ನಾಗರಿಕ ಕರ್ತವ್ಯಗಳನ್ನು ಪಾಲಿಸಲು ಸಲ್ಲಿಸಿದ ಯಾವುದೇ ಸೇವೆ."

**ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಕುರಿತು ಅಂತರ್ರಾಷ್ಟ್ರೀಯ ಒಡಂಬಡಿಕೆ** (ಜಾರಿಗೆ ಬಂದಿರುವುದು 3 ಜನವರಿ 1976ರಂದು)

**ಅನುಚ್ಛೇದ 7:**

"ಈ ಒಡಂಬಡಿಕೆಯನ್ನು ರುಜುಪಡಿಸಿದ ರಾಷ್ಟ್ರಗಳು ಪ್ರತಿಯೊಬ್ಬರಿಗೂ ನ್ಯಾಯಯುತ ಮತ್ತು ಅನುಕೂಲಕರ ಕೆಲಸದ ಪರಿಸ್ಥಿತಿಗಳನ್ನು ಅನುಭವಿಸುವ ಹಕ್ಕನ್ನು ಒಪ್ಪಿಕೊಳ್ಳಬೇಕು. ಆ ಹಕ್ಕು ಪ್ರತ್ಯೇಕವಾಗಿ ಈ ಕೆಳಗಿನವುಗಳನ್ನು ಭದ್ರಪಡಿಸಬೇಕು:

(a) ಎಲ್ಲಾ ಕಾರ್ಮಿಕರಿಗೆ ಕನಿಷ್ಟವಾಗಿ ಈ ಕೆಳಗಿನವುಗಳನ್ನು ಒಳಗೊಂಡಿರುವ ಮಜೂರಿ:

(i) ನ್ಯಾಯಸಮ್ಮತ ಕೂಲಿ ಮತ್ತು ಸಮಬೆಲೆಯ ಕೆಲಸಕ್ಕೆ ಯಾವುದೇ ತಾರತಮ್ಯವಿಲ್ಲದೆ ಸಮಮಜೂರಿ, ಪ್ರತ್ಯೇಕವಾಗಿ ಮಹಿಳೆಯರಿಗೆ ಸಮಕೆಲಸಕ್ಕೆ ಸಮವೇತನದೊಂದಿಗೆ ಪುರುಷರು ಅನುಭವಿಸುವ ಕೆಲಸದ ಪರಿಸ್ಥಿತಿಗಳಿಗಿಂತ ಕೆಳಮಟ್ಟದ್ದಲ್ಲದ ಕೆಲಸದ ಪರಿಸ್ಥಿತಿಗಳನ್ನು ಖಾತ್ರಿಗೊಳಿಸುವುದು;

(ii) ಈ ಒಡಂಬಡಿಕೆಗೆ ಅನುಸಾರವಾಗಿ ಅವರಿಗೂ ಅವರ ಕುಟುಂಬಗಳಿಗೂ ಯೋಗ್ಯ ಜೀವನ;

(b) ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಪರಿಸ್ಥಿತಿಗಳು;

(c) ವಿಶ್ರಾಂತಿ, ವಿರಾಮ ಮತ್ತು ಸಮಂಜಸವಾದ ಕೆಲಸದ ಕಾಲಾವಧಿಯ ಮಿತಿ ಹಾಗೂ ನಿಯತಕಾಲಿಕವಾಗಿ ವೇತನ ಸಮೇತ ರಜಾದಿನಗಳು, ಜೊತೆಗೆ ಸಾರ್ವಜನಿಕ ರಜಾದಿನಗಳಂದೂ ಮಜೂರಿ."

**ಭಾರತೀಯ ಸಂವಿಧಾನ**

**ಅನುಚ್ಛೇದ 21:** ಜೀವನ ಮತ್ತು ಸ್ವಾತಂತ್ರ್ಯದ ಹಕ್ಕನ್ನು ಖಾತ್ರಿಗೊಳಿಸುತ್ತದೆ. ಮುಕ್ತ ಚಲನೆಯ ಹಕ್ಕು, ತಾನು ಬಯಸಿದ ಸಮಯದಲ್ಲಿ ಊಟಮಾಡುವ, ಮಲಗುವ ಮತ್ತು ಕೆಲಸಮಾಡುವ ಹಕ್ಕು, ಅಮಾನವೀಯ ಹಾಗೂ ಅವಮಾನಕರವಾಗಿ ನೋಡಿಕೊಳ್ಳುವ ನಡವಳಿಕೆಯಿಂದ ಮುಕ್ತವಾಗಿರುವ ಹಕ್ಕು, ವ್ಯಕ್ತಿ ಸಮಗ್ರತೆ ಹಾಗೂ ಘನತೆಯ ಹಕ್ಕು, ರಕ್ಷಣೆಯನ್ನು ಒದಗಿಸುವ ಕಾರ್ಮಿಕ ಕಾನೂನಿನ ಫಲಗಳನ್ನು ಅನುಭವಿಸುವ ಹಕ್ಕು ಮತ್ತು ಶೀಘ್ರ ನ್ಯಾಯ ಪಡೆಯುವ ಹಕ್ಕು ಇವೆಲ್ಲಾ ಸ್ವಾತಂತ್ರ್ಯದ ಹಕ್ಕನ್ನು ಒಳಗೊಂಡಿವೆ ಎಂದು ಸರ್ವೋಚ್ಛ ನ್ಯಾಯಾಲಯವು ಅರ್ಥೈಸಿದೆ.

**ಅನುಚ್ಛೇದ 23:** ಎಲ್ಲಾ ತರಹದ ಬಲಾತ್ಕಾರದ ದುಡಿಮೆಯನ್ನು ನಿಷೇಧಿಸುತ್ತದೆ. ಅದರ ಪ್ರಕಾರ, "ಮನುಷ್ಯರ ವ್ಯಾಪಾರ, *ಬೇಗಾರ್* ಮತ್ತು ಅದೇ ತರಹದ ಇತರೆ ಬಲಾತ್ಕಾರದ ದುಡಿಮೆಯ ಸ್ವರೂಪಗಳನ್ನು ನಿಷೇಧಿಸಲಾಗಿದೆ ಹಾಗೂ ಈ ನಿಷೇಧದ ಯಾವುದೇ ಉಲ್ಲಂಘನೆಯು ಕಾನೂನಾತ್ಮಕವಾಗಿ ಶಿಕ್ಷಿಸಲ್ಪಡುವ ಅಪರಾಧವಾಗುವುದು."

**ಬೇಗಾರ್** ಎಂದರೆ "ಒಬ್ಬ ವ್ಯಕ್ತಿಯು ಯಾವುದೇ ಸಂಭಾವನೆ ಇಲ್ಲದೆ ಕೆಲಸ ಮಾಡುವ ನಿರ್ಬಂಧವಿರುವ ಬಲಾತ್ಕಾರದ ದುಡಿಮೆಯ ಸ್ವರೂಪ." (People's Union for Democratic Rights v. Union of India, AIR 1982 SC 1473, ಪ್ಯಾರಾಗಳು 14 – 86).

**ಅನುಚ್ಛೇದ 24:** 14 ವರ್ಷಗಳಿಗಿಂತ ಕಡಿಮೆ ಇರುವ ಮಕ್ಕಳನ್ನು ಅಪಾಯಕಾರಿ ವೃತ್ತಿಗಳಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.

**ಅನುಚ್ಛೇದ 37 (e):** ತಮ್ಮ ವಯಸ್ಸಿಗೆ ಒಪ್ಪದ ಕಸುಬುಗಳಿಗೆ ಸೇರುವುದನ್ನು ತಡೆಹಿಡಿಯುವ ಕರ್ತವ್ಯ ಪ್ರಭುತ್ವದ್ದು.

**ಅನುಚ್ಛೇದ 39 (f):** ಶೋಷಣೆಯಾಗದಂತೆ ಮತ್ತು ಶೀಲಕ್ಕೆ ಕುಂದು ಬರುವಂತಿರುವ ಹಾಗೂ ಜೀವನದ ಅಗತ್ಯಗಳು ಪೂರೈಕೆಯಾಗದ ಪರಿಸ್ಥಿತಿಗಳಲ್ಲಿ ಬಿಟ್ಟುಬಿಡದಂತೆ ಮಕ್ಕಳಿಗೆ ರಕ್ಷಣೆ ಒದಗಿಸಬೇಕು.

**ಭಾರತೀಯ ದಂಡ ಸಂಹಿತೆ**

**ಪರಿಚ್ಛೇದ 374.** "ಯಾವುದೇ ವ್ಯಕ್ತಿಯ ಇಚ್ಛೆಯ ವಿರುದ್ಧ ಆತನನ್ನು ದುಡಿಸಲು ಕಾನೂನುಬಾಹಿರವಾಗಿ ಬಲಾತ್ಕಾರ ಮಾಡುವ ಯಾರಿಗೂ ಒಂದು ವರ್ಷ ತನಕದ ಎರಡೂ ಬಗೆಯ ಜೈಲುವಾಸದಲ್ಲಿ ಒಂದು ರೀತಿಯ ಜೈಲುವಾಸ ಅಥವಾ ದಂಡ ಅಥವಾ ಜೈಲುವಾಸ ಮತ್ತು ದಂಡ ವಿಧಿಸುವ ಶಿಕ್ಷೆಯನ್ನು ವಿಧಿಸಬಹುದು."

**ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ 1976**

ಜೀತಪದ್ಧತಿ ನಿರ್ಮೂಲನೆಯನ್ನು ಕಾಂಗ್ರೆಸ್ ಪಕ್ಷದ 20 ಅಂಶಗಳ ಕಾರ್ಯಕ್ರಮದಲ್ಲಿ ಅಂದಿನ ಪ್ರಧಾನ ಮಂತ್ರಿಯಾದ ದಿವಂಗತ ಇಂದಿರಾ ಗಾಂಧಿಯವರು ಸೇರಿಸುವುದರೊಂದಿಗೆ ಜೀತ ವಿಷಯದ ಬಗ್ಗೆ ರಾಷ್ಟ್ರೀಯವಾಗಿ ರಾಜಕೀಯ ಸಂಕಲ್ಪ ತಾಳುವಂತಾಯಿತು. 20 ಅಂಶಗಳಲ್ಲಿ 5ನೇ ಅಂಶವು ಹೇಳುವುದೇನೆಂದರೆ, "ಎಲ್ಲೆಲ್ಲಿ ಜೀತವು ಅಸ್ತಿತ್ವದಲ್ಲಿದೆಯೋ ಅಲ್ಲೆಲ್ಲಾ ಅದನ್ನು ಕಾನೂನು ಬಾಹಿರವೆಂದು ಘೋಷಿಸಲಾಗುವುದು." ಈ ಅಂಶದ ಅನುಷ್ಠಾನಕ್ಕೋಸ್ಕರ ಜೀತ ಪದ್ಧತಿ ನಿರ್ಮೂಲನೆ ಅಧ್ಯಾದೇಶ, 1975ನ್ನು 25 ಅಕ್ಟೋಬರ್ 1975ರಲ್ಲಿ ಹೊರಡಿಸ ಲಾಯಿತು. ನಂತರ 9 ಫೆಬ್ರವರಿ 1976ರಲ್ಲಿ ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976ನ್ನು ಜಾರಿಗೆ ತಂದು ಅದು 25 ಅಕ್ಟೋಬರ್ 1975ರಿಂದಲೇ ಊರ್ಜಿತವಾಗಿದೆ ಎಂದು ಪರಿಗಣಿಸಲಾಯಿತು.

**ಪ್ರಕರಣ 2ರಲ್ಲಿಯ ಕೆಲವು ವ್ಯಾಖ್ಯಾನಗಳು:**

" **'ಮುಂಗಡ'** ಎಂದರೆ, (ಇದರಲ್ಲಿ ಇನ್ನು ಮುಂದೆ ಸಾಲಿಗನೆಂದು ಕರೆಯಲಾಗುವ) ಒಬ್ಬ ವ್ಯಕ್ತಿಯು (ಇದರಲ್ಲಿ ಇನ್ನು ಮುಂದೆ ಸಾಲಗಾರನೆಂದು ಕರೆಯಲಾಗುವ) ಇನ್ನೊಬ್ಬ ವ್ಯಕ್ತಿಗೆ ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಅಥವಾ ಭಾಗಶಃ ನಗದು ರೂಪದಲ್ಲಿ ಅಥವಾ ಭಾಗಶಃ ವಸ್ತು ರೂಪದಲ್ಲಿ ಕೊಟ್ಟ ಮುಂಗಡವೆಂದು ಅರ್ಥ. 2(a)"

“ ‘ನಾಮ ಮಾತ್ರ ಮಜೂರಿ’ ಎಂದರೆ

(a) ಅದೇ ಅಥವಾ ಅಂತದೇ ದುಡಿಮೆಯ ಸಂಬಂಧದಲ್ಲಿ ಸರ್ಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಮೇರೆಗೆ ಗೊತ್ತುಪಡಿಸಿದ ಕನಿಷ್ಟ ಮಜೂರಿಗಿಂತ ಕಡಿಮೆಯಿರುವ ಮಜೂರಿ, ಮತ್ತು

(b) ಯಾವುದೇ ದುಡಿಮೆಯ ಪ್ರಕಾರಕ್ಕೆ ಸಂಬಂಧಿಸಿದಂತೆ ಅಂತಹ ಕನಿಷ್ಟ ಮಜೂರಿಯನ್ನು ಗೊತ್ತುಪಡಿಸದಿರುವಲ್ಲಿ, ಅದೇ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ದುಡಿಮೆದಾರರಿಗೆ ಅದೇ ಅಥವಾ ಅಂಥದೇ ದುಡಿಮೆಗಾಗಿ ಸಾಮಾನ್ಯವಾಗಿ ಸಂದಾಯ ಮಾಡುತ್ತಿರುವ ಮಜೂರಿಗಿಂತಲೂ ಕಡಿಮೆಯಿರುವ ಮಜೂರಿ. 2(i)”

“ **‘ಒಪ್ಪಂದ’** ಎಂದರೆ, ಸಾಲಗಾರ ಮತ್ತು ಸಾಲಿಗನ ನಡುವಿನ (ಲಿಖಿತ ಅಥವಾ ಬಾಯಿ ಮಾತಿನ ಅಥವಾ ಭಾಗಶಃ ಲಿಖಿತ ಮತ್ತು ಭಾಗಶಃ ಬಾಯಿ ಮಾತಿನ ಒಪ್ಪಂದವೆಂದು ಅರ್ಥ. ಮತ್ತು ಅದು ಸಂಬಂಧಪಟ್ಟ ಪ್ರದೇಶದಲ್ಲಿರುವ ಯಾವುದೇ ಪ್ರಚಲಿತ ಸಾಮಾಜಿಕ ಪದ್ಧತಿ ಮೇರೆಗೆ ಅಸ್ತಿತ್ವದಲ್ಲಿದೆಯೆಂದು ಪೂರ್ವಭಾವನೆ ಮಾಡಲಾಗಿರುವ ಬಲಾತ್ಕಾರದ ದುಡಿಮೆಗೆ ಅವಕಾಶ ಕಲ್ಪಿಸುವ ಒಪ್ಪಂದವನ್ನು ಒಳಗೊಳ್ಳುತ್ತದೆ.

**ವಿವರಣೆ.** – ಸಾಲಗಾರ ಮತ್ತು ಸಾಲಿಗನ ನಡುವಿನ ಒಪ್ಪಂದದ ಅಸ್ತಿತ್ವವನ್ನು ಸಾಮಾನ್ಯವಾಗಿ ಸಾಮಾಜಿಕ ಪದ್ಧತಿಯ ಮೇರೆಗೆ, ಬಲಾತ್ಕಾರದ ದುಡಿಮೆಯ ಕೆಳಕಂಡ ಪ್ರಕಾರಗಳಿಗೆ ಸಂಬಂಧಿಸಿದಂತೆ, ಪೂರ್ವಭಾವನೆ ಮಾಡಲಾಗುತ್ತದೆ, ಎಂದರೆ:-

ಆದಿಯಾಮಾರ್, ಬಾರಾಮಾಸಿಯ, ಬಸಹಯಾ, ಬೇಥೂ, ಭಗೇಲಾ, ಚೆರೂಮಾರ್, ಗಾರುಗಲ್ಲು, ಹಾಲಿ, ಹಾರವಯಿ, ಹೊಲ್ಯ, ಜಾನಾ, **ಜೀತ**, ಕಾಮಿಯ, ಖುಂದಿತ್-ಮುಂಡಿತ್, ಕುತಿಯ, ಲಖೇರಿ, ಮುಂಝಿ, ಮೇಟ್, ಮುನೀಷ್ ಪದ್ಧತಿ, ನಿತ್-ಮಜೂರ್, ಪಲೇರು, ಪಡಿಯಾಲ್, ಪನ್ನಯಿಲಾಲ್, ಸಾಗಡಿ, ಸಂಜಿ, ಸಂಜಾವತ್, ಸೇವಕ, ಸೇವಕಿಯಾ, ಸೆರಿ, ವೆಟ್ಟಿ 2(b).”

“ **‘ಜೀತ-ಸಾಲ’** ಎಂದರೆ, ಜೀತಗಾರಿಕೆ ಪದ್ಧತಿಯ ಮೇರೆಗೆ ಅಥವಾ ಅದಕ್ಕನುಸಾರವಾಗಿ ಜೀತದಾಳು ಪಡೆದ ಅಥವಾ ಪಡೆದನೆಂದು ಪೂರ್ವಭಾವನೆ ಮಾಡಲಾದ ಮುಂಗಡ 2(d).”

“ **‘ಜೀತಗಾರಿಕೆ’** (ಜೀತ) ಎಂದರೆ, ಜೀತಗಾರಿಕೆ ಪದ್ಧತಿಯ ಮೇರೆಗೆ ಮಾಡುವ ಯಾವುದೇ ದುಡಿಮೆ ಅಥವಾ ಸೇವೆ. 2(e)”

“ **‘ಜೀತದಾಳು’** ಎಂದರೆ, ಒಂದು ಜೀತ-ಸಾಲವನ್ನು ಮಾಡುವ ಅಥವಾ ಮಾಡಿರುವ, ಅಥವಾ ಮಾಡಿರುವನೆಂದು ಪೂರ್ವಭಾವನೆ ಮಾಡಲಾದ ಒಬ್ಬ ದುಡಿಮೆಗಾರ 2(f).”

“**‘ಜೀತಗಾರಿಕೆ ಪದ್ಧತಿ’** (ಜೀತ ಪದ್ಧತಿ) ಎಂದರೆ, ಯಾವ ಪದ್ಧತಿ ಮೇರೆಗೆ ಒಬ್ಬ ಸಾಲಗಾರನು, ಕೆಳಕಂಡವುಗಳಿಗಾಗಿ ಸಾಲಿಗನೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೋ, ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡಲಾಗಿದೆಯೋ ಆ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿ:-

i) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ತೆಗೆದುಕೊಂಡಿರುವ ಮುಂಗಡದ (ಅಂತಹ ಮುಂಗಡದ ಬಗ್ಗೆ ಯಾವುದೇ ದಸ್ತಾವೇಜಿನ ಸಾಕ್ಷ್ಯವಿರಲಿ, ಇಲ್ಲದಿರಲಿ) ಪ್ರತಿಫಲಕ್ಕಾಗಿ ಮತ್ತು ಅಂತಹ ಮುಂಗಡದ ಮೇಲೆ ಬಾಕಿಯಿರುವ ಬಡ್ಡಿಯೇನಾದರೂ ಇದ್ದರೆ ಅದರ ಪ್ರತಿಫಲಕ್ಕಾಗಿ; ಅಥವಾ

ii) ಯಾವುದೇ ರೂಢಿಗತ ಅಥವಾ ಸಾಮಾಜಿಕ ಬಾಧ್ಯತೆಗೆ ಅನುಸಾರವಾಗಿ; ಅಥವಾ

iii) ಉತ್ತರಾಧಿಕಾರದಿಂದ ತನಗೆ ಪ್ರಾಪ್ತವಾದ ಯಾವುದೇ ಬಾಧ್ಯತೆಗೆ ಅನುಸಾರವಾಗಿ; ಅಥವಾ

iv) ತಾನು ಅಥವಾ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ಪಡೆದಿದ್ದ ಯಾವುದೇ ಆರ್ಥಿಕ ಪ್ರತಿಫಲಕ್ಕಾಗಿ; ಅಥವಾ

v) ತಾನು ಯಾವುದೇ ನಿರ್ದಿಷ್ಟ ಜಾತಿ ಅಥವಾ ಪಂಗಡದಲ್ಲಿ ಹುಟ್ಟಿದ ಕಾರಣದಿಂದಾಗಿ,-

ಅವನು,

1. ತಾನಾಗಿ ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ಮೂಲಕ ಸಾಲಿಗನಿಗೆ, ಅಥವಾ ಸಾಲಿಗನ ಪ್ರಯೋಜನಕ್ಕಾಗಿ ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಮಜೂರಿಯಿಲ್ಲದೆಯೆ ಅಥವಾ ನಾಮಮಾತ್ರ ಮಜೂರಿಗಾಗಿ ದುಡಿಮೆ ಅಥವಾ ಸೇವೆ ಸಲ್ಲಿಸಬೇಕಾಗುವುದು, ಅಥವಾ

2. ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಉದ್ಯೋಗ ಸ್ವಾತಂತ್ರ್ಯವನ್ನು ಅಥವಾ ಜೀವನೋಪಾಯದ ಇತರ ಮಾರ್ಗಗಳನ್ನು ಕಳೆದುಕೊಳ್ಳುವುದು, ಅಥವಾ

3. ಭಾರತದ ರಾಜ್ಯ ಕ್ಷೇತ್ರದಾದ್ಯಂತ ಸ್ವತಂತ್ರವಾಗಿ ಸಂಚರಿಸಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಅಥವಾ

4. ತನ್ನ ಯಾವುದೇ ಸ್ವತ್ತನ್ನು ಅಥವಾ ತನ್ನ ದುಡಿಮೆಯ ಅಥವಾ ತನ್ನ ಕುಟುಂಬದ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ದುಡಿಮೆಯಿಂದ ಗಳಿಸಿದ ಯಾವುದೇ ಉತ್ಪಾದನೆಯನ್ನು ವಿನಿಯೋಗಿಸಲು ಅಥವಾ ಮಾರುಕಟ್ಟೆ ಮೌಲ್ಯದಲ್ಲಿ ಮಾರಾಟ ಮಾಡಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು.

ಮತ್ತು ಯಾವುದರ ಮೇರೆಗೆ ಸಾಲಗಾರನ ಒಬ್ಬ ಜಾಮೀನುದಾರನು, ಸಾಲಗಾರನು ಋಣವನ್ನು ತೀರಿಸಲು ತಪ್ಪಿದ ಸಂದರ್ಭದಲ್ಲಿ ಸಾಲಗಾರನ ಪರವಾಗಿ ತಾನು ಜೀತಗಾರಿಕೆಯನ್ನು ಮಾಡುವುದಾಗಿ ಸಾಲಿಗನೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳುವನೋ ಅಥವಾ ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡ ಲಾಗಿದೆಯೋ ಆ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿಯನ್ನು ಇದು ಒಳಗೊಳ್ಳುತ್ತದೆ.

**ವಿವರಣೆ:** ಸಂಶಯಗಳ ನಿವಾರಣೆಗಾಗಿ (1985ರ ತಿದ್ದುಪಡಿಯಿಂದ) ಘೋಷಿಸಿರುವುದೇನೆಂದರೆ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ 0ಯಾವುದೇ ಪದ್ಧತಿ ಮೇರೆಗೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಅಧಿನಿಯಮ, 1970 (1970ರ 73)ರ ಪರಿಚ್ಛೇಧ 2 ಉಪ ಪರಿಚ್ಛೇಧ (1) ವಾಕ್ಯಭಾಗ (c)0ಯಲ್ಲಿ ವ್ಯಾಖ್ಯಾನಿಸಲಾದ ಅಥವಾ ಅಂತರ್‌ರಾಜ್ಯ ವಲಸೆ ಕಾರ್ಮಿಕ (ಉದ್ಯೋಗದ ನಿ0ಯಂತ್ರಣ ಮತ್ತು ಸೇವೆಯ ಪರಿಸ್ಥಿತಿಗಳು) ಅಧಿನಿಯಮ, 1979 (1979ರ 30)ರ ಪರಿಚ್ಛೇಧ 2 ಉಪ ಪರಿಚ್ಛೇಧ (1) ವಾಕ್ಯಭಾಗ (e) ಯಲ್ಲಿ ವ್ಯಾಖ್ಯಾನಿಸಲಾದ ಒಬ್ಬ ಕಾರ್ಮಿಕನು ಮೇಲಿನ ವಾಕ್ಯಭಾಗದ ಉಪ ಪರಿಚ್ಛೇಧ (1)ರಲ್ಲಿ ನಮೂದಿಸಲಾದ ಪರಿಸ್ಥಿತಿಗಳಲ್ಲಿ ದುಡಿಮೆ ಅಥವಾ ಸೇವೆಯನ್ನು ಸಲ್ಲಿಸುವ ನಿರ್ಬಂಧವಿದೆಯೋ ಅಥವಾ ಉಪಪರಿಚ್ಛೇಧ 2ರಿಂದ 4ರಲ್ಲಿ ನಮೂದಿಸಿದ ನಿರ್ಬಂಧಗಳಿಗೆ ಒಳಗಾಗಿದ್ದಾನೋ ಅದು ಈ ಉಪವಾಕ್ಯದಡಿ 'ಜೀತಗಾರಿಕೆ (ಜೀತ) ಪದ್ಧತಿ ಎನಿಸುವುದು'. (S. 2g)"

**ಕಾರ್ಯಗತಗೊಳಿಸುವ ಪ್ರಾಧಿಕಾರಗಳು (ಪ್ರಕರಣ 10-12, 21)**

**ಪ್ರಕರಣ 10. ಈ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಗಳು:** ಈ ಕಾಯ್ದೆಯ ಉಪಬಂಧಗಳನ್ನು ಯುಕ್ತ ರೀತಿಯಲ್ಲಿ ಜಾರಿಗೊಳಿಸಲಾಗುತ್ತಿದೆಯೆಂಬುದನ್ನು ಖಾತ್ರಿ ಮಾಡಿಕೊಳ್ಳುವ ಸಲು ವಾಗಿ ಅವಶ್ಯಕವಾಗಬಹುದಾದಂತಹ ಅಧಿಕಾರಗಳನ್ನು ರಾಜ್ಯ ಸರ್ಕಾರವು ಜಿಲ್ಲಾ ದಂಡಾಧಿಕಾರಿಗೆ ಪ್ರಧಾನ ಮಾಡ ಬಹುದು ಮತ್ತು ಅಂತಹ ಕರ್ತವ್ಯಗಳನ್ನು ಅವನಿಗೆ ವಿಧಿಸಬಹುದು ಮತ್ತು ಹಾಗೆ ಪ್ರಧಾನ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಮತ್ತು ವಿಧಿಸಲಾದ ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನವಾದ ಅಧಿಕಾರಿಯನ್ನು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಅಧಿಕಾರಿಯು ಅಂಥ ಅಧಿಕಾರ ಗಳನ್ನು ಅಥವಾ ಕರ್ತವ್ಯಗಳನ್ನು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಸ್ಥಳೀಯ ಪರಿಮಿತಿಗಳನ್ನು ಜಿಲ್ಲಾ ದಂಡಾಧಿಕಾರಿಯು ನಿರ್ದಿಷ್ಟಪಡಿಸಬಹುದು.

**ಪ್ರಕರಣ 11. ಸಾಲ ಸೌಲಭ್ಯ ಖಾತ್ರಿಮಾಡಿಕೊಡುವ ಬಗ್ಗೆ ಜಿಲ್ಲಾ ದಂಡಾಧಿಕಾರಿಯ ಮತ್ತು ಇತರೆ ಅಧಿಕಾರಿಗಳ ಕರ್ತವ್ಯ:** 10ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಪ್ರಾಧಿಕೃತಗೊಳಿಸಿದ ಜಿಲ್ಲಾ ದಂಡಾಧಿಕಾರಿಯು ಮತ್ತು ಆ ಪ್ರಕರಣದ ಮೇರೆಗೆ ಜಿಲ್ಲಾ ದಂಡಾಧಿಕಾರಿಯು ನಿರ್ದಿಷ್ಟಪಡಿಸಿದ ಅಧಿಕಾರಿಯು, ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ, ವಿಮೋಚಿತನಾದ ಜೀತದಾಳು ಮುಂದೆ ಯಾವುದೇ ಜೀತ ಋಣದ ಬಗ್ಗೆ ಕರಾರು ಮಾಡಿಕೊಳ್ಳುವ ಯಾವುದೇ ಪ್ರಸಂಗ ಅಥವಾ ಕಾರಣ ಉಂಟಾಗದ ಹಾಗೆ ಅವನ ಆರ್ಥಿಕ ಹಿತಾಸಕ್ತಿಗಳನ್ನು ಭದ್ರಪಡಿಸುವ ಮತ್ತು ಸಂರಕ್ಷಿಸುವ ಮೂಲಕ ಅವನ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸತಕ್ಕದು.

**ಪ್ರಕರಣ 12. ಜಿಲ್ಲಾ ದಂಡಾಧಿಕಾರಿಯು ಮತ್ತು ಅವನಿಂದ ಪ್ರಾಧಿಕೃತರಾದ ಅಧಿಕಾರಿಗಳ ಕರ್ತವ್ಯ:** ಜಿಲ್ಲಾ ದಂಡಾಧಿಕಾರಿಯ ಮತ್ತು ಅವನು 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅಧಿಕಾರಿಯ ಸ್ಥಳೀಯ ಪರಿಮಿತಿ ಗಳೊಳಗೆ ವಾಸಿಸುವ ಯಾವನೇ ವ್ಯಕಿಯು ಅಥವಾ ಅವನ ಪರವಾಗಿ ಯಾರಾದರೂ ಯಾವುದೇ ಜೀತಗಾರಿಕೆ ಪದ್ಧತಿ ಯನ್ನು ಅಥವಾ ಯಾವುದೇ ಇತರೆ ಪ್ರಕಾರದ ಬಲಾತ್ಕಾರದ ದುಡಿಮೆಯನ್ನು ಈ ಕಾಯ್ದೆ ಪ್ರಾರಂಭದ ಅನಂತರ, **ಆಚರಿಸುತ್ತಿದ್ದಾನೆಯೇ** ಎಂಬುದನ್ನು ವಿಚಾರಿಸುವುದು ಅಂಥ ಪ್ರತಿಯೊಬ್ಬ ಜಿಲ್ಲಾ ದಂಡಾಧಿಕಾರಿಯ ಮತ್ತು ಅವನು ನಿರ್ದಿಷ್ಟಪಡಿಸಿದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದು ಮತ್ತು ಅಂತಹ ವಿಚಾರಣೆಯ ಪರಿಣಾಮವಾಗಿ, ಯಾವನೇ ವ್ಯಕ್ತಿಯು ಜೀತಗಾರಿಕೆ ಪದ್ಧತಿಯನ್ನು ಅಥವಾ ಬಲಾತ್ಕಾರದ ದುಡಿಮೆಯ ಇತರ ಯಾವುದೇ ಪದ್ಧತಿಯನ್ನು ಆಚರಿಸುತ್ತಿರುವುದು ಕಂಡುಬಂದರೆ, ಅವನು ಕೂಡಲೇ ಅಂತಹ ಬಲಾತ್ಕಾರದ ದುಡಿಮೆಯ ಆಚರಣೆಯನ್ನು ನಿರ್ಮೂಲನೆ ಮಾಡಲು ಅವಶ್ಯಕವಾಗಬಹುದಾದಂಥ ಕ್ರಮವನ್ನು ಕೈಕೊಳ್ಳಬಹುದು.

**ಪ್ರಕರಣ 21. ಕಾರ್ಯಾಂಗ ಮ್ಯಾಜಿಸ್ಟ್ರೇಟರು (ಕಾರ್ಯನಿರ್ವಾಹಕ ದಂಡಾಧಿಕಾರಿ) ವಿಚಾರಣೆ ಮಾಡಬಹುದಾದ ಅಪರಾಧಗಳು:**

(1) ಈ ಕಾಯ್ದೆಯ ಮೇರೆಗಿನ ಅಪರಾಧಗಳ ವಿಚಾರಣೆಗಾಗಿ ಕಾರ್ಯನಿರ್ವಾಹಕ ದಂಡಾಧಿಕಾರಿಗೆ ಮೊದಲನೇ ವರ್ಗದ ಅಥವಾ ಎರಡನೇ ದರ್ಜೆಯ ನ್ಯಾಯಿಕ ದಂಡಾಧಿಕಾರಿಯ ಅಧಿಕಾರಗಳನ್ನು ರಾಜ್ಯ ಸರ್ಕಾರವು ಕೊಡಬಹುದು, ಮತ್ತು ಹಾಗೆ ಅಧಿಕಾರಗಳನ್ನು ಕೊಟ್ಟ ಕಾರಣದಿಂದ ಹಾಗೆ ಅಧಿಕಾರಗಳನ್ನು ಪಡೆದ ಕಾರ್ಯನಿರ್ವಾಹಕ ದಂಡಾಧಿಕಾರಿಯನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ 2) ಉದ್ದೇಶಕ್ಕಾಗಿ ಸಂದರ್ಭಾನುಸಾರ, ಮೊದಲನೇ ಅಥವಾ ಎರಡನೇ ದರ್ಜೆಯ ನ್ಯಾಯಿಕ ದಂಡಾಧಿಕಾರಿಯೆಂದು ಭಾವಿಸತಕ್ಕದು.

(2) ಈ ಕಾಯ್ದೆಯ ಮೇರೆಗಿನ ಅಪರಾಧವನ್ನು ದಂಡಾಧಿಕಾರಿಯು ಸಂಕ್ಷಿಪ್ತವಾಗಿ ವಿಚಾರಣೆ ಮಾಡಬಹುದು.

**ಪ್ರಕರಣ 13. ಜಾಗೃತ ಸಮಿತಿಗಳು:**

(1) ಪ್ರತಿಯೊಂದು ರಾಜ್ಯ ಸರ್ಕಾರವೂ, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪವಿಭಾಗದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದ ಸಂಖ್ಯೆಯ ಜಾಗೃತ ಸಮಿತಿಗಳನ್ನು ರಚಿಸತಕ್ಕದ್ದು.

(2) ಜಿಲ್ಲೆಗಾಗಿ ರಚಿಸಲಾದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಎಂದರೆ:-

F-6*

(ಎ) ಜಿಲ್ಲಾ ದಂಡಾಧಿಕಾರಿಯು, ಅಥವಾ ಅವನು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ; ಅವನು ಅಧ್ಯಕ್ಷನಾಗಿರತಕ್ಕುದ್ದು.

(ಬಿ)ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಆ ಜಿಲ್ಲಾ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು;

(ಸಿ) ಜಿಲ್ಲೆಯಲ್ಲಿ ವಾಸಿಸುತ್ತಿರುವ, ಹಾಗು ಜಿಲ್ಲಾ ದಂಡಾಧಿಕಾರಿಯು ನಾಮ ನಿರ್ದೇಶನ ಮಾಡಬೇಕಾದ, ಇಬ್ಬರು ಸಮಾಜ ಸೇವಕರು;

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಜಿಲ್ಲೆಯಲ್ಲಿನ ಸರ್ಕಾರೀ ಅಥವಾ ಸರ್ಕಾರೇತರ ವ್ಯಕ್ತಿ/ಸಂಸ್ಥೆಗಳನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಮೂವರಿಗೆ ಮೀರದ ವ್ಯಕ್ತಿಗಳು;

(ಇ) ಜಿಲ್ಲೆಯಲ್ಲಿನ ಆರ್ಥಿಕ ಮತ್ತು ಲೇವಾದೇವಿ ಸಂಸ್ಥೆಗಳನ್ನು ಪ್ರತಿನಿಧಿಸಲು ಜಿಲ್ಲಾ ದಂಡಾಧಿಕಾರಿಯು ನಾಮ ನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ.

(3) ಉಪವಿಭಾಗಕ್ಕಾಗಿ ರಚಿಸಿದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಏಂದರೆ:

(ಎ) ಉಪವಿಭಾಗದ ದಂಡಾಧಿಕಾರಿಯು ಅಥವಾ ಅವನು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ; ಅವನು ಅಧ್ಯಕ್ಷನಾಗಿರತಕ್ಕುದ್ದು;

(ಬಿ) ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಆ ಉಪವಿಭಾಗದ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು;

(ಸಿ) ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗದ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಇಬ್ಬರು ಸಮಾಜ ಸೇವಕರು:

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ, ಉಪವಿಭಾಗದಲ್ಲಿನ ಸರ್ಕಾರೀ ಅಥವಾ ಸರ್ಕಾರೇತರ ವ್ಯಕ್ತಿ/ಸಂಸ್ಥೆಗಳನ್ನು ಪ್ರತಿನಿಧಿಸಲು, ಜಿಲ್ಲಾ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ, ಮೂವರಿಗೆ ಮೀರದ ವ್ಯಕ್ತಿಗಳು;

(ಇ) ಉಪವಿಭಾಗದಲ್ಲಿನ ಆರ್ಥಿಕ ಮತ್ತು ಲೇವಾದೇವಿ ಸಂಸ್ಥೆಗಳನ್ನು ಪ್ರತಿನಿಧಿಸಲು ಉಪವಿಭಾಗದ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ;

(ಎಫ್) 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಮತ್ತು ಉಪವಿಭಾಗದಲ್ಲಿ ಕಾರ್ಯನಿರ್ವಹಿಸಿರುವ ಒಬ್ಬ ಅಧಿಕಾರಿ.

(4) ಪ್ರತಿಯೊಂದು ಜಾಗೃತ ಸಮಿತಿಯೂ ತನ್ನ ಕಾರ್ಯ ವಿಧಾನವನ್ನು ತಾನೇ ರೂಪಿಸಿಕೊಳ್ಳತಕ್ಕದ್ದು, ಮತ್ತು ಅವಶ್ಯಕವಾಗಬಹುದಾದಂತ ಸಿಬ್ಬಂದಿ ನೆರವನ್ನು,

(ಎ) ಜಿಲ್ಲೆಗಾಗಿ ರಚಿಸಿದ ಜಾಗ್ರತ ಸಮಿತಿಯ ಸಂದರ್ಭದಲ್ಲಿ ಜಿಲ್ಲಾ ದಂಡಾಧಿಕಾರಿಯು

(ಬಿ) ಉಪವಿಭಾಗಕ್ಕಾಗಿ ರಚಿಸಿದ ಜಾಗೃತ ಸಮಿತಿಯ ಸಂದರ್ಭದಲ್ಲಿ, ಉಪವಿಭಾಗದ ದಂಡಾಧಿಕಾರಿಯು, ಒದಗಿಸತಕದ್ದು.

(5) ಜಾಗೃತ ಸಮಿತಿಯ ಯಾವ ವ್ಯವಹರಣೆಯೂ ಜಾಗೃತ ಸಮಿತಿಯ ರಚನೆಯಲ್ಲಿ ಅಥವಾ ಅದರ ನಡವಳಿಕೆಗಳಲ್ಲಿನ ಯಾವುದೇ ದೋಷ ಮಾತ್ರದ ಕಾರಣದಿಂದಾಗಿ ವಿಧಿ ಬಾಹಿರವಾಗತಕ್ಕುದ್ದಲ್ಲ."

**ಪ್ರಕರಣ 14. ಜಾಗೃತ ಸಮಿತಿಗಳ ಪ್ರಕಾರ್ಯಗಳು:**

"(1) ಪ್ರತಿಯೊಂದು ಜಾಗೃತ ಸಮಿತಿಯ ಪ್ರಕಾರ್ಯಗಳು ಈ ಕೆಳಗಿನಂತಿರತಕ್ಕುದು: –

(ಎ) ಈ ಕಾಯ್ದೆಯ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಗೊಳಿಸಲಾಗಿದೆಯೆಂಬುದನ್ನು ಖಾತ್ರಿ ಮಾಡಿಕೊಳ್ಳಲು ಮಾಡಿದ ಪ್ರಯತ್ನಗಳ ಬಗ್ಗೆ ಮತ್ತು ಕೈಕೊಂಡ ಕ್ರಮದ ಬಗ್ಗೆ ಜಿಲ್ಲಾ ದಂಡಾಧಿಕಾರಿಗೆ ಅಥವಾ ಅವನಿಂದ ಪ್ರಾಧಿಕೃತನಾದ ಯಾವನೇ ಅಧಿಕಾರಿಗೆ ಸಲಹೆ ಕೊಡುವುದು;

(ಬಿ) ವಿಮೋಚಿತರಾದ ಜೀತದಾಳುಗಳ ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿಗಾಗಿ ಅವಕಾಶ ಕಲ್ಪಿಸುವುದು;

(ಸಿ) ವಿಮೋಚಿತ ಜೀತದಾಳುಗಳಿಗೆ ಸಾಕಷ್ಟು ಸಾಲಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಬ್ಯಾಂಕುಗಳ ಮತ್ತು ಸಹಕಾರಿ ಸಂಘಗಳ ಪ್ರಕಾರ್ಯಗಳನ್ನು ಸಂಯೋಜಿಸುವುದು;

(ಡಿ) ಈ ಕಾಯ್ದೆಯ ಮೇರೆಗೆ ಗಮನಕ್ಕೆ ತೆಗೆದುಕೊಂಡಿರುವ ಅಪರಾಧಗಳ ಸಂಖ್ಯೆಯ ಮೇಲೆ ನಿಗಾ ಇಡುವುದು;

(ಇ) ಈ ಕಾಯ್ದೆಯ ಮೇರೆಗೆ ಗಮನಕ್ಕೆ ತೆಗೆದುಕೊಳ್ಳಬೇಕಾದ ಅಪರಾಧ ಯಾವುದಾದರೂ ಇದೆಯೋ ಏಂಬುದರ ಬಗ್ಗೆ ಸಮೀಕ್ಷೆ ಮಾಡುವುದು;

(ಎಫ್) ವಿಮೋಚಿತನಾದ ಜೀತದಾಳಿನ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ಅವನ ಮೇಲೆ ಅವಲಂಬಿತನಾದ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ಜೀತದ ಯಾವುದೇ ಪೂರ್ತಿ ಸಾಲವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಜೀತದ ಸಾಲವೆಂದು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಇತರ ಯಾವುದೇ ಸಾಲವನ್ನು ವಸೂಲು ಮಾಡಲು ಹೂಡಿದ ಯಾವುದೇ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸುವುದು.

(2) ವಿಮೋಚಿತ ಜೀತದಾಳಿನ ವಿರುದ್ಧ ಹೂಡಿದ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸಲು ಜಾಗೃತಾ ಸಮಿತಿಯು ತನ್ನ ಸದಸ್ಯರಲ್ಲಿ ಒಬ್ಬರಿಗೆ ಪ್ರಾಧಿಕಾರವನ್ನು ಕೊಡಬಹುದು ಮತ್ತು ಹಾಗೆ ಪ್ರಾಧಿಕಾರವನ್ನು ಹೊಂದಿದ ಸದಸ್ಯನನ್ನು ಅಂತಹ ದಾವೆಯ ಉದ್ದೇಶಕ್ಕಾಗಿ ವಿಮೋಚಿತ ಜೀತದಾಳಿನ ಅಧಿಕೃತ ಪ್ರಾಧಿಕರ್ತನೆಂದು ಭಾವಿಸತಕ್ಕುದು."

**ಪ್ರಕರಣ ೧೫. ರುಜುವಾತಿನ ಭಾರ:**

ಜೀತದಾಳು ಅಥವಾ ಜಾಗೃತಾ ಸಮಿತಿಯು ಯಾವುದೇ ಸಾಲವನ್ನು ಜೀತಸಾಲವೆಂದು ಕ್ಲೇಮು ಮಾಡಿದಾಗ ಅಂತಹ ಸಾಲವು ಜೀತಸಾಲವಲ್ಲವೆಂದು ರುಜುವಾತು ಮಾಡುವ ಭಾರವು ಸಾಲಿಗನ ಮೇಲೆ ಇರತಕ್ಕುದು.

**ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಕಾಯ್ದೆ, 1989**

**ಪ್ರಕರಣ 3.** ದೌರ್ಜನ್ಯದ ಅಪರಾಧಗಳಿಗಾಗಿ ದಂಡನೆಗಳು: (1) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಲ್ಲದ ಯಾರೇ ಆಗಲಿ –... (vi) ಸರ್ಕಾರವು ವಿಧಿಸಿದ ಸಾರ್ವಜನಿಕ ಉದ್ದೇಶಗಳಿಗಾಗಿರುವ ಯಾವುದೇ ಕಡ್ಡಾಯ ಸೇವೆಯನ್ನು ಹೊರತುಪಡಿಸಿ, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು 'ಬೇಗಾರ್' ಅಥವಾ ಅಂಥದೇ ಇತರ ಸ್ವರೂಪಗಳ ಬಲಾತ್ಕಾರದ ಅಥವಾ ಜೀತದ ದುಡಿಮೆಯನ್ನು ಮಾಡಲು ಒತ್ತಾಯಿಸಿದರೆ ಅಥವಾ ಪುಸಲಾಯಿಸಿದರೆ;... ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ, ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು."

**ಕರ್ನಾಟಕ ಸಾಲ ಪರಿಹಾರ ಕಾಯ್ದೆ, 1976**

ಈ ಕಾಯ್ದೆ ಘೋಷಿಸುವುದೇನೆಂದರೆ, "ಈ ಪ್ರಕರಣವು ಜಾರಿಗೊಳ್ಳುವ ಮುಂಚೆ ಕೊಟ್ಟ ಸಾಲವನ್ನು ಮತ್ತು ಅದಕ್ಕೆ ಬಡ್ಡಿ ಇದ್ದರೆ ಬಡ್ಡಿಯನ್ನು ಅವು ಸಾಲಗಾರನಿಂದ ಸಾಲಿಗನಿಗೆ ಮರುಪಾವತಿಗೊಳಿಸುವಂತಿದ್ದರೆ ಅವನ್ನು ಪೂರ್ತಿಯಾಗಿ ವಜಾ ಗೊಳಿಸಲಾಗಿದೆ [S.4. (a)]." "ಸಾಲಗಾರನೆಂದರೆ (i) ಒಬ್ಬ ಸಣ್ಣ ರೈತ ಅಥವಾ (ii) ಭೂರಹಿತ ಕೃಷಿಕಾರ್ಮಿಕ ಅಥವಾ (iii) ದುರ್ಬಲ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ [S.3.(c)]."

**ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993**

"ಪ್ರಕರಣ 58A: ಜೀತಗಾರಿಕೆ ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು. ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಅಧಿನಿಯಮ, 1976ರ (1976ರ ಕೇಂದ್ರ ಅಧಿನಿ೦ಯಮ 19) ಅಡಿಯಲ್ಲಿ ನಿರ್ಮೂಲನೆ ಗೊಂಡ ಜೀತಗಾರಿಕೆ ಪದ್ಧತಿ೦ಯು ಪಂಚಾಯಿತಿ ಪ್ರದೇಶದಲ್ಲಿ ಪ್ರವರ್ತನೆಗೊಂಡ ಯಾವುದೇ ಪ್ರಕರಣದ ಬಗ್ಗೆ, ನಿಯಮಿಸ ಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಗಳಲ್ಲಿ ಡೆಪ್ಯೂಟಿ ಕಮೀಷನರಿಗೆ ಅಥವಾ ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರೆ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಗ್ರಾಮ ಪಂಚಾಯಿತಿಗೆ ಕಡ್ಡಾಯ ವಾಗಿರತಕ್ಕದ್ದು. ಹೀಗೆ ಮಾಡಲು ತಪ್ಪಿದರೆ, 268ನೇ ಪ್ರಕರಣದ ಅಡಿಯಲ್ಲಿ ಅದಕ್ಕ ವಿಧಿಸಲಾದ ಕರ್ತವ್ಯಗಳ ನೆರವೇರಿಕೆ ಯಲ್ಲಿ ಆದ ತಪ್ಪು ಎಂದು ಅರ್ಥೈಸತಕ್ಕದ್ದು."

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಜ್ಞಾಪನ ಪತ್ರ**

"ಖಂಡ 2: ವಿಧೇಯಕದ ಖಂಡ 2ರ ಮೂಲಕ ಸೇರಿಸಲಾಗುವ 58A ಪ್ರಕರಣವು, ಪಂಚಾಯತ್ ಪ್ರದೇಶದಲ್ಲಿ ಜೀತಗಾರಿಕೆ ಪದ್ಧತಿಯು ಪ್ರವರ್ತನೆಗೊಂಡ ಪ್ರಕರಣದ ಬಗ್ಗೆ ಗ್ರಾಮ ಪಂಚಾಯತಿಯು, ಯಾವ ನಮೂನೆಯಲ್ಲಿ ಮತ್ತು ಯಾವ ಅಂತರದ ಅವಧಿಗಳಲ್ಲಿ ಡೆಪ್ಯೂಟಿ ಕಮೀಷನರರಿಗೆ ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದೆಂಬ ಬಗ್ಗೆ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. (ಎಂ.ವೈ. ಘೋರ್ಪಡೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)."

**ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳಿಂದ ಕೆಲವು ಉದ್ಧೃತ ಭಾಗಗಳು**

**People's Union for Democratic Rights and Others v. Union of India and Others (AIR 1982 SC 1473 in Writ Petition No. 8143 of 1981)**

ಈ ತೀರ್ಪು ಲಕ್ಷಿಸುವುದೇನೆಂದರೆ ಭಾರತೀಯ ಸಂವಿಧಾನದ ಅನುಚ್ಛೇಧ 23 ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಅನುಚ್ಛೇಧ 4ಕ್ಕಿಂತ ಹೆಚ್ಚಿನ ಅರ್ಥವ್ಯಾಪ್ತಿಯನ್ನು ಹೊಂದಿದೆ. ಏಕೆಂದರೆ ಮನುಷ್ಯರ ವ್ಯಾಪಾರ 'ಬೇಗಾರ್' ಮತ್ತು ಅದೇ ರೀತಿಯ ಬೇರೆ ಬಲತ್ಕಾರದ ದುಡಿಮೆಗಳನ್ನು ಅದು ನಿಷೇಧಿಸುತ್ತದೆ ಮತ್ತು ಮನುಷ್ಯರ ವ್ಯಾಪಾರದ ಅರ್ಥವ್ಯಾಪ್ತಿ ಗುಲಾಮರ ವ್ಯಾಪಾರದ ಅರ್ಥಕ್ಕಿಂತ ಹೆಚ್ಚಿದೆ. ಬಲಾತ್ಕಾರದ ದುಡಿಮೆಯ ಯಾವುದೇ ಸ್ವರೂಪವನ್ನು ಅನುಚ್ಛೇಧ 23 ಸಹಿಸುವುದಿಲ್ಲ. ಏಕೆಂದರೆ ಅದು ಮಾನವ ಘನತೆಯ ಉಲ್ಲಂಘನೆ ಮತ್ತು ಮೂಲಭೂತ ಮಾನವೀಯ ಮೌಲ್ಯಗಳಿಗೆ ವಿರುದ್ಧವಾಗಿದೆ. 'ಬೇಗಾರ್' ಅಂದರೆ ಮಜೂರಿ ಕೊಡದೆ ಒಬ್ಬ ವ್ಯಕ್ತಿಯ ಮೇಲಿನ ಬಲಾತ್ಕಾರದಿಂದ ಪಡೆದ ಕೆಲಸ ಅಥವಾ ಸೇವೆ ಅಥವಾ ಪುಕ್ಕಟೆ ದುಡಿಮೆ. (ಪ್ಯಾರಾ ನಂ.14).

ಆ ತೀರ್ಪು ಈ ತರಹದ ಘೋಷಣೆ ನೀಡಿದೆ: "ಕನಿಷ್ಟ ವೇತನಕ್ಕಿಂತ ಕಡಿಮೆಯಾದ ಮಜೂರಿಯನ್ನು ಪಡೆದು ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ದುಡಿಮೆ ಅಥವಾ ಸೇವೆಯನ್ನು ಸಲ್ಲಿಸುತ್ತಿದ್ದರೆ ಆತನು ತನಗೆ ಕಾನೂನಿನಡಿಯಲ್ಲಿ ಸಿಗಬೇಕಾದ್ದಕ್ಕಿಂತ ಕಡಿಮೆ ವೇತನ ಕೊಟ್ಟರೂ ಆ ಕೆಲಸ ಮಾಡುವಂತೆ ಆತನನ್ನು ದಬ್ಬುತ್ತಿರುವ ಕೆಲವು ಒತ್ತಡಗಳ ಬಲಾತ್ಕಾರದ ಮೇಲೆ ವರ್ತಿಸುತ್ತಿದ್ದಾನೆ ಎಂದು ಪೂರ್ವಭಾವನೆ ಮಾಡಿಕೊಳ್ಳಬಹುದು." (ಪ್ಯಾರಾ ನಂ.15).

ಆ ತೀರ್ಪು ಬಲಾತ್ಕಾರದ ಅರ್ಥವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. ಕೇವಲ ದೈಹಿಕ ಬಲಾತ್ಕಾರ ಅಥವಾ ಕಾನೂನಿನ ಒಂದು ನಿರ್ಬಂಧದಿಂದ ಹೇರಲಾದ ಬಲಾತ್ಕಾರವಲ್ಲದೇ ಹಲವಾರು ಬೇರೆ ರೀತಿಗಳಲ್ಲಿ ಬಲಾತ್ಕಾರದ ದುಡಿಮೆಯು ಉದ್ಭವಿಸಬಹುದು. ಅದು ಹಸಿವು, ಬಡತನ, ಕೊರತೆ, ದಾರಿದ್ರ್ಯದಂತಹ ಆರ್ಥಿಕ ಪರಿಸ್ಥಿತಿಗಳ ಒತ್ತಡ ಮತ್ತು ಪರ್ಯಾಯಗಳಲ್ಲಿ ಆಯ್ಕೆ ಇರದ ಹಾಗೆ ಹಾಗೂ ಒಂದು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವಂತೆ ಆತನನ್ನು ನಿರ್ಬಂಧಿಸುವ ಯಾವುದೇ ಸಂಗತಿಗಳನ್ನು ಒಳಗೊಂಡಿರುತ್ತದೆ (ಪ್ಯಾರಾ ನಂ.15). ಆ ತೀರ್ಪು ಘೋಷಿಸುವುದೇನೆಂದರೆ, "ಕನಿಷ್ಟ ವೇತನಕ್ಕಿಂತ ಕಡಿಮೆಯಾದ ಮಜೂರಿಯನ್ನು ಪಡೆದು ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ದುಡಿಮೆ ಅಥವಾ ಸೇವೆ

ಯನ್ನು ಸಲ್ಲಿಸುತ್ತಿದ್ದರೆ, ಆ ವ್ಯಕ್ತಿಯು ಸಲ್ಲಿಸುವ ದುಡಿಮೆ ಅಥವಾ ಸೇವೆಯು ಸ್ಪಷ್ಟವಾಗಿ 'ಬಲಾತ್ಕಾರದ ದುಡಿಮೆ' ಎಂಬ ಪದಗಳ ಆಶಯ ಮತ್ತು ವ್ಯಾಪ್ತಿಯೊಳಗೆ ಬರುತ್ತದೆ" (ಪ್ಯಾರಾ ನಂ. 15).

**Bhandua Mukti Morcha v. Union of India and Others (AIR 1984, SC 161 in Writ Petition No. 2135 of 1982)**

ಆ ತೀರ್ಪು ಲಕ್ಷಿಸುವುದೇನೆಂದರೆ, "ಸಂವಿಧಾನದ ಅನುಚ್ಛೇಧ 23ನ್ನು ಕಾರ್ಯಾಚರಣೆಗೆ ತರಲು ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976ರನ್ನು ಜಾರಿಗೆ ತರಲಾಗಿತ್ತು. ದಶಕಗಳಿಂದ ಭಾರತೀಯ ಸಾಮಾಜಿಕ ಕ್ಷೇತ್ರದಲ್ಲಿ ಅವಮಾನ ಕರವಾದ ಕಳಂಕವಾಗಿರುವ ಮತ್ತು ಸ್ವಾತಂತ್ರ್ಯ ಪಡೆದ ಮೇಲೂ ರಾಷ್ಟ್ರೀಯ ಜೀವನವನ್ನು ವಿಕಾರಗೊಳಿಸುತ್ತಿರುವ ಜೀತಪದ್ಧತಿಯನ್ನು ಪ್ರತಿಭಟಿಸುವ ಉದ್ದೇಶ ಆ ಅಧಿನಿಯಮಕ್ಕಿತ್ತು (ಪ್ಯಾರಾ ನಂ.21). ಆ ತೀರ್ಪು ಮುಂದೆ ಈ ರೀತಿ ಘೋಷಿಸುತ್ತದೆ: "ಯಾವಾಗಲಾದರೂ ಒಬ್ಬ ಕಾರ್ಮಿಕನಿಂದ ಬಲಾತ್ಕಾರದ ದುಡಿಮೆ ಸಲ್ಲಿಸುವಂತೆ ಮಾಡಲಾಗಿದೆ ಎಂದು ತೋರಿಸಿಕೊಟ್ಟರೆ ಆತನು ಮುಂಗಡ ಅಥವಾ ಇನ್ನಿತರೆ ಆರ್ಥಿಕ ಸೌಲಭ್ಯ ಪಡೆದಿದ್ದರಿಂದಲೇ ಆತನಿಗೆ ಬಲಾತ್ಕಾರದ ದುಡಿಮೆಯ ನಿರ್ಬಂಧವಿದೆ ಮತ್ತು ಆದ್ದರಿಂದಲೇ ಆತನು ಜೀತದಾಳು ಎಂದು ನ್ಯಾಯಾಲಯವು ಪೂರ್ವಭಾವನೆ ಮಾಡಿಕೊಳ್ಳುತ್ತದೆ. ಈ ಪೂರ್ವಭಾವನೆಯನ್ನು ಯಜಮಾನನು ಅಥವಾ ರಾಜ್ಯ ಸರ್ಕಾರವು ಒಂದು ನಿರ್ಧಾರ ಮಾಡಿಕೊಂಡು ಅಲ್ಲಗಳೆಯಬಹುದು. ಆದರೆ ಈ ತಿಳುವಳಿಕೆಯನ್ನು ಅಲ್ಲಗಳೆಯಲು ತೃಪ್ತಿಕರ ಪುರಾವೆಗಳನ್ನು ಒದಗಿಸುವ ತನಕ ನ್ಯಾಯಾಲಯವು ಆ ಕಾರ್ಮಿಕನು ಅಧಿನಿಯಮದಲ್ಲಿಯ ಅವಕಾಶಗಳ ಪ್ರಯೋಜನವನ್ನು ಪಡೆಯಲು ಅರ್ಹನಾಗಿರುವ ಜೀತದಾಳುವೆಂದೇ ತಿಳಿದು ಮುಂದುವರಿಯಬೇಕು" (ಪ್ಯಾರಾ ನಂ.24).

ಸರ್ವೋಚ್ಛ ನ್ಯಾಯಾಲಯವು **"Neeraja Choudhary v. State of M.P (3 SCC 1984 in Writ Petition (Cri) No. 1263 of 1982"** ತೀರ್ಪಿನಲ್ಲಿ ಪಟ್ಟಿದ್ದ ಅಭಿಪ್ರಾಯವೇನೆಂದರೆ, "ಮಜೂರಿ ಇಲ್ಲದೇ ಅಥವಾ ಕೇವಲ ನಾಮ ಮಾತ್ರ ಮಜೂರಿ ಪಡೆದು ಯಾವುದೇ ಕೆಲಸಗಾರನ ಮೇಲೆ ದುಡಿಮೆ ಸಲ್ಲಿಸುವ ಬಲಾತ್ಕಾರವಿದ್ದರೆ ಆತನನ್ನು ಜೀತದಾಳಾಗಿ ಪೂರ್ವಭಾವನೆ ಮಾಡಲಾಗುತ್ತದೆ. ಆತನ ಯಜಮಾನ ಅಥವಾ ರಾಜ್ಯ ಸರ್ಕಾರವು ಆ ತಿಳುವಳಿಕೆಯನ್ನು ಅನ್ಯಥಾ ರುಜುವಾತುಪಡಿಸಬಹುದು."

ಈ ಎಲ್ಲಾ ತೀರ್ಪುಗಳು ಬಲಾತ್ಕಾರದ ದುಡಿಮೆ ಏನೆಂದು ಸ್ಪಷ್ಟಪಡಿಸಿವೆ. ಕನಿಷ್ಟ ವೇತನಕ್ಕಿಂತ ಕಡಿಮೆ ಕೂಲಿಗೆ ಸಲ್ಲಿಸುವ ದುಡಿಮೆಯೂ ಬಲಾತ್ಕಾರದ ದುಡಿಮೆ ಮತ್ತು ಜೀತದ ಅರ್ಥವ್ಯಾಪ್ತಿಗೆ ಬರುವ ರೀತಿಯಲ್ಲಿ ಅವು ಬಲಾತ್ಕಾರದ ದುಡಿಮೆ ಮತ್ತು ಜೀತದ ಅರ್ಥವನ್ನು ವಿಸ್ತರಿಸಿವೆ. ಅಧಿನಿಯಮಗಳಲ್ಲಿರುವ ಜೀತದಾಳು ಮತ್ತು ಜೀತ ಪದ್ಧತಿಗಳ ವ್ಯಾಖ್ಯಾನದಲ್ಲಿ ಇರುವ ದ್ವಂದ್ವಾರ್ಥಗಳನ್ನು ಅವು ತೆಗೆದಿವೆ. ಅಧಿನಿಯಮದ ಪ್ರಕಾರ "ಜೀತದಾಳು ಎಂದರೆ ಒಂದು ಜೀತಸಾಲ ಮಾಡುವ ಅಥವಾ ಮಾಡಿರುವ ಅಥವಾ ಮಾಡಿರುವನೆಂದು ಪೂರ್ವಭಾವನೆ ಮಾಡಲಾದ ಒಬ್ಬ ದುಡಿಮೆಗಾರ" [(S.2.(f)]. ಜೀತ ಪದ್ಧತಿಯ ವ್ಯಾಖ್ಯಾನದ ಪ್ರಕಾರ ಜೀತ ಸಾಲ ಒಬ್ಬ ವ್ಯಕ್ತಿಯು ಜೀತದ ಬಂಧನದಲ್ಲಿ ಒಳಗಾಗಲಿಕ್ಕೆ ಇರಬಹುದಾದ ಐದು ಕಾರಣಗಳಲ್ಲಿ ಕೇವಲ ಒಂದು ರೀತಿಯ ಕಾರಣವಾಗಿದೆ. ಅಷ್ಟೇ ಅಲ್ಲದೇ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಸ್ಪಷ್ಟಪಡಿಸಿರುವುದೇನೆಂದರೆ ಒಬ್ಬ ದುಡಿಮೆಗಾರನು ಸಾಲ ಅಥವಾ ಮುಂಗಡ ಪಡೆದಿರದಿದ್ದರೂ ಆತನು ಬಲಾತ್ಕಾರದ ದುಡಿಮೆ ಸಲ್ಲಿಸುತ್ತಿದ್ದರೆ ಅವನು ಜೀತದಾಳುವಾಗಿದ್ದಾನೆ.

**ಗ್ರಾಮೀಣ ದುಡಿಮೆ ಕುರಿತು ರಾಷ್ಟ್ರೀಯ ಆಯೋಗದ ವರದಿ: ಸಂಪುಟಗಳು I ಮತ್ತು II (ಭಾರತ ಸರ್ಕಾರ, ಕಾರ್ಮಿಕ ಇಲಾಖೆ, ನವ ದೆಹಲಿ, 1991):**

ಈ ವರದಿಯು ಅಧಿನಿಯಮದಲ್ಲಿಯ ವ್ಯಾಖ್ಯಾನದಲ್ಲಿರುವ ದ್ವಂದ್ವಾರ್ಥಗಳನ್ನು ತೆಗೆಯುವ ರೀತಿಯಲ್ಲಿ ಅಧಿನಿಯಮವನ್ನು ತಿದ್ದುಪಡಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ. ಸಾಲವು ಜೀತದ ಅರ್ಥವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಇರಬೇಕು ಎಂಬುದನ್ನು ತೆಗೆದು ಹಾಕಿ ಸೂಕ್ತ ತಿದ್ದುಪಡಿ ಮತ್ತು 1985ರಲ್ಲಿ ತಿದ್ದುಪಡಿ ಮಾಡಿ ಸೇರಿಸಲಾದ ವಿವರಣೆ ವಾಕ್ಯದಲ್ಲಿ ಯಾವುದೇ ಕಾನೂನಿನ ವ್ಯಾಖ್ಯಾನದೊಳಗೆ ಬರುವ ಕೆಲಸಗಾರರನ್ನೂ ಸೇರಿಸಬೇಕು ಎಂಬುವು ಆ ಶಿಫಾರಸುಗಳಲ್ಲಿ ಮುಖ್ಯವೆನಿಸುವುವು.

**ಜೀತದ ಕುರಿತು ಕೇಂದ್ರೀಯ ಸಮಿತಿಯ ವರದಿ (ಅಧ್ಯಕ್ಷರಾಗಿದ್ದ ಎ.ಕೆ. ಚಕ್ರವರ್ತಿಯವರು 11-08-1994ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದರು):**

ಸಮಿತಿಯು ಮಾಡಿದ ಶಿಫಾರಸು ಏನೆಂದರೆ ಜೀತಸಾಲ ತೀರಿಸಲು ನೀಡಿದ ದುಡಿಮೆಯಲ್ಲದೇ ಬಲಾತ್ಕಾರದ ದುಡಿಮೆಯ ಯಾವುದೇ ಸನ್ನಿವೇಶವನ್ನೂ ಜೀತವೆಂತಲೇ ಪರಿಗಣಿಸಬೇಕು ಮತ್ತು ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿಗೊಳಿಸಬೇಕು. ಆದರೆ ಆ ಸಮಿತಿಯು ಲಕ್ಷಿಸಿದ್ದು ಏನೆಂದರೆ ಅಧಿನಿಯಮದಲ್ಲಿ ಸ್ಪಷ್ಟಪಡಿಸಲಾದ ಜೀತ ಬಂಧನದ ಪರಿಸ್ಥಿತಿಗಳು ಇಲ್ಲದಿದ್ದರೆ ಕನಿಷ್ಟ ವೇತನ ಪಡೆಯದಿದ್ದ ಮಾತ್ರಕ್ಕೆ ಒಬ್ಬನ ದುಡಿಮೆಯು ಜೀತವೆನಿಸುವುದಿಲ್ಲ. ಸಮಿತಿಯು ಇನ್ನೂ ಸ್ಪಷ್ಟಪಡಿಸಿದ್ದೇನೆಂದರೆ ಜೀತ ಅಧಿನಿಯಮವು ಜೀತದ ಕನಿಷ್ಠಾವಧಿಯನ್ನು ಗೊತ್ತುಪಡಿಸುವುದಿಲ್ಲ ಮತ್ತು ಒಬ್ಬ ಜೀತದಾಳು ಚಲನಾಸ್ವಾತಂತ್ರ್ಯ ಮತ್ತು ತನ್ನ ದುಡಿಮೆಯ ಫಲವನ್ನು ಸ್ವಾಧೀನಪಡಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳದಿದ್ದರೂ ಅವನು ಜೀತದಾಳುವೇ ಆಗಿದ್ದಾನೆ. ಸಮಿತಿಯ ವರದಿಯ ಮೂರನೇ ಅಧ್ಯಾಯದಲ್ಲಿರುವ ಶಿಫಾರಸ್ಸುಗಳ ಸಾರಾಂಶ (ಸಾರಾಂಶದಲ್ಲಿಯ 3.3ರಿಂದ 3.5 ನಂ.ಗಳು ವರದಿಯ ಎರಡನೇ ಅಧ್ಯಾಯದಿಂದ ಉದ್ಧೃತಗೊಂಡಿವೆ).

1. ಜೀತವನ್ನು ಗುರುತಿಸುವಲ್ಲಿ ಸಾಲಗಾರ – ಸಾಲಿಗ ಸಂಬಂಧವು ಒಂದು ಬಹುಮುಖ್ಯ ಅಂಶವಾಗಿದ್ದರೂ, ಬಲಾತ್ಕಾರದ ದುಡಿಮೆಯ ಅಂಶಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಮತ್ತು ಬಲಾತ್ಕಾರವನ್ನು ಕೇವಲ ದೈಹಿಕ ಬಲಾತ್ಕಾರಕ್ಕೆ

ಸೀಮಿತಗೊಳಿಸದೆ ಆರ್ಥಿಕ ಪರಿಸ್ಥಿತಿಗಳ ಒತ್ತಡಗಳಿಂದ, ಹಣದ ಅವಶ್ಯಕತೆಯಿರುವ ವ್ಯಕ್ತಿಗೆ ಬೇರೆ ಮಾರ್ಗಗಳಿಲ್ಲದೆ, ಕಾನೂನು ಬಾಹಿರ ರೀತಿಯಲ್ಲಿ ತನ್ನ ದುಡಿಮೆ ಅಥವಾ ಸೇವೆಯನ್ನು ಬೇರೊಬ್ಬನಿಗೆ ಸಲ್ಲಿಸುವಂತೆ ಒತ್ತಾಯಿಸುವ ಬಲಾತ್ಕಾರವನ್ನು ಬಲಾತ್ಕಾರವೆಂದು ತಿಳಿದುಕೊಳ್ಳಬೇಕು (ಸಮಿತಿ ವರದಿ 3.2 & 3.8-3.11ನೋಡಿ).

2. ಜೀತ ಮತ್ತು ಜೀತಪದ್ಧತಿ ಕುರಿತ ವ್ಯಾಖ್ಯಾನಗಳನ್ನು ಉದಾರವಾಗಿಯೇ ಅರ್ಥೈಸಬೇಕು. ಅದಕ್ಕೋಸ್ಕರ ಬಲಾತ್ಕಾರದ ದುಡಿಮೆಯ ಅಂಶವನ್ನು 1976ರ ಜೀತಪದ್ಧತಿ (ನಿರ್ಮೂಲನೆ) ಕಾಯ್ದೆಯ ಪ್ರಕರಣಗಳಾದ 2, 6 ಉಪಪ್ರಕರಣ (1) ಮತ್ತು (6), 7, 8, 9, 16 ಮತ್ತು 18ರ ಸೂಕ್ತ ವಾಕ್ಯ ಭಾಗಗಳಲ್ಲಿ ನಮೂದಿಸಬೇಕು (3.3).

3. ಈ ಕೆಳಗಿನ ಆಡಳಿತಾತ್ಮಕ ಮಾಪನಗಳನ್ನು ಅಳವಡಿಸುವುದರ ಮೂಲಕ ಕಾನೂನಿನಲ್ಲಿರುವ ಜೀತಪದ್ಧತಿ ಕುರಿತ ವ್ಯಾಖ್ಯಾನದಲ್ಲಿಯ ಅಂಶಗಳನ್ನು ಉದಾರವಾಗಿಯೇ ಬಳಸಬಹುದು (3.4).

3.1 ಜೀತದಾಳುವಿನ ಸಾಲ ಮನ್ನಾ ಆಗಿದ್ದರೂ, ಅಂಥ ಜೀತದಾಳುವನ್ನು ಗುರುತಿಸಿ, ಬಿಡುಗಡೆ ಮಾಡಿ ಅವನಿಗೆ ಪುನರ್ವಸತಿ ಸೌಕರ್ಯ ಕಲ್ಪಿಸಬೇಕು (3.4).

3.2 ಒಪ್ಪಂದದ ಪೇಪರಿನಲ್ಲಿ ಬಲಾತ್ಕಾರದ ಅಂಶವನ್ನು ಮರೆಮಾಡಿದರೂ, ಯಾವುದೇ ಕೂಲಿಯಿಲ್ಲದೆ ಅಥವಾ ನ್ಯಾಯ ಯುತ ಮಜೂರಿ ಇಲ್ಲದೆ, ಜನ್ಮ, ಜಾತಿ, ಪದ್ಧತಿಗಳ ಕಾರಣವಾಗಿ ಬಲಾತ್ಕಾರದಿಂದ ದುಡಿಯುತ್ತಿರುವವನನ್ನು ಜೀತಗಾರ ನೆಂದೇ ಪರಿಗಣಿಸಬೇಕು (3.4).

3.3 ಜೀತದಾಳು ಈಗ ಜೀತವನ್ನು ಬಿಟ್ಟದ್ದರೂ, ಅರ್ಜಿ ಹಾಕುವಾಗ ಜೀತದಾಳು ಆಗಿದ್ದರೆ, ಅವನನ್ನು ಗುರುತಿಸಿ, ಬಿಡುಗಡೆ ಮಾಡಿ ಅವನಿಗೆ ಪುನರ್ವಸತಿ ಕಲ್ಪಿಸಬೇಕು. [2.23(ii)].

3.4 ಒಂದು ವರ್ಷಕ್ಕಿಂತ ಕಡಿಮೆ ಕೆಲಸ ಮಾಡುತ್ತಿರುವ ಜೀತದಾಳುವನ್ನು ಜೀತದಾಳುವೆಂದೇ ಪರಿಗಣಿಸಬೇಕು. ಕಾನೂನಿನಲ್ಲಿ ಜೀತಪದ್ಧತಿಗೆ ಕನಿಷ್ಟ ಕಾಲಾವದಿಯನ್ನು ನಮೂದಿಸಿಲ್ಲ [2.23(iii)].

3.5 ಜೀತ ಸಾಲ ಮಾಡಿ, ಸಾಲ ತೀರುವವರೆಗೆ ಜೀತ ಮಾಡಬೇಕೆಂದು ನಿರ್ಬಂಧವಿರುವ ಜೀತದಾಳುವಿನ ಚಲನಾ ಸ್ವಾತಂತ್ರ್ಯಕ್ಕೆ ಧಕ್ಕೆ, ತನ್ನ ದುಡಿಮೆಯ ಫಲವನ್ನು ಮಾರುವ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಿದ್ದರೂ ಆ ಸಾಲವನ್ನು ಜೀತ ಸಾಲವಲ್ಲವೆಂದು ತೋರಿಸುವ ಹೊಣೆ 15ನೇ ಪರಿಚ್ಛೇಧದ ಪ್ರಕಾರ ಯಜಮಾನನ ಮೇಲಿದೆ [2.23(iv)].

4. 1986ರ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯ ಅಂಶಗಳನ್ನು 1976ರ ಜೀತಪದ್ಧತಿ (ನಿರ್ಮೂಲನೆ) ಕಾಯ್ದೆಯ ಬೇರೆ ಬೇರೆ ಪ್ರಕರಣಗಳಿಗೆ ಅನ್ವಯಿಸಿ, ಬಾಲಕಾರ್ಮಿಕರನ್ನು ಜೀತಪದ್ಧತಿ ಕಾನೂನಿನಡಿಯಲ್ಲಿ ಅರ್ಥೈಸುವಂತೆ 1976 ಜೀತಪದ್ಧತಿ (ನಿರ್ಮೂಲನೆ) ಕಾಯ್ದೆಯ ಪ್ರಕರಣ 2ರ ವಿವರಣೆಯ ಅರ್ಥವನ್ನು ವಿಸ್ತಾರಗೊಳಿಸಬೇಕು (3.5).

5. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ, ಅವರ ಪುನರ್ವಸತಿಗಾಗಿ ಜಿಲ್ಲಾಧಿಕಾರಿಗಳು ತಮ್ಮ ಅಧೀನದಲ್ಲಿ ಇರುವ ಅಧಿಕಾರಿಗಳಿಗೆ ಸೂಕ್ತವಾದ ಅಧಿಕಾರವನ್ನು ಕೊಟ್ಟು, ಅವರನ್ನು ನಿಯೋಜಿಸಬೇಕು (3.12).

6. ಜಿಲ್ಲಾಧಿಕಾರಿಗಳು ಜಿಲ್ಲೆ, ಉಪವಿಭಾಗ, ತಾಲ್ಲೂಕು ಮಟ್ಟಗಳಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಬೇಕು (3.13).

7. ಜೀತ ಪದ್ಧತಿ ಬಗ್ಗೆ ನಿರಂತರವಾಗಿ ಸಮೀಕ್ಷೆಯನ್ನು ಕೈಗೊಳ್ಳುವುದರ ಜೊತೆಗೆ ಪ್ರಾಮಾಣಿಕ ಜೀತದಾಳುಗಳನ್ನು ಗುರುತಿಸಲು ಒಂದು ಕಾರ್ಯಪಡೆಯನ್ನು ಕ್ಷೇತ್ರ ಮಟ್ಟದಲ್ಲಿ ರಚಿಸಬೇಕು (3.15).

8. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ, ಅವರ ಪುನರ್ವಸತಿಗಾಗಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆಯ ಮೇಲ್ವಿಚಾರಣೆ ಮತ್ತು ಪರಾಮರ್ಶೆ ಮಾಡಲು ರಾಜ್ಯ ಮಟ್ಟದಲ್ಲಿ ಉನ್ನತ ಅಧಿಕಾರವನ್ನು ಒಳಗೊಂಡ ಪರಾಮರ್ಶಕ ಸಮಿತಿಯೊಂದಿರಬೇಕು (3.20).

9. ಜಾಗೃತ ಸಮಿತಿಗಳು, ಜಿಲ್ಲೆಯ ಎಲ್ಲಾ ಮಟ್ಟದ ಪಂಚಾಯಿತಿಗಳ ಸಾಮಾಜಿಕ ನ್ಯಾಯ ಸಮಿತಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡಿರುವಂತೆ ಸಮಗ್ರವಾದ ರೀತಿಯಲ್ಲಿ ಜೀತಪದ್ಧತಿ ನಿರ್ಮೂಲನೆಯ ಬಗ್ಗೆ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಬೇಕು (3.14, 19, 20, 22, 23, 24, 27, 31).

10. ಜೀತಪದ್ಧತಿಯು ದಟ್ಟವಾಗಿರುವ ಪ್ರದೇಶಗಳನ್ನು ಗುರುತಿಸುವಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಇತರೆ ಸ್ವಯಂ ಸೇವಾ ಸಂಸ್ಥೆಗಳು ತೀವ್ರವಾದ ಪರಿಶ್ರಮವನ್ನು ಕೈಗೊಳ್ಳಬೇಕು (3.17).

11. ರಾಜ್ಯ ಸರ್ಕಾರವು ಸೂಕ್ಷ್ಮ ಪ್ರದೇಶಗಳಲ್ಲಿ ಜೀತಪದ್ಧತಿ ಕುರಿತು ಕೌಟುಂಬಿಕ ಸಮೀಕ್ಷೆಗಳನ್ನು ಒಂದು ನಿಗದಿತ ಕಾಲ ಮಟ್ಟದಲ್ಲಿ ನಡೆಸಬೇಕು (3.16).

12. ಜೀತದಾಳುಗಳ ಗುರುತಿಸುವಿಕೆಯನ್ನು ಈ ಕೆಳಗಿನ ಸಮೀಕ್ಷೆಗಳನ್ನು ನಡೆಸುವಾಗಲೂ ಕೈಗೊಳ್ಳಬೇಕು:

– ಮನೆ, ನಿವೇಶನಗಳ ಹಂಚಿಕೆಗಾಗಿ ಫಲಾನುಭವಿಗಳನ್ನು ಗುರುತಿಸುವ ಸಮೀಕ್ಷೆ;

– ವಿವಿಧ ಅರ್ಥಿಕಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಡೆಸುವ ಸಮೀಕ್ಷೆ;

– ಸಮಗ್ರ ಗ್ರಾಮೀಣಾಭಿವೃದ್ಧಿ ಮತ್ತು ಇತರೆ ಗ್ರಾಮೀಣಾಭಿವೃದ್ಧಿ ಯೋಜನೆಗಳಡಿ ನಡೆಸುವ ಸ್ಥಳೀಯ ಗ್ರಾಮಯೋಜನೆ ಗಳ ತಯಾರಿಕೆಗೆ ನಡೆಸುವ ಸಮೀಕ್ಷೆ;

– ಜೀತಪದ್ಧತಿ ಮತ್ತು ಬಾಲ ಜೀತಗಾರಿಕೆ ಗಮನಾರ್ಹವಾಗಿರುವ ಸ್ಥಳಗಳಾದ ಬಂಡೆಕೆಲಸ, ಇಟ್ಟಿಗೆ ಕಾರ್ಖಾನೆ, ವಜ್ರ ಕಡಿಯುವಿಕೆ, ರತ್ನಗಂಬಳಿ, ನೇಯ್ಗೆ ಕಾರ್ಖಾನೆ ಮುಂತಾದೆಡೆಗಳಲ್ಲಿ ಜೀತದಾಳುಗಳನ್ನು ಗುರುತಿಸುವ ಸಮೀಕ್ಷೆ ನಡೆಸ ಬೇಕು (3.17).

13. ಸಂಪೂರ್ಣವಾಗಿ ಜೀತ ಪದ್ಧತಿ ನಿರ್ಮೂಲನೆ ಆಗುವವರೆಗೆ ಜೀತದಾಳುಗಳ ಗುರುತಿಸುವಿಕೆಯ ಕಾರ್ಯವು ನಿರಂತರ ವಾಗಿ ನಡೆಯಬೇಕು (3.24).

14. ಐದು ವರ್ಷಗಳಿಗೊಮ್ಮೆ ರಾಷ್ಟ್ರಾದ್ಯಂತ ಜೀತದಾಳುಗಳ ಜನಗಣತಿಯಾಗಬೇಕು (3.25).

15. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಇರುವ ಜೀತದಾಳುಗಳ ಬಗ್ಗೆ ಮಾಹಿತಿ ಕೊಡುವ ಸ್ವಯಂಸೇವಾ ಸಂಸ್ಥೆಗಳು, ಕಾರ್ಯಶೀಲ ಸಂಘಟನೆಗಳು ಮತ್ತು ಸಮಾಜ ಮತ್ತು ದಲಿತ ಕಲ್ಯಾಣಕ್ಕಾಗಿ ದುಡಿಯುವ ಸಮಾಜ ಸೇವಕರಿಗೆ ಸೂಕ್ತ ಉತ್ತೇಜನವನ್ನು ಕೊಡಬೇಕು (3.27).

16. ಕಾಯ್ದೆಯಲ್ಲಿರುವ ನಿಬಂಧನೆಗಳನ್ನು ವಿವರಿಸಲು, ಜೀತಪದ್ಧತಿ ವ್ಯಾಖ್ಯಾನದ ಬಗ್ಗೆ ಸ್ಪಷ್ಟತೆ ಮತ್ತು ಸೂಕ್ತ ದೃಷ್ಟಿ ಕೋನ ಪಡೆಯಲು ಹಾಗೂ ಜೀತಪದ್ಧತಿಯನ್ನು ಗುರುತಿಸಿ ನಿರ್ಮೂಲನೆ ಮಾಡಲು ಅಗತ್ಯವಿರುವ ಕಾರ್ಯವಿಧಾನದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜ್ಯ, ಜಿಲ್ಲಾ, ತಾಲೂಕು ಮತ್ತು ಹಳ್ಳಿ ಮಟ್ಟಗಳಲ್ಲಿ ತರಬೇತಿ ಶಿಬಿರಗಳನ್ನು ನಡೆಸಬೇಕು (3.7).

17. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಕೆಲಸದಲ್ಲಿರುವ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವನ್ನು ಮೂಡಿಸಲು ಜೀತಪದ್ಧತಿ ಪ್ರಚಲಿತವಿರುವ ಸೂಕ್ಷ್ಮ ಸ್ಥಳಗಳಲ್ಲಿ ಸಂಬಂಧಪಟ್ಟವರಿಗೆಲ್ಲಾ ಪ್ರಚಾರ ಶಿಬಿರಗಳನ್ನು ನಡೆಸ ಬೇಕು (3.18).

18. ಕಾಯ್ದೆಯನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ, ತಾಲ್ಲೂಕು, ಗ್ರಾಮ ಮಟ್ಟದ ಆಡಳಿತಕ್ಕೆ ಸೂಕ್ತ ಜಾಗೃತಿ ನೀಡಬೇಕು. ಜೀತ ಪದ್ಧತಿ ನಿರ್ಮೂಲನೆ ಬಗ್ಗೆ ಅಧಿಕ ಕಾಳಜಿಯಿರುವ ಅಧಿಕಾರಿಗಳನ್ನು ಜೀತಪದ್ಧತಿ ಪ್ರಚಲಿತ ವಿರುವ ಸೂಕ್ಷ್ಮ ಸ್ಥಳಗಳಿಗೆ ನೇಮಿಸಬೇಕು, ಮತ್ತು ರಾಜ್ಯ ಸರ್ಕಾರವು ಅವರಿಗೆ ಸಂಪೂರ್ಣ ಉತ್ತೇಜನ ಮತ್ತು ಸಹಕಾರ ವನ್ನು ಕೊಡಬೇಕು (3.21).

19. ಜೀತಪದ್ಧತಿ ಪ್ರಚಲಿತವಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಗ್ರಾಮೀಣ ಕಾರ್ಮಿಕ ಶಿಬಿರಗಳನ್ನು ನಡೆಸಬೇಕು. ಸಂಘಟನಾ ಸಾಮರ್ಥ್ಯವಿರುವ, ತರಬೇತಿ ಕೌಶಲ್ಯವಿರುವ ಮತ್ತು ಸರಿಯಾದ ದೃಷ್ಟಿಕೋನವಿರುವ ವ್ಯಕ್ತಿಗಳಿಗೆ ಈ ಶಿಬಿರಗಳನ್ನು ನಡೆಸುವ ಜವಾಬ್ದಾರಿಯನ್ನು ನೀಡಬೇಕು (3.23).

20. ಜೀತದಾಳುಗಳ ಸಮೀಕ್ಷೆ ಮತ್ತು ಗುರುತಿಸುವಿಕೆ ಹಾಗೂ ಪುನರ್ವಸತಿ ಚಟುವಟಿಕೆಗಳಲ್ಲಿ ತೊಡಗಿರುವ ಅಧಿಕಾರಿ ಗಳಿಗೆ ತರಬೇತಿ ನೀಡಲು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿರಂತರ ತರಬೇತಿ – ಕಾರ್ಯಾಗಾರಗಳನ್ನು ನಡೆಸಬೇಕು, ಜೀತಪದ್ಧತಿ ನಿರ್ಮೂಲನೆಯ ಬಗ್ಗೆ ವ್ಯಾಪಕವಾಗಿ ಪ್ರಚಾರಪಡಿಸಲು ವಾರ್ತಾ ಪತ್ರಿಕೆ, ರೇಡಿಯೋ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳನ್ನು ಬಳಸಬೇಕು (3.26).

21. ಜೀತದಾಳುಗಳ ಗುರುತಿಸುವಿಕೆಯ ಕಾರ್ಯದ ಜೊತೆಜೊತೆಗೆ ಜೀತದಾಳುಗಳನ್ನು ಇಟ್ಟುಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು (3.29).

22. ಗುರುತಿಸಿದ ಪ್ರತಿಯೊಬ್ಬ ಜೀತದಾಳುವಿಗೆ ಒಡನೆಯೇ ಪುನರ್ವಸತಿ ಸೌಲಭ್ಯ ಒದಗಿಸಬೇಕು (3.31).

23. ಜಿಲ್ಲೆಯ ದಂಡಾಧಿಕಾರಿಗಳು ಮತು ಪೊಲೀಸ್ ಅಧಿಕಾರಿಗಳ ಮಾಸಿಕ ಮತ್ತು ಇತರೆ ನಿಯತಕಾಲಿಕ ಸಭೆಗಳಲ್ಲಿ, ಜೀತಸಮಸ್ಯೆಯೂ ಒಂದು ಚರ್ಚಾ ವಿಷಯವಾಗಿರಬೇಕು. ಅದೇ ರೀತಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮದ ಪಂಚಾಯತಿ ಆಡಳಿತದಲ್ಲೂ ಆಗಬೇಕು (3.28).

24. ಜಿಲ್ಲಾ ನ್ಯಾಯಾಂಗದ ಜೊತೆ ಸಮಾಲೋಚಿಸಿ, ಕಾನೂನಿನಡಿಯಲ್ಲಿ ಅಪರಾಧಗಳನ್ನು ವಿಚಾರಿಸುವ ಅಧಿಕಾರವಿರುವ ದಂಡಾಧಿಕಾರಿಯು ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಜಿಲ್ಲಾ ಜಾಗೃತಿ ಸಮಿತಿಯು ಸೂಕ್ತ ಕ್ರಮ ಗಳನ್ನು ಕೈಗೊಳ್ಳಬೇಕು (3.30).

25. ಪ್ರತಿಯೊಂದು ಜಿಲ್ಲಾ ಜಾಗೃತಿ ಸಮಿತಿಯು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವ, ವಿಮುಕ್ತಿಗೊಳಿಸಿದ ಜೀತದಾಳುಗಳ ಈ ಕೆಳಗಿನ ದಾಖಲೆಗಳನ್ನು ಇಡಬೇಕು:

a) ವಿಮುಕ್ತಿ ಹೊಂದಿದ ಜೀತದಾಳುವಿನ ಹೆಸರು ಮತ್ತು ವಿಳಾಸಗಳ ದಾಖಲೆ.

b) ವಿಮುಕ್ತಿಗೊಳಿಸಿದ ಜೀತದಾಳುಗಳ ಕೆಲಸ ಮತ್ತು ಆದಾಯದ ದಾಖಲೆ.

c) ವಿಮುಕ್ತಿಗೊಳಿಸಿದ ಜೀತದಾಳುಗಳಿಗೆ ಲಭ್ಯವಾದ ಸೌಲಭ್ಯಗಳ ಕುರಿತು ದಾಖಲೆ (3.14, 3.33).

26. ಜೀತದಾಳುಗಳನ್ನು ಗುರುತಿಸಲು ನಡೆಸುವ ಹೊಸ ಸಮೀಕ್ಷೆಯ ಬಗ್ಗೆ ಇರುವ ಭಾರತ ಸರ್ಕಾರದ ಮಾರ್ಗದರ್ಶನ ಮತ್ತು ನಿಯಮಾವಳಿಗಳನ್ನು ಸಂಬಂಧಪಟ್ಟವರೆಲ್ಲರೂ ತಪ್ಪದೇ ಪಾಲಿಸಬೇಕು. ಅಂಥ ಗುರುತಿಸುವಿಕೆಯ ಸಮಯದಲ್ಲಿ ಹಳ್ಳಿಗಳಲ್ಲಿ ಬಡಜನರಿರುವ ಸ್ಥಳಗಳಿಗೆ ಹೆಚ್ಚು ಗಮನ ಕೊಡಬೇಕು. ಮಾಹಿತಿಗಳನ್ನು ಬುದ್ಧಿವಂತಿಕೆ ಮತ್ತು ಚಾತುರ್ಯ ದಿಂದ ಸಂಗ್ರಹಿಸಬೇಕು (3.32).

27. ಗಿರಿಜನ ಪ್ರದೇಶ ಉಪಯೋಜನೆ ಅಭಿವೃದ್ಧಿ ಕಾರ್ಯಕ್ರಮಗಳ ಮಾದರಿ (TRIBAL AREA SUBPLAN DEVELOPMENTAL PROGRAMMES) ಯಲ್ಲಿ ಜಿಲ್ಲೆಯ ಆಯ್ದ ಕೆಲವೊಂದು ಕ್ಷೇತ್ರಗಳಲ್ಲಿ ಸರ್ಕಾರವು ಜೀತವಿಮುಕ್ತರ ಪುನರ್ವಸತಿ ಪ್ರದೇಶ ಉಪಯೋಜನೆ ಆರಂಭವಾಗುವಂತೆ ನೋಡಿಕೊಂಡು, ಅವುಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಧಿಯನ್ನು ಮೀಸಲಾಗಿ ಇಡುವಂತೆ ನೋಡಿಕೊಳ್ಳಬೇಕು (3.34).

28. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಕಾರ್ಯಕ್ರಮವನ್ನು ದೇಶದಲ್ಲಿ ಪ್ರಮುಖ ಯೋಜನೆ ಎಂದು ಪರಿಗಣಿತವಾಗಬೇಕು ಮತ್ತು ಸಂಪೂರ್ಣ ಕಾರ್ಯಕ್ರಮದ ಖರ್ಚು ಕೇಂದ್ರ ಸರ್ಕಾರದಿಂದ ಪೋಷಿತವಾಗಬೇಕು (3.35).

29. ಭಾರತ ಸರ್ಕಾರದ ಸಮಗ್ರ ಗ್ರಾಮೀಣಾಭಿವೃದ್ಧಿ ಮಾದರಿಯಲ್ಲಿ, ಜೀತದಾಳುಗಳನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯಲ್ಲೂ ಸ್ಪಷ್ಟವಾದ ಮತ್ತು ವ್ಯವಸ್ಥಿತವಾದ ರಚನೆ ಇರಬೇಕು. ಅದರಲ್ಲಿರುವ ಪ್ರತಿಯೊಬ್ಬ ಅಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸಬೇಕು ಮತ್ತು ನಿಯಂತ್ರಿಸಬೇಕು (3.36).

30. ಕನಿಷ್ಟ ವೇತನ ಕಾಯ್ದೆ, 1948, ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ, 1970, ಅಂತರ್‌ರಾಜ್ಯ ವಲಸೆ ಕಾರ್ಮಿಕ (ಉದ್ಯೋಗದ ನಿಯಂತ್ರಣ ಮತ್ತು ಸೇವೆಯ ಪರಿಸ್ಥಿತಿಗಳು) ಕಾಯ್ದೆ, 1979, ಮತ್ತು ಬಾಲಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986– ಇವುಗಳಲ್ಲಿಯ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು (3.37).

**ಟಿಪ್ಪಣಿ:** ವರದಿಯ ಅಧ್ಯಾಯ 3ರಲ್ಲಿಯ 3.16, 3.17 ಮತ್ತು 3.21 ಶಿಫಾರಸುಗಳನ್ನು ಕೆಲವು ಬದಲಾವಣೆಗಳೊಂದಿಗೆ ಮತ್ತು ಉಳಿದೆಲ್ಲಾ ಶಿಫಾರಸುಗಳನ್ನು ಅವುಗಳ ಯಥಾರೂಪದಲ್ಲಿ ಅತ್ಯವಶ್ಯಕವಾಗಿ ಅನುಷ್ಠಾನಗೊಳಿಸಬೇಕೆಂದು ಕರ್ನಾಟಕ ಸರ್ಕಾರವು ಆದೇಶ ಹೊರಡಿಸಿದೆ (ಅನುಬಂಧ 9.6 ನೋಡಿ).

14.09.1996 ಸಂಗ್ರಹಾನುವಾದ

ಕಿರಣ ಕಮಲ ಪ್ರಸಾದ.

**ಅನುಬಂಧ 9.2**

**ಕರ್ನಾಟದ ಕ್ಷೇತ್ರ ಮಟ್ಟದ ಅಧಿಕಾರಿಗಳ ಸಂವೇದನಾರ್ಥವಾಗಿ ಬೆಂಗಳೂರಿನ ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ 2003ರ ಅಕ್ಟೋಬರ್ 9–10ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ನವದೆಹಲಿಯು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾರ್ಮಿಕ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಿದ ಎರಡು ದಿನಗಳ ಕಾರ್ಯಾಗಾರದ ಫಲಿತಾಂಶ.**

1. ಜೀತ ಮತ್ತು ಬಾಲಕಾರ್ಮಿಕತೆ ಕುರಿತು ಎಲ್ಲಾ ಕಾರ್ಯಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಯು ಒಮ್ಮುಖ (ಒಗ್ಗೂಡಿಸುವಿಕೆಯ) ಪ್ರಯತ್ನಗಳ ಕೇಂದ್ರ ಬಿಂದುವಾಗಿರುತ್ತಾರೆ. ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸಿ ಅಪರಾಧಿಗಳ ಮೇಲೆ ದಾವೆ ಹೂಡುವ ಜವಾಬ್ದಾರಿ ಜಿಲ್ಲಾಧಿಕಾರಿ ಮೇಲೆಯೂ, ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸುವ ಜವಾಬ್ದಾರಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆಯೂ ಇದ್ದು, ಈ ಕೆಲಸಗಳನ್ನೊಳಗೊಂಡಂತೆ ಜೀತ ಮತ್ತು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳಲ್ಲಿಯೂ ಒಮ್ಮುಖತೆ ಸಾಧಿಸುವ ಸಲುವಾಗಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗುವುದು. ಜೀತದಾಳುಗಳ ಪುನರ್ವಸತಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ಮತ್ತು ಬಾಲಕಾರ್ಮಿಕರ ಪುನರ್ವಸತಿಗೆ ಎಮ್.ಸಿ.ಮೆಹ್ತಾ ತೀರ್ಪಿನ ಮೇರೆಗೆ ಒಟ್ಟುಗೂಡಿಸಲಾಗುವ ಸಂಪನ್ಮೂಲಗಳನ್ನು ಬಿಟ್ಟು ಇತರೆ ಎಷ್ಟು ಸಂಪನ್ಮೂಲಗಳನ್ನು ಈ ಸಮಿತಿಯು ಶೇಖರಿಸಿದೆ ಎಂಬುದೇ ಈ ಸಮಿತಿಯ ಯಶಸ್ವಿ ಕಾರ್ಯಸಾಧನೆಯ ಲಕ್ಷಣವಾಗಿದೆ. ಆಶ್ರಯ ಮನೆ ಯೋಜನೆಯಂತಹ ಯೋಜನೆಗಳ ಮೇಲೆ ಸದ್ಯಕ್ಕೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವಿರದಿದ್ದರೂ ಅಂತಹ ಯೋಜನೆಗಳನ್ನೂ ಸೇರಿಸಿ ಎಲ್ಲಾ ಯೋಜನೆಗಳಡಿ ಫಲಾನುಭವಿಗಳನ್ನು ನಿರ್ಧರಿಸುವಾಗ ಬಿಡುಗಡೆಗೊಂಡ ಜೀತವಿಮುಕ್ತರ ಕುಟುಂಬಗಳಿಗೆ ಪುನರ್ವಸತಿಯನ್ನು ಆದ್ಯತೆ ಮೇರೆಗೆ ನೀಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡಲಾಗುವುದು.

2. ಜೀತ ಮತ್ತು ಬಾಲಕಾರ್ಮಿಕತೆ ವಿಷಯಗಳ ಬಗ್ಗೆ ಸಂವೇದನಾ ಕಾರ್ಯಗಾರದ ಪ್ರಯೋಜನವು ನಾಶವಾಗದಂತೆ ನೋಡಿಕೊಳ್ಳಲು ವ್ಯವಸ್ಥೆಯ ಪ್ರಕಿಯೆಯಲ್ಲಿ ಲೋಪವಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವರ್ಗಾವಣೆ ಸಮಯದಲ್ಲಿ ತಮ್ಮ ನಂತರದ ಅಧಿಕಾರಿಗಳ ಉಪಯೋಗಕ್ಕೋಸ್ಕರ ತಾವು ಇಷ್ಟರವರೆಗೆ ಕೈಗೊಂಡ ಮತ್ತು ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರವಾದ ಟಿಪ್ಪಣಿಯನ್ನು ಸಿದ್ಧಪಡಿಸಿಡಬೇಕು.

3. ಜೀತ ಮತ್ತು ಬಾಲಕಾರ್ಮಿಕತೆ ವಿಷಯಗಳ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳ ಜೊತೆ ಪದೇ ಪದೇ ಸಮಾಲೋಚನೆ ನಡೆಸಲು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮಧ್ಯೆ ಜೊತೆ ಕಾರ್ಯವನ್ನು ಉತ್ತೇಜಿಸಲು ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ಮಟ್ಟದ ವೇದಿಕೆಯನ್ನು ರಚಿಸಬೇಕು. ಜೀತದಾಳುಗಳ ಮತ್ತು ಬಾಲ ಕಾರ್ಮಿಕರ ಕುಟುಂಬಗಳನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ನಿರ್ವಹಣೆ ಮಾಡುವಲ್ಲಿ ಭಾಗವಹಿಸುವ ಕೆಲಸವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಬಹುದು ಮತ್ತು ಆ ಕೆಲಸವನ್ನು ನಿರ್ವಹಿಸಲು ಸೂಕ್ತ ಹಣವನ್ನು ಅವರಿಗೆ ಒದಗಿಸಬೇಕು. ಸ್ವಯಂ ಸೇವಾ ಸಂಸ್ಥೆಗಳು ತಮ್ಮಲ್ಲಿ ಹೆಚ್ಚು ಸಮರ್ಥವಾಗಿರುವ ಸಂಸ್ಥೆಗಳನ್ನು ಒಟ್ಟಿಗೆ ಸೇರಿಸಿ ಅವರು ಸ್ವಯಂ ಸೇವಾ ಸಂಸ್ಥೆಗಳಿಗೆ ಯೋಗ್ಯತಾ ಪತ್ರಗಳನ್ನು ಕೊಡುವ ಒಂದು ವ್ಯವಸ್ಥೆಯನ್ನು ರೂಪಿಸಬೇಕು. ಆ ಯೋಗ್ಯತಾ ಪತ್ರಗಳನ್ನು ಆಧರಿಸಿ ಸರ್ಕಾರಿ ಇಲಾಖೆಗಳು ಸುಲಭವಾಗಿ ಮತ್ತು ಶೀಘ್ರವಾಗಿ ಅವರಿಗೆ ಹಣವನ್ನು ಒದಗಿಸುವಂತಾಗಬೇಕು.

4.ಪುನರ್ವಸತಿಯ ಸಂದರ್ಭದಲ್ಲಿ ಬಹು ಮುಖ್ಯವಾಗಿ ಆಗಬೇಕಾದ ಒಂದು ಕೆಲಸವೆಂದರೆ ಸಂಬಂಧಪಟ್ಟ ಕುಟುಂಬಗಳ ಸಮಗ್ರ ಮಾನಸಿಕ ಪುನರ್ವಸತಿ. ಪರಿಣಾಮಕಾರಿ ಪುನರ್ವಸತಿಯ ಪರೀಕ್ಷೆ ಏನೆಂದರೆ – (ಅ) ಬಿಡುಗಡೆಗೂ ಪುನರ್ ವಸತಿಗೂ ಅಂತರವಿಲ್ಲದಿರುವುದು; (ಆ) ಪುನರ್ವಸತಿ ಸೌಲಭ್ಯ ಒದಗಿಸುವ ಸಂದರ್ಭದಲ್ಲಿ ಮತ್ತು ಅದನ್ನು ಒದಗಿಸಿದ ನಂತರ ಜೀತಬಂಧನಕ್ಕೆ ಮರಳದಿರುವುದು; (ಇ) ತಪ್ಪಿಸಬಹುದಾದ ಸಾಲ ಮತ್ತು ಅದರಿಂದ ಹುಟ್ಟುವ ಜೀತ ಬಂಧನ ಗಳಿಗೆ ಕಾರಣವಾದ ದುಂದುವೆಚ್ಚಗಳಿಗೆ ಅನುವು ಮಾಡಿಕೊಡುವ ಆಚರಣೆಗಳ ಬಗ್ಗೆ ಅರಿವು ಬೆಳೆಯುವುದು.

5. ಜೀತದ ಪತ್ತೆ ಹಚ್ಚಿ ಅವರನ್ನು ಗುರುತಿಸುವ ಹಾಗೂ ಪುನರ್ವಸತಿಗೊಳಿಸುವ ಕೆಲಸಗಳಲ್ಲಿ ಮೂರೂ ಹಂತದ ಚುನಾಯಿತ ಹಾಗೂ ಅಧಿಕಾರದಲ್ಲಿರುವ ಮತ್ತು ಉಪವಿಭಾಗಕ್ಕಿಂತ ಕೆಳಗಿರುವ ಎಲ್ಲಾ ಮಟ್ಟಗಳಲ್ಲಿರುವ ಪಂಚಾಯತಿ ಕಾರ್ಯಕರ್ತರನ್ನು ಸಂವೇದನಾ ಶೀಲರನ್ನಾಗಿಯೂ ಸಿದ್ಧರನ್ನಾಗಿಯೂ ಮಾಡುವಂತೆ ಅವರಿಗೆ ಸಾಮರ್ಥ್ಯ ಹೆಚ್ಚಿಕೆಯ ತರಬೇತಿಗಳನ್ನು ಏರ್ಪಡಿಸಬೇಕು. ಅಂತಹ ಕಾರ್ಯಕರ್ತರ ಸಂವೇದನಾ ಕಾರ್ಯಾಗಾರಗಳನ್ನು ಜಿಲ್ಲಾ ಮಟ್ಟದಲ್ಲಿ ನಡೆಸಬೇಕು. ನ್ಯಾಯಿಕ ಅಧಿಕಾರಿಗಳಿಗೂ ಸಂವೇದನಾ ಕಾರ್ಯಾಗಾರಗಳನ್ನು ನಡೆಸಬೇಕು.

6. ಪಂಚಾಯತ್‌ನ ಎಲ್ಲಾ ಮಟ್ಟದ ಚುನಾಯಿತ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಒಟ್ಟಾರೆ ಸಮುದಾಯಕ್ಕೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 58A ಬಗ್ಗೆ ಸಮಗ್ರವಾದ ಮಾಹಿತಿ ಮತ್ತು ತಿಳುವಳಿಕೆ ನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾರ್ಮಿಕ ಇಲಾಖೆಗಳು ಪ್ರಚಾರ ಆಂದೋಲನವನ್ನು ತಕ್ಷಣ ಕೈಗೊಳ್ಳಬೇಕು.

7. ಪುನರ್ವಸತಿ ಸೌಲಭ್ಯಗಳಿಗೆ ಹಣಕಾಸು ಪೂರೈಸುವ ತಂತ್ರ ವಿಧಾನದಲ್ಲಿ ಸೌಲಭ್ಯಗಳಲ್ಲಿಯ ಸಾಲದ ಭಾಗವು ಕನಿಷ್ಟ ಮಟ್ಟದ್ದಿರಬೇಕೆಂಬ ತತ್ವವು ಒಳಗೊಂಡಿರಬೇಕು. ಈ ತತ್ವವನ್ನು ಗಮನದಲ್ಲಿಟ್ಟು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ಜೀತದಾಳು ಮತ್ತು ಬಾಲ ಕಾರ್ಮಿಕ ಕುಟುಂಬಗಳಿಗೆ ವ್ಯತ್ಯಾಸಾತ್ಮಕ ಬಡ್ಡಿ ದರಗಳಲ್ಲಿ ಅನುಭೋಗಕ್ಕೆ ಸಾಲ ವನ್ನು ಒದಗಿಸಿ ಅದನ್ನು ಬೇರೆ ತರಹದ ಉತ್ಪಾದನಾ ಸಾಲದೊಂದಿಗೆ ಕೂಡಿಸಿ ಸಮಂಜಸವಾದ ಸಾಲ ಸೌಲಭ್ಯವನ್ನು ರೂಪಿಸಬೇಕು.

8. ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ಜೀತದಾಳು ಮತ್ತು ಬಾಲ ಕಾರ್ಮಿಕ ಕುಟುಂಬಗಳಿಗೆ ಅನುಭೋಗ ಸಾಲವನ್ನೊಳಗೊಂಡಿರುವ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಿದ ಕುರಿತು ಪ್ರತ್ಯೇಕ ಮಾಹಿತಿಯನ್ನು ತಯಾರು ಮಾಡಿ ಕರ್ನಾಟಕ ಸರ್ಕಾರ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶಿಷ್ಟ ವರದಿಗಾರರು, ಹೈದರಾಬಾದ್, ಅವರಿಗೆ ಮೂರು ತಿಂಗಳಿಗೊಮ್ಮೆ ವರದಿಯನ್ನು ಸಲ್ಲಿಸಬೇಕು. ಇದರಿಂದ ಕರ್ನಾಟಕದಲ್ಲಿ ಕೈಗೊಂಡ ಪುನರ್ವಸತಿ ಬಗೆಗಿನ ಈ ಮಹತ್ತರ ಮಾಹಿತಿಯನ್ನು ನಿಯತಕಾಲಿಕವಾಗಿ ಭಾರತದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯಕ್ಕೆ ಒದಗಿಸಲು ಸಹಾಯವಾಗುವುದು.

9. ಬ್ಯಾಂಕುಗಳು ಎರಡು ಸಂಗತಿಗಳನ್ನು ಧನಾತ್ಮಕವಾಗಿ ಪರಿಗಣಿಸಬೇಕು. ಒಂದು: ಸದ್ಯಕ್ಕೆ ಬಾಕಿ ಇರುವ ಸಾಲಗಳ (ಮರುಪಾವತಿಗಿರುವ) ನಿಯಮಗಳಿಂದ ವಿನಾಯತಿ ಕೊಟ್ಟು ಹೊಸ ಸಾಲಗಳನ್ನು ಜೀತದಾಳುಗಳಿಗೆ ಮಂಜೂರು ಮಾಡುವುದು; ಎರಡು: ಅನುಭೋಗ ಸಾಲಗಳನ್ನು ಸಾಧ್ಯವಾದಷ್ಟು ಕಡಿಮೆ ಬಡ್ಡಿ ದರದಲ್ಲಿ ಒದಗಿಸುವುದು. ಅಗತ್ಯ ವಿದ್ದರೆ ರಿಸರ್ವ್ ಬ್ಯಾಂಕಿನ ಪ್ರಾಂತೀಯ ನಿರ್ದೇಶಕರು, ಬೆಂಗಳೂರು ಇವರು ಈ ವಿಷಯ ಕುರಿತು ರಿಸರ್ವ್ ಬ್ಯಾಂಕ್, ಮುಂಬೈ ಇವರ ಜೊತೆ ವ್ಯವಹರಿಸಬೇಕು.

10. ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ಬೇರೆ ಬೇರೆ ಮಟ್ಟದ ಬ್ಯಾಂಕ್ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಸಾಲ ಮಂಜೂರು ಮಾಡುವ ಅಧಿಕಾರಿಗಳಿಗೆ ಸಂವೇದನಾ ಕಾರ್ಯಾಗಾರಗಳನ್ನು ನಡೆಸಲು ಮುಂದಾಗಬೇಕು. ಸಂವೇದನಾ ಶೀಲತೆಯ ಬಹು ಮುಖ್ಯ ಅಂಶವೇನೆಂದರೆ ಸಾಲ ಮಂಜೂರು ಮಾಡುವ ಮತ್ತು ಅದನ್ನು ವಿತರಿಸುವ ಸಮಯಗಳ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಿ ಸಾಲ ವಿತರಣೆಯನ್ನು ಉತ್ತಮಗೊಳಿಸುವ ಸಮಸ್ಯೆಗೆ ವಾಸ್ತವ ಪರಿಹಾರ ಗಳನ್ನು ಕಂಡುಹಿಡಿಯುವುದಾಗಿದೆ. ಸ್ವ ಸಹಾಯ ಗುಂಪುಗಳಿಗೆ ಸಾಲ ಕೊಡುವಾಗ ಆಧಾರವಿಡುವ ಅವಶ್ಯಕತೆ ಇಲ್ಲ ಮತ್ತು ಸ್ವ ಸಹಾಯ ಗುಂಪೊಂದರಲ್ಲಿಯ ಯಾವುದಾದರೂ ಸದಸ್ಯರು ಸಾಲ ಮರುಪಾವತಿ ಮಾಡದಿದ್ದರೆ ಆ ಸ್ವ ಸಹಾಯ ಗುಂಪಿಗೆ ಸಾಲ ನೀಡುವುದರಲ್ಲಿ ಅಡ್ಡಿಯಿಲ್ಲ ಎಂಬ ತತ್ವವನ್ನು ಸುತ್ತೋಲೆ ಮುಖಾಂತರ ಒತ್ತಿ ತಿಳಿಸಬೇಕು.

11. ಜೀತದಾಳು ಮತ್ತು ಬಾಲಕಾರ್ಮಿಕ ಕುಟುಂಬಗಳ ಪುನರ್ವಸತಿಯಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಯಾವ ರೀತಿ ಹೆಚ್ಚು ಪರಿಣಾಮಕಾರಿಯಾಗಿ ಸಹಾಯ ಮಾಡಬಹುದು ಎಂದು ನಬಾರ್ಡ್ ಸಂಸ್ಥೆಯು ಒಂದು ಯೋಜನೆಯನ್ನು ಸಿದ್ಧಪಡಿಸಬೇಕು.

12. ದಿನವೊಂದಕ್ಕೆ ಒಂದು ರೂಪಾಯಿಯ ಕೊಡುಗೆಯಿಂದ ಒಂದು ಕಡೆ ಆರೋಗ್ಯ, ಜೀವನ, ಮರಣ, ಅಂಗವಿಕಲತೆ ಮುಂತಾದವು ಇನ್ನೊಂದು ಕಡೆ ಮನೆಗಳ ದುರಸ್ಥಿಗಳನ್ನು ಒಳಗೊಳ್ಳುವಂತೆ ಭಾರತ ಸರ್ಕಾರವು ಜೀವ ವಿಮೆ ನಿಗಮ ದೊಂದಿಗೆ ಸಿದ್ಧಪಡಿಸುತ್ತಿರುವ ವಿಮಾ ಯೋಜನೆಯನ್ನು ಕರ್ನಾಟಕ ಸರ್ಕಾರವು ಪರಿಶೀಲಿಸಿ ಅದೇ ಸೌಲಭ್ಯಗಳನ್ನು ರಾಜ್ಯದಲ್ಲಿ ಬಿಡುಗಡೆ ಹೊಂದಿದ ಜೀತದಾಳುಗಳಿಗೂ ಸಿಗುವಂತೆ ಮಾಡಬೇಕು.

13. ಬಾಲ ಜೀತದಾಳುಗಳ ಮತ್ತು ಅಪಾಯಕಾರಿ ಕೆಲಸಗಳನ್ನು ಮಾಡುತ್ತಿರುವ ಬಾಲ ಕಾರ್ಮಿಕರನ್ನೊಳಗೊಂಡಂತೆ ಬಾಲ ಕಾರ್ಮಿಕತೆಯ ಅಗಾಧತೆಯ ಪ್ರಮಾಣವನ್ನು ನಿರ್ಧರಿಸಲು ಒಂದು ಹೊಸ ಹಾಗೂ ಸಮಗ್ರ ಸಮೀಕ್ಷೆಯ ಅವಶ್ಯಕತೆಯಿದೆ.

14. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಲಹೆ ಮೇರೆಗೆ ಬಾಲ ಕಾರ್ಮಿಕತೆಯನ್ನು ನಿಲ್ಲಿಸುವ ಕಾರ್ಯ ಯೋಜನೆ ಕುರಿತಾಗಿ ಕಾರ್ಮಿಕ ಇಲಾಖೆಯು ಒಮ್ಮುಖ ತತ್ವದ ಮೇಲೆ ಸಿದ್ಧಪಡಿಸಿದ ನೀಲಿನಕ್ಷೆಯು ಒಂದು ಉತ್ತಮ ಮಾದರಿ ದಾಖಲೆಯಾಗಿದೆ. ಅದನ್ನು ಸಂಪೂರ್ಣವಾಗಿ ಬೆಂಬಲಿಸಬೇಕಾಗುತ್ತದೆ. ಅದಕ್ಕೋಸ್ಕರ ಕಾರ್ಯ ಯೋಜನೆಯಲ್ಲಿ

ಪ್ರಸ್ತಾಪಿಸಿದ ಪ್ರಕಾರ ವರ್ಷಕ್ಕೆ 6 ಕೋಟಿಯಂತೆ ಒಟ್ಟು 36 ಕೋಟಿ ರೂಪಾಯಿಗಳ ಅಗತ್ಯವಿದ್ದು ವರ್ಷಕ್ಕೆ ತಗಲುವ ಒಟ್ಟು ಖರ್ಚನ್ನು ಒಂದೇ ಕಂತಿನಲ್ಲಿ ವರ್ಷಾರಂಭದಲ್ಲಿ ಒದಗಿಸಬೇಕು.

15. ಬಿಡುಗಡೆಗೊಂಡ ಬಾಲ ಜೀತದಾಳುಗಳ ಶೈಕ್ಷಣಿಕ ಪುನರ್ವಸತಿಗೋಸ್ಕರ ಹೆಚ್ಚುವರಿ ಪ್ರಾಥಮಿಕ ಶಾಲೆಗಳು ಮತ್ತು ವಸತಿ ನಿಲಯಗಳ ಅವಶ್ಯಕತೆ ಬಗ್ಗೆ ನಿರ್ಧರಿಸಿ ಅವು ಎಷ್ಟು ಬೇಕು ಎಂಬುದನ್ನು ನಿಗದಿಗೊಳಿಸಬೇಕು ಮತ್ತು ಈ ಕಾರ್ಯವನ್ನು 2007ರೊಳಗೆ ಕರ್ನಾಟಕದಲ್ಲಿಯ ಬಾಲ ಕಾರ್ಮಿಕತೆಯನ್ನು ತೊಡೆದು ಹಾಕುವ ನೀಲಿನಕ್ಷೆಯ ಅಂಗವಾಗಿ ಎತ್ತಿಕೊಳ್ಳಬೇಕು. ಅಂತಹ ಮಕ್ಕಳನ್ನು ಸೇರಿಸುವ ವಸತಿ ಶಾಲೆಗಳ ಪಾಲಕರು ಬಾಲಕರಿಗೆ/ಬಾಲಕಿಯರಿಗೆ ಮಿತ್ರರಂತೆ ವರ್ತಿಸುವಂತೆ ಮಾಡಲು ಅವರಿಗೆ ಗುರಿ ಸ್ಪಷ್ಟಪಡಿಸುವ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

16. ಹೆಚ್ಚು ತೀವ್ರತರವಾದ ಜೀತ ಬಂಧನದ ಎಲ್ಲಾ ಪ್ರಕರಣಗಳಲ್ಲಿಯ ಅಪರಾಧಿಗಳ ಮೇಲೆ ದಾವೆ ಹೂಡಬೇಕು ಮತ್ತು ಒಂದು ಧೋರಣೆಯ ಅಂಗವಾಗಿ ಜೀತ ನಿರ್ಮೂಲನೆ ಕುರಿತ ಆಚರಣೆಗಳನ್ನು ಮೂಲೋತ್ಪಾಟನೆ ಮಾಡಲು ಮತ್ತು ಸರ್ಕಾರದ ಇಚ್ಛಾಶಕ್ತಿಯನ್ನು ದೃಢಪಡಿಸಲು ಹಾಗೂ ಪ್ರಚಾರ ಮಾಡಲು ಅವನ್ನು ಹುರುಪಿನಿಂದ ಮುನ್ನಡಸಬೇಕು.

17. ಬಾಲ ಮನೆಗೆಲಸದವರು ಜೀತದಾಳುಗಳಾಗಿರುವ ಲಕ್ಷಣಗಳು ಕಂಡು ಬಂದರೆ ಅವರ ಮಾಲಿಕರ ಮೇಲೆ ದಾವೆ ಹೂಡುವ ಉದ್ದೇಶದಿಂದ ಅವರಿಗೆ ನೊಟೀಸುಗಳನ್ನು ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976ರಡಿ ಕಳುಹಿಸಬೇಕು.

18. ಈ ಕಾರ್ಯಾಗಾರದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ವರದಿ ಮಾಡಿದ 13 ಮಂದಿ ಮನೆಗೆಲಸದಲ್ಲಿದ್ದ ಬಾಲ ಕಾರ್ಮಿಕರ ಸಂಶಯಾಸ್ಪದ ಮರಣದ ಪ್ರಕರಣಗಳ ಬಗ್ಗೆ ವಸ್ತುಸ್ಥಿತಿಯನ್ನು ನಿರ್ಧರಿಸಲು ಮತ್ತು ಅವುಗಳ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಯು ತನಿಖೆ ಮಾಡಬೇಕು.

19. ವರದಕ್ಷಿಣೆಗೆ ಸಂಬಂಧಿಸಿದ ಸಂಶಯಾಸ್ಪದ ಮರಣಗಳಲ್ಲಿ ಏಳು ವರ್ಷದ ತತ್ವವನ್ನು ಅನ್ವಯಿಸಿದಂತೆ ಬಾಲ ಮನೆಗೆಲಸದವರ ಮರಣಗಳ ತನಿಖೆಯೂ ಯಾವುದೇ ಹೊಸ ನಿರ್ದೇಶನದ ಅಗತ್ಯವಿಲ್ಲದೆ ನಡೆಯುವಂತಾಗಬೇಕು.

20. ಸಾರ್ವಜನಿಕರು ಮತ್ತು ಪೊಲೀಸರನ್ನು ಸಂವೇದನಾ ಶೀಲರನ್ನಾಗಿ ಮಾಡುವ ಸಾಧನವಾಗಿ ಸ್ವಯಂ ಸೇವಾ ಸಂಸ್ಥೆಗಳು ಬಾಲ ಕಾರ್ಮಿಕತೆ ಮತ್ತು ಜೀತ ಕುರಿತಂತೆ ಕಾಯ್ದೆಯಲ್ಲಿರುವ ಅಂಶಗಳ ಬಗ್ಗೆ ಮತ್ತು ಪ್ರತ್ಯೇಕವಾಗಿ ಶಿಕ್ಷೆಗೆ ಸಂಬಂಧಪಟ್ಟ ಭಾಗಗಳ ಬಗ್ಗೆ ಮಾಹಿತಿಯನ್ನೊಳಗೊಂಡ ಕರಪತ್ರಗಳನ್ನು ಮುದ್ರಿಸಿ ಜನರಿಗೆ ಮತ್ತು ಪೊಲೀಸ್ ಠಾಣೆಗಳಿಗೆ ಹಂಚಬೇಕು.

21. ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಯೋಜಿಸುವ ಅವಧಿಯಲ್ಲಿ ಅವರು ಪುನಃ ಹೊಸ ಸಾಲ ಮಾಡಿ ಜೀತ ಬಂಧನಕ್ಕೆ ಮರಳದಂತೆ ರಾಜ್ಯ ಸರ್ಕಾರವು ಅವರಿಗೆ ಒಂದು ಪಿಂಚಣಿ ಯೋಜನೆಯನ್ನು ತಯಾರಿಸಬೇಕು.

22. ರಾಜ್ಯವು ಸಿದ್ಧಪಡಿಸುವ ಬಡತನ ನಿರ್ಮೂಲನಾ ಯೋಜನೆಗಳು ಜೀವನಾಧಾರದ ಮತ್ತು ಸಾಲದ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸುವಂತಿರಬೇಕು. ಏಕೆಂದರೆ ಅವು ಸಾಲದಿಂದ ಹುಟ್ಟುವ ಜೀತಬಂಧನದ ಮೂಲ ಕಾರಣಗಳಾಗಿವೆ

23. ಜೀತ ಆಚರಣೆ ಕುರಿತು ಎಚ್ಚರಿಕೆ ಕೊಟ್ಟು ಅದನ್ನು ತಡೆಗಟ್ಟುವ ಉದ್ದೇಶದಿಂದ ಅಪರಾಧಿಗಳ ಮೇಲೆ ದಾವೆ ಹೂಡುವಾಗ ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆಯಲ್ಲಿನ ಮತ್ತು ಬೇರೆ ಕಾಯ್ದೆಗಳ ಯಾವ ಅಂಶಗಳನ್ನು ಬಳಸಿದರೆ ಪರಿಣಾಮಕಾರಿಯಾದ ಮತ್ತು ಅತಿ ಹೆಚ್ಚಿನ ಶಿಕ್ಷೆಗೆ ಅವರನ್ನು ಒಳಪಡಿಸಬಹುದು ಎಂದು ಕಂಡುಹಿಡಿದು ಅದರ ಪ್ರಕಾರ ಕ್ರಮಕೈಗೊಳ್ಳಬೇಕು.

24. ಪ್ರಾಥಮಿಕ ಮಟ್ಟದ ತನಕ ಉತ್ತಮ ರೀತಿಯ ಗುಣಾತ್ಮಕ ಶಿಕ್ಷಣ ಸಿಗುವಂತೆ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು. ಅದಕ್ಕೋಸ್ಕರ ಈ ಮುಂದಿನ ಅಂಶಗಳನ್ನು ಪರಿಗಣಿಸಬೇಕು: ಮಕ್ಕಳಿಗೆ ಶಿಕ್ಷಣ ಪಡೆಯುವ ಸಾಧ್ಯತೆ; ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ಇಬ್ಬರು ಶಿಕ್ಷಕ/ಶಿಕ್ಷಕಿಯರ ಅವಶ್ಯಕತೆ; ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ನಾಲ್ವರು ಶಿಕ್ಷಕ/ಶಿಕ್ಷಕಿಯರ ಅವಶ್ಯಕತೆ; ಪ್ರತಿ ಶಿಕ್ಷಕ/ಶಿಕ್ಷಕಿಯರಿಗೆ ಒಂದು ಕೋಣೆ; ಮತ್ತು ಪ್ರತಿ ವರ್ಷ ಶಿಕ್ಷಕ/ಶಿಕ್ಷಕಿಯರಿಗೆ ಕನಿಷ್ಟ 20 ದಿನಗಳ ತರಬೇತಿ. ಶಿಕ್ಷಣವು ಕೇವಲ ಉದ್ಯೋಗಕ್ಕೆ ಮಾತ್ರ ಸಾಧನವಲ್ಲ; ಬದಲು ಅದು ಜಾಗೃತಿಯಿಂದ ಕೂಡಿದ ಹಾಗೂ ಸ್ವಾಭಿಮಾನಿ ಜೀವನಕ್ಕೆ ದಾರಿ ಎಂಬ ವಿಚಾರವನ್ನು ಉತ್ಸಾಹದಿಂದ ಕಾರ್ಯಗತಗೊಳಿಸಬೇಕು.

25. ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆಯನ್ನು ಪಕ್ಷಪಾತವಿಲ್ಲದೆ ಮತ್ತು ಹೊರಗಿನ ಆಮಿಷಗಳಿಗೆ ಹಾಗೂ ಒತ್ತಡಗಳಿಗೆ ಮಣಿಯದೆ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಗುರುತಿಸಿದ ಜೀತದಾಳುಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣದವರನ್ನು ವೈಯಕ್ತಿಕವಾಗಿ ತನಿಖೆ ಮಾಡಬೇಕು. ಉಪ ವಿಭಾಗಾಧಿಕಾರಿಗಳು ಜಿಲ್ಲೆಗಳಲ್ಲಿ ಜೀತದಾಳುಗಳ ಗುರುತಿಸುವಿಕೆಯ ಕಾರ್ಯಕ್ಕೆ ಮುತುವರ್ಜಿಯಿಂದ ಮುಂದಾಳತ್ವ ಕೊಡಬೇಕು; ಪಂಚಾಯತಿ ಕಾರ್ಯಕರ್ತರ ಜೀತ ಕುರಿತ ಕೆಲಸವನ್ನೂ ಅವರು ನಿರ್ದೇಶಿಸಬೇಕು.

26. ಎಲ್ಲಾ ಶಕ್ತಿಗಳನ್ನು ಒಟ್ಟುಗೂಡಿಸಿ ಕಾರ್ಯಸಾಧಿಸುವ ದೃಷ್ಟಿಯಿಟ್ಟು ಜೊತೆಗೂಡಿ ಕೆಲಸ ಮಾಡುವ ರೀತಿಯಲ್ಲಿ ಒಮ್ಮುಖದ ಪ್ರಯತ್ನಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾತ್ರವಲ್ಲ ಸರ್ಕಾರಿ ಇಲಾಖೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮಧ್ಯೆಯೂ ನಡೆಯಬೇಕು.

27. ಜೀತ ಮತ್ತು ಬಾಲ ಕಾರ್ಮಿಕತೆ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಪ್ರಗತಿ ಇಲ್ಲದಿದ್ದಕ್ಕೆ ಕ್ರಮಕೈಗೊಳ್ಳುವಲ್ಲಿ ಕಾಲ ವಿಳಂಬವಾಗುವುದೇ ಮುಖ್ಯ ಕಾರಣ ಎಂದು ಕಾರ್ಯಾಗಾರವು ಗುರುತಿಸಿದೆ. ಆದ್ದರಿಂದ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಹಾಗೂ ಅಪರಾಧಿಗಳ ಮೇಲೆ ದಾವೆ ಹೂಡುವ ಕ್ರಮಗಳ ಮಧ್ಯೆ ವಿಳಂಬವಾಗದಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮಾದರಿ ವೇಳಾಪಟ್ಟಿಗಳನ್ನು ತಯಾರಿಸಬೇಕು. ಬಳಸಬೇಕಾದ ಒಂದು ಕ್ರಮವೇನೆಂದರೆ ಜಿಲ್ಲಾ ಪಂಚಾಯತಿ ಮತ್ತು ಜಿಲ್ಲಾಧಿಕಾರಿಗಳಿಗೆ ಕಾರ್ಯಕ್ರಮದ ಆರಂಭದಲ್ಲೇ ಹಣ ಬಿಡುಗಡೆ ಮಾಡಬೇಕು. ಕೇಂದ್ರ

ಸರ್ಕಾರವು ಬಾಲ ಕಾರ್ಮಿಕತೆಗೆ ಸಂಬಂಧಪಟ್ಟಂತೆ ಅನಿರ್ಬಂಧಿತ ಹಣವನ್ನು ಕನಿಷ್ಟ ಮಾರ್ಗದರ್ಶನಗಳನ್ನು ರೂಪಿಸಿ ಒಂದೇ ಕಂತಿನಲ್ಲಿ ವರ್ಷದ ಮೊದಲೇ ಮುಂಗಡವಾಗಿ ಅನುಷ್ಠಾನಗೊಳಿಸುವ ಇಲಾಖೆಗಳಿಗೆ ಬಿಡುಗಡೆ ಮಾಡಬೇಕು.

28. ಗುರುತಿಸಿದ ಮತ್ತು ಬಿಡುಗಡೆಗೊಳಿಸಿದ ಜೀತದಾಳು ಮತ್ತು ಬಾಲ ಕಾರ್ಮಿಕ ಕುಟುಂಬಗಳು ಕಾನೂನಿನಡಿ ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳನ್ನು ತಿಳಿಯುವಂತೆ ಮತ್ತು ತಮ್ಮ ಪುನರ್ವಸತಿಯ ಯೋಜನೆಗಳನ್ನು ಸಂಘಟಿತ, ಸ್ವಾವಲಂಬಿ, ಗುಂಪು ಆಧಾರಿತ ಮತ್ತು ಸಹಕಾರಿ ತತ್ವದಲ್ಲಿ ಅನುಷ್ಠಾನಗೊಳಿಸಲು ಬೇಕಾದ ಕೌಶಲ್ಯಗಳನ್ನು ಪಡೆಯುವಂತೆ ಪುನರ್ವಸತಿ ಯೋಜನೆಗಳನ್ನು ರೂಪಿಸುವ ಮುಂಚೆ ಮತ್ತು ಅವನ್ನು ಅನುಷ್ಠಾನಗೊಳಿಸುವಾಗ ಅವರಿಗೆ ಸಂವೇದನಾ ತರಬೇತಿಗಳನ್ನು ನಡೆಸಬೇಕು.

29. ಜೀತ ಮತ್ತು ಬಾಲ ಕಾರ್ಮಿಕತೆಗಳು ಮುಂದುವರಿಯಲು ಇರುವ ಮುಖ್ಯ ಕಾರಣಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಅವಶ್ಯಕವಾದ ಕನಿಷ್ಟ ಕಾನೂನಿನ ರಕ್ಷಣೆ ಇಲ್ಲದಿರುವುದು ಒಂದು. ಒಪ್ಪುವ ಕೆಲಸದ ಪರಿಸ್ಥಿತಿಗಳು, ಕನಿಷ್ಟ ವೇತನ, ಹೆರಿಗೆ ಭತ್ಯೆ, ಕಾರ್ಮಿಕರಿಗೆ ಪರಿಹಾರ, ಆರೋಗ್ಯ ವಿಮೆ, ಭವಿಷ್ಯ ನಿಧಿ, ಪಿಂಚಣಿ ಮತ್ತು ನಿರುದ್ಯೋಗ ಭತ್ಯೆಗಳು ಸಾಮಾಜಿಕ ಭದ್ರತೆಯಲ್ಲಿ ಒಳಗೊಂಡಿರುತ್ತದೆ. ಆದ್ದರಿಂದ ಭಾರತ ಸರ್ಕಾರವು ಸಿದ್ಧಪಡಿಸಿದ ಅಸಂಘಟಿತ ಕಾರ್ಮಿಕರ ಮಸೂದೆ, 2003ನ್ನು ವಿಳಂಬಮಾಡದೇ ಜಾರಿಗೊಳಿಸಬೇಕು.

ಮಾನ್ಯ ಗೃಹ ಮಂತ್ರಿಗಳು ಮತ್ತು ಕಾರ್ಮಿಕ ಮಂತ್ರಿಗಳು ಕಾರ್ಯಾಗಾರದ ಆರಂಭೋತ್ಸವದ ಸಮಯದಲ್ಲಿ ತಮ್ಮ ಭಾಷಣಗಳಲ್ಲಿ ವ್ಯಕ್ತಪಡಿಸಿದ ರಾಜಕೀಯ ಇಚ್ಛಾಶಕ್ತಿಯನ್ನು ಕಾರ್ಯಾಗಾರದಲ್ಲಿ ಭಾಗವಹಿಸಿದವರು ಗಮನಿಸಿದ್ದಾರೆ. ಆದ್ದರಿಂದ ಈ ಕಾರ್ಯಾಗಾರದಲ್ಲಿ ಮೂಡಿಬಂದ ಸಲಹೆಗಳು ಮತ್ತು ನಿರ್ಣಯಗಳು ಕರ್ನಾಟಕ ರಾಜ್ಯಾದ್ಯಂತ ಕ್ಷೇತ್ರ ಮಟ್ಟದ ಅಧಿಕಾರಿಗಳಿಂದ ಕ್ಷೇತ್ರ ಮಟ್ಟದಲ್ಲಿ ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತವೆ ಎಂಬ ನಿರೀಕ್ಷೆಯನ್ನು ಅವರು ಇಟ್ಟಿದ್ದಾರೆ.

| | | |
|---|---|---|
| ಸಹಿ/ | ಸಹಿ/ | ಸಹಿ/ |
| ಕೌಶಿಕ್ ಮುಖರ್ಜಿ, | ಕೆ.ಆರ್.ವೇಣುಗೋಪಾಲ್, | ಟಿ.ವೈ.ನಯಾಜ್‌ಅಹ್ಮದ್, |
| ಸರ್ಕಾರದ ಕಾರ್ಯದರ್ಶಿಗಳು | ವಿಶೇಷ ವರದಿಗಾರರು, | ಸರ್ಕಾರದ ಕಾರ್ಯದರ್ಶಿಗಳು |
| ಗ್ರಾಮೀಣಾಭಿವೃದ್ಧಿ ಮತ್ತು | ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, | ಕಾರ್ಮಿಕ ಇಲಾಖೆ, |
| ಪಂಚಾಯತ್ ರಾಜ್ ಇಲಾಖೆ | ಹೈದರಾಬಾದ್. | ಬೆಂಗಳೂರು. |
| ಬೆಂಗಳೂರು. | | |

## ಅನುಬಂಧ 9.3

### ಶ್ರೀ ಎಸ್.ಆರ್.ಶಂಕರನ್‌ರವರು ರೂಪಿಸಿದ 'ಜೀತಗಾರನನ್ನು' ಗುರುತಿಸಲು ಅನುಸರಿಸಬೇಕಾದ ವಿಧಾನ/ಮಾರ್ಗದರ್ಶಿಗಳು

ತನಿಖಾ ತಂಡದ ಅಧಿಕಾರಿಗಳು ಅಥವಾ ಬೇರೆ ಅಧಿಕಾರಿ ಅಥವಾ ಇನ್ನಿತರೆ ವ್ಯಕ್ತಿಗಳಿಗೆ ವಹಿಸಿರುವ ಕೆಲಸಗಳಿಗನುಗುಣವಾಗಿ ಹಳ್ಳಿಯನ್ನು ತಲುಪಿದ ಕೂಡಲೇ ಮುಖ್ಯ ಜಾಗಕ್ಕೆ ಹೋಗುವ ಮೊದಲು ದಲಿತರು ವಾಸಿಸುವ ಸ್ಥಳಗಳಿಗೆ ಹೋಗಬೇಕು. ಹಳ್ಳಿಯಲ್ಲಿರುವ ಅನುಸೂಚಿತ ಜಾತಿ, ಅನುಸೂಚಿತ ಜನಾಂಗ ಮತ್ತು ಇನ್ನಿತರ ಹಿಂದುಳಿದ ಜಾತಿಯ ಕೃಷಿ ಕಾರ್ಮಿಕರನ್ನು ದಲಿತ ಕೇರಿಯಲ್ಲಿ ಗುಂಪು ಸೇರುವಂತೆ ಮಾಡಬೇಕು. ಅವರಲ್ಲಿ ಎಷ್ಟು ಜನ ದಿನಗೂಲಿಯ ಮೇಲೆ ಹಾಗೂ ಎಷ್ಟು ಜನ ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಲು ಅವರನ್ನು ಕೇಳಬೇಕು. ಇದಕ್ಕೆ ಅನುಕೂಲವಾಗುವಂತೆ ಅವರನ್ನು ಎರಡು ಪಂಗಡಗಳಾಗಿ ಮಾಡಬೇಕು ಅಥವಾ ಅವರಿಗೆ ಕೈ ಎತ್ತಲು ಸೂಚಿಸಬೇಕು.

**ದಿನಗೂಲಿ ಕಾರ್ಮಿಕರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.**

(i) ನಿಮ್ಮನ್ನು ಯಾರಾದರೂ ಕೆಲಸಕ್ಕೆ ಕರೆದರೆ ನೀವು ಅವರ ಹತ್ತಿರ ಕೆಲಸ ಮಾಡುತ್ತೀರಾ?

(ii) ಕಳೆದ ವಾರ ಅಥವಾ ಹತ್ತು ದಿನಗಳಲ್ಲಿ ಯಾರ ಬಳಿ ಏನು ಕೆಲಸ ಮಾಡಿದ್ದೀರಿ?

(iii) ಗಂಡಸರಿಗೆ, ಹೆಂಗಸರಿಗೆ ಕೂಲಿ ದರ ಎಷ್ಟು?

ಸಾಧಾರಣವಾಗಿ ಅವರಿಂದ ಬರುವ ಉತ್ತರವು ಯಾರು ಕೆಲಸಕ್ಕೆ ಕರೆಯುತ್ತಾರೋ ಅವರ ಹತ್ತಿರ ಹೋಗುತ್ತೇವೆ ಎಂಬುದು. ಒಂದು ವಾರದ ಅಥವಾ ಹತ್ತು ದಿನಗಳ ಅವಧಿಯಲ್ಲಿ ಅವರು ಇಬ್ಬರು, ಮೂರು ಅಥವಾ ಹೆಚ್ಚಿನ ಸಂಖ್ಯೆಯ ವಿವಿಧ ಜನಗಳ ಹತ್ತಿರ ಕೆಲಸ ಮಾಡಿರುತ್ತಾರೆ. ಸರ್ವೇಸಾಮಾನ್ಯವಾಗಿ ಗಂಡಸರಿಗೆ ಮತ್ತು ಹೆಂಗಸರಿಗೆ ಸಿಗುವ ಕೂಲಿಯ ದರದಲ್ಲಿ ವ್ಯತ್ಯಾಸವಿರುತ್ತದೆ. ಕೂಲಿ ದರವು (ಮಾಸಿಕ, ವಾರ್ಷಿಕವಲ್ಲದ) ದಿನಗೂಲಿಯಾಗಿದ್ದು ಸಾಮಾನ್ಯವಾಗಿ ಗಂಡಸರಿಗೆ ರೂ.2.50 ರಿಂದ ರೂ.3.00 ರವರೆಗೆ ಮತ್ತು ಹೆಂಗಸರಿಗೆ ರೂ.1.50 ರಿಂದ ರೂ.2.00 ರವರೆಗೆ ಇರುತ್ತದೆ. ಈ ದರವು ಸ್ಥಳದಿಂದ ಸ್ಥಳಕ್ಕೆ ಮತ್ತು ಒತ್ತಡ ಕಾಲದಲ್ಲಿ ಮತ್ತು ದುರ್ಭಿಕ್ಷ ಕಾಲದಲ್ಲಿ ವ್ಯತ್ಯಾಸವಾಗುವುದು. ಇದರಿಂದ ನಾವು ದಿನಗೂಲಿ ಕೆಲಸದ ಸ್ವರೂಪದ ಬಗ್ಗೆ ಮೊದಲು ತಿಳಿದುಕೊಳ್ಳಬಹುದು.

**ಜೀತ**

ದಿನಗೂಲಿ ಮಾಡದಿರುವವರು ಮೇಲ್ನೋಟಕ್ಕೆ ಜೀತಗಾರರಾಗಿರುತ್ತಾರೆ.

**ಜೀತದಾಳುಗಳಿಗೆ ಪ್ರಶ್ನೆಗಳು**

(i) ಪ್ರಶ್ನೆ 1: ನೀವು ಯಾರ ಹತ್ತಿರ ಮತ್ತು ಎಷ್ಟು ದಿನಗಳಿಂದ ಕೆಲಸ ಮಾಡುತ್ತಿದ್ದೀರಿ?

ಒಬ್ಬನೇ ಜಮೀನುದಾರನ ಹತ್ತಿರ ಒಂದು ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡುತ್ತಿದ್ದರೆ (ಉದಾ: ಜಮೀನುದಾರನ ಹತ್ತಿರ ಐದು ವರ್ಷದಿಂದ ಕೆಲಸ ಮಾಡುತ್ತಿದೇನೆಂದು ಹೇಳಿದರೆ) ಅದೇ ಮನುಷ್ಯನ ಹತ್ತಿರ ಕೆಲವೊಂದು ಕಾರಣದಿಂದ ಅವನು ಕೆಲಸ ಮಾಡುತ್ತಿದ್ದಾನೆಂದು ಭಾವನೆ ಬರುತ್ತದೆ.

(ii) **ಪ್ರಶ್ನೆ 2:** ನೀವು ಎಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆದಿದ್ದೀರಿ? ಯಾವಾಗ ಸಾಲ ತೆಗೆದುಕೊಂಡಿದ್ದೀರಿ? ಯಾವ ಉದ್ದೇಶಕ್ಕಾಗಿ ತೆಗೆದಿದ್ದೀರಿ?

ಆಂಧ್ರದ ತೆಲಂಗಾಣ ಪ್ರದೇಶದಲ್ಲಿ ಸ್ವಾಭಾವಿಕ ಉತ್ತರವು ಕೆಲವು ವರ್ಷಗಳ ಹಿಂದೆ ನಡೆದ ಅವನ ಮಗನ, ಮಗಳ ವಿವಾಹಕ್ಕಾಗಿ ತೆಗೆದುಕೊಂಡ ರೂ.500 ಸಾಲವನ್ನು ತೀರಿಸುವುದಕ್ಕಾಗಿ ಅವನು ಜೀತ ಮಾಡುತ್ತಿರುತ್ತಾನೆ ಅಥವಾ ಮಗನನ್ನು ಜೀತಕ್ಕಾಗಿ ತೊಡಗಿಸಿರುತ್ತಾನೆ.

(iii) **ಪ್ರಶ್ನೆ 3:** ಸಾಲದ ಮೇಲೆ ವಿಧಿಸುವ ಬಡ್ಡಿ ದರ ಎಷ್ಟು?

ಸಾಂಪ್ರದಾಯಿಕವಾಗಿ ಹೆಚ್ಚಿನ ಸ್ಥಳಗಳಲ್ಲಿ ಯಾವುದೇ ನೂರು ರೂಪಾಯಿಗಳ ಸಾಲಕ್ಕೆ ಬಡ್ಡಿ ಇರುವುದಿಲ್ಲ. ಉಳಿದ ಹಣಕ್ಕೆ ಸಾಮಾನ್ಯವಾಗಿ ಬಡ್ಡಿ ದರ ತಿಂಗಳಿಗೆ ಶೇ.2.5 ಇರುತ್ತದೆ. ಕೆಲವು ಸಲ ಜಾರಿಯಲ್ಲಿರುವ ಬಡ್ಡಿ ದರವು ಇನ್ನೂ ಹೆಚ್ಚಿನದಾಗಿರುತ್ತದೆ.

(iv) **ಪ್ರಶ್ನೆ 4:** ನಿಮ್ಮ ಮಾಸಿಕ ಕೂಲಿ ಎಷ್ಟು ಮತ್ತು ಸೌಲಭ್ಯಗಳೇನು?

ಜೀತಗಾರ ಕೆಲಸಗಾರರಿಗೆ ದಿನಗೂಲಿ ಇರುವುದಿಲ್ಲ. ಬದಲಾಗಿ ತಿಂಗಳು ಅಥವಾ ವಾರ್ಷಿಕ ಕೂಲಿ ಇರುತ್ತದೆ. ಸಾಮಾನ್ಯವಾಗಿ ಅವರಿಗೆ ಮೂರು ವಿಧವಾದ ರೂಪದಲ್ಲಿ ಹಣ ಬಟವಾಡೆ ಮಾಡಲಾಗುತ್ತದೆ.

a) ಮಾಸಿಕ ಕೂಲಿ: ಹಣದ ರೂಪದಲ್ಲಿ ಕೊಟ್ಟರೆ ಚಿಕ್ಕಮಕ್ಕಳಿಗೆ ಕೂಲಿ ರೂ.5 ರಿಂದ 10 ರವರೆಗೆ (ಅಥವಾ ಇನ್ನೂ ಕಡಿಮೆ), ದನಕಾಯುವ ವಯಸ್ಕರಿಗೆ ರೂ.40 ಗಳವರೆಗೆ ಆಗಬಹುದು. ಇದನ್ನು ಮಾಸಿಕವಾಗಿ ಕೊಡಲಾಗುತ್ತದೆ. ಇದಕ್ಕೆ ಬದಲಾಗಿ ಧಾನ್ಯ ರೂಪದಲ್ಲಿ (ಭತ್ತ) ಮಕ್ಕಳಿಗೆ ಹತ್ತು ಕೇಜಿ. ಯುವಕರಿಗೆ 20 ಕೇಜಿ ಮತ್ತು ವಯಸ್ಕರಿಗೆ 20 ಕೇಜಿ ಕೊಡಲಾಗುವುದು. ಗಮನಿಸಬೇಕಾದ ಇನ್ನೊಂದು ವಿಷಯವೇನೆಂದರೆ ಮಾಸಿಕ ಕೂಲಿಯ ಹಣವನ್ನು ಕೊಡದೆ ಅದನ್ನು ಸಾಲದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಇದರಿಂದ ಕಾರ್ಮಿಕನು ನಗದು ರೂಪದಲ್ಲಿ ಏನನ್ನೂ ಪಡೆಯುವುದಿಲ್ಲ ಮತ್ತು ಹೊಸ ಸಾಲವನ್ನು ಪಡೆಯಲು ಬಲತ್ಕಾರ ಮಾಡಿದಂತೆ ಆಗುತ್ತದೆ.

b) ಆಹಾರ: ಜೀತದಾಳುಗಳಿಗೆ ಆಹಾರ ನೀಡುವುದರಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ ಕೆಲವು ಕಡೆ ಜೀತದಾಳುಗಳಿಗೆ ಊಟವನ್ನು ಹಾಕುವುದಿಲ್ಲ. ಕೆಲವು ಕಡೆ ಒಂದು ರೊಟ್ಟಿಯನ್ನು, ಇನ್ನು ಕೆಲವು ಕಡೆ ದಿನಕ್ಕೆ ಎರಡು ಹೊತ್ತು ಊಟ ಕೊಡುವುದು ಸಾಮಾನ್ಯವಾಗಿರುತ್ತದೆ.

c) ಇತರ ವಿಷಯ: **ಜೀತದಾಳುಗಳಿಗೆ** ಒಂದು ಉಣ್ಣೆಯ ಕಂಬಳಿ, ಒಂದು ಜೊತೆ ಚಪ್ಪಲಿ, ಹೊಗೆಸೊಪ್ಪು ಮತ್ತು ಹಬ್ಬಕ್ಕೆ ಬಟ್ಟೆಯನ್ನು ಕೊಡಲಾಗುವುದು. ಕೆಲವು ಕಡೆ ಉಣ್ಣೆಯ ಕಂಬಳಿ ಬದಲು ನಗದು ರೂಪದಲ್ಲಿ ಸ್ವಲ್ಪ ಹಣವನ್ನು ಕೊಡಲಾಗುವುದು. ಕೆಲವು ಪ್ರದೇಶಗಳಲ್ಲಿ ಹೊಗೆಸೊಪ್ಪು ಅಥವಾ ಉಣ್ಣೆಯ ಕಂಬಳಿ ನೀಡಲಾಗುವುದು.

d) **ಅಲ್ಪ ಮುಂಗಡ (ನಗದು):** ಜೀತದಾಳು ಜಮೀನುದಾರನಿಂದ ತನ್ನ ವಿವಿಧ ಅವಶ್ಯಕತೆಗಳಿಗೆ ಮುಂಗಡ ಹಣವನ್ನು ಪಡೆಯುತ್ತಾನೆ. ಇದನ್ನು ಸಾಲಕ್ಕೆ ಸೇರಿಸಲಾಗುತ್ತದೆ. ಈ ಸಹಾಯವನ್ನು ಜಮೀನುದಾರನು ನೀಡದೆ ಇರಬಹುದು. ಆದರೆ ಜಮೀನುದಾರನು ಒಳ್ಳೆಯ ಮನೋಭಾವದಿಂದ ಆಗಾಗ್ಗೆ ಮುಂಗಡ ಹಣವನ್ನು ನೀಡಿ ಅದನ್ನು ಸಾಲಕ್ಕೆ ಸೇರಿಸುತ್ತಾನೆ.

e) **ಕೆಲಸಕ್ಕೆ ಗೈರುಹಾಜರಾದರೆ ದಂಡ ವಿಧಿಸುವ ಬಗ್ಗೆ:** ಜೀತದಾಳು ಯಾವುದಾದರೂ ನ್ಯಾಯ ಸಮ್ಮತವಾದ ಕಾರಣದಿಂದ ಅಥವಾ ಬೇರೆ ರೀತಿಯಿಂದ ಗೈರುಹಾಜರಾದರೆ ಅವನಿಗೆ ರಜೆಯನ್ನು ಕೊಡುವುದಿಲ್ಲ. ಅದಕ್ಕಾಗಿ ಜೀತದಾಳು ದಂಡವನ್ನು ನೀಡಬೇಕಾಗುತ್ತದೆ. ದಂಡವು ಸಾಮಾನ್ಯ ಕೂಲಿಗಿಂತ ಎರಡರಷ್ಟು ಆಗಿರುತ್ತದೆ. ಅಂದರೆ ಅವನ ಒಂದು ದಿನದ ಗೈರು ಹಾಜರಿಯನ್ನು ಸರಿದೂಗಿಸಲು ಎರಡು ದಿನ ಕೆಲಸ ಮಾಡಬೇಕು.

(v) **ಪ್ರಶ್ನೆ 5:** ನೀವು ಕೆಲವು ವರ್ಷಗಳಿಂದ ಜಮೀನುದಾರನ ಹತ್ತಿರ ಕೆಲಸ ಮಾಡಿದ್ದೀರಿ. (ಬಹುತೇಕ ಜನರು ಕೆಲಸ ಮಾಡಿರುತ್ತಾರೆ) ಸಾಲವು ಸ್ವಲ್ಪವಾದರೂ ಕಡಿಮೆಯಾಗಿದೆಯೇ? ಅಥವಾ ಕೊನೇ ಪಕ್ಷ ಬಡ್ಡಿಯನ್ನು ಕಟ್ಟಲಾಗಿದೆಯೇ?

ಇದಕ್ಕೆ ಉತ್ತರವು ಸಾಲದ ಹಣವು ಕಡಿಮೆಯಾಗಿರುವುದೇ ಇಲ್ಲ. ಅಥವಾ ಸಾಲದ ಮೊತ್ತವು ಜಾಸ್ತಿಯಾಗಿರುತ್ತದೆ. ಹೆಚ್ಚಿನ ಜೀತದಾಳುಗಳು ಅನಕ್ಷರಸ್ಥರಾಗಿರುವುದರಿಂದ ಸಾಲದ ವಿವರಗಳು ಗೊತ್ತಿರುವುದಿಲ್ಲ. ಸಂಬಂಧಪಟ್ಟ ಕಾಗದ ಪತ್ರಗಳನ್ನು ಜಮೀನುದಾರನು ಇಟ್ಟುಕೊಂಡಿರುತ್ತಾನೆಂದು ಮತ್ತು ಸಾಲವು ಹೆಚ್ಚಿಗೆ ಅಥವಾ ಕಡಿಮೆ ಆದ ಬಗ್ಗೆ ಹೇಗೆ ತಿಳಿದುಕೊಂಡೆ ಎಂದು ಕೇಳಿದರೆ ನಮಗೆ ಆ ರೀತಿ ತಿಳಿಸಲಾಗಿದೆ ಎಂದು ಹೇಳುತ್ತಾರೆ ಅಥವಾ ಸ್ಕೂಲ್ ಮಾಸ್ತರ ಹತ್ತಿರ ಪರಿಶೀಲಿಸಿದೆ ಎಂದು ಹೇಳುತ್ತಾರೆ.

(vi) **ಪ್ರಶ್ನೆ 6:** ಜಮೀನುದಾರರ ಹತ್ತಿರ ಎಷ್ಟು ದಿನಗಳವರೆಗೆ ಕೆಲಸ ಮಾಡಬೇಕಾಗಿದೆ? ಬೇರೆಯವರ ಹತ್ತಿರ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆ?

ಸಾಲವು ತೀರುವವರೆಗೆ ಅದೇ ಜಮೀನುದಾರನ ಬಳಿ ಕೆಲಸ ಮಾಡಬೇಕೆಂದು ಸ್ಪಷ್ಟವಾಗಿ ಹೇಳುತ್ತಾರೆ.

(vii) **ಪ್ರಶ್ನೆ 7:** ಸಾಲವು ಯಾವಾಗ ತೀರುತ್ತದೆ ಎಂದು ಯೋಚಿಸಿದ್ದೀಯಾ? (ಅವರ ಅಭಿಪ್ರಾಯ)

ಅವರು ಇದಕ್ಕೆ ಸುಲಭವಾಗಿ ಉತರ ಕೊಡಲು ಸಾಧ್ಯವಿಲ್ಲ. ಏತಕ್ಕೆಂದರೆ ಅವರಿಗೆ ವಿಷಯಗಳನ್ನು ಸ್ಪಷ್ಟವಾಗಿ ಊಹಿಸುವುದಕ್ಕೆ ಆಗುವುದಿಲ್ಲ. ಇದರಿಂದ ಗೊತ್ತಾಗುವ ವಿಷಯವೇನೆಂದರೆ ಅವರು ಸಾಲ ಮರುಪಾವತಿ ಆಗುವವರೆಗೆ ಜಮೀನುದಾರನ ಬಳಿ ಕೆಲಸ ಮಾಡಬೇಕು ಮತ್ತು ಸಾಲವನ್ನು ಮರುಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಜೀತಗಾರನು ಸತ್ತರೂ ಸಾಲವು ತೀರುವುದಿಲ್ಲ. ಅದು ಅವರ ವಾರಸುದಾರನ ಮೇಲೆ ಬರುತ್ತದೆ. ಇವರು ವಂಶಪಾರಂಪರ್ಯವಾಗಿ ಜೀತದಾರರಾಗಿರುತ್ತಾರೆ.

**ಮುಂದಿನ ಮಾರ್ಗದರ್ಶಕವಾಗುವ ಪ್ರಶ್ನೆಗಳು**

ಈ ಸಂದರ್ಭದಲ್ಲಿ ಅವರಿಗೆ ಏನು ತಿಳುವಳಿಕೆ ಮತ್ತು ಅರಿವು ಆಗಿದೆ ಎಂಬುದನ್ನು ತಿಳಿಯಲು ಅವರಿಗೆ ಕೊನೆಯಲ್ಲಿ ಕೆಲವು ಈ ಕೆಳಗೆ ತಿಳಿಸಿದ ವಿಶಿಷ್ಟ ಪ್ರಶ್ನೆಗಳನ್ನು ಕೇಳಬಹುದು.

(i) ಜೀತಗಾರನಿಗೆ ನಾವು ಹೈದರಾಬಾದ್‌ನಲ್ಲಿ ಜವಾನನ ಕೆಲಸ ಈಗಲೇ ಕೊಡಿಸುತ್ತೇವೆ. ತಿಂಗಳಿಗೆ ರೂ. 400 ಸಂಬಳವೆಂದರೆ ಅವನು ತಕ್ಷಣ ನಮ್ಮ ಜೊತೆ ಬರುತ್ತಾನೆಯೇ? ಎಂದು ಕೇಳಬೇಕು.

ಅದಕ್ಕೆ ಅವನು ಮೊದಲು ಉತ್ತರ ಹೇಳಲು ಹಿಂಜರಿಯುತ್ತಾನೆ. ಆಮೇಲೆ ಆಗುವುದಿಲ್ಲವೆಂದು ಹೇಳುತ್ತಾನೆ. ಪುನ: ಅವನಿಗೆ ತಿಂಗಳಿಗೆ ನಿನಗೆ ರೂ.400 ಸಂಬಳ ಬರುತ್ತದೆ (ಹಳ್ಳಿಯಲ್ಲಿ ಪಡೆಯುವುದಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಬರುತ್ತದೆ) ಎಂದು ಒತ್ತಿ ಹೇಳಬೇಕು ಮತ್ತು ಒಂದು ತಿಂಗಳಲ್ಲೇ ಅವನ ಸಾಲವನ್ನು ಜಮೀನುದಾರನಿಗೆ ಮರುಪಾವತಿ ಮಾಡಬಹುದು. ಆಗಲೂ ಸಹ ಇವನು ಬರುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾನೆ. ಏಕೆಂದರೆ ಅವನು ಸಾಲವನ್ನು ಜಮೀನುದಾರನಿಗೆ ಮರುಪಾವತಿ ಮಾಡದೇ ಹೊರಗೆ ಹೋಗುವುದಕ್ಕೆ ಆಗುವುದಿಲ್ಲ.

(ii) ಆಮೇಲೆ ಅವನಿಗೆ ಇರುವ ಜೀತ ಕೆಲಸದಲ್ಲಿ ತಿಂಗಳಿಗೆ ರೂ.40 ಸಿಗುತ್ತದೆ, (ಉದಾಹರಣೆ) ಬೇರೆ ಜಮೀನುದಾರನು ತಿಂಗಳಿಗೆ ರೂ.100 ಕೊಟ್ಟರೆ ಅವನ ಬಳಿ ಕೆಲಸ ಮಾಡುವುದಿಲ್ಲವೇ? ಅವನಿಗೆ ಸರಿಯಾದ ಪ್ರತಿಕ್ರಿಯೆಯನ್ನು ಪಡೆಯಲು ನಾವು ಪಕ್ಕದ ಹಳ್ಳಿಯ ಜಮೀನುದಾರನನ್ನು ಈ ಬಗ್ಗೆ ಮಾತಾಡಿದ್ದೇವೆ ಇದು ನಿನಗೆ ಲಾಭದಾಯಕವಲ್ಲವೇ?

ಅವನು ಇದು ಹೆಚ್ಚಿನ ಲಾಭದಾಯಕವೆಂದು ಒಪ್ಪಿಕೊಳ್ಳುತ್ತಾನೆ. ಆದರೆ ಅವನು ಈಗಿನ ಜಮೀನುದಾರನಿಗೆ ಸಾಲಗಾರನಾಗಿರುವುದರಿಂದ ನಾನು ಈಗಲೇ ಬೇರೆ ಜಮೀನುದಾರರ ಹತ್ತಿರ ಕೆಲಸಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾನೆ ಮತ್ತು ಅವನು ಈಗಿನ ಜಮೀನುದಾರನನ್ನು ಬಿಡಬೇಕಾದರೆ ಹೊಸ ಜಮೀನುದಾರನು ಸಾಲಕ್ಕೆ ಸಮನಾದ ಹಣವನ್ನು ಮುಂಗಡವಾಗಿ ಕೊಟ್ಟರೆ ಅದನ್ನು ಜಮೀನುದಾರನಿಗೆ ಪಾವತಿ ಮಾಡಿ ಹೊಸ ಜಮೀನುದಾರನ ಹತ್ತಿರ ಕೆಲಸಕ್ಕೆ ಹೋಗಬಹುದು.

(iii) ಆಮೇಲೆ, ನಾಗಾರ್ಜುನ ಜಲಾಶಯ ಕಟ್ಟುತ್ತಿರುವ ಜಾಗದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ ಇದೆ ಮತ್ತು ಅಲ್ಲಿ ಅವನು ಸುಲಭವಾಗಿ ಹೆಚ್ಚಿನ ದಿನಕೂಲಿ ರೂ.10ಗಳನ್ನು ಪಡೆಯಬಹುದು. ಅಲ್ಲಿಗೆ ಏತಕ್ಕೆ ಓಡಿಹೋಗಬಾರದು? ಎಂದು ಅವನನ್ನು ಕೇಳಬೇಕು.

ನಾನು ಜಮೀನುದಾರನಿಗೆ ಸಾಲವನ್ನು ಕೊಡಬೇಕಾಗಿರುವುದರಿಂದ ಹೋಗುವುದಕ್ಕೆ ಆಗುವುದಿಲ್ಲವೆಂದು ತಿಳಿಸುತ್ತಾನೆ ಮತ್ತೆ ನಾನು ಏನಾದರೂ ಓಡಿಹೋದರೆ ನನ್ನನ್ನು ವಾಪಸ್ಸು ಕರೆತರಲು ಜಮೀನುದಾರನು ಅವನ ಕಡೆಯವರನ್ನು ಕಳುಹಿಸುತ್ತಾನೆ ಮತ್ತು ಹೊಡೆಯುತ್ತಾನೆ ಎಂದು ಹೇಳುತ್ತಾನೆ.

ಕೆಲವು ಪ್ರದೇಶಗಳಲ್ಲಿ ದೊರಕಿರುವ ಸ್ಪಷ್ಟ ಬರವಣಿಗೆಯ ದಾಖಲೆಗಳ ಪ್ರಕಾರ ಸಾಲಕ್ಕೋಸ್ಕರ, ಮಾಸಿಕ ಮಜೂರಿಗಾಗಿ ವ್ಯಕ್ತಿಯು ಕೆಲವು ವರ್ಷಗಳ ಜೀತಗಾರನಾಗುತ್ತಾನೆ. ಕೆಲವು ಪುರಾವೆಗಳ ಪ್ರಕಾರ ಸಾಲಕ್ಕೋಸ್ಕರ ವ್ಯಕ್ತಿಯು ಒತ್ತೆಯಾಳು ಆಗಿರುತ್ತಾನೆ ಮತ್ತು ಅವುಗಳನ್ನು ಜಮೀನುದಾರರಿಂದ ವಶಪಡಿಸಿಕೊಳ್ಳಬೇಕು. ಸಾಮಾನ್ಯವಾಗಿ ದಾಖಲೆಗಳನ್ನು ಬರೆಯಲಾಗುತ್ತದೆ ಅಥವಾ ಗ್ರಾಮ ಅಧಿಕಾರಿಗಳಿಂದ ದೃಢೀಕರಿಸಲಾಗಿರುತ್ತದೆ. ಉದಾಹರಣೆಗೆ ಹಳ್ಳಿಯ ಪಟೇಲ ಮತ್ತು ಪೋಲೀಸ್ ಪಟೇಲರಿಂದ ಮಾಹಿತಿಯನ್ನು ಸಂಗ್ರಹಿಸಬಹುದು. ಅವರುಗಳ ಗುಂಪೇ ಕೆಲಸಕ್ಕೆ ಜೀತಗಾರರನ್ನು ಇಟ್ಟುಕೊಂಡಿರುತ್ತದೆ.

**ನಿರ್ಣಯ**

ನಿರ್ಣಯವು ಈ ರೀತಿ ಇರುತ್ತದೆ. ಸಾಲ ಇರುವವರೆಗೆ ಕಾರ್ಮಿಕನಾಗಿ ಬೇರೆ ಕಡೆ ಕೆಲಸಕ್ಕೆ ಹೋಗುವ ಹಾಗಿಲ್ಲ. ಸಾಲ ಮುಗಿಯುವವರೆಗೆ ಅವನು ಅಲ್ಲಿಯೇ ಕೆಲಸ ಮಾಡಬೇಕು. ಅವನಿಗೆ ಸಾಲ ತೀರಿಸಲು ಸಾಧ್ಯವಿಲ್ಲ. ಅವನು ಜೀವನ ಪರ್ಯಂತ ಜೀತಗಾರನಾಗಿರುತ್ತಾನೆ. ಅವನ ನಂತರ ಅವನ ಮಗನೂ ಕೂಡ ಜೀತಗಾರನಾಗಿ ಮುಂದುವರಿಯುತ್ತಾನೆ.

**ಟಿಪ್ಪಣಿ**

1. ಇದು ಜೀತಗಾರನ ಸ್ಥಿತಿಯ ಬಗ್ಗೆ ಅವನಿಗೆ ಇರುವ ಅರಿವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅವನಿಗೆ ಅವನ ಮನಸ್ಸಿನಲ್ಲಿ ಸಾಲ ತೀರುವವರೆಗೂ ಜಮೀನುದಾರನ ಹತ್ತಿರ ಅನಿವಾರ್ಯವಾಗಿ ಕೆಲಸ ಮಾಡಬೇಕಾಗಿದೆ ಎಂದು ಸ್ಪಷ್ಟವಾಗಿ ಇರುತ್ತದೆ. ಸಾಲ ತೀರುವವರೆಗೂ ಕೆಲಸ ಮಾಡಬೇಕೆಂಬ ಒಪ್ಪಂದವನ್ನು ಭಂಗ ಮಾಡುವುದಕ್ಕೆ ಆಗುವುದಿಲ್ಲ. ಹಾಗೇನಾದರೂ ಆದರೆ ಅತಿ ಹೆಚ್ಚಿನ ದಂಡವನ್ನು ವಿಧಿಸಲು ಜಮೀನುದಾರನಿಗೆ ಹಕ್ಕಿರುತ್ತದೆ ಎಂಬ ತಿಳುವಳಿಕೆಯಲ್ಲಿರುತ್ತಾನೆ.

2. ಉತ್ತರವು ಆಶ್ಚರ್ಯಕರ ಸ್ವರೂಪದ್ದಾಗಿರುತ್ತದೆ. ಸಾಲವು ಯಾವಾಗ ತೀರುತ್ತದೆ ಎಂದು ಕೇಳಿದರೆ ದೇವರೆ ಬಲ್ಲ. ಯಾವಾಗ ತೀರುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ ಎಂದು ಉತ್ತರಿಸುತ್ತಾನೆ. ಜೀತಗಾರನು ತನ್ನ ಸಾಲವು ಯಾವಾಗ ತೀರುತ್ತದೆ ಎಂದು ಅನಿರ್ದಿಷ್ಟ ಪ್ರಶ್ನೆಗೆ ಉತ್ತರವಿಲ್ಲದೇ ಒದ್ದಾಡುತ್ತಿರುತ್ತಾನೆ.

3. ನಿರ್ದಿಷ್ಟವಾಗಿ ಹೇಳಬಹುದಾದರೆ ಅವನಿಗೆ ಬೇರೆ ಕಡೆ ಹೋಗುವುದಕ್ಕೆ ಬಿಡುವುದಿಲ್ಲ.

4. ಇದು ಒಂದು ಮಾದರಿಯ ಉತ್ತರವಾಗಿದ್ದು ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಈಗಿನ ಜಮೀನುದಾರನಿಂದ ಬೇರೆ ಜಮೀನುದಾರನ ಬಳಿ ಕೆಲಸಕ್ಕೆ ಹೋಗುವ ತಯಾರಿಯಲ್ಲಿ ಇರುವಾಗ ಅವನು ನೇರವಾಗಿ ಜಮೀನುದಾರನ ಬಳಿ ಸಾಲ ಪಡೆದುಕೊಂಡು ಹಿಂದಿನ ಜಮೀನುದಾರನ ಸಾಲವನ್ನು ತೀರಿಸಲು ಬದ್ಧನಾಗಿರುತ್ತಾನೆ. ಹೀಗೆ ಮಾಡದೇ ಇದ್ದರೆ ಅವನಿಗೆ ಹೋಗಲು ಅವಕಾಶ ಇರುವುದಿಲ್ಲ.

**ಸಾಮಾನ್ಯ ಟಿಪ್ಪಣಿ**

ಜೀತ ಪದ್ಧತಿಯ ಮಹತ್ವದ ಕುರಿತು ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯದ ಪತ್ರಗಳ ಉದ್ಧೃತ ಭಾಗವು ಈ ರೀತಿ ಇರುತ್ತದೆ.

"ಒಬ್ಬ ಬಡ ರೈತ ಅಥವಾ ಕೃಷಿ ಕಾರ್ಮಿಕನು ಸಣ್ಣ ಪ್ರಮಾಣದ ಸಾಲವನ್ನು ಪಡೆಯುತ್ತಾನೆ. ಅವನ ಸಾಲವು ಹೆಚ್ಚಿನ ಬಡ್ಡಿ ದರದಿಂದ, ಅತಿ ವೇಗದಿಂದ ಜಾಸ್ತಿಯಾಗುತ್ತದೆ. ಆಗ ಅವನಿಗೆ ಸಾಲ ತೀರಿಸಲು ಸಾಧ್ಯವಿಲ್ಲವೆಂದು ಗೊತ್ತಾದಾಗ ತನ್ನ ಆಸ್ತಿಯನ್ನು ಮಾರಾಟ ಮಾಡುತ್ತಾನೆ. ಆದರೂ ಕೂಡ ಸಾಲದಲ್ಲಿಯೇ ಮುಂದುವರಿಯುತ್ತಾನೆ. ಆಗ ಅವನು ತನಗೆ ಸಾಲ ಕೊಟ್ಟವರ ಬಳಿ ತೀರ ಕಡಿಮೆ ಕೂಲಿಗೆ ಕೆಲಸ ಮಾಡಲು ಪ್ರಾರಂಭಿಸುತ್ತಾನೆ ಮತ್ತು ಅವನ ಕೂಲಿಯಿಂದ ಸಾಲ ವನ್ನು ತೀರಿಸುವ ಆಸೆಯನ್ನು ಹೊಂದಿರುತ್ತಾನೆ. ಆದರೆ ಅವನು ಕ್ರೂರವಾದ ತರ್ಕ ಶಾಸ್ತ್ರದ ಪ್ರಕಾರ ಸೋಲುತ್ತಾನೆ. ಸಾಲದ ಋಣವನ್ನು ತೀರಿಸಲು ಅತ್ಯಲ್ಪ ಕೂಲಿಗಾಗಿ ಆತನ ಮಕ್ಕಳು ಮತ್ತು ಮೊಮ್ಮಕ್ಕಳು ದುಡಿಯಲು ಪ್ರಾರಂಭಿ ಸುತ್ತಾರೆ. ಸಾಲ ನೀಡಿದವರಲ್ಲಿ ವಂಶಪಾರಂಪರ್ಯವಾಗಿ ವಾಸ್ತವವಾಗಿ ಅವರು ಗುಲಾಮರಾಗುತ್ತಾರೆ. ಇಡೀ ಕುಟುಂಬದ ಭವಿಷ್ಯವನ್ನು ಹಿಂದೆ ಮಾಡಿದ ಸಾಲಕ್ಕಾಗಿ ಒತ್ತೆ ಇಡಬೇಕಾಗುತ್ತದೆ. ಸಾಲವೇ ಅವರ ಅಂತ್ಯವಾಗುತ್ತದೆ. ಜೀತಗಾರನು ದಿವಾಳಿಯಾಗಿ ಕೊನೆಗೊಳ್ಳುತ್ತಾನೆ."

**ಅನುಬಂಧ 9.4**

**ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಕಾರ್ಯ ಯೋಜನೆ** (ಮೇ 2000ರಲ್ಲಿ ಮಾರ್ಪಾಡಿಸಿದ್ದು)

1. 1978ರಲ್ಲಿ ಕಾರ್ಮಿಕ ಇಲಾಖೆಯು ಒಂದು ಕೇಂದ್ರ ಪುರಸ್ಕೃತ ಯೋಜನೆಯೊಂದನ್ನು ರೂಪಿಸಿತು. ಅದರಡಿ ಜೀತದಾಳುಗಳ ಪುನರ್ವಸತಿಗೆ ಸಂಬಂಧಪಟ್ಟ ಎಲ್ಲಾ ಪ್ರಸ್ತಾವನೆಗಳನ್ನು ಕಾರ್ಮಿಕ ಸಚಿವಾಲಯದ ಕಾರ್ಮಿಕ ಕಲ್ಯಾಣದ ಮಹಾನಿರ್ದೇಶಕರ ಅಧ್ಯಕ್ಷತೆಯಲ್ಲಿರುವ ತಪಾಸಣಾ ಸಮಿತಿಯು ಪರಿಶೀಲಿಸುತ್ತಿತ್ತು. ಈ ಕಾರ್ಯ ವಿಧಾನದಿಂದ ಅನುಷ್ಠಾನಕ್ಕೆ ವಿಳಂಬವಾಗುತ್ತಿತ್ತು. ಆದ್ದರಿಂದ 1983ರಲ್ಲಿ ಎಲ್ಲಾ ಪುನರ್ವಸತಿ ಪ್ರಸ್ತಾವನೆಗಳನ್ನು ಜಿಲ್ಲಾ/ರಾಜ್ಯ ಮಟ್ಟದ ತಪಾಸಣಾ ಸಮಿತಿಗಳು ಮಂಜೂರು ಮಾಡಿ ರಾಜ್ಯಸರ್ಕಾರಗಳು ಅಂತಿಮ ಒಪ್ಪಿಗೆ ನೀಡಬೇಕೆಂದು ತೀರ್ಮಾನಿಸಲಾಯಿತು. ಇದರಿಂದ ಕಾರ್ಮಿಕ ಸಚಿವಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕೆಂಬ ಅವಶ್ಯಕತೆಯನ್ನು ಬಿಟ್ಟುಬಿಡಲಾಯಿತು. ಜೊತೆಗೆ ರಾಜ್ಯ ಸರ್ಕಾರಗಳೂ ಅನುದಾನದ ಪೂರ್ತಿ ಮೊತ್ತವನ್ನು ಜಿಲ್ಲಾ ದಂಡಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕು ಎಂದು ಅವರಿಗೆ ನಿರ್ದೇಶಿಸಲಾಯಿತು. ಆದರೆ ಆ ರೀತಿ ಮಾಡುವ ಮುಂಚೆ ಜಿಲ್ಲೆಗಳಿಗೆ ಹಿಂದೆ ಬಿಡುಗಡೆ ಮಾಡಿದ ಅನುದಾನಗಳನ್ನು ಪೂರ್ತಿಯಾಗಿ ಉಪಯೋಗಿಸಿ ಅವಶ್ಯಕ ಬಳಕೆ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ನಮೂನೆಗಳಲ್ಲಿ ಸಲ್ಲಿಸಬೇಕಾಗಿತ್ತು.

2. ಮೂಲತಃ ಯೋಜನೆಯು ಪ್ರತಿ ಜೀತದಾಳುಗಳಿಗೆ 4,000 ರೂಪಾಯಿಗಳ ತನಕ ಪುನರ್ವಸತಿ ಸೌಲಭ್ಯವನ್ನು ನೀಡುತ್ತಿತ್ತು. ಖರ್ಚನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇ.50:50 ರ ಸಮ ಪ್ರಮಾಣದಲ್ಲಿ ಭರಿಸುತ್ತಿದ್ದವು. 1-2-1986 ರಿಂದ ಪುನರ್ವಸತಿ ಸೌಲಭ್ಯವನ್ನು ಪ್ರತಿ ಜೀತದಾಳುವಿಗೆ 6,250 ರೂಪಾಯಿ ತನಕ ಮತ್ತು 1-4-1995 ರಿಂದ 10,000 ರೂಪಾಯಿ ತನಕ ಹೆಚ್ಚಿಸಲಾಯಿತು. ಅದರಲ್ಲಿ 1,000 ರೂಪಾಯಿಗಳನ್ನು ಜೀತದಾಳುವನ್ನು ಬಿಡುಗಡೆ ಮಾಡಿದ ತಕ್ಷಣ ಅವನ/ಳ ಜೀವನ ಭತ್ಯೆಯಾಗಿ ನೀಡಲಾಗುತ್ತಿತ್ತು. (2000ರ ಮೇ ತಿಂಗಳಿಂದ ಪುನರ್ವಸತಿ ಸೌಲಭ್ಯ ವನ್ನು ಪ್ರತಿ ಜೀತದಾಳುವಿಗೆ 20,000 ರೂಪಾಯಿಯಂತೆ ಏರಿಸಲಾಗಿದೆ).

3. ಒಂದು ಆರ್ಥಿಕ ವರ್ಷದಲ್ಲಿ ಒಂದು ರಾಜ್ಯದ ಅವಶ್ಯಕತೆಗಳನ್ನು ತಿಳಿದು ಭಾರತ ಸರ್ಕಾರವು ಜೀತದಾಳುಗಳ ಪುನರ್ವಸತಿಗೆ ಕೇಂದ್ರದ ಕೊಡುಗೆಯನ್ನು ಮುಂಗಡವಾಗಿ ಆಯವ್ಯಯದಲ್ಲಿ ಹಂಚಿಕೆ ಮಾಡುತ್ತದೆ. ಈ ಉದ್ದೇಶ ಕ್ಕೋಸ್ಕರ ನೇಮಿಸಿದ ತಪಾಸಣಾ ಸಮಿತಿಯ ವರದಿಗಳಿಂದ ರಾಜ್ಯ ಸರ್ಕಾರಗಳು ತಮ್ಮ ಅವಶ್ಯಕತೆಗಳನ್ನು ಸಲ್ಲಿಸಬೇಕು. ಕೇಂದ್ರ ಸರ್ಕಾರದಿಂದ ಅನುದಾನ ಪಡೆದ ಮೇಲೆ ರಾಜ್ಯ ಸರ್ಕಾರಗಳು ಆ ಹಣಕ್ಕೆ ತಮ್ಮ ಕೊಡುಗೆಯನ್ನೂ ಸೇರಿಸಿ ಅವನ್ನು ಜಿಲ್ಲಾ ದಂಡಾಧಿಕಾರಿಗಳಿಗೆ ಮಂಜೂರು ಮಾಡುವುವು. ರಾಜ್ಯ ಸರ್ಕಾರದ ಲೆಕ್ಕ ತಪಾಸಣೆಯ ಚಾಲ್ತಿ ವಿಧಾನ ಗಳನ್ವಯ ಹಣದ ಎಲ್ಲಾ ಬಳಕೆಗಳನ್ನೂ ಸರಬರಾಜುಗಳನ್ನೂ ತಪಾಸಣೆ ಮಾಡಲಾಗುವುದು ಮತ್ತು ಬಳಕೆಯ ಪ್ರಮಾಣ ಪತ್ರಗಳನ್ನು ವರ್ಷದ ಕೊನೆಯಲ್ಲಿ ಕಾರ್ಮಿಕ ಸಚಿವಾಲಯಕ್ಕೆ ಸಲ್ಲಿಸಲಾಗುವುದು.

4. ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಜೀತ ವಿಷಯಕ್ಕೆ ಸಿಗುವ ಗಮನದ ಕಾರಣವಾಗಿ ಮತ್ತು ಸರ್ವೋಚ್ಛ ನ್ಯಾಯಾಲಯ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ' ಮಧ್ಯ ಪ್ರವೇಶಿಕೆಯಿಂದ ಯೋಜನೆಯನ್ನು ಪರಿಷ್ಕರಿಸುವ ಅವಶ್ಯಕತೆಯಿದೆ. ಬದಲಾಗುತ್ತಿರುವ ಜೀತದಾಳುವಿನ ವೈಯಕ್ತಿಕ ಹಾಗೂ ಸಮುದಾಯದ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಇಷ್ಟರವರೆಗಿನ ಯೋಜನೆಯು ಅಸಮರ್ಪಕವಾಗಿದೆ. ಏಕೆಂದರೆ ಅದರಲ್ಲಿ ಈ ಕೆಳಗಿನ ಅಂಶಗಳು ಒಳಗೊಂಡಿರುವುದಿಲ್ಲ:

1) ಜೀತದಾಳುಗಳ ಸಮೀಕ್ಷೆ;

2) ಜಾಗೃತಿ ಮೂಡಿಸುವ ಕಾರ್ಯಕ್ರಮಗಳು;

3) ಮೌಲ್ಯಮಾಪನಾ ಅಧ್ಯಯನಗಳು;

4) ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಿರ್ವಹಣೆ;

5) ಪುನರ್ವಸತಿ ಸೌಲಭ್ಯದ ಪ್ರಮಾಣವನ್ನು ಹೆಚ್ಚಿಸುವ ಅವಶ್ಯಕತೆ.

5. ಕಾರ್ಮಿಕ ಕಾರ್ಯದರ್ಶಿಯವರು 3-5-1997ರಂದು ಜೀತ ಸಮಸ್ಯೆ ಬಗ್ಗೆ ವ್ಯವಹರಿಸುವ ರಾಜ್ಯ ಸರ್ಕಾರದ ಪ್ರತಿನಿಧಿ ಗಳೊಂದಿಗೆ ಈ ವಿಷಯವನ್ನು ಪ್ರಥಮ ಬಾರಿಗೆ ಚರ್ಚಿಸಿದರು. ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಪರಿಶೀಲಿಸಿದ

ಮೇಲೆ ಅದೇ ವಿಷಯವನ್ನು ಕಾರ್ಮಿಕ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ 2-12-1998ರಂದು ಸೇರಿದ ಸಭೆಯಲ್ಲಿ ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಪುನಃ ಚರ್ಚಿಸಲಾಯಿತು. ಆ ಸಭೆಯಲ್ಲಿ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಗೆ ಸಂಬಂಧಪಟ್ಟ ಕಾರ್ಯಗಳನ್ನು ಹೆಚ್ಚಿಸುವ ಅವಶ್ಯಕತೆಯಿಂದ ಯೋಜನೆಯನ್ನು ಪರಿಷ್ಕರಿಸಲು ನಿರ್ಧರಿಸಲಾಯಿತು. ಎಲ್ಲಾ ರಾಜ್ಯ ಸರ್ಕಾರಗಳು ಸೂಚಿಸಲ್ಪಟ್ಟ ಬದಲಾವಣೆಗಳನ್ನು ಒಪ್ಪಿಕೊಂಡು ಕಾರ್ಮಿಕ ಸಚಿವಾಲಯಕ್ಕೆ ಪ್ರತಿ ಕಾರ್ಯಕ್ರಮಕ್ಕೆ ಹಣವನ್ನು ನಿಗದಿಪಡಿಸಲು ಕೇಳಿಕೊಂಡವು.

**6. ಮೇಲೆ ವಿವರಿಸಿದ ಕಾರಣಗಳಿಂದ ಈ ಕೆಳಗಿನ ಅಂಶಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಸೇರಿಸಲು ಸೂಚಿಸಲಾಯಿತು:**

**6.1 ಜೀತದಾಳುಗಳ ಸಮೀಕ್ಷೆ**

6.1.1 ಜೀತ ಪದ್ಧತಿಯು ಯಾವುದೇ ಉದ್ದಿಮೆಯಲ್ಲಿ/ವೃತ್ತಿಯಲ್ಲಿ, ವ್ಯವಸಾಯ ಮತ್ತದರ ಸಂಬಂಧಿತ ಕಾರ್ಯಗಳಲ್ಲಿ ಅಥವಾ ವ್ಯವಸಾಯೇತರ ಕಸುಬುಗಳಲ್ಲಿ ದೊರಕಬಹುದು ಮತ್ತು ಮರುಕಳಿಸಬಹುದು. ಆದ್ದರಿಂದ ನಿರಂತರ ಜಾಗೃತಿ ಮತ್ತು ಕಾವಲು ಇಡುವ, ಜಿಲ್ಲಾ ಮತ್ತು ಉಪವಿಭಾಗದ ಜಾಗೃತಿ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರಿಂದ ಕ್ಷೇತ್ರದ ನಿರಂತರ ಭೇಟಿ ನೀಡುವ ಹಾಗೂ ಜೀತ ಬಂಧನದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ಮತ್ತು ಜೀವನ ಸಾಗಿಸುವವರಿಂದ ದೂರು ಮತ್ತು ಕೊರಗುಗಳನ್ನು ಸ್ವೀಕರಿಸಲು ವ್ಯವಸ್ಥೆ ಮಾಡುವ ಅವಶ್ಯಕತೆ ಇದೆ. ಈ ಎಲ್ಲಾ ಏರ್ಪಾಡುಗಳನ್ನು ಮಾಡಲು ಕೇಂದ್ರದಿಂದ ಕನಿಷ್ಟ ಹಣಕಾಸಿನ ಅವಶ್ಯಕತೆ ಇದೆ.

6.1.2 ಆದ್ದರಿಂದ ಪ್ರತಿಯೊಂದು ರಾಜ್ಯ ಸರ್ಕಾರವು ಜೀತ ಪದ್ಧತಿಯು ಒಂದಲ್ಲಾ ಒಂದು ರೀತಿಯಲ್ಲಿ ಬೇರೂರಿರುವ ಜಿಲ್ಲೆಗಳನ್ನು ಗುರುತಿಸಿ ಈ ಪದ್ಧತಿಯು ಅಲ್ಲಿ ಅಸ್ತಿತ್ವದಲ್ಲಿರಲು ಕಾರಣಗಳನ್ನು ಕಂಡುಹಿಡಿದು ಪರಿಹಾರ ಮಾರ್ಗಗಳನ್ನು ಸೂಚಿಸಬೇಕಾಗುತ್ತದೆ. ಅದಕ್ಕೋಸ್ಕರ ಸಮೀಕ್ಷೆಗಳನ್ನು ನಿಯತಕಾಲಿಕವಾಗಿ ನಡೆಸಬೇಕು. ಈ ಸಮೀಕ್ಷೆಯನ್ನು ಮಾಡಲು ತಗಲುವ ಖರ್ಚುಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಪ್ರತಿ ಜಿಲ್ಲೆಗೆ ಎರಡು ಲಕ್ಷ ರೂಪಾಯಿಗಳಂತೆ ಹಣವನ್ನು ರಾಜ್ಯ ಸರ್ಕಾರಗಳಿಗೆ ಒದಗಿಸಲು ಸೂಚಿಸಲಾಗಿದೆ.

ಈ ಹಣವನ್ನು ಪ್ರತಿ ಜಿಲ್ಲೆಗೆ ಮೂರು ವರ್ಷಕ್ಕೆ ಒಂದು ಸಾರಿ ಈ ಕೆಳಗಿನ ಅಂಶಗಳಿಗೆ ತಕ್ಕಂತೆ ಒದಗಿಸಲಾಗುವುದು.

| ಕ್ರ.ಸಂ | ಅಂಶೀಯ ಖರ್ಚುಗಳು | ಬೇಕಾದ ಹಣ |
|---|---|---|
| 1. | ಪ್ರಶ್ನಾವಳಿಯ ಮುದ್ರಣದ ಖರ್ಚು (ಸರಾಸರಿ 2000 ಪ್ರಶ್ನಾವಳಿ @ ಒಂದಕ್ಕೆ 5 ರೂ. ನಂತೆ ) | 10,000 ರೂ. |
| 2. | ಮಾಹಿತಿ ಒಟ್ಟುಗೂಡಿಸಲು ಅನ್ವೇಷಕರಿಗೆ / ಕ್ಷೇತ್ರ ಕಾರ್ಯಕರ್ತರಿಗೆ ತರಬೇತಿ ನೀಡಲು ಖರ್ಚು (10 ಕ್ಷೇತ್ರ ಕಾರ್ಯಕರ್ತರು @ ಪ್ರತಿಯೊಬ್ಬರಿಗೆ ದಿನಕ್ಕೆ 200 ರೂ.ನಂತೆ 5 ದಿನಗಳಿಗೆ (200 x 10 x 5) | 10,000 ರೂ. |
| 3. | ಕ್ಷೇತ್ರದಿಂದ ಮಾಹಿತಿ ಸಂಗ್ರಹಣೆಗೆ ತಗಲುವ ಖರ್ಚು (10 ಅನ್ವೇಷಕರಿಗೆ @ ಪ್ರತಿಯೊಬ್ಬರಿಗೆ ದಿನಕ್ಕೆ 200 ರೂ.ನಂತೆ 60 ದಿನಗಳಿಗೆ (200 x 10 x 60) | 1,20,000 ರೂ. |
| 4. | ಮಾಹಿತಿಯ ತಪಾಸಣೆ, ಕ್ರೋಢೀಕರಣ ಮತ್ತು ವಿಶ್ಲೇಷಣೆ (3 ಅಧ್ಯಯನ ಸಹಾಯಕರು ಪ್ರತಿಯೊಬ್ಬರಿಗೆ ತಿಂಗಳಿಗೆ 6000 ರೂ.ನಂತೆ 2 ತಿಂಗಳಿಗೆ (6000 x 3 x 2) | 36,000 ರೂ. |
| 5. | ಮಾಹಿತಿಯ ಗಣಕೀಕರಣ | 24,000 ರೂ. |
| | **ಒಟ್ಟು** | **2,00,000 ರೂ.** |

6.1.3 ಇಷ್ಟರವರೆಗಿನ ಮಾಹಿತಿಯ ಪ್ರಕಾರ 13 ರಾಜ್ಯ (ಆಂಧ್ರ ಪ್ರದೇಶ, ಬಿಹಾರ, ಕರ್ನಾಟಕ, ಮಧ್ಯ ಪ್ರದೇಶ, ಒರಿಸ್ಸಾ, ರಾಜಸ್ಥಾನ, ತಮಿಳುನಾಡು, ಮಹಾರಾಷ್ಟ್ರ, ಉತ್ತರ ಪ್ರದೇಶ, ಕೇರಳ, ಹರಿಯಾಣ, ಗುಜರಾತ್ ಮತ್ತು ಅರುಣಾಚಲ ಪ್ರದೇಶ) ಗಳಲ್ಲಿಯ 172 ಜಿಲ್ಲೆಗಳಲ್ಲಿ ಜೀತದಾಳುಗಳ ಬಗ್ಗೆ ನಿರಂತರವಾಗಿ ವರದಿ ಮಾಡಲಾಗುತ್ತಿದೆ.

**6.2 ಜಾಗೃತಿ ಮೂಡಿಸುವ ಕಾರ್ಯಕ್ರಮಗಳು**

6.2.1 ದೇಶದಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿ ಪ್ರಚಲಿತವಿರುವ ಜೀತದ ದುಡಿಮೆ, ಜೀತ ಸಾಲ ಮತ್ತು ಜೀತ ಪದ್ಧತಿಗಳ ವ್ಯಾಖ್ಯಾನಗಳ ಬಗ್ಗೆ ಸ್ಪಷ್ಟತೆ ತರಲು ಸ್ವಾತಂತ್ರ್ಯ ಪಡೆದು ಏಷ್ಟೊಂದು ವರ್ಷ ಕಳೆದರೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೂಲಭೂತ ಹಾಗೂ ನ್ಯಾಯಯುತ ಹಕ್ಕುಗಳಿಂದ ವಂಚಿಸಲ್ಪಟ್ಟಿರುವವರಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಗುರುತು/ಸ್ವಂತಿಕೆಯನ್ನು ಮೂಡಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ನಾಗರಿಕ ಮತ್ತು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ಸಮಾಜದ ಘನತೆಗೆ ಕುಂದು ತರುವಂತಿರುವ ಶೋಷಿತರಾದ ಜೀತದಾಳುಗಳ ಜೀವನದಲ್ಲಿ ಜೀತ ಬಂಧನದ ಪರಿಣಾಮವನ್ನು ಎತ್ತಿ ತೋರಿಸುವುದು ಅವಶ್ಯಕವಾಗಿದೆ.

6.2.2 ಅದಕ್ಕೋಸ್ಕರ ಜಿಲ್ಲಾ ಮತ್ತು ಉಪವಿಭಾಗ ಮಟ್ಟಗಳಲ್ಲಿ ನಿಗದಿತ ಸಮಯದಲ್ಲಿ ನಡೆಸಬೇಕಾದ ಕೆಲವೊಂದು ನಿರ್ದಿಷ್ಟ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಅವಶ್ಯಕತೆಯಿದೆ. ಇದಕ್ಕೋಸ್ಕರ ಸಾರ್ವಜನಿಕ ಸಂಬಂಧಗಳನ್ನು ಬೆಳೆಸಲು ಮತ್ತು ಜಾಗೃತಿ ಮೂಡಿಸಲು ಇರುವ ಸರ್ಕಾರಿ ವ್ಯವಸ್ಥೆಗಳ ಪ್ರಯತ್ನಗಳೊಂದಿಗೆ ನಾಟಕಗಳು, ನುಕ್ಕಡ್ ನಾಟಕಗಳು, ಬೀದಿ ನಾಟಕಗಳು ಮತ್ತು ಅನುಕರಿಸುವ ಚಟುವಟಿಕೆಗಳು ಇತ್ಯಾದಿಗಳನ್ನೂ ಬಳಸಬೇಕಾಗುತ್ತದೆ. ಅವುಗಳಿಂದ ಜೀತ ಪದ್ಧತಿಯು ಮಾನವೀಯತೆಯ ನಿರಾಕಾರ; ಮಾನವ ಹಕ್ಕುಗಳ ನಿರಾಕಾರ; ಮತ್ತು ಎಲ್ಲರೂ ಒಪ್ಪುವಂತಹ ಹಾಗೂ ನಾಗರಿಕ ಮಾನವ ಅಸ್ತಿತ್ವಕ್ಕೆ ಘೋರ ಆಘಾತವನ್ನು ಕೊಡುವಂತಹದ್ದು ಎಂಬ ಅಂಶಗಳನ್ನು ಮನಸ್ಸಿಗೆ ನಾಟುವಂತೆ ತಿಳಿಸಿಕೊಡಬೇಕಾಗುತ್ತದೆ.

6.2.3 ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳಿಗೆ ತಗಲುವ ಖರ್ಚನ್ನು ಗಣನೆಗೆ ತೆಗೆದುಕೊಂಡು ಪ್ರತಿ ರಾಜ್ಯಕ್ಕೆ ವರ್ಷಕ್ಕೆ 10 ಲಕ್ಷ ರೂಪಾಯಿಗಳನ್ನು ಈ ಕೆಳಗೆ ನಮೂದಿಸಿದಂತೆ ಮಂಜೂರು ಮಾಡಬಹುದೆಂದು ಸೂಚಿಸಲಾಗಿದೆ.

| ಕ್ರ.ಸಂ | ಅಂಶೀಯ ಖರ್ಚುಗಳು | ಬೇಕಾದ ಹಣ |
|---|---|---|
| 1. | ಕಿರು ಪುಸ್ತಕ / ಕರಪತ್ರಗಳ ಮುದ್ರಣ / ಸ್ಥಳೀಯ ವಾರ್ತಾ ಪತ್ರಗಳ ಮುಖಾಂತರ ಆಂದೋಲನಗಳ ಖರ್ಚು | 1,00,000 ರೂ. |
| 2. | ಜಾಗೃತಿ ಮೂಡಿಸಲು ನುಕ್ಕಡ್, ನಾಟಕ, ಬೀದಿನಾಟಕ ಇತ್ಯಾದಿಗಳನ್ನು ಕೊಡಲು ಜಾನಪದ ಸಾಂಸ್ಕೃತಿಕ ತಂಡಗಳಿಗೆ ಗುರಿ ಸ್ಪಷ್ಟತೆ ಮತ್ತು ತರಬೇತಿ ನೀಡಲು ಖರ್ಚು | 2,00,000 ರೂ. |
| 3. | ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೊಡಲು ತಗಲುವ ಖರ್ಚು – ಪ್ರಯಾಣ ಖರ್ಚು ಸೇರಿ | 2,00,000 ರೂ. |
| 4. | ಆಂದೋಲನದ ಮತ್ತು ಆಕಾಶವಾಣಿ,ದೂರದರ್ಶನ,ವಾರ್ತಾ ಮತ್ತು ಪ್ರಸಾರ ಇಲಾಖೆ ಮುಖಾಂತರ ವಿವಿಧ ದೃಶ್ಯ-ಶ್ರವ್ಯ ವಿಷಯಗಳ ಪ್ರಸಾರಗಳಿಗೆ ತಗಲುವ ಖರ್ಚು | 5,00,000 ರೂ. |
| | **ಒಟ್ಟು** | **10,00,000 ರೂ.** |

**6.3 ಮೌಲ್ಯಮಾಪನಕ್ಕೋಸ್ಕರ ನಡೆಸುವ ಅಧ್ಯಯನಗಳು**

6.3.1 ಪ್ರಚಲಿತವಿರುವ ಭೂಮಿ ಹಾಗೂ ಸಾಲ ಸಂಬಂಧಿತ ವಿಷಯಗಳು ಜೀತದಾಳುಗಳ ಮೇಲೆ ಹೇಗೆ ಪರಿಣಾಮ ಬೀಳುತ್ತವೆ ಮತ್ತು ಸರ್ಕಾರದ ವಿವಿಧ ಮೂಲಗಳಿಂದ ಒದಗಿಸಲಾದ ಬಡತನ ನಿರ್ಮೂಲನೆ ಹಾಗೂ ಧನ ಸಹಾಯ ಕಾರ್ಯಕ್ರಮಗಳ ಪರಿಣಾಮವೇನು ಎಂದು ಅಧ್ಯಯನ ಮಾಡಲು ಮೌಲ್ಯಮಾಪನಾ ಅಧ್ಯಯನ ಮತ್ತು ಸಮೀಕ್ಷೆಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಕೈಗೊಳ್ಳಬೇಕು. ಅಂತಹ ಮೌಲ್ಯಮಾಪನಾ ಅಧ್ಯಯನಗಳನ್ನು ಅಸಂಘಟಿತ ಕಾರ್ಮಿಕರ ಸಮಸ್ಯೆಗಳ ಕುರಿತು ಮತ್ತು ಅವರ ಕಲ್ಯಾಣಕ್ಕೋಸ್ಕರ ದುಡಿಯುವ ಪ್ರಖ್ಯಾತ ಅಧ್ಯಯನ ಸಂಸ್ಥೆಗಳು/ವಿದ್ಯಾ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ನಡೆಸಬಹುದು. ಮೌಲ್ಯಮಾಪನವನ್ನು ತಪ್ಪು ಕಂಡುಹಿಡಿಯುವ ಸಾಧನ ವನ್ನಾಗಿ ಬಳಸದೇ ದೋಷ ಸರಿಪಡಿಸುವ ಸಾಧನವನ್ನಾಗಿ ಬಳಸಬೇಕು. ಅದರಿಂದ ಕಾರ್ಯಕ್ರಮಗಳ ವಿಷಯಗಳನ್ನೂ ಪ್ರಕ್ರಿಯೆಗಳನ್ನು ಪರಿಣಾಮಗಳನ್ನೂ ಅಧ್ಯಯನ ಮಾಡಬೇಕು. ಯೋಜನೆಗಳನ್ನು ಸಿದ್ಧಪಡಿಸಿದ ರೀತಿ, ಸದ್ಯಕ್ಕೆ ಅನುಷ್ಠಾನ ದಲ್ಲಿರುವ ಕಾರ್ಯಕ್ರಮಗಳು ಮತ್ತು ಆ ಕಾರ್ಯಕ್ರಮಗಳಿಂದ ಉದ್ದೇಶಿತ ಜನರ ಮೇಲಾದ ಪರಿಣಾಮ ಇವೆಲ್ಲವನ್ನೂ ಅಧ್ಯಯನ ಮಾಡಬೇಕು. ಮೌಲ್ಯಮಾಪನದಿಂದ ಬೆಳಕಿಗೆ ಬಂದ ಅಂಶಗಳನ್ನು ಬಳಸಿ ಕಾರ್ಯಕ್ರಮಗಳಲ್ಲಿ ಸಕಾಲದಲ್ಲಿ ಸೂಕ್ತ ಬದಲಾವಣೆಗಳನ್ನು ತರುವಂತಿರಬೇಕು.

6.3.2 ಪ್ರತಿಯೊಂದು ರಾಜ್ಯವು ಪ್ರಖ್ಯಾತ ಹಾಗೂ ಮೌಲ್ಯಮಾಪನಾ ಅಧ್ಯಯನಗಳನ್ನು ನಡೆಸುವಲ್ಲಿ ನುರಿತ ಸಾಮಾಜಿಕ ವಿಜ್ಞಾನ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಐದು ಮೌಲ್ಯಮಾಪನಾ ಅಧ್ಯಯನಗಳನ್ನು ಪ್ರತಿ ವರ್ಷವೂ ನಡೆಸುತ್ತಿರಬೇಕು. ಈ ಕೆಳಗೆ ನಮೂದಿಸಿದ ವಿವಿಧ ಅಂಶಗಳನ್ನು ಗಮನದಲ್ಲಿಟ್ಟು ಒಂದು ಮೌಲ್ಯಮಾಪನಾ ಅಧ್ಯಯನ ನಡೆಸಲು ತಗಲುವ ಖರ್ಚಿನ ಅಂದಾಜು ಮಾಡಲಾಗಿದೆ.

6.3.3 ಆ ಅಂದಾಜಿನ ಮೇಲೆ 13 ರಾಜ್ಯಗಳಲ್ಲಿ ಪ್ರತಿ ರಾಜ್ಯಕ್ಕೆ ಪ್ರತಿ ವರ್ಷ ಐದು ಮೌಲ್ಯಮಾಪನಾ ಅಧ್ಯಯನಗಳನ್ನು ನಡೆಸಲು ಐದು ಲಕ್ಷ ರೂಪಾಯಿಗಳನ್ನು ಒದಗಿಸಬಹುದು.

| ಕ್ರ.ಸಂ | ಅಂಶೀಯ ಖರ್ಚುಗಳು | ಬೇಕಾದ ಹಣ |
|---|---|---|
| 1. | ಜೀತದಾಳುಗಳ ಪರಿಣಾಮಕಾರಿ ಪುನರ್ವಸತಿಗೆ ಅನುದಾನ ಮತ್ತು ಸಾಲ ನೀಡುತ್ತಿದ್ದ ಬೇರೆ ಬೇರೆ ಸರ್ಕಾರಿ ಇಲಾಖೆಗಳಿಂದ ಮಾಹಿತಿ ಪಡೆಯಲು ಬಳಸುವ ಪ್ರಶ್ನಾವಳಿಯ ತಯಾರಿಕೆ ಮತ್ತು ಮುದ್ರಣ ಮತ್ತು ಪ್ರಶ್ನಾವಳಿಯನ್ನು ರವಾನಿಸಲು ತಗಲುವ ಅಂಚೆವೆಚ್ಚ | 8,000 ರೂ. |
| 2. | ಮಾಹಿತಿಯ ವಿಶ್ಲೇಷಣೆ – ಇಬ್ಬರು ಅಧ್ಯಯನ ಸಹಾಯಕರಿಂದ (ಪ್ರತಿಯೊಬ್ಬರಿಗೆ ತಿಂಗಳಿಗೆ @ 6000 ರೂ.ನಂತೆ ಎರಡು ತಿಂಗಳಿಗೆ (6000 x 2 x 2) | 24,000ರೂ. |
| 3. | ವರದಿ ಬರೆಯುವುದು – ಮೂರು ಮಂದಿ ಅಧ್ಯಯನಕಾರರಿಂದ (ಪ್ರತಿಯೊಬ್ಬರಿಗೆ ತಿಂಗಳಿಗೆ @ 8000 ರೂ.ನಂತೆ ಎರಡು ತಿಂಗಳಿಗೆ (8000 x 3 x 2) | 48,000 ರೂ. |
| 4. | ವರದಿಯ ಮುದ್ರಣ ಮತ್ತು ಬೈಂಡಿಂಗ್ ಮಾಡುವುದು | 10,000 ರೂ. |
| 5. | ವಿವಿಧ ಖರ್ಚುಗಳು | 10,000 ರೂ. |
| | **ಒಟ್ಟು** | **1,00,000 ರೂ.** |

**6.4 ಪುನರ್ವಸತಿಗೋಸ್ಕರ ಅನುದಾನಗಳನ್ನು ಹೆಚ್ಚಿಸಲು ಪ್ರಸ್ತಾವನೆ**

6.4.1 1-4-1995ರಿಂದ ಪುನರ್ವಸತಿಗೋಸ್ಕರ ಇರುವ ಅನುದಾನವನ್ನು 6,250 ರೂ.ಗಳಿಂದ 10,000 ರೂ.ಗಳಿಗೆ ಏರಿಸ ಲಾಗಿತ್ತು. ಬೇರೆ ಬೇರೆ ರಾಜ್ಯಗಳು ಪಟ್ಟು ಹಿಡಿದು ಪುನರ್ವಸತಿಗೋಸ್ಕರವಿರುವ ಅನುದಾನವನ್ನು ಹೆಚ್ಚಿಸಲು ಒತ್ತಾಯಿ ಸುತ್ತಿದ್ದವು. ಕಳೆದ ನಾಲ್ಕು ವರ್ಷಗಳಲ್ಲಿಯ ಹಣದುಬ್ಬರ ಮತ್ತು ಪುನರ್ವಸತಿಗೆ ಬೇಕಾದ ಸೌಲಭ್ಯ (ಎಮ್ಮೆ, ದನ ಇತ್ಯಾದಿ) ಗಳ ಬೆಲೆಗಳಲ್ಲಿಯ ಖರ್ಚಿನ ಹೆಚ್ಚಳಗಳನ್ನು ಗಮನದಲ್ಲಿಟ್ಟು ಪುನರ್ವಸತಿಗೋಸ್ಕರದ ಅನುದಾನವನ್ನು ಪ್ರತಿ ಬಿಡುಗಡೆಗೊಳಿಸಿದ ಜೀತದಾಳುವಿಗೆ 10,000ದಿಂದ 20,000ಕ್ಕೆ ಏರಿಸಲಾಗಿದೆ. ಇದನ್ನು ಶೇ.50:50ರ ಸಮ ಪ್ರಮಾಣದಲ್ಲಿ

7)ಅ)ಹಿಂದಿನ ವರ್ಷಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸಹಾಯಧನ ಕುರಿತು ಬಳಕೆ ಪ್ರಮಾಣ ಪತ್ರಗಳನ್ನು ಇನ್ನೂ ಸಲ್ಲಿಸಲಿಕ್ಕಿದೆಯೇ? ಹೌದು/ಇಲ್ಲ

ಆ) ಹೌದಾದರೆ ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು ಸೂಚಿಸಿ:

| ಕ್ರ. ಸಂ. | ಜಿಲ್ಲೆ(ಗಳ) ಹೆಸರು(ಗಳು) | ಹಣ ಬಿಡುಗಡೆ ಮಾಡಿದ ವರ್ಷ | ಕೇಂದ್ರ ಸಹಾಯಧನದ ಮೊತ್ತ (ರೂ.ಗಳಲ್ಲಿ) | ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರಲು ಕಾರಣಗಳು |
|---|---|---|---|---|
| | | | | |

2. ಜೀತದಾಳುಗಳ ಸಮೀಕ್ಷೆ ಮಾಡಲು ಕೇಂದ್ರ ಸಹಾಯಧನದ ಬಿಡುಗಡೆಗೆ ಪ್ರಸ್ತಾವನೆ:

1)ಸಮೀಕ್ಷೆ ನಡೆಸಬೇಕಾದ ಜಿಲ್ಲೆಯ/ಗಳ ಹೆಸರು/ಗಳು:

2)ಆ ಜಿಲ್ಲೆಯಲ್ಲಿ ಹಿಂದೆ ಸಮೀಕ್ಷೆಯನ್ನು ಮಾಡಲಾಗಿತ್ತೇ? ಹೌದು/ಇಲ್ಲ

ಹೌದಾದರೆ ಸಮೀಕ್ಷೆ ನಡೆಸಿದ ತಿಂಗಳು ಮತ್ತು ವರ್ಷ:

3)ಹಿಂದೆ ನಡೆಸಿದ ಸಮೀಕ್ಷೆಗಳ ವರದಿಗಳನ್ನು ಭಾರತ ಸರ್ಕಾರದ ಕಾರ್ಮಿಕ ಕಾರ್ಮಿಕ ಮಂತ್ರಾಲಯಕ್ಕೆ ಕಳುಹಿಸಲಾಗಿದೆಯೇ? ಹೌದು/ಇಲ್ಲ

4)ಸಮೀಕ್ಷೆ ನಡೆಸಲಿರುವ ಸಂಸ್ಥೆಯ/ಗಳ ಹೆಸರು/ಗಳು:

5)ಕೈಗೊಳ್ಳಲಿರುವ ಸಮೀಕ್ಷೆಯ ಪ್ರತಿ ಅಂಶಕ್ಕೆ ತಗಲುವ ಖರ್ಚಿನ ವಿವರಗಳು:

6)ಹಿಂದಿನ ವರ್ಷಗಳಲ್ಲಿ ಜೀತದಾಳುಗಳ ಸಮೀಕ್ಷೆ ನಡೆಸಲು ಬಿಡುಗಡೆಗೊಳಿಸಿದ ಕೇಂದ್ರ ಸಹಾಯಧನ ಕುರಿತು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿದೆಯೇ? ಹೌದು/ಇಲ್ಲ

7)ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು ಕೊಡಿ:

| ಕ್ರ. ಸಂ. | ಹಣ ಬಿಡುಗಡೆ ಮಾಡಿದ ವರ್ಷ | ಕೇಂದ್ರ ಸಹಾಯಧನದ ಮೊತ್ತ (ರೂ.ಗಳಲ್ಲಿ) | ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರಲು ಕಾರಣಗಳು |
|---|---|---|---|
| | | | |

3. ಜಾಗೃತಿ ಮೂಡಿಸುವ ಕಾರ್ಯಕ್ರಮಗಳಿಗೆ ಕೇಂದ್ರ ಸಹಾಯಧನ ಪಡೆಯಲು ಪ್ರಸ್ತಾವನೆ:

1)ಜಾಗೃತಿ ಮೂಡಿಸಲು ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಪಟ್ಟಿ:

2)ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲಿರುವ ಸಂಸ್ಥೆಯ (ಗಳ) ಹೆಸರು (ಗಳು):

3)ಜಾಗೃತಿ ಮೂಡಿಸಲು ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಪ್ರತಿ ಅಂಶಕ್ಕೆ ತಗಲುವ ಖರ್ಚಿನ ವಿವರಗಳು:

4)ಹಿಂದಿನ ವರ್ಷಗಳಿಗೆ ಸಂಬಂಧಪಟ್ಟಂತೆ ಈ ಉದ್ದೇಶಕ್ಕೆ ಬಿಡುಗಡೆಗೊಳಿಸಿದ ಕೇಂದ್ರ ಸಹಾಯಧನ ಕುರಿತು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿದೆಯೇ? ಹೌದು/ಇಲ್ಲ

5) ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು ಕೊಡಿ:

| ಕ್ರ. ಸಂ. | ಹಣ ಬಿಡುಗಡೆ ಮಾಡಿದ ವರ್ಷ | ಕೇಂದ್ರ ಸಹಾಯಧನದ ಮೊತ್ತ (ರೂ.ಗಳಲ್ಲಿ) | ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರಲು ಕಾರಣಗಳು |
|---|---|---|---|
| | | | |

4. ಮೌಲ್ಯಮಾಪನಾ ಅಧ್ಯಯನಗಳಿಗೆ ಕೇಂದ್ರ ಸಹಾಯಧನ ಪಡೆಯಲು ಪ್ರಸ್ತಾವನೆ:

1)ಮೌಲ್ಯಮಾಪನಾ ಅಧ್ಯಯನಗಳನ್ನು ನಡೆಸಬಹುದಾದ ಜಿಲ್ಲೆಯ/ಗಳ ಹೆಸರು/ಗಳು:

2)ಮೌಲ್ಯಮಾಪನಾ ಅಧ್ಯಯನಗಳನ್ನು ನಡೆಸಿಕೊಂಡು ಹೋಗಲಿರುವ ಸಂಸ್ಥೆಯ/ಗಳ ಹೆಸರು/ಗಳು:

3)ಮೌಲ್ಯಮಾಪನಾ ಅಧ್ಯಯನಗಳನ್ನು ನಡೆಸಿಕೊಂಡು ಹೋಗಲು ತಗಲುವ ಖರ್ಚಿನ ವಿವರಗಳು:

4)ಹಿಂದಿನ ವರ್ಷಗಳಿಗೆ ಸಂಬಂಧಪಟ್ಟಂತೆ ಈ ಉದ್ದೇಶಕ್ಕೆ ಬಿಡುಗಡೆಗೊಳಿಸಿದ ಕೇಂದ್ರ ಸಹಾಯಧನ ಕುರಿತು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿದೆಯೇ? ಹೌದು/ಇಲ್ಲ

5)ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು ಕೊಡಿ:

| ಕ್ರ. ಸಂ. | ಹಣ ಬಿಡುಗಡೆ ಮಾಡಿದ ವರ್ಷ | ಕೇಂದ್ರ ಸಹಾಯಧನದ ಮೊತ್ತ (ರೂ.ಗಳಲ್ಲಿ) | ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರಲು ಕಾರಣಗಳು |
|---|---|---|---|
| | | | |

## ಅನುಬಂಧ-9.5

ಕಾರ್ಯದರ್ಶಿ ಕಾರ್ಮಿಕ ಸಚಿವಾಲಯ

ಅ.ಸ.ಪ.ಸಂಖ್ಯೆ ಎಸ್-11016/20/82-ಬಿಎಲ್ 2ನೇ ಸೆಪ್ಟೆಂಬರ್ 1982

ಪ್ರಿಯ

1. ನಿಮ್ಮ ಮುಖ್ಯಮಂತ್ರಿಯವರಿಗೆ ಕಾರ್ಮಿಕ ಮಂತ್ರಿಯವರು ಬರೆದ ಅ.ಸ.ಪತ್ರ ಸಂ.ಯು-11016/82-ಬಿಎಲ್ ದಿನಾಂಕ 24ನೇ ಮೇ 1982ರಲ್ಲಿ ಜೀತದಾಳುಗಳನ್ನು ಗುರುತಿಸಲು ಮತ್ತು ಅವರನ್ನು ಸಾಲ ಜೀತದಿಂದ ಬಿಡುಗಡೆಗೊಳಿಸಲು ಸೂಕ್ತವೆಂದು ನಾವು ಭಾವಿಸುವ ಒಂದು ವಿಧಾನವನ್ನು ಮತ್ತು ವಿವಿಧ ಸಂಸ್ಥೆಗಳನ್ನು ನಮೂದಿಸಿದ್ದ ಟಿಪ್ಪಣಿಯೊಂದನ್ನು ಲಗತ್ತಿಸಲಾಗಿತ್ತು. ಪ್ರಸಕ್ತ ಸಾಮಾಜಿಕ-ಆರ್ಥಿಕ ಸಂದರ್ಭದಲ್ಲಿ ಇಂಥ ಗುರುತಿಸುವಿಕೆಯು ಕಠಿಣತರವಾದುದು; ಮತ್ತದಕ್ಕೆ ಅಗಾಧ ಪ್ರಯತ್ನ ಹಾಗೂ ಕಾರ್ಮಿಕರ ಹಿತಾಸಕ್ತಿಗೆ ಬದ್ಧರಾಗಿರುವ ಸರ್ಕಾರಿ, ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಸಂಘಟನೆಗಳು ಮೊದಲಾದವರ ನಿಷ್ಠಾಪೂರ್ವಕ ಪಾಲುಗೊಳ್ಳುವಿಕೆಯು ಅವಶ್ಯಕ ಮತ್ತು ಇಂಥವರ ಆಯ್ಕೆಯನ್ನು ರಾಜ್ಯ ಸರ್ಕಾರಗಳು ಅತ್ಯಂತ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ ಎಂಬ ಅಂಶಗಳನ್ನು ನಾವು ಒತ್ತಿ ಹೇಳಿದ್ದೆವು. ಜೀತದಾಳುಗಳನ್ನು ಹೊಸದಾಗಿ ಗುರುತಿಸುವ ಪ್ರಯತ್ನವನ್ನು ಈಗ ಕೈಗೊಂಡು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಎಲ್ಲಾ ಜೀತದಾಳುಗಳನ್ನು ಗುರುತಿಸಿ ಬಿಡುಗಡೆ ಮಾಡುವ ತನಕ ಆ ಪ್ರಯತ್ನವನ್ನು ತೀವ್ರಗತಿಯಿಂದ ಮುಂದುವರಿಸಬೇಕಾಗುತ್ತದೆ ಎಂಬುದಕ್ಕೂ ನಾವು ಹೆಚ್ಚು ಒತ್ತು ಕೊಟ್ಟಿದ್ದೆವು.

2. ಮೇಲೆ ಉಲ್ಲೇಖಿಸಲಾಗಿರುವ ಕಾರ್ಮಿಕ ಮಂತ್ರಿಯವರ ಪತ್ರಕ್ಕೆ ಬಂದ ಕೆಲವು ರಾಜ್ಯ ಸರ್ಕಾರಗಳ ಧನಾತ್ಮಕ ಪ್ರತಿಕ್ರಿಯೆಯಿಂದ ಉತ್ಸಾಹಿತನಾಗಿ ಜೀತದಾಳುಗಳನ್ನು ಗುರುತಿಸಿದ ನಂತರದ ಅತಿ ಮುಖ್ಯವಾದ ವಿಷಯವಾದ ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿ ಬಗ್ಗೆ ಈಗ ನಾನು ಬರೆಯುತ್ತಿದ್ದೇನೆ. ಅನೇಕ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಪುನರ್ವಸತಿಯನ್ನು ಹೇಗೆ ಹೆಚ್ಚು ಉದ್ದೇಶಸಾಧಕವನ್ನಾಗಿ ಮಾಡಬಹುದು ಎಂಬ ಬಗ್ಗೆ ಲಗತ್ತಿಸಲಾದ ಟಿಪ್ಪಣಿಯು ಬಹಳ ವಿವರವಾಗಿ ತಿಳಿಸುತ್ತದೆ. ಟಿಪ್ಪಣಿಯಲ್ಲಿ ಸ್ಪಷ್ಟಪಡಿಸಲಾಗಿರುವಂತೆ ಪುನರ್ವಸತಿ ಕಲ್ಪನೆಯಲ್ಲಿ ನಾಲ್ಕು ಮುಖ್ಯ ಅಂಶಗಳಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

1) ಭೌತಿಕ ಮತ್ತು ಆರ್ಥಿಕ ಪುನರ್ವಸತಿಯ ಜೊತೆ ಜೊತೆಗೆ ಮಾನಸಿಕ ಪುನರ್ವಸತಿಯನ್ನು ಒದಗಿಸಲೇಬೇಕು.

2) ಭೌತಿಕ ಮತ್ತು ಆರ್ಥಿಕ ಪುನರ್ವಸತಿಯಲ್ಲಿ 15 ಮುಖ್ಯ ಭಾಗಗಳಿವೆ. ಅವುಗಳು ಯಾವುವೆಂದರೆ: ಮನೆ-ನಿವೇಶನಗಳನ್ನು ಮತ್ತು ಕೃಷಿ ಜಮೀನನ್ನು ಹಂಚುವುದು, ಭೂಮಿಯನ್ನು ಅಭಿವೃದ್ಧಿಗೊಳಿಸುವುದು, ಕಡಿಮೆ ವೆಚ್ಚದ ವಾಸದ ಮನೆಗಳನ್ನು ಒದಗಿಸುವುದು, ಕೃಷಿ, ಸಾಲ ಸೌಲಭ್ಯ ಕಲ್ಪಿಸುವುದು, ತೋಟಗಾರಿಕೆ, ಪಶು ಸಂಗೋಪನೆ, ಹೊಸ ಕೌಶಲ್ಯಗಳನ್ನು ಪಡೆಯಲು ಮತ್ತು ಇರುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡುವುದು, ಸಾಂಪ್ರದಾಯಿಕ ಕಲೆ ಮತ್ತು ಕುಶಲಕಲೆಗಳನ್ನು ಉತ್ತೇಜಿಸುವುದು, ಕೂಲಿ ಕೆಲಸವನ್ನು ಒದಗಿಸುವುದು ಮತ್ತು ಕನಿಷ್ಠವೇತನವನ್ನು ಜಾರಿಗೊಳಿಸುವುದು, ಲಘು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಸಂಸ್ಕರಣೆ, ಆರೋಗ್ಯ – ವೈದ್ಯಕೀಯ ತಪಾಸಣೆ ಮತ್ತು ನೈರ್ಮಲ್ಯ, ಅತ್ಯವಶ್ಯಕ ದಿನಸಿಗಳನ್ನು ಪೂರೈಸುವುದು, ಜೀತದಾಳುಗಳ ಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ನಾಗರಿಕ ಹಕ್ಕುಗಳ ರಕ್ಷಣೆ ಮಾಡುವುದು;

3) ಹೆಚ್ಚಿನ ಗುಣಮಟ್ಟದ ಪುನರ್ವಸತಿಯನ್ನು ಒದಗಿಸಲು ಕೇಂದ್ರದ ಮತ್ತು ಕೇಂದ್ರ ಪುರಸ್ಕೃತವಾದ ಯೋಜನೆಗಳು ಹಾಗೂ ರಾಜ್ಯ ಸರ್ಕಾರಗಳ ಮುಂದುವರಿಯುತ್ತಿರುವ ಯೋಜನೆಗಳ ನಡುವೆ ಸಮನ್ವಯವನ್ನು ತಂದುಕೊಳ್ಳಲು ಅವಕಾಶವಿದೆ. ಇಂಥ ಸಮನ್ವಯದ ಸಾರಾಂಶವೆಂದರೆ ಪುನರಾವೃತ್ತಿಯನ್ನು ತಪ್ಪಿಸುವುದಾಗಿದೆ, ಅಂದರೆ ಒಂದೇ ಉದ್ದೇಶಕ್ಕಾಗಿ ವಿಭಿನ್ನ ಮೂಲಗಳಿಂದ ಅನುದಾನಗಳನ್ನು ಒಗ್ಗೂಡಿಸುವುದನ್ನು ತಪ್ಪಿಸುವುದು. ಹೀಗೆ ಒಂದೇ ಉದ್ದೇಶಕ್ಕಾಗಿ ವಿಭಿನ್ನ ಮೂಲಗಳಿಂದ ಅನುದಾನಗಳನ್ನು ಸೆಳೆದಿಲ್ಲ ಎಂಬುದನ್ನೂ ವಿಭಿನ್ನ ವಲಯಗಳಿಂದ ಪುನರ್ವಸತಿ ಯೋಜನೆಯ ವಿಭಿನ್ನ ಬಾಬುಗಳಿಗಾಗಿ ಸೆಳೆಯಲಾದ ಅನುದಾನಗಳನ್ನು ಕೌಶಲ್ಯಪೂರ್ಣವಾಗಿ ಸಮನ್ವಯಗೊಳಿಸಲಾಗಿದೆ ಎಂಬುದನ್ನೂ ಖಾತ್ರಿಪಡಿಸಿಕೊಳ್ಳಬೇಕು; ಮತ್ತು

4) ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳ ಪುನರ್ವಸತಿಗಾಗಿ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸುವಾಗ ತಮ್ಮ ಪುನರ್ವಸತಿಗಾಗಿ ಇರುವ ವಿವಿಧ ಪರ್ಯಾಯಗಳಲ್ಲಿ ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಅವಶ್ಯವಾಗಿ ನೀಡಬೇಕು. ಬಿಡುಗಡೆಗೊಳಿಸಿದ ಜೀತದಾಳುಗಳ ಕುಟುಂಬಗಳ ಒಟ್ಟು ಅಗತ್ಯಗಳನ್ನು ಪೂರೈಸುವಂತಿರುವ ಕಾರ್ಯಕ್ರಮವನ್ನೇ ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳಬೇಕು. ಇದರಿಂದ ಒಂದೆಡೆ ಬಡತನ ರೇಖೆಯನ್ನು ದಾಟುವ ಹಾಗೂ ಇನ್ನೊಂದೆಡೆ ಮತ್ತೆ ಸಾಲದ ಜೀತದ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳದಂತೆ ತಡೆಹಿಡಿಯುವ ಸಾಮರ್ಥ್ಯವನ್ನು ಅವರು ಪಡೆದುಕೊಳ್ಳುವಂತಾಗಬೇಕು.

3. ಬಿಡುಗಡೆಗೊಳಿಸಿದ ಜೀತದಾಳುಗಳು ಉತ್ತಮ ರೀತಿಯಲ್ಲಿ ತಮ್ಮ ಜೀವನ ನಿರ್ವಹಣೆಯನ್ನು ಮಾಡುವ ಅವಶ್ಯಕತೆ ಮಾತ್ರ ಇರದೆ ತಮ್ಮ ಬದುಕಿಗೊಂದು ಘನತೆ, ಸೌಂದರ್ಯ ಮತ್ತು ಬೆಲೆಯನ್ನು ಕಂಡುಕೊಳ್ಳಲೂ ಇಂಥ ಸಮನ್ವಯವು ಅವಶ್ಯಕ ಎಂಬುದು ನಮ್ಮ ಅಭಿಪ್ರಾಯ. ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದ ಜಾಗೃತಿ ಸಮಿತಿಗೂ ಮತ್ತು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೂ ಅಧ್ಯಕ್ಷರಾಗಿರುವುದರಿಂದ ಅವರು ಕೆಲಮಟ್ಟಿಗೆ ಮುತುವರ್ಜಿಯನ್ನು, ಆಸಕ್ತಿಯನ್ನು ಮತ್ತು ಸಂಪನ್ಮೂಲ ಕ್ರೋಢೀಕರಣ ಸಾಮರ್ಥ್ಯವನ್ನು ತೋರಿದ್ದಲ್ಲಿ ಇಂಥ ಸಮನ್ವಯವನ್ನು ಸಾಧಿಸುವುದು ಸಾಧ್ಯವಿದೆ.

4. ಈ ಹಿನ್ನೆಲೆಯಲ್ಲಿ ಈ ವಿಷಯದ ಬಗ್ಗೆ ಗಂಭೀರವಾಗಿ ಚಿಂತಿಸಬೇಕೆಂದು ಮತ್ತು ಬಿಡುಗಡೆಗೊಳಿಸಿದ ಜೀತದಾಳು ಗಳಿಗೆ ಉತ್ತಮವಾದ ಹಾಗೂ ಹೆಚ್ಚು ಅರ್ಥಪೂರ್ಣವಾದ ಪುನರ್ವಸತಿಯನ್ನು ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಯೋಜನೆ ಗಳ ಅಂದರೆ ಕೇಂದ್ರ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳು ಮತ್ತು ರಾಜ್ಯ ಸರ್ಕಾರಗಳಲ್ಲಿ ಮುಂದು ವರಿಯುತ್ತಿರುವ ಯೋಜನೆಗಳ ನಡುವೆ ಸಮನ್ವಯವನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕೆಂದು ನಾವು ವಿನಂತಿ ಮಾಡಿಕೊಳ್ಳಬಯಸುತ್ತೇವೆ. ಈ ಟಿಪ್ಪಣಿಯಲ್ಲಿರುವ ಸಲಹೆಗಳ ಬಗ್ಗೆ ನಿಮ್ಮಿಂದ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತೇವೆ.

ನಿಮ್ಮ ನಂಬುಗೆಯ
ಸಹಿ/-
(ಬಿ.ಜಿ.ದೇಶಮುಖ್)

ಇವರಿಗೆ
ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು.

## ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸಲು ಒಂದು ನೀಲಿನಕ್ಷೆ

ಭಾರತ ಸರ್ಕಾರವು ಆ ಮೊದಲಿನ 20 ಅಂಶಗಳ ಕಾರ್ಯಕ್ರಮವನ್ನು ಪರಿಷ್ಕರಿಸಿ ದಿನಾಂಕ 14-1-1982ರಂದು ಪ್ರಕಟಿಸಿದ ಕಾರ್ಯಕ್ರಮದಲ್ಲಿ ಜೀತದಾಳುಗಳಿಗೆ ಪುನರ್ವಸತಿಯನ್ನು ಕಲ್ಪಿಸುವುದೂ ಒಂದು ಆಗಿದೆ. ಈ ಕಾರ್ಮಿಕರನ್ನು ಏಕಕಾಲಕ್ಕೆ ಗುರುತಿಸುವುದು, ಬಿಡುಗಡೆ ಮಾಡುವುದು ಮತ್ತು ಅವರಿಗೆ ಪುನರ್ವಸತಿಯನ್ನು ಕಲ್ಪಿಸುವುದು ಬಹು ದೊಡ್ಡ ಕಾರ್ಯ ವಾಗಿದೆ ಮತ್ತು ಇದು, ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976 ಜಾರಿಯಾದಾಗಿನಿಂದಲೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರಂತರ ಗಮನವನ್ನು ಸೆಳೆದುಕೊಂಡಿದೆ. ಈ ಸಮಸ್ಯೆಯ ಜರೂರತೆ ಮತ್ತು ಸಂಕೀರ್ಣತೆಗಳು ಜೀತ ಪದ್ಧತಿ (ನಿರ್ಮೂಲನೆ) ಮಸೂದೆಯ ಮೇಲೆ ಲೋಕಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಅಂದಿನ ಕಾರ್ಮಿಕ ಮಂತ್ರಿಯವರು ದಿನಾಂಕ 27-1-1976ರಂದು ನೀಡಿದ ಉತ್ತರದಲ್ಲಿ ವ್ಯಕ್ತವಾಗುತ್ತದೆ: "ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸೂಕ್ತ ಅನುಸರಣಾ ಕ್ರಮಗಳನ್ನು ಕೈಗೊಳ್ಳದೇ ಹೋದರೆ, ಸಾಮಾಜಿಕ-ಆರ್ಥಿಕ ಕಾಯ್ದೆಯು ಕೇವಲ ಜೀವರಹಿತ ಅಕ್ಷರಗಳಾಗಿ ಉಳಿಯುತ್ತದೆ." ಬಿಡುಗಡೆಗೊಳಿಸಲ್ಪಟ್ಟ ಬಳಿಕ ಜೀತದಾಳು ಎದುರಿಸುವ ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸುತ್ತ ಮಂತ್ರಿ ಯವರು ಹೀಗೆ ಹೇಳಿದ್ದರು:

"ಅವನ ಬಳಿ ಉತ್ಪಾದನಾ ಸಾಧನಗಳಿರುವುದಿಲ್ಲ; ಸಾಲ ಸೌಲಭ್ಯ ಅವನಿಗೆ ದೊರಕುವುದಿಲ್ಲ; ತನ್ನ ಸ್ವತಂತ್ರ ಜೀವನ ನಿರ್ವಹಣೆಗೆ ಪೂರಕವಾಗುವಂಥ ಯಾವುದೇ ವೃತ್ತಿಪರ ಕೌಶಲ್ಯ ಅವನ ಬಳಿ ಇರುವುದಿಲ್ಲ; ... ಅವನನ್ನು ಲಾಭದಾಯಕ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಿದರೂ, ಲಾಭ ಬರುವ ಅವಧಿಯವರೆಗೆ ಅವನಿಗೆ ಬೇರೆ ಯಾವುದೇ ಆದಾಯ ಇರುವುದಿಲ್ಲ. ದಬ್ಬಾಳಿಕೆ ಮತ್ತು ದಾಸ್ಯಕ್ಕೆ ಹೊಂದಿಕೊಂಡು ಬಿಟ್ಟಿರುವ ಜೀತದಾಳುವಿಗೆ ಸಹಜವಾಗಿಯೇ ತನ್ನ ಹಕ್ಕುಗಳ ಬಗ್ಗೆ ಅರಿವು ಇರುವುದಿಲ್ಲ. ಕೆಲವೊಮ್ಮೆ ಅವನು ತನ್ನ ಆರ್ಥಿಕ ಪುನರ್ವಸತಿಗೆ ಸಂಬಂಧಿಸಿದ ಕಷ್ಟಕರವಾದ ಪ್ರಕ್ರಿಯೆ ಯನ್ನು ದಾಟಲೂ ಅವನು ಇಷ್ಟಪಡುವುದಿಲ್ಲ ಮತ್ತು ಗುಲಾಮಗಿರಿಗೆ ಹಿಂತಿರುಗಲೂ ಅವನು ಒಪ್ಪಬಹುದು".

ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976 ಜಾರಿಯಾಗಿ ಆರು ವರ್ಷಗಳಾಗಿರುವ ಈ ಕಾಲದಲ್ಲೂ ಯೋಜನಾ ತಜ್ಞರು ಮತ್ತು ಆಡಳಿತಗಾರರು ನಿಜಕ್ಕೂ ಎದುರಿಸಬೇಕಾದ ಸವಾಲುಗಳಲ್ಲಿ ಇವು ಕೆಲವು.

ಈ ಹಿನ್ನೆಲೆಯಲ್ಲಿ ಸಾಲದ ಜೀತದಿಂದ ಬಿಡುಗಡೆಗೊಳಿಸಿದ ಜೀತದಾಳುವಿಗೆ ಆತನು ಬಿಡುಗಡೆಯಾದ ಕೂಡಲೇ ಒದಗಿಸ ಬಹುದಾದ ಪುನರ್ವಸತಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಅವಶ್ಯಕತೆ ಬಗ್ಗೆ ಕಾರ್ಮಿಕ ಸಚಿವಾಲಯ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಿರಂತರವಾಗಿ ಕಾರ್ಯತತ್ಪರರಾಗಿರುವಂತೆ ಕಾರ್ಮಿಕ ಸಚಿವಾಲಯವು ನೋಡಿ ಕೊಳ್ಳುತ್ತಿದೆ. ಅನೇಕ ಮುಂದುವರಿಯುತ್ತಿರುವ ಯೋಜನೆಗಳ ಮಿತಿಗಳನ್ನು ಗುರುತಿಸಿದ ಬಳಿಕ ಮತ್ತು ಕಾರ್ಮಿಕ ಸಚಿವಾಲಯವೂ ಸೇರಿದಂತೆ ಅನೇಕ ಕಡೆಗಳಿಂದ ಬಂದ ನಿರಂತರ ಒತ್ತಾಯದ ಮೇರೆಗೆ ಯೋಜನಾ ಆಯೋಗವು 1978-79ರಲ್ಲಿ ರೂ.94.64 ಲಕ್ಷ 1979-80ರಲ್ಲಿ ರೂ.53.62 ಲಕ್ಷ ಮತ್ತು 1981-82ರಲ್ಲಿ ರೂ.193.93 ಲಕ್ಷ ಗಾತ್ರವಿರುವ ಕೇಂದ್ರ ಪುರಸ್ಕೃತ ಯೋಜನೆಯನ್ನು ಅನುಷ್ಠಾನಗೊಳಿಸುವ ಆಲೋಚನೆಗೆ ಅನುಮೋದನೆಯನ್ನು ನೀಡಿತು. ಕೇಂದ್ರ ಪುರಸ್ಕೃತ ಯೋಜನೆಯನ್ನು ಅನುಷ್ಠಾನಗೊಳಿಸುವುದರ ಉದ್ದೇಶ ರಾಜ್ಯ ಸರ್ಕಾರಗಳು ಫಲಾನುಭವಿಗಳಿಗೆ ಬೀಜ ಬಂಡವಾಳವನ್ನು ನೀಡುವುದಕ್ಕೆ ಅನುಕೂಲವಾಗುವಂತೆ ತತ್ಸಮ ಮೊತ್ತದ ಅನುದಾನವನ್ನು ಒದಗಿಸುವುದಾಗಿತ್ತು. ಪುನರ್ವಸತಿ ಯೋಜನೆ ಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಸಚಿವಾಲಯವು ತನ್ನ ಸುತ್ತೋಲೆ ಸಂ.Y-11011(1)/78-L ದಿನಾಂಕ 30-5-1978ರ ಮೂಲಕ ಮಾರ್ಗದರ್ಶಿ ಅಂಶಗಳನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿದೆ. ಜೀತದಾಳುಗಳ ಪುನರ್ವಸತಿಗಾಗಿ ಹಾಲಿ ಇರುವ ಮತ್ತು 'ಯೋಜನೆ' ಅಡಿಯಲ್ಲಿ ಬರುವ ಕಾರ್ಯಕ್ರಮವಾದ ಕೇಂದ್ರ ಪುರಸ್ಕೃತ ಯೋಜನೆಯು ಬಿಡುಗಡೆಗೊಳಿಸಲ್ಪಟ್ಟ ಜೀತದಾಳುವಿಗೆ ಗರಿಷ್ಠ ರೂ.4,000/-ಗಳನ್ನು ಸಹಾಯಧನವನ್ನಾಗಿ ನೀಡುತ್ತದೆ; ಇದರಲ್ಲಿ ಶೇಕಡಾ 50%ರಷ್ಟನ್ನು ಕೇಂದ್ರದ ಸಹಾಯಧನವೆಂದು ನೀಡಲಾಗುತ್ತಿದ್ದು, ಉಳಿದ ಶೇಕಡಾ 50%ರಷ್ಟನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಭರಿಸಬೇಕು. ಆರನೇ ಯೋಜನೆ(1980-85) ಅವಧಿಯಲ್ಲಿ ಯೋಜನಾ ಆಯೋಗವು ಒಟ್ಟು ರೂ.25 ಕೋಟಿಗಳ ಯೋಜನಾ ಗಾತ್ರವನ್ನು ಅನುಮೋದನೆ ಮಾಡಿದೆ. ಈ ಸಹಾಯಧನವನ್ನು ಕೃಷಿ ಭೂಮಿ ಹಂಚಿಕೆ, ಮನೆ-ನಿವೇಶನಗಳು, ಹಾಲು ನೀಡುವ ಹಸು/ಎಮ್ಮೆಗಳನ್ನು ನೀಡುವಂಥ ಆದಾಯ ಉತ್ಪಾದನೆಯ ಘಟಕಗಳು, ಇತರೆ ಪಶು ಸಂಗೋಪನೆ (ಕುರಿ, ಮೇಕೆ, ಹೇಸರಗತ್ತೆ, ಕೋಳಿ ಸಾಕಾಣಿಕೆ) ಘಟಕಗಳು, ಕೃಷಿ ಸಲಕರಣೆಗಳು ಮತ್ತು

ಹೂಡಿಕೆಗಳು, ಕರಕುಶಲ/ಕೌಶಲ್ಯಗಳಾದ ಬಡಿಗತನ, ಕಮ್ಮಾರಿಕೆ, ನೇಕಾರಿಕೆ, ಹೊಲಿಗೆ, ಹೆಣಿಗೆ ಇತ್ಯಾದಿ ಮುಂತಾದ ಉದ್ದೇಶಗಳಿಗೆ ಬಳಸಬಹುದಾಗಿದೆ. ಪುನರ್ವಸತಿಗಾಗಿ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಯೋಜನೆಗಳನ್ನು ಸಿದ್ಧಪಡಿಸಿ, ಅಗತ್ಯ ಮಂಜೂರಾತಿಗಾಗಿ ಅವುಗಳನ್ನು ಕಾರ್ಮಿಕ ಸಚಿವಾಲಯಕ್ಕೆ ಕಳುಹಿಸಿ ಕೊಡುತ್ತವೆ. ಕಾರ್ಮಿಕ ಕಲ್ಯಾಣ ಮಹಾ ನಿರ್ದೇಶಕರು ಅಧ್ಯಕ್ಷರಾಗಿರುವ ಮತ್ತು ಯೋಜನಾ ಆಯೋಗ, ಗೃಹ ಇಲಾಖೆ, ಐಆರ್‌ಡಿಪಿ ಮತ್ತು ಎನ್‌ಆರ್‌ಇಪಿ ಯೋಜನೆಗಳು ಹಾಗೂ ಆರ್ಥಿಕ ಇಲಾಖೆಗಳ ಪ್ರತಿನಿಧಿಗಳಿರುವ ಒಂದು ತಪಾಸಣೆ ಸಮಿತಿಯು ಈ ಯೋಜನೆಗಳನ್ನು ಪರಿಶೋಧಿಸುತ್ತದೆ ಮತ್ತು ಅವುಗಳಿಗೆ ಮಂಜೂರಾತಿಯನ್ನು ನೀಡುತ್ತದೆ. ರಾಜ್ಯ ಸರ್ಕಾರಗಳು ತಾವು ಮಾಡಿದ ವೆಚ್ಚದ ಪ್ರಗತಿ ವರದಿಗಳನ್ನು ಮಾಸಿಕ ಮತ್ತು ತ್ರೈಮಾಸಿಕ ಪ್ರಗತಿ ವರದಿಗಳ ಮೂಲಕ ಸಲ್ಲಿಸಬೇಕಾಗುತ್ತದೆ. ಅಲ್ಲದೆ ಪ್ರತಿ ತ್ರೈಮಾಸಿಕದಲ್ಲಿ ಆದ ಖರ್ಚುಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.

ಇದು ಕೇಂದ್ರ ಪುರಸ್ಕೃತ ಯೋಜನೆಯ ವೈಶಿಷ್ಟ್ಯ ಮತ್ತು ಅಂತ:ಸತ್ವ. ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿಗಾಗಿ ಸದರಿ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರಗಳು ಬಿಡುಗಡೆ ಮಾಡುವ ಮೊತ್ತವನ್ನು ಮಂಜೂರಾತಿ ಮಾಡುವ ಹಾಗೂ ವೆಚ್ಚ ಮಾಡುವ ಕ್ರಮದ ವೈಶಿಷ್ಟ್ಯ ಮತ್ತು ಅಂತ:ಸತ್ವ.ವೂ ಇದೇ. ಪುನರ್ವಸತಿಗಾಗಿ ಈಗ ಬಿಡುಗಡೆ ಮಾಡಲಾಗುತ್ತಿರುವ ಅನುದಾನದ ಮೊತ್ತದಲ್ಲಿ ಪುನರ್ವಸತಿ ಯೋಜನೆಯನ್ನು ಫಲಿತಾಂಶ ಬರುವ ರೀತಿಯಲ್ಲಿ ರೂಪಿಸಲು ಸಾಕಾಗುವುದಿಲ್ಲವೆಂದು ಮತ್ತು ಈಗಿನ ಗರಿಷ್ಠ ಮಿತಿಯನ್ನು ಹೆಚ್ಚಿಸಬೇಕೆಂದು ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ವಿನಂತಿಸಿಕೊಂಡಿವೆ. ಇದನ್ನು ಯೋಜನಾ ಆಯೋಗದ ಮಾಜಿ ಸದಸ್ಯರಾದ ಡಾ: ಎಂ.ಎಸ್.ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ಬಡತನ ನಿರ್ಮೂಲನೆಗಾಗಿ ಶಿಫಾರಸ್ಸು ನೀಡಲು ರಚನೆಯಾದ ಪರಿಣತರ ಕಾರ್ಯಗುಂಪು ಕೂಡ ಎತ್ತಿ ಹಿಡಿದಿದೆ. ಈ ಕಾರ್ಯಗುಂಪು ಪುನರ್ವವಸತಿ ಯೋಜನೆಗಳಿಗೆ ಒಂದು ಹೊಸ ಆಕೃತಿಯನ್ನು ಮತ್ತು ಆಯಾಮವನ್ನು ನೀಡುವ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿ 'ಯೋಜನೆ' ಶೀರ್ಷಿಕೆ ಅಡಿಯಲ್ಲಿರುವ ವಿಭಿನ್ನ ಯೋಜನೆಗಳ ಅನುದಾನವನ್ನು ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಒಗ್ಗೂಡಿಸಲು ಮತ್ತು ಸಮನ್ವಯಗೊಳಿಸಲು ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸನ್ನು ನಿರ್ದಿಷ್ಟವಾಗಿ ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರದ ವಿಭಿನ್ನ ಇಲಾಖೆಗಳು ರೂಪಿಸಿರುವ ಯೋಜನೆಗಳು ಮತ್ತು ರಾಜ್ಯ ಸರ್ಕಾರಗಳ ಮುಂದುವರಿಯುತ್ತಿರುವ ಯೋಜನೆಗಳು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ನಡುವೆ ಸಮನ್ವಯವನ್ನು ಸಾಧಿಸಲು ಅಗತ್ಯವಾದ ಮಾರ್ಗದರ್ಶಿ ಅಂಶಗಳನ್ನು ವಿವರವಾಗಿ ಮುಂದಿನ ಪ್ಯಾರಾಗಳಲ್ಲಿ ಮಂಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪುನರ್ವಸತಿಯ ವಿಭಿನ್ನ ಭಾಗಗಳು:

ಯಜಮಾನ-ಸೇವಕ ಎಂಬ ಹಳೆಯ ಸಂಪರ್ಕವು ಛಿದ್ರಗೊಂಡ ಹಿನ್ನೆಲೆಯಲ್ಲಿ ಜೀತದಾಳುವಿಗೆ ಪುನರ್ವಸತಿಯನ್ನು ಕಲ್ಪಿಸುವ ವಿಷಯದಲ್ಲಿ ಎರಡು ವಿಶಿಷ್ಟ ಭಾಗಗಳಿವೆ.

1. ಮಾನಸಿಕ ಪುನರ್ವಸತಿ
2. ಭೌತಿಕ ಮತ್ತು ಆರ್ಥಿಕ ಪುನರ್ವಸತಿ

ಇವೆರಡೂ ಭಾಗಗಳು ಸ್ವತಂತ್ರವಾಗಿರದೇ ಒಂದರೊಡನೊಂದು ಸಂಬಂಧವನ್ನು ಹೊಂದಿವೆ ಎಂಬುದನ್ನು ಗಮನಿಸಬೇಕು. ಭೌತಿಕ ಮತ್ತು ಆರ್ಥಿಕ ಪುನರ್ವಸತಿಯು ಮಾನಸಿಕ ಪುನರ್ವಸತಿಯನ್ನೂ ತರುವ ಸಾಧ್ಯತೆ ತುಂಬಾ ಇದೆ. ಅದೇ ಕಾಲಕ್ಕೆ, ವರ್ಷಾಂತರಗಳ ಕಾಲದ ಜೀತದಿಂದ ಹುಟ್ಟುವ ಮಾನಸಿಕ ಖಿನ್ನತೆಯು ವ್ಯಾಪಕವಾಗಿ ಹರಡಿರುವುದರಿಂದಾಗಿ ಮಾನಸಿಕ ಪುನರ್ವಸತಿಯನ್ನು ಕಲ್ಪಿಸದೇ ಭೌತಿಕ ಮತ್ತು ಆರ್ಥಿಕ ಪುನರ್ವಸತಿಯನ್ನು ಕಲ್ಪಿಸುವುದು ಸಾಧ್ಯವಾಗದೇ ಹೋದ ಪ್ರಕರಣಗಳೂ ಇರಬಹುದು. ಆದುದರಿಂದ ಪುನರ್ವಸತಿಗೆ ಸಂಬಂಧಿಸಿದ ಈ ಎರಡೂ ಭಾಗಗಳನ್ನು ಯಾವಾಗಲೂ ಒಟ್ಟಿಗೇ ಕೈಗೆತ್ತಿಕೊಳ್ಳಬೇಕು.

**ಮಾನಸಿಕ ಪುನರ್ವಸತಿ**

ಬೇರೆಯವರಿಗೆ ಅಧೀನನಾಗಿ ದಾಸ್ಯ ಜೀವನ ನಡೆಸುತ್ತಾ ಬಂದ, ತನ್ನ ಹಕ್ಕುಗಳ ಬಗ್ಗೆ ತಿಳುವಳಿಕೆ ಇಲ್ಲದ ಹಾಗೂ ಸಾಲವನ್ನೇ ಬಹುತೇಕವಾಗಿ ತನ್ನ ಅದೃಷ್ಟ ಎಂದು ತಿಳಿದುಕೊಂಡ ಜೀತದಾಳುವಿನ ಬಾಳಿನಲ್ಲಿ ಮಾನಸಿಕ ಪುನರ್ವಸತಿಗೆ ಅಪಾರ ಪ್ರಸ್ತುತತೆ ಇದೆ. ನೀನೊಬ್ಬ ಮನುಷ್ಯ; ನಿನ್ನ ಜೀವನ ನಿರ್ವಹಣೆಯನ್ನು ಆರ್ಥಿಕವಾಗಿ ಉತ್ತಮ ರೀತಿಯಲ್ಲಿ ನಡೆಸುವ ಮತ್ತು ಇನ್ನಿತರೆ ಮನುಷ್ಯರಂತೆ ನೀನೂ ಗೌರವಯುತವಾಗಿ ಜೀವನವನ್ನು ನಡೆಸುವ ಹಕ್ಕು ನಿನಗಿದೆ; ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಲಾಭಕೋರ ಲೇವಾದೇವಿಗಾರರ ಜಾಲದಲ್ಲಿ ಸಿಲುಕಬೇಕಿಲ್ಲ; ಬೇರೆ ಮಾರ್ಗಗಳನ್ನೂ ಅನುಸರಿಸುವ ಅವಕಾಶಗಳಿವೆ... ವೆಂಬುದನ್ನು ಅವನಿಗೆ ಮನಗಾಣಿಸಿ ಕೊಡುವ ಅವಶ್ಯಕತೆ ಇದೆ; ನಿನ್ನ ಬದುಕನ್ನು ನೀನು ರೂಪಿಸಿಕೊ; ನಿನ್ನ ಬದುಕನ್ನು ರೂಪಿಸಲು ಸಾಲಕ್ಕೆ ಅವಕಾಶ ಕೊಡಬೇಡ ಎಂಬುದನ್ನು ಅವನಿಗೆ ಮಾನಸಿಕವಾಗಿ ಮತ್ತೆ ಮತ್ತೆ ಮನಗಾಣಿಸಿಕೊಡದೆ ಹೋದರೆ, ಅವನು ಜೀತದಿಂದ ಬಿಡುಗಡೆಗೊಳಿಸಲ್ಪಟ್ಟ ಬಳಿಕವೂ ಮತ್ತೆ ಸಾಲದ ಜೀತದ ಜಾಲದಲ್ಲಿ ಸಿಲುಕುವ ಎಲ್ಲಾ ಸಾಧ್ಯತೆಗಳು ಇವೆ.

ಇದು ಅತ್ಯಂತ ಕಠಿಣವಾದ ಹಾಗೂ ಸೂಕ್ಷ್ಮವಾದ ಕೆಲಸ. ಇದನ್ನು ಅಪಾರ ಕಾಳಜಿ, ಎಚ್ಚರಿಕೆಗಳಿಂದ ಮಾಡಬೇಕು. ಜೀತದಾಳುಗಳ ಬಿಡುಗಡೆಗೆ ನೇರವಾಗಿ ಸಂಬಂಧಪಟ್ಟ ತಾಲೂಕು (ಬ್ಲಾಕ್) ಮತ್ತು ಗ್ರಾಮ ಮಟ್ಟದ ಅಧಿಕಾರಿಗಳು ಈ ವಿಷಯದಲ್ಲಿ ಗಮನಾರ್ಹ ಪಾತ್ರವನ್ನು ವಹಿಸಬೇಕಾಗಿದೆ. ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ 1976ರಲ್ಲಿಯ ಅಂಶಗಳನ್ನೂ ಜಾಗೃತಿ ಸಮಿತಿಗಳ ಪಾತ್ರವನ್ನೂ ಹಾಗೂ ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ, ಅನುಸೂಚಿತ ಜನಾಂಗಗಳ ಅಭಿವೃದ್ಧಿಗಾಗಿ ಆದಿವಾಸಿ ಉಪಯೋಜನೆ, ಅನುಸೂಚಿತ ಜಾತಿಗಳ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ ಮುಂತಾದ ಅವಶ್ಯಕತೆ ಆಧರಿಸಿದ ಮತ್ತು ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರವು ಜಾರಿಗೊಳಿಸಿರುವ ವಿವಿಧ ಕಾರ್ಯಕ್ರಮಗಳ

ಗಿರಿಜನ ಅಭಿವೃದ್ಧಿ ಕುರಿತ ಆರನೇ ಪಂಚವಾರ್ಷಿಕ ಯೋಜನೆಯ ಕಾರ್ಯ ಗುಂಪು ಮೇಲೆ ವಿವರಿಸಲ್ಪಟ್ಟ ನಿಗಮಗಳನ್ನು ನಡೆಸುವ ಕ್ರಮದಲ್ಲಿ ವಾಣಿಜ್ಯ ಅಂಶಗಳೊಂದಿಗೆ ಅಭಿವೃದ್ಧಿ ಅಂಶಗಳನ್ನೂ ಸೇರಿಸಬೇಕೆಂದು ಒತ್ತಿ ಹೇಳಿತ್ತು. ಮರ ಕಡಿಯುವುದು, ಮರ ಬೆಳೆಸುವುದು, ಲಘು ಅರಣ್ಯ ಉತ್ಪನ್ನಗಳ ಸಂಸ್ಕರಣೆ ಮಾಡುವುದು ಮುಂತಾದ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಗುವಂತೆ ಗಿರಿಜನರಿಗೆ ತರಬೇತಿ ನೀಡಬೇಕೆಂದೂ ಅದು ಒತ್ತಿ ಹೇಳಿದೆ. ಇದನ್ನು ಸಾಧಿಸಬೇಕಾದರೆ ಅರಣ್ಯ ಮಧ್ಯವರ್ತಿಗಳನ್ನು ನಿಲ್ಲಿಸಿ ಅರಣ್ಯ ಅಧಿಕಾರಿಗಳಿಗೂ ಗಿರಿಜನಗಳಿಗೂ ನೇರ ಸಂಪರ್ಕವೇರ್ಪಡಿಸಬೇಕೆಂದು ಗುಂಪು ಪ್ರಬಲವಾಗಿ ನಂಬುತ್ತದೆ. ಗುಜರಾತಿನ ವಲ್ಸದ್ ಜಿಲ್ಲೆ ಮತ್ತು ಆಂಧ್ರ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಸಾಮುದಾಯಿಕ ಅರಣ್ಯಗಳನ್ನು ಬೆಳೆಸುವುದರ ಬಗ್ಗೆ ನಡೆಸಲಾಗುತ್ತಿರುವ ಪ್ರಯೋಗಗಳನ್ನು ಇತರೆ ರಾಜ್ಯಗಳು ಎತ್ತಿಕೊಳ್ಳಬೇಕೆಂಬ ಸಲಹೆಯನ್ನು ಸಕಾರಣವಾಗಿ ಸಮ್ಮತಿಸುತ್ತದೆ. ಅದಕ್ಕೋಸ್ಕರ ವ್ಯವಸಾಯಿಕ ಮರುಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮದ ಮುಖಾಂತರ ಹಣಸಹಾಯವನ್ನು ಪಡೆಯಬಹುದೆಂದು ಗುಂಪು ಸಲಹೆ ನೀಡಿದೆ. ಉತ್ತರ ಪ್ರದೇಶದ ಕ್ಷೇತ್ರವೊಂದಕ್ಕೆ ಭೇಟಿ ಕೊಟ್ಟಾಗ ಈ ವಿಷಯ ಗಮನಕ್ಕೆ ಬಂದಿದೆ. ಭಾರತೀಯ ಅರಣ್ಯ ಅಧಿನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಾಗ ಬಿಡುಗಡೆ ಹೊಂದಿದ ಜೀತದಾಳುಗಳ ಗುಂಪಿಗೆ ಸೇರಿದ ಹಿಲೊಲ್ ಆದಿವಾಸಿಗಳು ಲಘು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಬಗ್ಗೆ ಇಷ್ಟರವರೆಗೆ ಅನುಭವಿಸುತ್ತಿದ್ದ ಕೆಲವು ಸಾಂಪ್ರದಾಯಿಕ ಹಕ್ಕುಗಳು ಗಣನೀಯವಾಗಿ ಸೀಮಿತಗೊಂಡವು. ಅದರ ಜೊತೆ ಆ ಉತ್ಪನ್ನಗಳನ್ನು ಸ್ಥಳೀಯವಾಗಿ ಸಂಸ್ಕರಿಸಲೂ ಕಡಿಮೆ ಅವಕಾಶಗಳು ಉಳಿದವು. ಆದ್ದರಿಂದ ಶಿಫಾರಸು ಮಾಡುವುದೇನೆಂದರೆ ಅರಣ್ಯಗಳನ್ನು ಕಾಪಾಡುವ ಮತ್ತು ಪರಿಸರ ಸಮತೋಲನವನ್ನು ರಕ್ಷಿಸುವ ಅವಶ್ಯಕತೆಗೆ ಸರಿದೂಗುವಂತೆ ಕಚ್ಚಾವಸ್ತುಗಳನ್ನು ಸರಿ ಪ್ರಮಾಣದಲ್ಲಿ ಒದಗಿಸಲು ಯೋಜನೆ ಹಾಕಬೇಕು. ಆ ಕಚ್ಚಾವಸ್ತುಗಳನ್ನು ಅನುಸೂಚಿತ ಪಂಗಡಗಳಲ್ಲಿ 1) ಸದ್ಯಕ್ಕೆ ಚಾಲ್ತಿಯಲ್ಲಿರುವ ಕಸುಬುಗಳಿಗೆ 2) ಚಾಲ್ತಿಯಲ್ಲಿರುವ ಕಸುಬುಗಳನ್ನು ವಿಸ್ತರಿಸಲು 3) ಹೊಸ ವೃತ್ತಿಗಳನ್ನು ಎತ್ತಿಕೊಳ್ಳಲಿಕ್ಕೆ ಒದಗಿಸಬೇಕು; ಮತ್ತು 4) ಕಚ್ಚಾವಸ್ತುಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಾಗದಿದ್ದಲ್ಲಿ ಅನುಸೂಚಿತ ಪಂಗಡದವರ ಪೂರ್ತಿ ಅವಶ್ಯಕತೆಯನ್ನು ಗಮನದಲ್ಲಿಟ್ಟು ಕಚ್ಚಾವಸ್ತುಗಳನ್ನು ಪೂರೈಸಲು ಸೂಕ್ತ ಜಾತಿಯ ಮರಗಿಡಗಳನ್ನು ಬೆಳೆಸುವ ಯೋಜನೆ ಹಾಕಬೇಕು. ಅಂದರೆ ಈ ಪ್ರದೇಶಗಳಲ್ಲಿ ಬೇರೆಬೇರೆ ಜಾತಿಯ ಮರಗಳನ್ನು ಬೆಳೆಸಲು ಯೋಜಿಸುವಾಗ ಅವುಗಳ ಮೇಲೆ ಅವಲಂಬಿತವಾಗಿರುವ ಜನರ ಅವಶ್ಯಕತೆ ಮತ್ತು ಬೇಡಿಕೆಗಳಿಗೆ ಅವು ಸರಿಹೊಂದುವಂತಿರಬೇಕು

**12. ಆರೋಗ್ಯ, ಆರೋಗ್ಯ ತಪಾಸಣೆ ಮತ್ತು ನೈರ್ಮಲ್ಯ:**

ದೀರ್ಘ ವರ್ಷಗಳ ಜೀತಬಂಧನದಿಂದ ಜೀತದಾಳುಗಳು ಮತ್ತವರ ಕುಟುಂಬಗಳು ತೀವ್ರ ಪ್ರಮಾಣದ ಅಪೌಷ್ಟಿಕತೆಯಿಂದ ನರಳಿ ಅದರಿಂದ ತಮ್ಮ ಆರೋಗ್ಯ ಹಾಗೂ ಹುರುಪನ್ನು ಕಳಕೊಂಡಿದ್ದಾರೆ. ಆದ್ದರಿಂದ ಅವರ ಆರೋಗ್ಯಕ್ಕೆ ವಿಶೇಷ ಗಮನ ಕೊಡಬೇಕು. ಜೀತ ಬಂಧನದಿಂದ ಬಿಡುಗಡೆಗೊಳಿಸಿದ ತಕ್ಷಣ ಅವರ ಆರೋಗ್ಯ ತಪಾಸಣೆ ಮಾಡಬೇಕು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಜೀತದಾಳುಗಳು ಪುನರ್ವಸತಿಗೊಂಡ ಊರುಗಳಲ್ಲಿ ನಿಯತಕಾಲಿಕವಾಗಿ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ಅಂತಹ ತಪಾಸಣೆಗಳಿಗೆ ವ್ಯವಸ್ಥೆ ಮಾಡಬೇಕು ಹಾಗೂ ತಪಾಸಣೆಗೋಸ್ಕರ ಜೀತದಾಳುಗಳ ಕುಟುಂಬಗಳಿಗೆ ನಿಯತಕಾಲಿಕವಾಗಿ ಭೇಟಿಕೊಡಬೇಕು. ಸಾಮಾನ್ಯ ಅಥವಾ ನಿರ್ದಿಷ್ಟ ಕಾಯಿಲೆಗಳು ಹೆಚ್ಚಾಗಿ ಇವೆ ಎಂದು ಗೊತ್ತಾದ ಜೀತದಾಳುಗಳ ಕುಟುಂಬಗಳಿರುವ ಕೊಪ್ಪಲುಗಳ ಬಗ್ಗೆ ವಿಶೇಷ ಆರೋಗ್ಯ ಸಮೀಕ್ಷೆಗಳನ್ನು ಕೈಗೊಳ್ಳಬೇಕು. ಅದೇ ರೀತಿಯ ಮತ್ತು ಅಷ್ಟೇ ಪ್ರಾಮುಖ್ಯತೆಯ ಗಮನವನ್ನು ಕಾಯಿಲೆ ತಡೆಗಟ್ಟುವ ಕ್ರಮಗಳ ಬಗ್ಗೆ, ನೈರ್ಮಲ್ಯ ಮತ್ತು ಆರೋಗ್ಯ ಸೂತ್ರಗಳ ಬಗ್ಗೆ ಹಾಗೂ ಚಿಕಿತ್ಸೆಯ ಬಗ್ಗೆಯೂ ಹರಿಸಬೇಕು.

ಶುದ್ಧ ಕುಡಿಯುವ ನೀರಿನ ಪೂರೈಕೆಯು ಆರೋಗ್ಯ ಕಾಪಾಡುವಲ್ಲಿ ಮೂಲಭೂತ ಅವಶ್ಯಕತೆಯಾಗಿದ್ದರಿಂದ ಆರನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಬಿಡುಗಡೆಯಾದ ಜೀತದಾಳುಗಳನ್ನು ಪುನರ್ವಸತಿಗೊಳಿಸಲ್ಪಟ್ಟ ಪ್ರತಿ ಬಸ್ತಿಯಲ್ಲಿ ಕುಡಿಯುವ ನೀರಿನ ಬಾವಿಯು ಇರುವಂತೆ ನೋಡಿಕೊಳ್ಳಬೇಕು. ಇದಕ್ಕೋಸ್ಕರ ಬೇಕಾದ ಹಣವನ್ನು ಮುಂದೆ ಸೂಚಿಸಿದ ಮೂಲಗಳಿಂದ ಪಡೆಯಬಹುದು: 1) ನೀರಿನ ಸಮಸ್ಯೆ ಇರುವ ಊರುಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ಬರುವ ಸಮ ಪ್ರಮಾಣದ ಧನಸಹಾಯದೊಂದಿಗೆ ರಾಜ್ಯದ ಯೋಜನೆಗಳಲ್ಲಿ ನಿರ್ದಿಷ್ಟವಾಗಿ ಬದಿಗಿಟ್ಟ ಹಣದಿಂದ ಅನುಸೂಚಿತ ಪಂಗಡದ ಜನರಿಲ್ಲದ ಊರುಗಳಾದ ಅನುಸೂಚಿತ ಜಾತಿ ಜನರ ಬಸ್ತಿಗಳಲ್ಲಿ ನೀರಿನ ಮೂಲಗಳನ್ನು ಒದಗಿಸಬೇಕು. ಎಲ್ಲಾ ಎಸ್.ಸಿ./ಎಸ್.ಟಿ. ಹಳ್ಳಿಗಳು/ಕೊಪ್ಪಲುಗಳಿಗೆ ಕುಡಿಯುವ ನೀರಿನ ಬಾವಿ ಒದಗಿಸಬೇಕು. ಈ ರೀತಿ ಅಂತಹ ಎಲ್ಲಾ ತರಹದ ಊರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. 2) ಸಮಸ್ಯೆ ಇಲ್ಲದ ಊರುಗಳಿಗೆ ಸಂಬಂಧಿಸಿದಂತೆ ಅನುಸೂಚಿತ ಜಾತಿ ಹಳ್ಳಿಗಳಲ್ಲಿ ಮತ್ತು ಬಸ್ತಿಗಳಲ್ಲಿ ಹಾಗೂ ಗಿರಿಜನ ಹಳ್ಳಿಗಳಲ್ಲಿ ಮತ್ತು ಕೊಪ್ಪಲುಗಳಲ್ಲಿ ಕುಡಿಯುವ ನೀರಿನ ಮೂಲಗಳನ್ನು ಒದಗಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳ ಮಾರ್ಗದರ್ಶನಗಳಡಿ ಅವಕಾಶವಿದೆ. ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು.

**13. ಅತ್ಯವಶ್ಯಕ ದಿನಸಿಗಳ ಪೂರೈಕೆ:**

ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ ಇತ್ಯಾದಿ ಅತ್ಯವಶ್ಯಕ ದಿನಸಿಗಳನ್ನು ನಿಯಂತ್ರಿತ ಬೆಲೆಗಳಲ್ಲಿ ಪೂರೈಸಲು, ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳನ್ನು ಪುನರ್ವತಿಗೊಳಿಸಲಾದ ಕೊಪ್ಪಲುಗಳು ಅಥವಾ ಅವುಗಳ ನೆರೆಹೊರೆಯಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಜಿಲ್ಲಾ/ತಾಲೂಕು (ಕ್ಷೇತ್ರ) ಮಟ್ಟದ ಅಧಿಕಾರಿಗಳು ವ್ಯವಸ್ಥೆ ಮಾಡುವುದು ಅತ್ಯವಶ್ಯಕ. ಇದು ಎರಡು ಕಾರಣಗಳಿಂದ ಮುಖ್ಯವಾಗಿದೆ: 1) ಪಡಿತರವನ್ನು ಕಡಿಮೆ ಬೆಲೆಗೆ ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳಿಗೆ ಪೂರೈಸುವುದರ ಮೂಲಕ ಅವರ ದಿನಸಿತ್ಯದ ಕಡಿಮೆ ಗಳಿಕೆಗೆ ಪರಿಹಾರ ಕೊಡುವ ಅಗತ್ಯವಿದೆ. 2) ದಿನಗೂಲಿಯಲ್ಲಿ ಅಥವಾ ಲಘು ಅರಣ್ಯ ಉತ್ಪನ್ನಗಳನ್ನು ಒಟ್ಟು ಮಾಡುವುದರಲ್ಲಿ ಅಥವಾ ಅದೇ ತರಹದ ಇನ್ನಿತರೆ ಕೆಲಸಗಳಲ್ಲಿ ಅವನು ದಿನಪೂರ್ತಿ ತೊಡಗಿಸಿಕೊಳ್ಳುವುದರಿಂದ ನ್ಯಾಯ ಬೆಲೆ ಅಂಗಡಿಯು ಅವನಿಗೆ ಹತ್ತಿರದಲ್ಲಿ ಲಭ್ಯವಾಗುವಂತಿದ್ದು

ಪಡಿತರವನ್ನು ಕೊಂಡುಕೊಳ್ಳಲು ದೂರ ಪ್ರಯಾಣಿಸಬೇಕಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದಾದರೆ ಆ ಅಂಗಡಿಗಳಲ್ಲಿಯ ವ್ಯಾಪಾರವನ್ನು ಅಂತಹ ಕುಟುಂಬಗಳಲ್ಲಿ ಅದಕ್ಕೋಸ್ಕರ ಬೇಕಾಗಿರುವ ಕನಿಷ್ಟ ಶಿಕ್ಷಣದ ಅರ್ಹತೆ ಇರುವ ಒಬ್ಬ ಸದಸ್ಯನಿಗೆ ಕೊಡುವುದರಿಂದ ಅವರಿಗೆ ದೊಡ್ಡ ಸಹಾಯ ಮಾಡಿದ ಹಾಗಾಗುತ್ತದೆ. ಜೀತದಾಳುಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಸಮುದಾಯಕ್ಕೆ ಸೇರಿರುವುದರಿಂದ ನ್ಯಾಯ ಬೆಲೆ ಅಂಗಡಿಗಳ ಸ್ಥಳವನ್ನು ಗುರುತಿಸುವಾಗ ಮುಂದೆ ಸೂಚಿಸಿದ ಕ್ರಮಗಳನ್ನು ತೆಗೆದುಕೊಳ್ಳಬೇಕು: 1) ಗಿರಿಜನರಿಲ್ಲದ ಊರುಗಳಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ಅನುಸೂಚಿತ ಬಸ್ತಿ/ಊರುಗಳಲ್ಲಿ ತೆರೆಯಬೇಕು. 2) ಗಿರಿಜನರ ಪ್ರದೇಶಗಳಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ಅವರ ಊರುಗಳಿರುವ ಕೇಂದ್ರ ಸ್ಥಳಗಳಲ್ಲಿ ಅವಶ್ಯಕತೆ ಇದ್ದಷ್ಟು ಪ್ರಮಾಣದಲ್ಲಿ ತೆರೆದು ಎಲ್ಲಾ ಗಿರಿಜನರ ಊರು/ಕೊಪ್ಪಲುಗಳಿಗೆ ಅವು ಕಡಿಮೆ ದೂರದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಬೇಕು.

**14. ಬಿಡುಗಡೆಗೊಳಿಸಿಲ್ಪಟ್ಟ ಜೀತದಾಳುಗಳ ಮಕ್ಕಳ ಶಿಕ್ಷಣ:**

ಹಿಂದಿನ ಯೋಜನಾ ಆಯೋಗದ ಸದಸ್ಯರಾಗಿದ್ದ ಡಾ:ಎಮ್.ಎಸ್.ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿದ್ದ ಪರಿಣಿತರ ಗುಂಪು ಬಡತನ ನಿರ್ಮೂಲನೆಗೆ ಮಹತ್ವದ ಕೆಲವು ನಿರ್ದಿಷ್ಟ ಶಿಫಾರಸ್ಸುಗಳನ್ನು ಸೂಚಿಸಿದೆ. ಅವುಗಳಲ್ಲಿ ಬಿಡುಗಡೆಗೊಂಡ ಜೀತದಾಳುಗಳನ್ನು ಪುನರ್ವಸತಿಗೊಳಿಸಲಾದ ಕೊಪ್ಪಲುಗಳಲ್ಲಿ ಅವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದೊರಕುವಂತಾಗಲು ಬಾಲವಾಡಿಗಳನ್ನು ತೆರೆಯಬೇಕು ಎಂಬುದು ಒಂದು. ಇದನ್ನು ಎಲ್ಲಾ ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸಬೇಕು. ಜೊತೆಗೆ ಹೆಚ್ಚಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿರುವ ಜೀತದಾಳುಗಳ ಕುಟುಂಬಗಳ ಸದಸ್ಯರಲ್ಲಿ ದೊಡ್ಡ ಪ್ರಮಾಣದಲ್ಲಿ ಅನಕ್ಷರತೆ ಇರುವುದರಿಂದ ರಾಜ್ಯ ಸರ್ಕಾರಗಳು ಸಾಕ್ಷರತೆಯನ್ನು ಉತ್ತೇಜಿಸುವ ಸಲುವಾಗಿ ವಿಶಿಷ್ಟ ಕಾರ್ಯಕ್ರಮವೊಂದನ್ನು ಎತ್ತಿಕೊಳ್ಳಬೇಕು. ಬಿಡುಗಡೆಗೊಳಿಸಿದ ಜೀತದಾಳುಗಳು ದಿನ ಪೂರ್ತಿ ಆರ್ಥಿಕ ಜೀವನಾಧಾರಗಳ ಮಾರ್ಗಗಳನ್ನು ನೋಡಿಕೊಳ್ಳಬೇಕಾಗಿರುವುದರಿಂದ ಸಾಕ್ಷರತಾ ತರಗತಿಗಳನ್ನು ರಾತ್ರಿ ಹೊತ್ತು ಮಾತ್ರ ನಡೆಸಬೇಕು. ವಯಸ್ಕ ಸಾಕ್ಷರತೆಯ ಕಾರ್ಯಕ್ರಮವನ್ನು ಆಯೋಜಿಸುವಾಗ ವಿಧಿರಹಿತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು. ಪಠ್ಯಕ್ರಮ ಮತ್ತು ಓದುವ ಸಾಮಗ್ರಿಯನ್ನು ಜೀತದಾಳುಗಳ ಪರಿಸ್ಥಿತಿ ಬಗೆಗಿನ ಸೂಕ್ಷ್ಮತೆಯಿಂದ ಮತ್ತು ಗ್ರಹಿಕೆಯಿಂದ ತಯಾರಿಸಬೇಕು ಮತ್ತು ವಿಧಿ ರಹಿತ ಶಿಕ್ಷಣದಲ್ಲಿ ಭಾಗವಹಿಸಲಿರುವ ಜೀತದಾಳುಗಳ ಕುಟುಂಬಗಳ ಸಂಸ್ಕೃತಿ, ಮನೋಭಾವ ಮತ್ತು ಕಲಿಯುವ ಸಾಮರ್ಥ್ಯಗಳ ಬಗ್ಗೆ ಸೂಕ್ತ ಗಮನ ಕೊಡಬೇಕು.

ಆರನೇ ಪಂಚವಾರ್ಷಿಕ ಯೋಜನೆಯ ಸಮಯ(1980–85)ದಲ್ಲಿದ್ದ ಅನುಸೂಚಿತ ಜಾತಿಗಳ ಅಭಿವೃದ್ಧಿ ಕುರಿತ ಕಾರ್ಯ ಗುಂಪು ಯಾವುದೇ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಫಲಾನುಭವಿಗಳಾಗಿ ಭಾಗವಹಿಸುವವರಿಗೆ ನೀಡುವ ಶಿಕ್ಷಣ ಮತ್ತು ತರಬೇತಿಯಲ್ಲಿರಬೇಕಾದ ವಿಷಯಗಳ ಬಗ್ಗೆ ಕೆಲವು ನಿರ್ದಿಷ್ಟ ಹಾಗೂ ಉಪಯೋಗಕಾರಿ ಶಿಫಾರಸ್ಸುಗಳನ್ನು ಮಾಡಿದೆ. ಅವು ಯಾವುವೆಂದರೆ:

1) ಮಾರುಕಟ್ಟೆಯಲ್ಲಿ ತೊಡಗಬಹುದಾದ ಸ್ವ ಉದ್ಯೋಗಗಳು, ಅವುಗಳು ಲಾಭದಾಯಕವಾದುವು ಮತ್ತು ಚೆನ್ನಾಗಿ ನಡೆಯುತ್ತಿವೆ ಎಂದು ತೋರಿಸುವ ಮಾನದಂಡಗಳು, ಅವು ಲಾಭದಾಯಕವಾಗದಂತೆ ಮತ್ತು ಚೆನ್ನಾಗಿ ನಡೆಯದಂತೆ ಮಾಡುವ ವಿರೋಧ ಶಕ್ತಿಗಳು ಮತ್ತು ಆ ವಿರೋಧ ಶಕ್ತಿಗಳನ್ನು ತಡೆಗಟ್ಟಲು ಇರುವ ಮತ್ತು ಪರಿಹಾರಾತ್ಮಕವಾದ ಕ್ರಮಗಳು;

2) ಅವರಿಗೆ ಪ್ರಯೋಜಕಾರಿಯಾಗುವ ಕಾರ್ಯಕ್ರಮಗಳನ್ನು ಅವರಿಗೆ ತಲುಪುವಂತೆ ನೋಡಿಕೊಳ್ಳುವ ಜವಾಬ್ದಾರಿ ಇರುವ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳು, ಅವುಗಳ ವಿಧಿ ವಿಧಾನಗಳು, ಅವುಗಳ ಬೇರೆ ಬೇರೆ ಮಟ್ಟದ ಅಧಿಕಾರಿಗಳ ವಿಳಾಸಗಳು ಇತ್ಯಾದಿಗಳ ಬಗ್ಗೆ ಮಾಹಿತಿ;

3) ಅವರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಪ್ರಮುಖ ವಿಚಾರಗಳು ಮತ್ತು ಆ ಕಾರ್ಯಕ್ರಮಗಳು/ಯೋಜನೆಗಳು ಫಲಕಾರಿಯಾಗುವ ರೀತಿಯಲ್ಲಿ ಅನುಷ್ಠಾನಗೊಳಿಸಬೇಕಾದರೆ ಅವರು ಗಮನ ಹರಿಸಬೇಕಾದ ಅತ್ಯವಶ್ಯಕವಾಗಿರುವ ತಿರುಳು ಸಂಗತಿಗಳು;

4) ಬೇರೆಬೇರೆ ಕಾನೂನಿನಲ್ಲಿ ನಮೂದಿಸಿರುವ ಅವರ ಹಕ್ಕುಗಳನ್ನು ತಿಳಿದುಕೊಳ್ಳುವುದು ಮತ್ತು ಅವನ್ನು ಹೇಗೆ ಪಡೆಯುವುದು ಎಂದು ಅರ್ಥೈಸುವುದು. ಅವು ಯಾವುವೆಂದರೆ: ಭೂಸುಧಾರಣೆ ಕಾಯ್ದೆ, ಕನಿಷ್ಟ ವೇತನ ಕಾಯ್ದೆ, ನಾಗರಿಕ ಹಕ್ಕುಗಳ ರಕ್ಷಣೆಯ ಕಾಯ್ದೆ, ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ; ಮತ್ತು

5) ಮೇಲಿನ ವಿಚಾರಗಳ ಕುರಿತಾದ ಸಂಸ್ಥೆಗಳು ಮತ್ತು ಅವರಿಗೆ ರಕ್ಷಣೆ ಕೊಡಬಹುದಾದ ಕಾನೂನು ಮತ್ತು ಸುವ್ಯವಸ್ಥೆ ಪಾಲನೆಯ ಸಂಸ್ಥೆಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು (ಕಾರ್ಯ ಗುಂಪಿನ ವರದಿ ಪುಟ 88, ಪ್ಯಾರಾ 11–12 ನೋಡಿ).

ಮೊದಲೇ ಹೇಳಿದ ಹಾಗೆ, ಭೂರಹಿತ ಕೃಷಿ ಕಾರ್ಮಿಕರ ಸಮುದಾಯದಲ್ಲಿ ಜೀತದಾಳುಗಳು ತೀರ ಬಡತನ ಮತ್ತು ಹಿಂದುಳಿದಿರುವಿಕೆಯ ಪ್ರತೀಕವಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಡಿಮೆ ದಿವಸಗಳಿಗೆ ಮತ್ತು ಕಡಿಮೆ ಕೂಲಿಗೆ ಉದ್ಯೋಗಗಳು ಸಿಗುತ್ತಿರುವಾಗ ಜೀವನ ನಡೆಸಲು ಕೇವಲ ಕನಿಷ್ಟ ಮಟ್ಟದ ಆದಾಯ ಸಿಗಲು ಬಿಡುಗಡೆ ಹೊಂದಿದ ಜೀತದಾಳುಗಳು ತಮ್ಮ ಮಕ್ಕಳ ಸೇವೆಯನ್ನು ದನಕರು, ಮೇಕೆ, ಕುರಿ ಮುಂತಾದುವನ್ನು ಮೇಯಿಸುವಂತಹ ಕೆಲಸಗಳಲ್ಲಿ ತೊಡಗಿಸುವುದು ಅಸಾಮಾನ್ಯವಲ್ಲ. ಈ ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಶಕ್ತರು ಎಂದು ಬಯಸುವುದು ಅವಾಸ್ತವ. ಬಿಡುಗಡೆ ಹೊಂದಿದ ಜೀತದಾಳುಗಳ ಕುಟುಂಬಗಳ ಮಕ್ಕಳ ಶಿಕ್ಷಣಾಭಿವೃದ್ಧಿಗೆ ಇದು ದೊಡ್ಡ ಅಡ್ಡಿಯಾಗಿ ಇರುವುದರಿಂದ ಅವರ ವಿಧಿ ಯುಕ್ತ ಅಥವಾ ವಿಧಿ ರಹಿತ ಶಿಕ್ಷಣಕ್ಕೆ ಯಾವುದೇ ಕಾರ್ಯಕ್ರಮವನ್ನು ಯೋಜಿಸುವಾಗ ಅದರ ಬೆಂಬಲವಾಗಿ ಇಡೀ ವರ್ಷ ಕೂಲಿಗೆ ಉದ್ಯೋಗ ಸಿಗುವ ರೀತಿಯಲ್ಲಿ ಲೋಕೋಪಯೋಗಿ ಕೆಲಸಗಳನ್ನು

ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತರಬೇಕು ಮತ್ತು ಅದಕ್ಕೆ ಪೂರಕವಾಗಿ ಬೇರೆ ಕೂಲಿ ಸಿಗುವ ವೃತ್ತಿಗಳಿಗೆ ಮಾರ್ಗಗಳನ್ನು ತೋರಿಸಬೇಕು. ಈ ವಿಷಯವನ್ನು ಆರನೇ ಯೋಜನೆಯ ದಸ್ತಾವೇಜಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಳ್ಳಲಾಗಿದೆ (ಪುಟ 355 ನೋಡಿ).

**15. ನಾಗರಿಕ ಹಕ್ಕುಗಳ ರಕ್ಷಣೆ**

ಜೀತದಾಳುಗಳ ಪುನರ್ವಸತಿಗೆ ಮೇಲೆ ವಿವರಿಸಿದ ಸಮಗ್ರವಾಗಿರದೆ ದೃಷ್ಟಾಂತ ರೂಪ ಮಾತ್ರವಾಗಿರುವ ಎಲ್ಲಾ ಕ್ರಮ ಗಳನ್ನು ಕೈಗೊಂಡಿದ್ದಾಗ್ಯೂ ಅವರನ್ನು ಹಿಂದೆ ಜೀತ ಬಂಧನದಲ್ಲಿಟ್ಟಿದ್ದ ಮತ್ತು ಈಗಲೂ ಹಳ್ಳಿ ಜೀವನದ ಮೇಲೆ ಅಧಿಕಾರ ಚಲಾಯಿಸುವ ಹಳ್ಳಿ ಸಮುದಾಯದಲ್ಲಿರುವ ಬಲಿಷ್ಟ ಹಾಗೂ ಪ್ರಭಾವಶಾಲಿ ಗುಂಪುಗಳಿಂದ ಅವರ ಮೇಲೆ ಎಸಗಲ್ಪಡಬಹುದಾದ ದೌರ್ಜನ್ಯಗಳಿಂದ ಅವರನ್ನು ರಕ್ಷಿಸುವ ಅವಶ್ಯಕತೆ ಇದೆ. ಜೀತ ಪದ್ಧತಿ ಅಸ್ತಿತ್ವದಲ್ಲಿರಲು ಜಾತಿ ಮತ್ತು ಊಳಿಗಮಾನ್ಯ ಶಕ್ತಿಗಳು ಕೆಲಸ ಮಾಡುವುದರಿಂದ ಜೀತ ಪದ್ಧತಿಯನ್ನು ಕಾನೂನಿನ ಮೂಲಕ ರದ್ದುಗೊಳಿಸಿದ ಮೇಲೂ ಈ ಗುಂಪುಗಳು ಅವರ ಬಗ್ಗೆ ಕರುಬಬಹುದು ಮತ್ತು ಜೀತದಾಳುಗಳು ಹಲವಾರು ಪೀಳಿಗೆಗಳಿಂದ ಅನುಭವಿಸಿ ಬಂದ ಸಾಮಾಜಿಕ ಹಾಗೂ ನಾಗರಿಕ ನಿರ್ಬಂಧಗಳನ್ನು ಅವರ ಮೇಲೆ ಈಗಲೂ ಹೇರಲು ಈ ಗುಂಪುಗಳು ಹಿಂಜರಿಯದಿರಬಹುದು. ಅವರ ಆರ್ಥಿಕ ಅಸಹಾಯಕತೆ ಒಂದು ಕಡೆ ಮತ್ತು ಅವರ ಮೇಲೆ ಎಸಗಲಾಗುವ ಅಪರಾಧಗಳು ಹಾಗೂ ದೌರ್ಜನ್ಯಗಳು ಮತ್ತು ಅವರ ಮೇಲೆ ಹೇರುವ ಸಾಮಾಜಿಕ ಹಾಗೂ ನಾಗರಿಕ ನಿರ್ಬಂಧಗಳು ಇನ್ನೊಂದು ಕಡೆ

ಇವುಗಳ ಮಧ್ಯೆ ಇರುವ ಸಂಬಂಧವನ್ನು ಬಹಳ ಸ್ಪಷ್ಟವಾಗಿ ಈಗಾಗಲೇ ಸ್ಥಾಪಿಸಲಾಗಿದೆ ಮತ್ತು ಭಾರತ ಸರ್ಕಾರವು ಅಂತಹ ಶಕ್ತಿಗಳನ್ನು ತಡೆಗಟ್ಟಲು ಮತ್ತು ಅವುಗಳ ಬಗ್ಗೆ ಎಚ್ಚರಿಕೆ ವಹಿಸಲು ಏನೆಲ್ಲ ದೃಢ ಕ್ರಮಗಳನ್ನು ಕೈಗೊಳ್ಳ ಬೇಕೆಂದು ಎಲ್ಲಾ ರಾಜ್ಯಗಳಿಗೆ ಸೂಚಿಸಿದೆ. ಗೃಹ ಮಂತ್ರಿಗಳ ಅ.ಸ.ಪತ್ರ ಸಂ.III-11011/4/80 ಎನ್‌ಐಡಿ(ಡಿ) ದಿನಾಂಕ: 10-3-1980 ನೋಡಿ – ಆ ಪತ್ರಕ್ಕೆ ಸೇರಿಸಿದ ಅನುಬಂಧದಲ್ಲಿ ಕೈಗೊಳ್ಳಬಹುದಾದ ಎಲ್ಲಾ ಕ್ರಮಗಳ ಬಗ್ಗೆ ವಿವರವಾದ ಪಟ್ಟಿ ಇದೆ. ಆ ಪತ್ರದ ನಂತರ ಪ್ರಧಾನ ಮಂತ್ರಿಗಳು ದಿನಾಂಕ 12-3-1980 ರಂದು ಪತ್ರವನ್ನು ಕಳುಹಿಸಿದರು ಅ.ಸ. ಪತ್ರ ಸಂ.280-ಪಿ.ಎಮ್.ಒ./80 ನೋಡಿ. ಅವುಗಳಲ್ಲಿರುವ ಎರಡು ಬಹು ಮುಖ್ಯ ಕ್ರಮಗಳೇನೆಂದರೆ: 1) ಯಾವುದೇ ತಕರಾರು ಹಾಗೂ ಅಡೆತಡೆ ಇದ್ದರೂ ಅನುಸೂಚಿತ ಜಾತಿಗಳು ಅವರಿಗೆ ಸೇರಿದ ಅಥವಾ ಅವರಿಗೆ ಹಂಚಿದ ಭೂಮಿ ಗಳನ್ನು ಅವರು ಪರಿಣಾಮಕಾರಿಯಾಗಿ ತಮ್ಮ ವಶದಲ್ಲಿಟ್ಟುಕೊಳ್ಳುವಂತೆ ನೋಡಿಕೊಳ್ಳಬೇಕು ಮತ್ತು ಅವನ್ನು ಅವರು ವ್ಯವಸಾಯ ಮಾಡುವಂತೆ ಅವರನ್ನು ಸಬಲರನ್ನಾಗಿಸಬೇಕು 2) ಕೃಷಿ ಕಾರ್ಮಿಕರಿಗೆ ಕಾನೂನಿನಲ್ಲಿ ನಿಗದಿಪಡಿಸಿದ ಕನಿಷ್ಟ ವೇತನಕ್ಕಿಂತ ಕಡಿಮೆಯಲ್ಲದ ರೀತಿಯಲ್ಲಿ ಕೂಲಿ ಸಿಗುವಂತೆ ನೋಡಿಕೊಳ್ಳಬೇಕು ಮತ್ತು ಅವರಿಗೆ ಅನುಕೂಲಕರವಾಗುವ ಕೂಲಿಗಳು ಸಿಗುವಂತೆ ಅವರ ಚೌಕಾಶಿ ಶಕ್ತಿಯನ್ನು ಗಟ್ಟಿಗೊಳಿಸಲು ಅವರಿಗೆ ವರ್ಷಪೂರ್ತಿ ಪರ್ಯಾಯ ಮತ್ತು ಹೆಚ್ಚುವರಿ ಉದ್ಯೋಗ ಅವಕಾಶಗಳು ಸಿಗುವಂತೆ ನೋಡಿಕೊಳ್ಳಬೇಕು. ಜೀತ ಬಂಧನದಂತಹ ಮಾರಕ ಆಚರಣೆಗೆ ಸಾಲವು ಮೂಲ ಕಾರಣವಾಗಿದ್ದರಿಂದ ಸಹಕಾರಿ ಸೊಸೈಟಿಗಳು, ಗ್ರಾಮೀಣ ಬ್ಯಾಂಕುಗಳು ಇತ್ಯಾದಿಗಳಿಂದ ಸಾಲ ಕೊಡುವ ವ್ಯವಸ್ಥೆಯಾಗಬೇಕು. ಸಾಮಾಜಿಕ ಮತ್ತು ವ್ರತಾಚರಣೆಯ ಅಗತ್ಯಗಳಿಗೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ಬೇರೆ ಗತಿ ಯಿಲ್ಲದೆ ವಿಪರೀತ ಬಡ್ಡಿ ಕಟ್ಟಿಸುವ ಲೇವಾದೇವಿಗಾರರ ಹತ್ತಿರ ಹೋಗುವ ಬದಲು ಅವರು ಸುಲಭವಾಗಿ ಬಳಕೆ ಸಾಲ ಗಳನ್ನು ಪಡೆಯುವಂತೆ ವಿಶೇಷ ಕಾಳಜಿ ವಹಿಸಬೇಕು. ಜೀತ ನಿರ್ಮೂಲನೆ ಬಗ್ಗೆ ಸಂಪೂರ್ಣ ಮನವರಿಕೆಯಾಗಿ ಮತ್ತು ಬದ್ಧತೆಯಿಂದ ಆಡಳಿತ ವ್ಯವಸ್ಥೆಯು ಮೇಲಿನ ಕ್ರಮಗಳನ್ನು ಕರಾರುವಾಕ್ಕಾಗಿ ಅನುಷ್ಠಾನಗೊಳಿಸಿದರೆ ಅದು ಬಿಡುಗಡೆ ಗೊಳಿಸಿದ ಜೀತದಾಳುಗಳಲ್ಲಿ ಅವರ ಮಾನಸಿಕ ಪುನರ್ವಸತಿಗೆ ಅತ್ಯವಶ್ಯಕವಾದ ಭದ್ರತೆಯ ಮತ್ತು ರಕ್ಷಣೆಯ ಭಾವನೆಯನ್ನು ಮೂಡಿಸುವಲ್ಲಿ ಸಫಲವಾಗುವುದು.

**ಉಪಸಂಹಾರ**

ಭೂರಹಿತ ಕೃಷಿಕಾರ್ಮಿಕರಲ್ಲಿಯೇ ಜೀತದಾಳುಗಳು ತೀವ್ರ ಬಡತನ ಮತ್ತು ತೀವ್ರ ಹಿಂದುಳಿದಿರುವಿಕೆಯ ಪ್ರತೀಕ ವಾಗಿದ್ದಾರೆ. ಅವರಿಗೆ ವಿಭಿನ್ನವಾದ ಸಾಮಾಜಿಕ-ಆರ್ಥಿಕ ಹಿನ್ನೆಲೆಯಿದೆ. ಗುಡ್ಡಗಾಡು ಪ್ರದೇಶಗಳಲ್ಲಿ, ಸಮತಟ್ಟಾದ ಪ್ರದೇಶಗಳಲ್ಲಿ, ಬರಗಾಲ ಪೀಡಿತ ಪ್ರದೇಶಗಳಲ್ಲಿ ಮತ್ತು ಮರಳುಗಾಡು ಪ್ರದೇಶಗಳಲ್ಲಿ ಹೀಗೆ ಒಂದೇ ರಾಜ್ಯದ ವಿಭಿನ್ನ ಪ್ರದೇಶಗಳಲ್ಲಿ ಅವರ ಪರಿಸ್ಥಿತಿಯು ವಿಭಿನ್ನವಾಗಿರುತ್ತದೆ. ಆದ್ದರಿಂದ ಬಿಡುಗಡೆಗೊಳಿಸಿದ ಜೀತದಾಳುಗಳ ಭೌತಿಕ, ಮಾನಸಿಕ ಮತ್ತು ಆರ್ಥಿಕ ಪುನರ್ವಸತಿಯನ್ನು ಕಲ್ಪಿಸುವುದಕ್ಕೆ ಒಂದೇ ರೀತಿಯ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸ ಲಾಗದು. ಆದಾಗ್ಯೂ ಇಂಥ ಪುನರ್ವಸತಿಯನ್ನು ಕಲ್ಪಿಸುವುದರ ಹಿಂದಿನ ಮೂಲಭೂತ ದೃಷ್ಟಿಕೋನ ಬಿಡುಗಡೆಗೊಳಿಸಿದ ಜೀತದಾಳುಗಳ ಅವಶ್ಯಕತೆಗಳಿಗೆ ತಕ್ಕಂತೆ ಮತ್ತು ಅವರ ಅಭಿವೃದ್ಧಿ ಸಾಧಿಸುವ ರೀತಿಯಲ್ಲಿ ಅದನ್ನು ರೂಪಿಸುವುದಾಗಿದೆ. ಬೇರೆ ರೀತಿ ಹೇಳುವುದಾದರೆ, ಬಿಡುಗಡೆಗೊಳಿಸಿದ ಜೀತದಾಳುಗಳ ವಿಶೇಷ ಅವಶ್ಯಕತೆಗಳಿಗೆ ನಿರ್ದಿಷ್ಟ ಯೋಜನೆ/ ಕಾರ್ಯಕ್ರಮಗಳು (ಇವುಗಳು ಸ್ಥಳ ವಿಶೇಷವನ್ನು, ಪರಿಸರವನ್ನು, ಕೃಷಿ ಹವಾಮಾನವನ್ನು ಮತ್ತು ಮಾರುಕಟ್ಟೆ ಸ್ಥಿತಿಗತಿ ಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರುವಂತಹವಾಗಿರಬೇಕು) ಸಹಕಾರಿಯಾಗಿರುತ್ತವೆಯೇ ಎಂಬುದನ್ನು ಪರಿಶೀಲಿಸಿ ಅವು ಸಹಕಾರಿಯಾಗಿ ಮುಂದುವರಿಯುವ ಹಾಗೆ ನೋಡಿಕೊಳ್ಳಬೇಕು. ತಮ್ಮ ಪುನರ್ವಸತಿಯ ಮಾದರಿಯನ್ನು ಆಯ್ಕೆ ಮಾಡುವ ಅವಕಾಶ ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಕಡ್ಡಾಯವಾಗಿ ಇರಬೇಕು ಮತ್ತು ಇಂತಹ ಕಾರ್ಯಕ್ರಮ ಗಳಿಂದ ಬಿಡುಗಡೆಗೊಳಿಸಿದ ಜೀತದಾಳುಗಳ ಕುಟುಂಬಗಳ ಎಲ್ಲಾ ಅವಶ್ಯಕತೆಗಳು ಪೂರೈಕೆಯಾಗುವಂತಿರಬೇಕು ಮತ್ತು ಆ ಕುಟುಂಬಗಳು ಬಡತನ ರೇಖೆಯನ್ನು ದಾಟುವ ಶಕ್ತಿಯನ್ನು ಪಡೆದುಕೊಂಡಿದ್ದು ಮತ್ತೊಮ್ಮೆ ಅವು ಜೀತದ ಜಾಲ ದಲ್ಲಿ ಸಿಲುಕಿಕೊಳ್ಳದ ಹಾಗೆ ತಡೆಯುವಂತಿರಬೇಕು. ಯಾವುದೇ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ

ವಾಗಿರುವ ಕೌಶಲ್ಯ, ಚಾತುರ್ಯ, ಅರ್ಹತೆ, ವ್ಯಾವಹಾರಿಕ ಜಾಣತನ ಬಿಡುಗಡೆಗೊಳಿಸಿದ ಜೀತದಾಳುಗಳಲ್ಲಿವೆಯೇ ಎಂಬುದನ್ನು ಖಚಿತಪಡಿಸದೇ ಯಾವುದೇ ಯೋಜನೆಯನ್ನು ಅವರ ಮೇಲೆ ಹೇರುವುದನ್ನು ತಪ್ಪಿಸಬೇಕು. ಅತ್ಯಂತ ಸದುದ್ದೇಶದಿಂದ ರೂಪಿಸಲಾದ ಪುನರ್ವಸತಿ ಯೋಜನೆಗಳೂ ಕೂಡ ಫಲಾನುಭವಿಗಳು ಅವನ್ನು ತಮ್ಮದಾಗಿಸಿಕೊಂಡು ಹೋಗದಿದ್ದ ಕಾರಣಕ್ಕೆ, ವಿಫಲವಾಗಿವೆ. ಈ ಪ್ರಕ್ರಿಯೆಯನ್ನು ಅನುಸರಿಸುವಾಗ ತುಸು ತಡವಾಗಬಹುದು; ಆದರೆ ಸಮಯಕ್ಕಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಫಲಾನುಭವಿಗಳಿಗೆ ಒಪ್ಪಿಗೆಯಾಗುವ ಮತ್ತು ಸಹಕಾರಿಯಾಗುವ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವುದಕ್ಕೆ ನೀಡುವುದು ಅಗತ್ಯ.

ಈ ಹಿಂದಿನ ಪ್ಯಾರಾಗಳಲ್ಲಿನ ಪುನರ್ವಸತಿ ಯೋಜನೆಗಳನ್ನು ಸ್ಥೂಲವಾಗಿ ಭೂಮಿ ಆಧಾರಿತ ಮತ್ತು ಭೂಮಿ ಆಧಾರಿತವಲ್ಲದ ಎಂಬ ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು. ಬಿಡುಗಡೆಗೊಳಿಸಿದ ಜೀತದಾಳುಗಳಲ್ಲಿ ಹಿಂದೆ ಕೃಷಿ ಭೂಮಿ ಇದ್ದರೆ ಅಥವಾ ಜೀತದಿಂದ ಬಿಡುಗಡೆಗೊಳಿಸಿದ ಬಳಿಕ ಸರ್ಕಾರವು ಭೂ ಹಂಚಿಕೆ ಮಾಡಿದ್ದರೆ ಅಂತಹವರಿಗೆ ಕೃಷಿಯಲ್ಲಿ ತೊಡಗಲು ಅವಕಾಶಗಳನ್ನು ಒದಗಿಸಬೇಕು; ಅವರಿಗೆ ರಾಜ್ಯ ಕೃಷಿ ಇಲಾಖೆಯಿಂದ ಸಲಕರಣೆಗಳು, ಬೆಂಬಲಸೇವೆಗಳು ಮತ್ತು ಸೌಲಭ್ಯಗಳು ಸೇರಿದಂತೆ ಅಗತ್ಯವಾದ ಸಹಾಯ ದೊರಕುವುದನ್ನು ಖಾತ್ರಿಪಡಿಸಬೇಕು. ಅವರಿಗೆ ನೀಡಲಾದ ಭೂಮಿ ಪ್ರಾರಂಭದ ಒಂದು-ಎರಡು ವರ್ಷಗಳಲ್ಲಿ ಭತ್ತವನ್ನು ಬೆಳೆಯಲು ತಕ್ಕದ್ದಾಗಿರದ ಪ್ರಕರಣಗಳಿರಬಹುದು. ಇಂತಹ ಸಂದರ್ಭಗಳಲ್ಲಿ ಆ ಜಮೀನುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒತ್ತು ನೀಡಬೇಕಾಗುತ್ತದೆ. ಸಾಗುವಳಿಗೆ ಕೃಷಿ ಭೂಮಿಯನ್ನು ಯೋಗ್ಯವಾಗಿಸುವುದಕ್ಕೆ ಪ್ರಾತ್ಯಕ್ಷಿಕೆಗಳು ಮತ್ತು ಮಾರ್ಗದರ್ಶಿ ಯೋಜನೆಗಳು ಇರುತ್ತವೆ. ಬಿಡುಗಡೆಗೊಳಿಸಿದ ಜೀತದಾಳುಗಳು ಇಂತಹ ಯೋಜನೆಗಳ ಪ್ರಯೋಜನವನ್ನು ಸುಲಭವಾಗಿ ಖರ್ಚಿಲ್ಲದೆ ಉಪಯೋಗಿಸಿಕೊಳ್ಳುವಂತಿರಬೇಕು. ಅದೇ ಕಾಲಕ್ಕೆ ಭತ್ತದ ಬದಲಾಗಿ ಅವರು ಪಶು ಸಂಗೋಪನೆ ಇಲಾಖೆಯ ಸಹಾಯದಿಂದ ಮೇವು ಬೆಳೆಯಲು ಅಗತ್ಯವಾದ ಸಂಪನ್ಮೂಲವನ್ನು ಪಡೆದುಕೊಂಡು ಅವರು ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ತಮಗೆ ನೀಡಲ್ಪಟ್ಟ ಹಾಲು ನೀಡುವ ಪ್ರಾಣಿಗಳನ್ನು ಸಾಕುವಂತಾಗಬಹುದು.

ಬಿಡುಗಡೆಗೊಳಿಸಿದ ಜೀತದಾಳುಗಳಲ್ಲಿ ಸಂಪೂರ್ಣವಾಗಿ ಆಸ್ತಿಹೀನರಾಗಿರುವವರಿಗೆ ಭೂ ಸುಧಾರಣೆ ಕಾಯ್ದೆಯಡಿ ಪಡೆದ ಮಿತಿಗಿಂತ ಹೆಚ್ಚುವರಿ ಭೂಮಿ ಅಥವಾ ಸರ್ಕಾರಿ ಭೂಮಿಯನ್ನು ನೀಡಲು ಆಗದಿದ್ದರೆ ಎನ್.ಆರ್.ಇ.ಪಿ. ಅಡಿ ಅವರಿಗೆ ನೇರ ಪ್ರಯೋಜನವಾಗುವಂಥ ಕೆಲಸಗಳನ್ನು ಆಯ್ಕೆ ಮಾಡಿ ಅವರಿಗೆ ಕೂಲಿ ಉದ್ಯೋಗ ಸಿಗುವಂತೆ ನೋಡಿಕೊಳ್ಳಬೇಕು ಅಥವಾ ನೀರಾವರಿ, ಲೋಕೋಪಯೋಗಿ, ಮಣ್ಣು ಸಂರಕ್ಷಣೆ, ಅರಣ್ಯ ಮುಂತಾದ ಇಲಾಖೆಗಳಡಿ ಇರುವ ಯೋಜನೆಗಳಲ್ಲಿ ಒಂದನ್ನು ಅಥವಾ ಐ.ಆರ್.ಡಿ.ಪಿ. ಅಡಿಯಲ್ಲಿಯ ವ್ಯಕ್ತಿಗತ ಫಲಾನುಭವಿ ಯೋಜನೆಯೊಂದನ್ನು ಒದಗಿಸಬೇಕು.

ಬಿಡುಗಡೆಗೊಳಿಸಿದ ಜೀತದಾಳುಗಳಲ್ಲಿ ಸಾಂಪ್ರದಾಯಿಕ ಕಸುಬುದಾರರು ಮತ್ತು ಕುಶಲಕಲೆಗಾರರಾಗಿರುವವರು ರಾಜ್ಯ ಕೈಗಾರಿಕಾ ಇಲಾಖೆ/ಜಿಲ್ಲಾ ಕೈಗಾರಿಕಾ ಕೇಂದ್ರ/ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಕೈಗಾರಿಕಾ ಸಹಕಾರ ಸಂಘಗಳ ಅಥವಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳಿಂದ ನೆರವು ಪಡೆದು ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಮುಂದಾಗಬಹುದು. ಬಹುತೇಕ ಜೀತದಾಳುಗಳು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿರುವುದರಿಂದ (1) ಕೇಂದ್ರ ಕಾರ್ಮಿಕ ಮಂತ್ರಾಲಯದಿಂದ ಸಮಮೊತ್ತದ ಅನುದಾನವನ್ನು ಪಡೆದುಕೊಂಡು ರಾಜ್ಯ ಸರ್ಕಾರಗಳು ತಮ್ಮ ರಾಜ್ಯ ಯೋಜನೆಗಳಲ್ಲಿ ಅನುದಾನವನ್ನು ಒದಗಿಸಿಕೊಂಡು ಅನುಷ್ಠಾನಗೊಳಿಸುತ್ತಿರುವ ಜೀತದಾಳುಗಳ ಪುನರ್ವಸತಿ ಕಾರ್ಯಕ್ರಮ (2) ಐ.ಆರ್.ಡಿ.ಪಿ. ಯೋಜನೆಗಳಲ್ಲಿರುವ ಹಣ (3) ಎನ್.ಆರ್.ಇ.ಪಿ. ಯಲ್ಲಿರುವ ಹಣ (4) ವಿವಿಧ ವಲಯಗಳಲ್ಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಲ್ಲಿನ ಹಣ (5) ರಾಜ್ಯಗಳ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ನೀಡಲಾಗುವ ಕೇಂದ್ರ ವಿಶೇಷ ಸಹಾಯಧನದಿಂದ ಲಭ್ಯವಿರುವ ಹಣ (6) ಯೋಜನೇತರ ಸಂಪನ್ಮೂಲ (7) ಸಂಬಂಧಪಟ್ಟ ಪ್ರದೇಶಗಳಲ್ಲಿರುವ ನಿಗಮಗಳಲ್ಲಿರುವ ಸಂಪನ್ಮೂಲಗಳು (8) ಸಾಂಸ್ಥಿಕ ಹಣಕಾಸು ಸಂಸ್ಥೆಗಳಲ್ಲಿನ ಹಣಕಾಸು ವ್ಯವಸ್ಥೆ - ಮುಂತಾದ ಅನೇಕ ಮೂಲಗಳಿಂದ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಳ್ಳುವ ಅವಕಾಶ ಇರುತ್ತದೆ. ಇವನ್ನೆಲ್ಲಾ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲೂಕು (ಬ್ಲಾಕ್) ಮಟ್ಟದಲ್ಲಿ ಕೂಡ ಬಹಳ ಹತ್ತಿರದಿಂದ ಸಂಚಾಲನೆ ಮಾಡುವ ಮತ್ತು ಸಮನ್ವಯಗೊಳಿಸುವ ಅಗತ್ಯವಿದೆ. ಇದಕ್ಕಾಗಿ ರಾಜ್ಯ ಸರ್ಕಾರಗಳು ಅನೇಕಾನೇಕ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ ಮತ್ತು ವ್ಯವಸ್ಥೆಗಳನ್ನು ನಿರ್ಮಿಸಬೇಕಾಗುತ್ತದೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಲ್ಲಿ ಒದಗಿಸಲಾಗುವ ವಿಶೇಷ ಸಹಾಯಧನವನ್ನು ಸಮರ್ಪಕವಾಗಿ ಉಪಯೋಗಿಸುವ ಮೂಲಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿರುವವರನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಬಿಡುಗಡೆಗೊಳಿಸಿದ ಜೀತದಾಳುಗಳ ಪುನರ್ವಸತಿ ವಿಷಯಕ್ಕೆ ಹೆಚ್ಚಿನ ಸ್ಥಾನವನ್ನು ನೀಡುವಂತೆ ಗೃಹ ಖಾತೆಯ ಮಂತ್ರಾಲಯವು ಈಗಾಗಲೆ ಮಾರ್ಗದರ್ಶಿ ಸೂತ್ರಗಳನ್ನು ಕಳುಹಿಸಿ ಕೊಟ್ಟಿರುತ್ತದೆ. ಅವಶ್ಯಕವಾಗಿರುವ ಆಡಳಿತಾತ್ಮಕ ಇಚ್ಛಾಶಕ್ತಿ ಮತ್ತು ಬದ್ಧತೆಗಳ ಹಿನ್ನೆಲೆಯಲ್ಲಿ ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಈ ಯೋಜನಾ ಅವಧಿಯ ಒಳಗೆ ಪುನರ್ವಸತಿಯನ್ನು ಕಲ್ಪಿಸುವುದು ಮತ್ತು ಅವರು ಮತ್ತೆ ಜೀತದ ಜಾಲದಲ್ಲಿ ಸಿಲುಕದಂತೆ ನೋಡಿಕೊಳ್ಳಲು ಸಂಪೂರ್ಣವಾಗಿ ಮತ್ತು ತೃಪ್ತಿಕರವಾಗಿ ಸಾಧ್ಯವಾಗತಕ್ಕದ್ದು.

ಅನುಬಂಧ: 9.6

ಸಂಖ್ಯೆ. ಕೆಆರ್ಎನ್‌ಕೆ–25.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲ್ಪಟ್ಟಿರುವುದು

(ವಿಶೇಷ ಪ್ರಕಟಣೆ) ಭಾಗ IV-C(ii)

**ಬೆಂಗಳೂರು, ಗುರುವಾರ, ಎಪ್ರಿಲ್ 1 1976**

**(ಚೈತ್ರ 12, ಸಕ ಶಕೆ 1898). ಸಂಖ್ಯೆ. 1786**

ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಕಛೇರಿ

ಪ್ರಕಟಣೆ ಸಂಖ್ಯೆ: SWL 20 LBD 76.

*ಬೆಂಗಳೂರು, ದಿನಾಂಕ 30 ಮಾರ್ಚ್ 1976.*

S.O.947. – ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ 1976 (1976 ರ ಕೇಂದ್ರದ ಕಾಯ್ದೆ ಸಂ.19) ರಲ್ಲಿಯ ಪ್ರಕರಣ 21 ರಲ್ಲಿ ದತ್ತವಾದ ಅಧಿಕಾರದ ಅನ್ವಯ ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಜಿಲ್ಲಾ ದಂಡಾಧಿಕಾರಿಗಳಿಗೆ ಅವರ ಅಧಿಕಾರ ವ್ಯಾಪ್ತಿಯ ಪ್ರದೇಶದ ಮಿತಿಯೊಳಗೆ ನ್ಯಾಯಿಕ ದಂಡಾಧಿಕಾರಿ ಮೊದಲನೇ ದರ್ಜೆ ಅವರ ಅಧಿಕಾರಗಳನ್ನು ಈ ಕಾಯ್ದೆಯಲ್ಲಿಯ ಈ ಪ್ರಕರಣಕ್ಕೆ ಅನ್ವಯಿಸುವಂತೆ ಈ ಮೂಲಕ ವಿಧಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಮೈಲಾರಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

---

ಸಂಖ್ಯೆ. ಕೆಆರ್ಎನ್‌ಕೆ–25.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲ್ಪಟ್ಟಿರುವುದು

*(ವಿಶೇಷ ಪ್ರಕಟಣೆ) ಭಾಗ* IV-2-C (ii)

**ಬೆಂಗಳೂರು, ಗುರುವಾರ, ಎಪ್ರಿಲ್ 1 1976**

**(ಚೈತ್ರ 12, ಸಕ ಶಕೆ 1898). ಸಂಖ್ಯೆ. 1787**

ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಕಛೇರಿ

ಪ್ರಕಟಣೆ ಸಂಖ್ಯೆ. SWL 20 LBD 76. (1)

*ಬೆಂಗಳೂರು, ದಿನಾಂಕ 30 ಮಾರ್ಚ್ 1976.*

S.O.946. – ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976 (1976 ರ ಕೇಂದ್ರದ ಕಾಯ್ದೆ ಸಂ.19) ರಲ್ಲಿಯ ಪ್ರಕರಣ 10 ರಲ್ಲಿ ದತ್ತವಾದ ಅಧಿಕಾರದ ಅನ್ವಯ ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಜಿಲ್ಲಾ ದಂಡಾಧಿಕಾರಿಗಳಿಗೆ ಅವರ ಅಧಿಕಾರ ವ್ಯಾಪ್ತಿಯ ಪ್ರದೇಶದ ಮಿತಿಯೊಳಗೆ ಈ ಪ್ರಕರಣಕ್ಕೆ ಅನ್ವಯಿಸುವಂತೆ ಎಲ್ಲಾ ಅಧಿಕಾರಗಳನ್ನು ವಿಧಿಸುತ್ತದೆ ಮತ್ತು ಎಲ್ಲಾ ಕರ್ತವ್ಯಗಳನ್ನು ಈ ಮೂಲಕ ವಹಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಮೈಲಾರಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

**ಕರ್ನಾಟಕ ಸರ್ಕಾರ**

ಸಂ: ಆರ್‌ಡಿಪಿ 31 ಆರ್‌ಬಿಲ್ 94

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ:8-12-1994

## ಸುತ್ತೋಲೆ

ವಿಷಯ: ಜೀತದಾಳುಗಳ ಬಗ್ಗೆ ಸಮಂಜಸವಾದ ವ್ಯಾಖ್ಯಾನ ಹಾಗೂ ಜೀತದಾಳುಗಳನ್ನು ಗುರುತಿಸುವ ಕಾರ್ಯವಿಧಾನ ಅಥವಾ ಕ್ರಮಗಳನ್ನು ರೂಪಿಸಲು ನೇಮಿಸಿದ ಕೇಂದ್ರ ಸಮಿತಿಯು ಮಂಡಿಸಿದ ಜೀತ ಪದ್ಧತಿ ಬಗೆಗಿನ ವರದಿ – ಕುರಿತು:

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಜೀತದಾಳುಗಳ ವ್ಯಾಖ್ಯಾನ ಮತ್ತು ಜೀತದಾಳುಗಳನ್ನು ಗುರುತಿಸುವ ಕಾರ್ಯ ವಿಧಾನ ಅಥವಾ ಕ್ರಮಗಳ ಕುರಿತು ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯವು ಕಳುಹಿಸಿರುವ ಕೇಂದ್ರ ಸಮಿತಿಯ ಶಿಫಾರಸ್ಸುಗಳ ಸಾರಾಂಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಶ್ರೀ.ಎ.ಕೆ.ಚಕ್ರವರ್ತಿ ಸಮಿತಿಯ ಶಿಫಾರಸ್ಸುಗಳನ್ನು ನವದೆಹಲಿಯಲ್ಲೂ ಚರ್ಚಿಸಲಾಗಿತ್ತು. ಗುಜರಾತ್ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಶ್ರೀ.ಎ.ಕೆ.ಚಕ್ರವರ್ತಿಯವರು ಮೇಲ್ಕಾಣಿಸಿದ ಸಮಿತಿಯ ಅಧ್ಯಕ್ಷರು ಸಂಚಾಲಕರೂ ಆಗಿದ್ದರು.

ರಾಜ್ಯ ಸರ್ಕಾರವು ಕೆಳಕಂಡ ಅಂಶಗಳನ್ನು ಹೊರತುಪಡಿಸಿ ಚಕ್ರವರ್ತಿ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುತ್ತದೆ. ಒಪ್ಪಿಕೊಳ್ಳದ ಅಂಶಗಳು ಈ ರೀತಿ ಇವೆ.

1. ಪ್ರಕರಣ 3.6 ಮತ್ತು 3.17 ಗಳಲ್ಲಿ ಸಮೀಕ್ಷೆಯೊಂದನ್ನು ಶಿಫಾರಸ್ಸು ಮಾಡಲಾಗಿದೆ. ಪುನರ್ವಸತಿಗಾಗಿ ಸಾಕಷ್ಟು ಕಾಲಾವಕಾಶ ಒದಗಿಸುವ ದೃಷ್ಟಿಯಿಂದ ಸಮೀಕ್ಷೆಯನ್ನು ಮೂರು ವರ್ಷಗಳಿಗೊಮ್ಮೆ ಮಾಡಬಹುದೆಂದು ಕರ್ನಾಟಕ ಸರ್ಕಾರವು ಅಭಿಪ್ರಾಯಪಟ್ಟಿರುತ್ತದೆ.
2. ಪ್ರಕರಣ 3.21 ರಲ್ಲಿ ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಆಸಕ್ತಿ ಇರುವ ಜಿಲ್ಲಾಧಿಕಾರಿಗಳನ್ನು ಆ ಪದ್ಧತಿ ಅಸ್ತಿತ್ವದಲ್ಲಿರುವ ಪ್ರದೇಶಗಳಿಗೆ ನೇಮಕ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ. ರಾಜ್ಯ ಸರ್ಕಾರವು ಅಭಿಪ್ರಾಯ ಪಡುವುದೇನೆಂದರೆ ಇದು ಸಾಧ್ಯವಾಗದಿರಬಹುದು. ಏಕೆಂದರೆ ಜಿಲ್ಲಾಧಿಕಾರಿಯು ಜೀತ ಪದ್ಧತಿಯನ್ನೊಳಗೊಂಡಂತೆ ರಾಜ್ಯ ಸರ್ಕಾರದ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಬೇಕಾದ ಜವಾಬ್ದಾರಿ ಹೊಂದಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರವು ಕೊಟ್ಟ ಸೂಚನೆಯೇನೆಂದರೆ ಜೀತದಾಳುಗಳನ್ನು ಗುರುತಿಸುವ ಸಮೀಕ್ಷೆಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಸಹಕಾರದಿಂದ ಮಾಡಬೇಕು. ವಿದ್ಯಾರ್ಥಿಗಳನ್ನು ಇಂಥ ಕಾರ್ಯಕ್ರಮಗಳಲ್ಲಿ ತೊಡಗಿಸುವುದರಿಂದ ತೊಂದರೆಗಳಿಗೆ ಮತ್ತು ಸಾಮಾಜಿಕ ಘರ್ಷಣೆಗೆ ಸಾಧ್ಯತೆ ಇರುವುದರಿಂದ ಗುರುತಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು ಸೂಕ್ತವಲ್ಲವೆಂದು ರಾಜ್ಯ ಸರ್ಕಾರವು ಪರಿಗಣಿಸಿದೆ.

ಮೇಲಿನ ಪ್ರಕರಣಗಳನ್ನು ಹೊರತುಪಡಿಸಿ ಸಮಿತಿಯ ಇತರೆ ಎಲ್ಲಾ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರವು ಒಪ್ಪಿರುತ್ತದೆ. ಇವುಗಳನ್ನು ಅತ್ಯವಶ್ಯಕವಾಗಿ ಅನುಷ್ಠಾನಗೊಳಿಸಬೇಕೆಂದು ಸೂಚಿಸಲಾಗಿದೆ.

(ಸಹಿ)
(ಎನ್. ಎ. ಮಾರ್ಗರೇಟ್)
ಪ್ರಭಾರ ಸಹಾಯಕ ಅಭಿವೃದ್ಧಿ ಆಯುಕ್ತರು ಮತ್ತು
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ

[ವಿ.ಸೂ: ಶಿಫಾರಸ್ಸುಗಳನ್ನು ಸಂಕ್ಷಿಪ್ತ ರೂಪದಲ್ಲಿ 9.1 ಪುಟ 39-42ರಲ್ಲಿ ನೋಡಿ]

**ಕರ್ನಾಟಕ ಸರ್ಕಾರ**

ಸಂ: ಗ್ರಾಅಪ 15 ಆರ್‌ಬಿಎಲ್ 99(ಪಿ)

ನಿರ್ದೇಶಕರ ಕಛೇರಿ,
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು,
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, 3ನೇ ಹಂತ 7ನೇ ಮಹಡಿ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ:14.10.1999.

ಗೆ:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ:- ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರುಸಮೀಕ್ಷೆ ಮಾಡುವ ಬಗ್ಗೆ.
ಉಲ್ಲೇಖ:- ಸರ್ಕಾರದ ಪತ್ರದ ಕ್ರಮಾಂಕ.ಗ್ರಾಅಪ15ಆರ್‌ಬಿಎಲ್99(ಪಿ) ದಿನಾಂಕ:4.5.99.

-------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ನಮೂದಿಸಿರುವ ಪತ್ರದಲ್ಲಿ ನಿಮ್ಮ ಜಿಲ್ಲೆಯಲ್ಲಿ ಹೊಸದಾಗಿ ಮರುಸಮೀಕ್ಷೆ ಮಾಡಿ ಜೀತದಾಳುಗಳನ್ನು ಗುರುತಿಸಲು ಹಾಗೂ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಲು ಕೋರಲಾಗಿತ್ತು.

ಈ ವಿಷಯವನ್ನು ಕುರಿತು ಅನೇಕ ಜಿಲ್ಲಾಧಿಕಾರಿಗಳು ಶ್ರೀ.ಎಸ್.ಆರ್.ಶಂಕರನ್, ನಿವೃತ್ತ ಮುಖ್ಯ ಕಾರ್ಯದರ್ಶಿಗಳು, ಇವರ ವರದಿಯ ಪ್ರತಿಯನ್ನು ಕಳುಹಿಸಲು ಕೋರಿರುತ್ತಾರೆ. ಆದ್ದರಿಂದ ಶ್ರೀ.ಎಸ್.ಆರ್.ಶಂಕರನ್ ರವರ ವರದಿಯನ್ನು ಆದಷ್ಟು ಮಟ್ಟಿಗೆ ಕನ್ನಡ ಭಾಷೆಗೆ ಭಾಷಾಂತರಿಸಿ, ಕನ್ನಡ ಮತ್ತು ಇಂಗ್ಲೀಷ್ ಪ್ರತಿಗಳೆರಡನ್ನು ಈ ಕೂಡ ಲಗತ್ತಿಸಿ ನಿಮ್ಮ ತಿಳುವಳಿಕೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

ಈ ವರದಿಯು ಆಂಧ್ರ ಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟದ್ದು 1976ರಲ್ಲಿ ಶ್ರೀ.ಎಸ್.ಆರ್.ಶಂಕರನ್‌ರವರಿಂದ ತಯಾರಿಸಲ್ಪಟ್ಟಿರುತ್ತದೆ. ಈ ವರದಿಯ ಜೊತೆಗೆ ನಿಮ್ಮ ಜಿಲ್ಲೆಯಲ್ಲಿ ಸದ್ಯದಲ್ಲಿ ಇರುವ ವಾಸ್ತವಾಂಶಗಳು ಹಾಗೂ ದರಗಳನ್ನು ಗಮನದಲ್ಲಿಟ್ಟುಕೊಂಡು ಜೀತದಾಳುಗಳ ಮರುಸಮೀಕ್ಷೆಯುನ್ನು ಅತಿ ಎಚ್ಚರಿಕೆಯಿಂದ ನಡೆಸಿ. ಈ ಬಗ್ಗೆ ಸರ್ಕಾರಕ್ಕೆ ನಿಖರವಾದ ವರದಿಯನ್ನು ದಿನಾಂಕ: 5.11.99ರೊಳಗೆ ಕಳುಹಿಸಲು ಕೋರುತ್ತೇನೆ.

ತಮ್ಮ ವಿಶ್ವಾಸಿ,

ಸಹಿ/-
ನಿರ್ದೇಶಕರ ಪರವಾಗಿ,
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ಇಲಾಖೆ.

**[ಶ್ರೀ ಎಸ್. ಆರ್. ಶಂಕರನ್ ರವರು ರೂಪಿಸಿದ ಜೀತದಾಳುಗಳನ್ನು ಗುರುತಿಸಲು ಅನುಸರಿಸಬೇಕಾದ ವಿಧಾನ/ಮಾರ್ಗದರ್ಶಿ: ಅನುಸೂಚಿ, 9.3, ಪುಟ 47-50 ನೋಡಿ]**

**ಕರ್ನಾಟಕ ಸರ್ಕಾರ**

ನಂ. ಆರ್‌ಡಿಪಿ:28:ಆರ್‌ಬಿಎಲ್: 2000

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 3/8/2000.

**ಸುತ್ತೋಲೆ**

ವಿಷಯ: ಜೀತದಾಳುಗಳನ್ನು ಗುರುತಿಸಲು ಮರು ಸಮೀಕ್ಷೆ ಕೈಗೊಳ್ಳುವ ಬಗ್ಗೆ.

*****

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ:ಆರ್‌ಡಿಪಿ.15.ಆರ್‌ಬಿಎಲ್ 99(ಪಿ) ದಿನಾಂಕ 14/10/1999ರಲ್ಲಿ ಜೀತದಾಳುಗಳನ್ನು ಗುರುತಿಸಲು ಸಮೀಕ್ಷೆಯೊಂದನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿತ್ತು. ಆ ಸಮೀಕ್ಷೆಯು ಜೂನ್ 2000ರ ಕೊನೆಯೊಳಗೆ ಮುಕ್ತಾಯವಾಗುವುದೆಂದು ನಿರೀಕ್ಷಿಸಲಾಗಿತ್ತು. ಹೆಚ್ಚಿನ ಜಿಲ್ಲೆಗಳು ಸಮೀಕ್ಷೆಯನ್ನು ಮುಗಿಸಿ, ಅವರ ಜಿಲ್ಲೆಗಳಲ್ಲಿ ಜೀತದಾಳುಗಳು ಇಲ್ಲವೆಂದು ಸೂಚಿಸುವ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದವು. ಆದರೆ ಸಮೀಕ್ಷೆ ಮುಕ್ತಾಯವಾದ ನಂತರ ಮಂಡ್ಯ ಮತ್ತು ಕೆಲವು ಇತರೆ ಜಿಲ್ಲೆಗಳಲ್ಲಿ ಬೆಳಕಿಗೆ ಬಂದ ಜೀತದ ಪ್ರಕರಣಗಳು, ಹಿಂದಿನ ಸಮೀಕ್ಷೆಗಳಲ್ಲಿ ಅನುಸರಿಸಿದ ವಿಧಾನವು ಪರಿಣಾಮಕಾರಿಯಾಗಿರಲಿಲ್ಲ ಮತ್ತು ಈ ಕೆಲಸದಲ್ಲಿ ಕ್ಷೇತ್ರ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನೂ, ಹಿರಿಯ ಅಧಿಕಾರಿಗಳನ್ನೂ ವ್ಯವಸ್ಥಿತವಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂಬ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲಿ ಜೀತದಾಳುಗಳ ಮರು ಸಮೀಕ್ಷೆಯನ್ನು ಹೊಸದಾಗಿ ಮಾಡುವಂತೆ ಆದೇಶಿಸಲು ನಿರ್ಧರಿಸಿದೆ. ಹೊಸ ಸಮೀಕ್ಷೆಯನ್ನು ಕೈಗೊಳ್ಳುವಾಗ ಈ ಕೆಳಗಿನ ಕ್ರಮವನ್ನು ಅನುಸರಿಸಬೇಕು.

1. ಸಮೀಕ್ಷೆಯನ್ನು ಸ್ವಯಂ ಸೇವಾ ಸಂಸ್ಥೆಗಳು ಅಥವಾ ಐಸೆಕ್‌ನಂತಹ ಪ್ರಖ್ಯಾತ ಸಾಮಾಜಿಕ ಅಧ್ಯಯನ ಸಂಸ್ಥೆಗಳು ಅಥವಾ ವಿಶ್ವವಿದ್ಯಾನಿಲಯಗಳ ನೆರವಿನಿಂದ ನಡೆಸಬೇಕು. ಈ ಉದ್ದೇಶಕ್ಕೆ ಉತ್ತಮ ಸೇವೆ ಸಲ್ಲಿಸುವ ಹಿನ್ನೆಲೆ ಇರುವ ಮತ್ತು ನಂಬಿಕಾರ್ಹ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಬಹುದು.
2. ಜಿಲ್ಲಾಧಿಕಾರಿಗಳು ಜೀತದ ಇರುವಿಕೆ ಬಗ್ಗೆ ಯಾವುದೇ ಮಾಹಿತಿ ಹೊಂದಿರುವ ಸಂಸ್ಥೆಗಳು ಅಥವಾ ವ್ಯಕ್ತಿಗಳನ್ನು ಅವುಗಳ ಬಗ್ಗೆ ತಾವು ನೇಮಿಸಿದ ಅಧಿಕಾರಿಗೆ/ಗಳಿಗೆ ವರದಿ ಸಲ್ಲಿಸಲು ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ನೋಟೀಸನ್ನು ನೀಡಬಹುದು. ಯಾವುದೇ ನಿರ್ದಿಷ್ಟ ಹಳ್ಳಿ ಅಥವಾ ಕೆಲಸದ ಜಾಗದಲ್ಲಿ ಜೀತದ ಅಸ್ತಿತ್ವ ಕುರಿತ ಯಾವುದೇ ಮಾಹಿತಿ/ ದೂರಿನ ಬಗ್ಗೆ ಉಪವಿಭಾಗಾಧಿಕಾರಿಗಳು ಅಥವಾ ಪ್ರಕರಣಗಳು ಹೆಚ್ಚಿದ್ದರೆ ತಾಲ್ಲೂಕಿನ ತಹಸೀಲ್ದಾರರು ತನಿಖೆ ಮಾಡಬೇಕು.
3. ತ್ರಿಪುರದ ಹಿಂದಿನ ಮುಖ್ಯ ಕಾರ್ಯದರ್ಶಿಯಾದ ಶ್ರೀ.ಎಸ್.ಆರ್.ಶಂಕರನ್‌ರವರ ವರದಿ ಆಧಾರದ ಮೇಲೆ ತಯಾರಿಸಿದ ಹಾಗೂ ಈ ಕಛೇರಿಯಿಂದ ಕಳುಹಿಸಿದ ಪ್ರಶ್ನಾವಳಿಯನ್ನು ಈ ಸಮೀಕ್ಷಾ ಕಾರ್ಯಕ್ಕಾಗಿ ಬಳಸಬಹುದು. ಜಿಲ್ಲಾಧಿಕಾರಿಗಳು ಆ ಪ್ರಶ್ನಾವಳಿಯಲ್ಲಿ ಅವಶ್ಯ ಮಾರ್ಪಾಟುಗಳನ್ನು ಮಾಡಿಕೊಳ್ಳಬಹುದು.
4. ಜೀತದ ವ್ಯಾಖ್ಯಾನದ ಮತ್ತು ಜೀತದ ಇರುವಿಕೆಯನ್ನು ಕಂಡುಹಿಡಿಯಲು ಕೇಳಬೇಕಾದ ಪ್ರಶ್ನೆಗಳ ಬಗ್ಗೆ ಸರಿಯಾದ ತಿಳುವಳಿಕೆ ಸಮೀಕ್ಷೆಯನ್ನು ನಡೆಸುವ ವ್ಯಕ್ತಿಗಳಿಗೆ ಇರುವಂತೆ ನೋಡಿಕೊಳ್ಳಲು ತರಬೇತಿ ಕಾರ್ಯಾಗಾರಗಳನ್ನು ನಡೆಸಬೇಕು.
5. ಸಮೀಕ್ಷೆ ನಡೆಸುವವರು ತಮ್ಮ ವರದಿಗಳನ್ನು ಸಲ್ಲಿಸಿದ ಮೇಲೆ, ಸಮೀಕ್ಷೆಯ ಫಲಿತಾಂಶಗಳನ್ನು ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರು ವೈಯಕ್ತಿಕವಾಗಿ ಪರಿಶೀಲನೆ ಮಾಡಬೇಕು. ಜಿಲ್ಲಾಧಿಕಾರಿಗಳು

ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 4 ಹಳ್ಳಿಗಳನ್ನು, ಉಪವಿಭಾಗಾಧಿಕಾರಿಗಳು ಪ್ರತಿ ತಾಲ್ಲುಕಿನಲ್ಲಿ ಕನಿಷ್ಠ 10 ಹಳ್ಳಿಗಳನ್ನು ಭೇಟಿ ಮಾಡಬೇಕು. ತಹಸೀಲ್ದಾರರು ತಮ್ಮ ಕಾರ್ಯವ್ಯಾಪ್ತಿಯಲ್ಲಿಯ ಕನಿಷ್ಟ 30 ಹಳ್ಳಿಗಳನ್ನು ಭೇಟಿ ಮಾಡಬೇಕು. ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ಹಿರಿಯ ಅಧಿಕಾರಿಗಳ ಸೇವೆಯನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು. ಈ ಎಲ್ಲಾ ಭೇಟಿಗಳ ಫಲಿತಾಂಶಗಳನ್ನು ಸಾರಾಂಶಗೊಳಿಸಿ ವಿವರವಾದ ವರದಿಯನ್ನು ತಯಾರಿಸಬೇಕು. ಈ ವರದಿಗಳು ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಅಂತಿಮ ವರದಿಯ ಭಾಗವಾಗಿರಬೇಕು.

6. ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಹಾಗೂ ಕಾರ್ಮಿಕ ಇಲಾಖೆಗಳ ಸಹಕಾರದೊಂದಿಗೆ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿ ಜೀತ ಕಾರ್ಮಿಕ ಹಾಗೂ ಬಾಲಕಾರ್ಮಿಕ ಇರಬಹುದಾದ ಸ್ಥಳ/ಕೆಲಸಗಳ ಪಟ್ಟಿಯನ್ನು ತಯಾರಿಸಬೇಕು. ಈ ಪಟ್ಟಿಯನ್ನು (ಸಮೀಕ್ಷೆ ಮಾಡುವವರಿಗೆ) ನೀಡಬಹುದು.

7. ಸ್ವಯಂ ಸೇವಾ ಸಂಸ್ಥೆಗಳ ವರದಿಗಳನ್ನು ಹಾಗೂ ಅಧಿಕಾರಿಗಳ ವರದಿಗಳನ್ನು ಉಪವಿಭಾಗ ಮಟ್ಟದ ಮತ್ತು ಜಿಲ್ಲಾ ಮಟ್ಟದ ಜಾಗೃತಿ ಸಮಿತಿಗಳ ಮುಂದೆ ಮಂಡಿಸಬೇಕು ಹಾಗೂ ಜಾಗೃತಿ ಸಮಿತಿಗಳಲ್ಲಿ ಚರ್ಚೆ ಆದ ಬಳಿಕ, ಸಮೀಕ್ಷೆಯಲ್ಲಿನ ಅಂಶಗಳ ಬಗ್ಗೆ ಸಮಿತಿಯ ಟಿಪ್ಪಣಿಗಳೊಂದಿಗೆ ಈ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಬೇಕು.

8. ಪುನರ್ವಸತಿ ಸಮಯದಲ್ಲಿ ವ್ಯವಸ್ಥಿತ ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಸಮೀಕ್ಷೆಯಲ್ಲಿ ಗುರುತಿಸಿದ ಜೀತದಾಳುಗಳ ವಿವರಗಳನ್ನು ಸಹ ಗಣಕೀಕರಣಗೊಳಿಸಬೇಕು.

9. ಸಮೀಕ್ಷೆಯನ್ನು 3 ತಿಂಗಳುಗಳ ಅವಧಿಯ ಒಳಗೆ ಮುಗಿಸಬೇಕು.

10. ಜಿಲ್ಲಾಧಿಕಾರಿಗಳು ಸಮೀಕ್ಷೆಯು ಅತಿ ಗಂಭೀರವಾಗಿ ನಡೆಯುವಂತೆ ಖಾತರಿಪಡಿಸಿಕೊಳ್ಳಬೇಕು. ಒಂದು ವೇಳೆ ಸಮೀಕ್ಷೆಯನ್ನು ಕೂಲಂಕುಷವಾಗಿ ನಡೆಸಿಲ್ಲ ಮತ್ತು ಸಮೀಕ್ಷೆಯ ಸಂದರ್ಭದಲ್ಲಿ ಜೀತದ ಪ್ರಕರಣಗಳನ್ನು ಅವಗಣನೆ ಮಾಡಲಾಗಿದೆ ಎಂಬುದಾಗಿ ಕಂಡುಬಂದಲ್ಲಿ ಸರ್ಕಾರವು ಜಿಲ್ಲಾಧಿಕಾರಿಗಳನ್ನೇ ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

11. ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಗೆ 2 ಲಕ್ಷ ರೂಪಾಯಿಗಳನ್ನು ಈ ಸಮೀಕ್ಷೆಯ ವೆಚ್ಚವನ್ನು ಭರಿಸಲು ಬಿಡುಗಡೆ ಮಾಡಲಿದೆ.

ಸಹಿ/-

(ವಿ. ಮಂಜುಳ)

ನಿರ್ದೇಶಕರು,

ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು ಮತ್ತು

ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಎಲ್ಲಾ ವಿಭಾಗಾಧಿಕಾರಿಗಳು,
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,
3. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

**ಕರ್ನಾಟಕ ಸರ್ಕಾರ**

ಸಂ.ಗ್ರಾಅಪ.8.ಆರ್‌ಬಿಎಲ್.2002

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು.
ದಿನಾಂಕ:11.11.2002.

**ಸುತ್ತೋಲೆ**

ವಿಷಯ:- ಜೀತಪದ್ಧತಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು

ಉಲ್ಲೇಖ:- ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯದ ಪತ್ರ ಸಂ.ಹೆಚ್-11016/14/2001-ಬಿಎಲ್/ದಿನಾಂಕ:30.7.2002.

******

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 55 ವರ್ಷಗಳಾಗಿದ್ದು, 1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನಾ) ಕಾಯ್ದೆಯು ಅನುಷ್ಠಾನಕ್ಕೆ ಬಂದು 25 ವರ್ಷಗಳು ಕಳೆದಿದ್ದರೂ ಸಹ ರಾಜ್ಯದ ಕೆಲವು ಭಾಗಗಳಲ್ಲಿ ಜೀತ ಪ್ರಕರಣಗಳು ಇನ್ನೂ ಕಂಡು ಬರುತ್ತಿರುವುದು ಅತಿ ಅಸಹನೀಯ ಸಂಗತಿಯಾಗಿರುತ್ತದೆ. 1976 ರ ಕಾಯ್ದೆಯನ್ವಯ ಜೀತ ಪದ್ಧತಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಎಲ್ಲಾ ಆದ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಜಿಲ್ಲಾಧಿಕಾರಿಗಳ ಹಾಗೂ ಉಪ ವಿಭಾಗಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಜೀತ ಪದ್ಧತಿ ನಿರ್ಮೂಲನೆ ಅಂದರೆ ಜೀತದಾರರನ್ನು ಗುರುತಿಸುವುದು, ಕಾಯ್ದೆಯಡಿ ಪರಿಶೀಲಿಸಿದ ನಂತರ ಆ ಕಾರ್ಮಿಕನು ವಾಸಿಸುತ್ತಿರುವ ಸ್ಥಳದಿಂದ ಹೊರದೂಡಲ್ಪಡದಂತೆ ನೋಡಿಕೊಳ್ಳುವುದು, ಜೀತವಿಮುಕ್ತರು ಯಾವುದೇ ಆಸ್ತಿಯನ್ನು ಅಡವಿಟ್ಟದ್ದಲ್ಲಿ ಕೂಡಲೇ ಅಡಮಾನದಿಂದ ಅಂತಹ ಆಸ್ತಿಯನ್ನು ತೆರವುಗೊಳಿಸುವುದು, ಜೀತವಿಮುಕ್ತರಿಗೆ ಸೂಕ್ತ ಆರ್ಥಿಕ ಹಾಗೂ ಸಾಮಾಜಿಕ ಪುನರ್ವಸತಿ ಸೌಲಭ್ಯ (ಊಟ, ವಸತಿ, ಉದ್ಯೋಗವಕಾಶ, ಪ್ರಾಥಮಿಕ ಶಿಕ್ಷಣ, ಆರೋಗ್ಯ ಚಿಕಿತ್ಸೆ, ರಕ್ಷಣೆ ಇತ್ಯಾದಿ) ಗಳನ್ನು ಆದ್ಯತೆ ಮೇರೆ ಒದಗಿಸುವುದು, ಜೀತ ಕಾರ್ಮಿಕರನ್ನು ಕೆಲಸಕ್ಕೆ ಇರಿಸಿಕೊಂಡಿದ್ದ ಮಾಲೀಕರ ಮೇಲೆ ಮೊಕದ್ದಮೆ ದಾಖಲು ಮಾಡಿ, ಶೀಘ್ರ ವಿಚಾರಣೆ ಮುಖಾಂತರ ಕಾನೂನಿನ ಕ್ರಮ ಜರುಗಿಸುವುದು ಇತ್ಯಾದಿ ಹಂತಗಳನ್ನು ಒಳಗೊಂಡಿರುತ್ತದೆ. ಇದಲ್ಲದೆ ಕಾಯ್ದೆಯನ್ವಯ ಜಿಲ್ಲಾ/ಉಪವಿಭಾಗ ಮಟ್ಟದ ಜಾಗೃತ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿಯವರು ಸದರಿ ಜಾಗೃತ ಸಮಿತಿಯ ಸಭೆಗಳನ್ನು ನಡೆಸಿ, ಜೀತವಿಮುಕ್ತರಿಗೆ ಸ್ಥಳೀಯ ಗ್ರಾಮೀಣ ಬ್ಯಾಂಕುಗಳು ಹಾಗೂ ಸಹಕಾರ ಸಂಸ್ಥೆಗಳ ಮುಖಾಂತರ ಕಡಿಮೆ ಬಡ್ಡಿ ದರದಲ್ಲಿ ಸೂಕ್ತ ಸಾಲ ಒದಗಿಸಬೇಕಾಗಿರುತ್ತದೆ. ಅಧೀನ ಸರ್ಕಾರಿ ಅಧಿಕಾರಿ/ಸಿಬ್ಬಂದಿ ವರ್ಗದವರ ಜೊತೆಗೆ ಈ ಕ್ಷೇತ್ರದಲ್ಲಿ ದುಡಿಯಲು ಆಸಕ್ತಿ ವಹಿಸಿರುವ ಸರ್ಕಾರೇತರ ಸಂಘ ಸಂಸ್ಥೆಗಳು/ಸಾಮಾಜಿಕ ಕ್ರಿಯಾ ಗುಂಪುಗಳನ್ನು ಉಪಯೋಗಿಸಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತೆ. ಆದುದರಿಂದ ರಾಜ್ಯದಲ್ಲಿ ಜೀತ ಪದ್ಧತಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ತಕ್ಷಣದಿಂದಲೇ ಅತಿ ಗಂಭೀರಯುತವಾಗಿ ಪರಿಗಣಿಸಿ, ಕೆಳಕಂಡ ಅಂಶಗಳನ್ನು ತಪ್ಪದೇ ಪರಿಪಾಲಿಸುವಂತೆ ಸೂಚಿಸಿದೆ.

1. ಯಾವುದೇ ದಿನಪತ್ರಿಕೆ/ಸ್ಥಳೀಯ ಪತ್ರಿಕೆ/ನಿಯತಕಾಲಿಕೆಗಳಲ್ಲಿ/ಇನ್ಯಾವುದೇ ರೂಪದಲ್ಲಿ ಜೀತ ಪ್ರಕರಣ ಕುರಿತು ಮಾಹಿತಿ /ವರದಿ ಗಮನಕ್ಕೆ ಬಂದ ಕೂಡಲೇ, ಕಾಯ್ದೆಯನ್ವಯ ಆದ್ಯತೆ ಮೇರೆ ಪರಿಶೀಲಿಸಿ, ಜೀತ ಪದ್ಧತಿ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಲ್ಲಿ ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವುದು.
2. ಸ್ಥಳೀಯ ಸಂಸ್ಥೆಗಳು/ಸರ್ಕಾರೇತರ ಸ್ವಯಂ ಸಂಘ ಸಂಸ್ಥೆಗಳು/ಸಾಮಾಜಿಕ ಕ್ರಿಯಾ ಗುಂಪುಗಳು ನೀಡುವ ದೂರು/ಮನವಿಗಳ ಬಗ್ಗೆ ಮಾನ್ಯತೆ ನೀಡಿ, ಕೂಡಲೇ ಹಿರಿಯ ಅಧಿಕಾರಿಗಳಿಂದ ತಪಾಸಣೆ ಮಾಡಿಸಿ, ಜೀತ ಪದ್ಧತಿ ವ್ಯಾಪ್ತಿಗೆ ಒಳಪಡುತ್ತದೆಯೇ ಎಂಬ ಬಗ್ಗೆ ವರದಿ ಸಲ್ಲಿಸುವುದು.
3. ಪ್ರತಿಯೊಂದು ಪ್ರಕರಣದಲ್ಲೂ, 1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯ ಅನ್ವಯ ಯಾವ ಪ್ರಕರಣದಡಿ ಜೀತ ಪದ್ಧತಿ ವ್ಯಾಪ್ತಿಗೆ ಒಳಪಡುತ್ತದೆ ಎಂಬ ಬಗ್ಗೆ ವಸ್ತು ಸ್ಥಿತಿ ಪರಿಶೀಲಿಸಲು ಕೂಲಂಕುಷ ವಿಚಾರಣೆಯನ್ನು ತಪ್ಪದೇ ನಡೆಸಿ, ಆನಂತರ ಜೀತವೆಂದು ಧೃಢಪಟ್ಟಲ್ಲಿ ಮಾತ್ರ ಸೂಕ್ತ ಕ್ರಮ ಕೈಗೊಳ್ಳುವುದು.
4. ಜಾಗೃತ ಸಮಿತಿಗಳ ಸಭೆಯನ್ನು ಕನಿಷ್ಠ ಎರಡು ತಿಂಗಳಿಗೆ ಒಮ್ಮೆ ತಪ್ಪದೇ ನಡೆಸಿ, ಆ ಸಭೆಗಳಲ್ಲಿ, ಪುನರ್ವಸತಿಗೊಂಡ ಜೀತವಿಮುಕ್ತರು ಪುನ: ಜೀತ ಪದ್ಧತಿಗೆ ಮಾರುಹೋಗುವಂತಹ ಪ್ರಕರಣ ಮರುಕಳಿಸದಂತೆ ಪರಿಶೀಲನೆ ಮಾಡಿ ನಡವಳಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
5. ಜೀತ ಪದ್ಧತಿ ನಿರ್ಮೂಲನೆಯ ಪ್ರತಿ ಕಾರ್ಯ ಹಂತದಲ್ಲೂ ಗ್ರಾಮ ಹಾಗೂ ತಾಲ್ಲೂಕು ಮಟ್ಟದ ಕಾರ್ಯದಳ ರಚನೆ ಮುಖಾಂತರ ಸರ್ಕಾರೇತರ ಸ್ವಯಂ ಸಂಘ ಸಂಸ್ಥೆಗಳು / ಸಾಮಾಜಿಕ ಕ್ರಿಯಾ ಗುಂಪುಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಉತ್ತೇಜನ ನೀಡುವುದು.
6. ವಿವಿಧ ಮಾಸಿಕ/ತ್ರೈಮಾಸಿಕ ವರದಿಗಳನ್ನು ನಿಗದಿತ ನಮೂನೆಯಲ್ಲಿ ಪ್ರತಿ ಮಾಹೆ 10ನೇ ತಾರೀಖಿನೊಳಗೆ ಸರ್ಕಾರಕ್ಕೆ ತಪ್ಪದೇ ಸಲ್ಲಿಸುವುದು.

ಸಹಿ/-
(ಆ.ರವೀಂದ್ರ)
ಸರ್ಕಾರದ ಮುಖ್ಯ ಕಾರ್ಯದರ್ಶಿ.

ಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

**ಕರ್ನಾಟಕ ಸರ್ಕಾರ**

ಸಂಖ್ಯೆ.ಗ್ರಾಅ.ಪ.13.ಆರ್‌ಬಿಎಲ್.2003

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ-2, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ.29.4.2004.

**ಸುತ್ತೋಲೆ**

ವಿಷಯ:- ಜೀತ ಪದ್ಧತಿ ಕುರಿತು ಅಕ್ಟೋಬರ್ 2003ರಲ್ಲಿ ನಡೆದ 2 ದಿನಗಳ ಕಾರ್ಯಾಗಾರದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

*****

ಮೇಲ್ಕಂಡ ವಿಚಾರದಲ್ಲಿ, ಸರ್ಕಾರದ ಸಮಸಂಖ್ಯೆಯ ಪತ್ರಗಳ ದಿನಾಂಕ.15.12.2003 ಹಾಗೂ 7.2.2004 ನ್ನು ಮುಂದುವರೆಸುತ್ತಾ, ಜೀತ ಪದ್ಧತಿ ಕುರಿತು ದಿನಾಂಕ: 9-10 ಅಕ್ಟೋಬರ್ 2003 ರಂದು ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು ಇಲ್ಲಿ ನಡೆದ 2 ದಿನಗಳ ಕಾರ್ಯಗಾರದ ಶಿಫಾರಸ್ಸುಗಳನ್ನು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಸಲುವಾಗಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

1. 1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಜೀತ ಪದ್ಧತಿ ನಿರ್ಮೂಲನೆ ಬಗ್ಗೆ ಎಲ್ಲಾ ಅಗತ್ಯ ಕ್ರಮಗಳು ಅಂದರೆ;

1) ಜೀತ ಪ್ರಕರಣಗಳ ಅಸ್ತಿತ್ವವನ್ನು ಪತ್ತೆ ಹಚ್ಚಲು ಅನಿರೀಕ್ಷಿತ ತಪಾಸಣಾ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳುವುದು.

2) ಸಂಶಯಾಸ್ಪದವೆಂದು ಕಂಡುಬರುವ ಪ್ರತಿ ಜೀತ ಪ್ರಕರಣದಲ್ಲೂ ಆದ್ಯತೆ ಮೇರೆ ತನಿಖೆ ನಡೆಸಿ, ಜೀತ ಪದ್ಧತಿಗೆ ಒಳಪಟ್ಟದ್ದಲ್ಲಿ ಗರಿಷ್ಠ ಒಂದು ತಿಂಗಳ ಅವಧಿಯೊಳಗೆ ಅಂತಹ ಕಾರ್ಮಿಕರನ್ನು ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸಿ ಜೀತ ವಿಮುಕ್ತ ಪ್ರಮಾಣ ಪತ್ರ ನೀಡುವುದು.

3) ಜೀತ ಪದ್ಧತಿಗೆ ಒಳಪಟ್ಟಿದೆ ಎಂದು ದೃಢಪಟ್ಟ ಪ್ರತಿ ಪ್ರಕರಣದಲ್ಲೂ ಸಂಬಂಧಪಟ್ಟ ಮಾಲೀಕರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ತಪ್ಪದೇ ದಾಖಲು ಮಾಡುವುದು.

4) ಜೀತವಿಮುಕ್ತರಿಗೆ ಕೃಷಿಯಲ್ಲಿ ಆಸಕ್ತಿ ಇದ್ದಲ್ಲಿ, ವ್ಯವಸಾಯ ಯೋಗ್ಯ ಸರ್ಕಾರಿ ಜಮೀನುಗಳನ್ನು ಗುರುತಿಸಿ ಮಂಜೂರು ಮಾಡುವುದು ಹಾಗೂ ಕೃಷಿ ಸಲಕರಣೆಗಳನ್ನು ಒದಗಿಸುವುದು. ಬಿಡುಗಡೆ ಹೊಂದಿದ ಜೀತವಿಮುಕ್ತರ ಜೀವನೋಪಾಯಕ್ಕಾಗಿ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೂಲಿ ಕೆಲಸ ಒದಗಿಸಿ, ಅಕ್ಕಿ ಹಾಗೂ ಕೂಲಿಯನ್ನು ಒದಗಿಸುವುದು.

5) ಜೀತವಿಮುಕ್ತರಿಗೆ ಕೃಷಿಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದಲ್ಲಿ, ಅಂತಹ ಚಟುವಟಿಕೆಗಳ ವೃತ್ತಿಪರ ಬೆಳವಣಿಗೆಗೆ ಸ್ಥಳೀಯ ಬ್ಯಾಂಕುಗಳ ಮುಖಾಂತರ ಕನಿಷ್ಠ ಬಡ್ಡಿ ದರದಲ್ಲಿ ಅಗತ್ಯ ಸಾಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಹಾಲಿ ಅನುಷ್ಠಾನಗೊಳಿಸಲಾಗುತ್ತಿರುವ ಎಸ್‌ಜಿಎಸ್‌ವೈ ಯೋಜನೆಯಲ್ಲಿ ಅವರುಗಳನ್ನು ಆಯ್ದುಕೊಳ್ಳುವುದು.

6) ಸರ್ಕಾರದ ಎಲ್ಲಾ ಯೋಜನೆಗಳಡಿ ಫಲಾನುಭವಿಗಳನ್ನು ಗುರುತಿಸುವಾಗ ಪ್ರಥಮ ಆದ್ಯತೆಯನ್ನು ಜೀತವಿಮುಕ್ತರಿಗೂ ಹಾಗೂ ಬಾಲ ಜೀತ ಕಾರ್ಮಿಕರ ಕುಟುಂಬದ ಒಬ್ಬ ಹಿರಿಯ ಸದಸ್ಯರಿಗೂ ನೀಡುವ ಮುಖಾಂತರ ಪರಿಪೂರ್ಣ ಪುನರ್ವಸತಿಯನ್ನು ಕಲ್ಪಿಸುವುದು.

7) ಜಾಗೃತ ಸಮಿತಿಯ / ಪರಾಮರ್ಶಕ ಸಮಿತಿಯ ಸಭೆಗಳನ್ನು ನಿಯತಕಾಲಿಕವಾಗಿ ನಡೆಸಿ, ಪರಿಶೀಲನೆ ಮಾಡುವುದು, ಇತ್ಯಾದಿ ಕಾರ್ಯಗಳನ್ನು ತಪ್ಪದೇ ಕೈಗೊಳ್ಳುವುದು.

2. ಜೀತ ಪದ್ಧತಿಯು ನಿರಂತರ ಸಮಸ್ಯೆಯಾಗಿರುವುದರಿಂದ, ಜೀತ ಪದ್ಧತಿ ನಿರ್ಮೂಲನ ವಿಚಾರದಲ್ಲಿ ಕೈಗೊಂಡಿರುವ / ಕೈಗೊಳ್ಳಬೇಕಾದ ಕ್ರಮಗಳ ಕುರಿತು ಒಂದು ಟಿಪ್ಪಣಿಯನ್ನು ಸಿದ್ಧಪಡಿಸಿ, ವರ್ಗಾವಣೆ ಸಮಯದಲ್ಲಿ ಪದಮುಕ್ತ ಅಧಿಕಾರಿಯು ಪದಗ್ರಾಹಿ ಅಧಿಕಾರಿಗೆ ಪ್ರಭಾರ ವರ್ಗಾವಣೆ ಪ್ರಪತ್ರದೊಂದಿಗೆ ಅದನ್ನು ತಪ್ಪದೇ ಹಸ್ತಾಂತರಿಸುವುದು.

3. ಜಾಗೃತಿ ಸಮಿತಿಗಳಲ್ಲಿ ಸದಸ್ಯರಾಗಿ ನಾಮಕರಣಗೊಂಡಿರುವ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆ / ಸಾಮಾಜಿಕ ಕ್ರಿಯಾ ಗುಂಪುಗಳ ಪ್ರತಿನಿಧಿಗಳನ್ನು ಜೀತ ಪದ್ಧತಿ ನಿರ್ಮೂಲನೆ / ಜೀತವಿಮುಕ್ತರ ಪುನರ್ವಸತಿ ಸಂಬಂಧಿತ ಎಲ್ಲಾ ಕಾರ್ಯಗಳಲ್ಲಿ ತಪ್ಪದೇ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.

4. ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸಿದ ಪ್ರತಿ ಜೀತ ಕಾರ್ಮಿಕನಿಗೆ ಹಾಗೂ ಬಾಲ ಕಾರ್ಮಿಕ ಪದ್ಧತಿಯಿಂದ ಬಿಡುಗಡೆಗೊಳಿಸಲಾದ ಪ್ರತಿ ಬಾಲ ಕಾರ್ಮಿಕನ ಕುಟುಂಬದ ಹಿರಿಯ ಸದಸ್ಯರಿಗೆ ವಿಳಂಬಕ್ಕೆ ಅವಕಾಶ ನೀಡದೆ ಸರ್ಕಾರದ ವಿವಿಧ ಯೋಜನೆಗಳಡಿ, ಕ್ಷೇತ್ರ ಮಟ್ಟದಲ್ಲಿ ಲಭ್ಯವಿರುವ ಅನುದಾನದಲ್ಲಿ ಕೂಡಲೇ ಸೂಕ್ತ ವಸತಿ ಹಾಗೂ ಉದ್ಯೋಗಾವಕಾಶ ಸವಲತ್ತುಗಳನ್ನು ಒದಗಿಸುವುದು. ತದನಂತರ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಪೂರಕ ಪುನರ್ವಸತಿ ಸೌಲಭ್ಯಗಳನ್ನು ತಪ್ಪದೇ ಕಲ್ಪಿಸುವುದು.

5. ಗ್ರಾಮ ಪಂಚಾಯಿತಿ / ಹೋಬಳಿ ಮಟ್ಟದಲ್ಲಿ ನಡೆಯುವಂತಹ ಎಲ್ಲಾ ಸಭೆಗಳಲ್ಲಿ ಸ್ಥಳೀಯ ಜನ ಪ್ರತಿನಿಧಿಗಳು / ಸಂಘ-ಸಂಸ್ಥೆಗಳು / ಸರ್ಕಾರಿ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರಿಗೆ ಜೀತ ಪದ್ಧತಿ / ಜೀತ ಪ್ರಕರಣದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ನಿರಂತರ ಪಠ್ಯಸೂಚಿಯಾಗಿ ಪ್ರಸ್ತಾಪಿಸುವುದು.

6. ಧೃಢಪಟ್ಟ ಪ್ರತಿ ಜೀತ ಪ್ರಕರಣದಲ್ಲಿ ಮಾಲೀಕರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡುವುದರ ಒಂದಿಗೆ ವಿವಿಧ ಕಾಯ್ದೆಗಳಡಿ ವಿಚಾರಣೆಯನ್ನು ತೀವ್ರವಾಗಿ ಪರಿಶೀಲಿಸುವುದರಿಂದ ಗರಿಷ್ಠ ಶಿಕ್ಷೆ ಸಿಗುವಂತೆ ಮಾಡಬಹುದಾಗಿರುತ್ತೆ.

7. ಪರಿವೀಕ್ಷಣಾ ಸಮಯದಲ್ಲಿ ಕಂಡುಬರುವ ಬಾಲ ಕಾರ್ಮಿಕರು ಜೀತಕ್ಕೆ ಒಳಪಟ್ಟಿದ್ದಾರೆಯೇ ಎಂದು ಪರಿಶೀಲಿಸುವ ಸಲುವಾಗಿ, ಮನೆ / ಔದ್ಯೋಗಿಕ ಕೆಲಸಕ್ಕೆ ನೇಮಿಸಿಕೊಂಡಿರುವ ಬಾಲ ಕಾರ್ಮಿಕರ ಮಾಲೀಕರುಗಳಿಗೆ 1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯಡಿ ಸಹ ಸೂಚನಾಪತ್ರ (ನೋಟೀಸ್) ವನ್ನು ತಪ್ಪದೇ ನೀಡುವುದು.

ಜೀತ ಪದ್ಧತಿ ಎಂಬುದು ಮಾನವ ಸಮಾಜಕ್ಕೆ ಅಂಟಿಕೊಂಡಿರುವ ಕಳಂಕಿತ ಪಿಡುಗಾಗಿದ್ದು, ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಸಹಿ/-

(ವೀ. ಪ. ಬಳಿಗಾರ)

ಸರ್ಕಾರದ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು } ಇವರಿಗೆ ಸೂಕ್ತ ಕ್ರಮಕ್ಕಾಗಿ.

ವೀ.ಪ.ಬಳಿಗಾರ, ಭಾಆಸೇ,
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-1.

ಅ.ಸ.ಪ.ಸಂ:ಗ್ರಾಅಪ:13:ಆರ್‌ಬಿಎಲ್:2003

ದಿನಾಂಕ:18-8-2004.

ಪ್ರಿಯ ಶ್ರೀ.

ವಿಷಯ:- ಜೀತದಾಳುಗಳ ವಿಮುಕ್ತಿ ಹಾಗೂ ಪುನರ್ವಸತಿ ಕಾರ್ಯವನ್ನು ವಿಳಂಬಕ್ಕೆ ಅವಕಾಶ ನೀಡದೆ ಕೈಗೊಳ್ಳುವ ಬಗ್ಗೆ.

ಉಲ್ಲೇಖ:- ದಿನಾಂಕ:28.7.2004ರಂದು ಶ್ರೀ.ಕೆ.ಆರ್. ವೇಣುಗೋಪಾಲ್, ವಿಶೇಷ ವರದಿಗಾರರು, ರಾ.ಮಾ.ಹ.ಆಯೋಗ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

****

1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯ ಕಲಂ 13 ರ ಅನ್ವಯ ಜಿಲ್ಲಾ ದಂಡಾಧಿಕಾರಿಯೇ ಜಿಲ್ಲಾ ಮಟ್ಟದ ಜಾಗೃತ ಸಮಿತಿಯ ಅಧ್ಯಕ್ಷರು ಹಾಗೂ ಉಪವಿಭಾಗೀಯ ದಂಡಾಧಿಕಾರಿಯೇ ಉಪ ವಿಭಾಗ ಮಟ್ಟದ ಜಾಗೃತ ಸಮಿತಿಯ ಅಧ್ಯಕ್ಷರು ಆಗಿರುತ್ತಾರೆ. ಸದರಿ ಕಾಯ್ದೆಯ ಕಲಂ 14 ರ ಉಪ ಪ್ರಕರಣ 1(ಬಿ) ರಂತೆ ಜೀತ ವಿಮುಕ್ತರುಗಳಿಗೆ ಆರ್ಥಿಕ ಹಾಗೂ ಸಾಮಾಜಿಕ ಪುನರ್ವಸತಿಯನ್ನು ಕಲ್ಪಿಸುವುದು ಈ ಜಾಗೃತ ಸಮಿತಿಗಳ ಆದ್ಯ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ. ಇದಲ್ಲದೆ, ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆ ಅನ್ವಯ, ಈ ಜೀತವಿಮುಕ್ತರುಗಳಿಗೆ ಕೃಷಿ ಆಧಾರಿತ ಅಥವಾ ಇತರೆ ವೃತ್ತಿ/ಕುಶಲತೆ ಆಧಾರಿತ ಪುನರ್ವಸತಿ ಸೌಲಭ್ಯ ಗಳನ್ನು ಜಿಲ್ಲಾ ದಂಡಾಧಿಕಾರಿಯೇ ಗುರುತಿಸಿ ಒದಗಿಸಬೇಕಾಗಿರುತ್ತದೆ.

ಜೀತ ಕಾರ್ಮಿಕರುಗಳನ್ನು ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸಿದ ನಂತರ, ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಡಿ ಅನುದಾನ ನಿರೀಕ್ಷಿಸಿ, ಅವರುಗಳಿಗೆ ಪುನರ್ವಸತಿ ಕಲ್ಪಿಸುವ ಕಾರ್ಯವು ವಿಳಂಬ / ಕುಂಠಿತಗೊಂಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಚಾರದ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರರಾದ ಶ್ರೀ.ಕೆ.ಆರ್.ವೇಣುಗೋಪಾಲ್‌ರವರು ಸಹ ದಿನಾಂಕ:28.7.2004 ರಂದು ನಡೆದ ಸಭೆಯಲ್ಲಿ ಅಸಮಾಧಾನ ವನ್ನು ವ್ಯಕ್ತಪಡಿಸಿರುತ್ತಾರೆ. ಜೀತವಿಮುಕ್ತರುಗಳಿಗೆ ಸಕಾಲದಲ್ಲಿ ಪುನರ್ವಸತಿ ಸೌಲಭ್ಯಗಳನ್ನು ಒದಗಿಸದಿದ್ದಲ್ಲಿ, ಅವರುಗಳು ಜೀತ ಪದ್ಧತಿಗೆ ಮರಳುವ ಸಾಧ್ಯತೆಗಳು ಉಂಟಾಗುತ್ತವೆ.

ಆದುದರಿಂದ, ನೀವು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಂದಿಗೆ ಕೂಡಿ, ನಿಮ್ಮ ಜಿಲ್ಲೆಯಲ್ಲಿ ಹಾಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಬಡತನ ನಿರ್ಮೂಲನಾ ಯೋಜನೆಗಳ ಅಡಿಯಲ್ಲಿ ಆದ್ಯತೆ ಮೇರೆ ಜೀತವಿಮುಕ್ತರುಗಳ ಪುನರ್ವಸತಿ ಕಾರ್ಯವನ್ನು ಕೈಗೊಳ್ಳುವಂತೆ ಕೋರಿದೆ ಹಾಗೂ ಜೀತವಿಮುಕ್ತರಿಗೆ ನೀಡಬೇಕಾದ ಹಣವನ್ನು ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನದಿಂದ ತಕ್ಷಣ ಬಿಡುಗಡೆ ಮಾಡಿ, ತದನಂತರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿಯ ಸಭೆ ನಡವಳಿಯೊಂದಿಗೆ ಸಲ್ಲಿಸುವ ಪ್ರಸ್ತಾವನೆಯ ಮೇರೆಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವ ಅನುದಾನದಲ್ಲಿ ಸದರಿ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳ ಬಹುದಾಗಿರುತ್ತದೆ.

ಮೇಲ್ಕಂಡ ವಿಚಾರವನ್ನು ಅತಿ ಗಂಭೀರಯುತವಾಗಿ ಪರಿಗಣಿಸಿ, ಕೂಡಲೇ ಕಾರ್ಯೋನ್ಮುಖರಾಗುವಿರೆಂದು ಆಶಿಸುತ್ತೇನೆ.

ಆದರಗಳೊಂದಿಗೆ,

ನಿಮ್ಮ ವಿಶ್ವಾಸಿ,
ಸಹಿ/-
(ವೀ. ಪ. ಬಳಿಗಾರ)

ಶ್ರೀ/ಶ್ರೀಮತಿ. (ಹೆಸರಿನಲ್ಲಿ)
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,
ರಾಜ್ಯದ ಎಲ್ಲಾ 27 ಜಿಲ್ಲೆಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮವನ್ನು ಸಂಪನ್ಮೂಲ ಕ್ರೋಢೀಕರಣ ಮುಖಾಂತರ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ:- 1.ದಿನಾಂಕ:9-10 ಅಕ್ಟೋಬರ್ 2003ರಂದು ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು ಇಲ್ಲಿ ಜೀತ ಪದ್ಧತಿ / ಬಾಲ ಕಾರ್ಮಿಕ ನಿರ್ಮೂಲನೆ ಕುರಿತು ನಡೆದ 2 ದಿನಗಳ ಕಾರ್ಯಗಾರದ ಶಿಫಾರಸ್ಸುಗಳು.

2.ದಿನಾಂಕ:28.7.2004ರಂದು ಶ್ರೀ.ಕೆ.ಆರ್. ವೇಣುಗೋಪಾಲ್, ಭಾಆಸೇ(ನಿವೃತ್ತ), ವಿಶೇಷ ವರದಿಗಾರರು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

*****

**ಪ್ರಸ್ತಾವನೆ:**

ರಾಜ್ಯದಲ್ಲಿ ಜೀತ ಪದ್ಧತಿ ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ಸಂಬಂಧ ವಿವಿಧ ಕಾಯ್ದೆಗಳ ಅನುಷ್ಠಾನ ಕುರಿತು ಜಿಲ್ಲಾ ಮಟ್ಟದ ಹಾಗೂ ಹಲವು ಉಪ ವಿಭಾಗೀಯ ಮಟ್ಟದ ಕಂದಾಯ, ಆರಕ್ಷಕ, ಕಾರ್ಮಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಧಿಕಾರಿಗಳಿಗೆ 2 ದಿನಗಳ ಜಾಗೃತ ಕಾರ್ಯಾಗಾರವನ್ನು ಬೆಂಗಳೂರಿನ ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ದಿನಾಂಕ:9-10 ಅಕ್ಟೋಬರ್ 2003 ರಂದು ಏರ್ಪಡಿಸಲಾಗಿತ್ತು. ಸದರಿ ಕಾರ್ಯಗಾರದಲ್ಲಿ ಜೀತವಿಮುಕ್ತರಿಗೆ ಹಾಗೂ ಬಾಲ ಕಾರ್ಮಿಕ ವಿಮುಕ್ತರಿಗೆ ಪುನರ್ವಸತಿ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲು ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಅನುದಾನವನ್ನು ಕ್ರೋಢೀಕರಣ ಮಾಡುವ ಉದ್ದೇಶಕ್ಕಾಗಿ, ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸದಸ್ಯರುಗಳನ್ನಾಗಿ ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಬೇಕು ಎಂಬ ಅಭಿಪ್ರಾಯವು ಶಿಫಾರಸ್ಸಾಗಿ ಮೂಡಿಬಂದಿರುತ್ತದೆ.

ಮೇಲ್ಕಂಡ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ಸಲುವಾಗಿ ದಿನಾಂಕ: 28.7.2004ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರರಾದ ಶ್ರೀ.ಕೆ.ಆರ್.ವೇಣುಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 'ಜಿಲ್ಲಾ ಮಟ್ಟದಲ್ಲಿ ಜಾಗೃತಿ/ಪರಾಮರ್ಶಕ ಸಮಿತಿಗಳು ಇದ್ದಾಗ್ಯೂ, ಜೀತವಿಮುಕ್ತರ ಪುನರ್ವಸತಿ ಕಾರ್ಯವನ್ನು ತುರ್ತಾಗಿ ಆದ್ಯತೆ ಮೇಲೆ ಕೈಗೊಳ್ಳುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾಧಿಕಾರಿಯನ್ನು ಸದಸ್ಯರನ್ನಾಗಿ ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸದಸ್ಯ-ಕಾರ್ಯದರ್ಶಿಯನ್ನಾಗಿ ಒಳಗೊಂಡಂತೆ ತ್ರಿಸದಸ್ಯ ಸಮಿತಿಯನ್ನು ರಚಿಸುವಂತೆ' ತೀರ್ಮಾನವಾಗಿರುತ್ತದೆ.

ಹಂಗರಹಳ್ಳಿ ಜೀತಪ್ರಕರಣದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಕೈಗೊಳ್ಳಲಾದ ಮರು ಸಮೀಕ್ಷೆಯಿಂದ 2040 ಜೀತದಾಳುಗಳು ಪತ್ತೆಯಾಗಿದ್ದು ಇವರನ್ನು ಜೀತ ಪದ್ಧತಿಯಿಂದ ವಿಮುಕ್ತಗೊಳಿಸಲಾಗಿದೆ. ಈ ಪೈಕಿ 1890 ಜೀತ ವಿಮುಕ್ತರುಗಳಿಗೆ ಪುನರ್ವಸತಿ ಒದಗಿಸಲು ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಡಿ ರೂ.37.08 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಜೀತವಿಮುಕ್ತರುಗಳ ಪುನರ್ವಸತಿ ಕಾರ್ಯವನ್ನು ಸಕಾಲದಲ್ಲಿ ಕೈಗೊಳ್ಳದಿದ್ದಲ್ಲಿ ಅವರುಗಳು ಜೀತಪದ್ಧತಿಗೆ ಮರಳುವ ಸಂಭವವಿರುವುದರಿಂದ, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಸಮರೋಪಾದಿಯಲ್ಲಿ ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ. ಕೇಂದ್ರ ಪುರಸ್ಕೃತ ಕಾರ್ಯ ಯೋಜನೆ ಅಡಿ ಕೇಂದ್ರ ಸರ್ಕಾರದಿಂದ ಅನುದಾನ ಪಡೆದು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಕಾಲಾವಕಾಶ

ಬೇಕಾಗಿದ್ದು, ಆದರೆ ಜೀತವಿಮುಕ್ತರುಗಳಿಗೆ ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ಯೋಜನೆಗಳ ಅಡಿಯಲ್ಲಿ ಪುನರ್ವಸತಿ ಸೌಲಭ್ಯಗಳನ್ನು ತುರ್ತಾಗಿ ಒದಗಿಸಬಹುದಾಗಿರುತ್ತೆ. ಆದುದರಿಂದ ಹಾಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಅನುದಾನವನ್ನು ಕ್ರೋಢೀಕರಿಸಿ, ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವ ಸಂಬಂಧ ತುರ್ತು ಕ್ರಮ ಕೈಗೊಳ್ಳಲು ಜಿಲ್ಲಾ ಮಟ್ಟದಲ್ಲಿ ಸಮಿತಿಯೊಂದನ್ನು ರಚಿಸಲು ಸರ್ಕಾರವು ಉದ್ದೇಶಿಸಿರುತ್ತೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ.13.ಆರ್‌ಬಿಎಲ್.2003, ಬೆಂಗಳೂರು, ದಿನಾಂಕ: 06.09.2004.**

1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆ ಹಾಗೂ ನಿಯಮಗಳಂತೆ ಜೀತ ಪದ್ಧತಿ ನಿರ್ಮೂಲನೆಗೆ ಹಾಗೂ ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಂತೆ ಜೀತವಿಮುಕ್ತರುಗಳ ಪುನರ್ವಸತಿಗೆ ಅಗತ್ಯ ಕ್ರಮಗಳನ್ನು ಅದ್ಯತೆ ಮೇರೆ ಕೈಗೊಳ್ಳುವ ಸಲುವಾಗಿ ಪ್ರತಿ ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡಂತೆ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿದೆ.

1. ಜಿಲ್ಲಾ ಪಂಚಾಯತಿಯ ಅಧ್ಯಕ್ಷರು .....ಅಧ್ಯಕ್ಷರು
2. ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, .....ಸದಸ್ಯರು
3. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ .....ಸದಸ್ಯ ಕಾರ್ಯದರ್ಶಿ

1. ಈ ಸಮಿತಿಯು ತಕ್ಷಣದಿಂದ ಜಾರಿಗೆ ಬರುವಂತೆ ಅಸ್ತಿತ್ವಕ್ಕೆ ಬರತಕ್ಕದ್ದು.
2. ಈ ಸಮಿತಿಯ ಮುಖ್ಯ ಉದ್ದೇಶವು ಜೀತವಿಮುಕ್ತರುಗಳನ್ನು ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಿದ ಕೂಡಲೇ ಜಿಲ್ಲಾ ಮಟ್ಟದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಅನುದಾನವನ್ನು ಕ್ರೋಢೀಕರಿಸಿ ಸೂಕ್ತ ಪುನರ್ವಸತಿ ಸೌಲಭ್ಯಗಳನ್ನು ಅವರಿಗೆ ಕಲ್ಪಿಸುವುದಾಗಿರುತ್ತದೆ.
3. ಈ ಸಮಿತಿಯು ಕನಿಷ್ಟ ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಭೆ ಸೇರಿ, ಜೀತವಿಮುಕ್ತರುಗಳಿಗೆ ಒದಗಿಸಲಾದ ಪುನರ್ವಸತಿ ಸೌಲಭ್ಯಗಳ ಬಗ್ಗೆ ಪ್ರಗತಿ ಪರಿಶೀಲನೆ ನಡೆಸತಕ್ಕದ್ದು.
4. ಈ ಸಮಿತಿಯು ಜೀತ ಪದ್ಧತಿ ನಿರ್ಮೂಲನೆ ಹಾಗೂ ಜೀತವಿಮುಕ್ತರುಗಳ ಪುನರ್ವಸತಿಗೆ ಕ್ರಮವಾಗಿ ಸಂಬಂಧಿಸಿದ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿ ನಡವಳಿಗಳನ್ನು ಪರಿಶೀಲಿಸಿ, ಅ ಸಮಿತಿಗಳಿಗೆ ಸೂಕ್ತ ಮಾರ್ಗದರ್ಶನಗಳನ್ನು ನೀಡತಕ್ಕದ್ದು.
5. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ.ಗ್ರಾಅಪ.265.ಪಿಬಿಎಸ್.2004 ದಿನಾಂಕ:3-9-2004ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-

(ಟಿ.ಶಾಮ್‌ಭಟ್)

ನಿರ್ದೇಶಕರು (ಸ್ವ.ಉ.ಕಾ.) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂ.ಗ್ರಾಅಪ.13.ಆರ್‌ಬಿಎಲ್.2003

ನಿರ್ದೇಶಕರ ಕಛೇರಿ,
ಸ್ವ ಉದ್ಯೋಗ ಕಾರ್ಯಕ್ರಮಗಳು
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
3ನೇ ಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:17.09.2004

ಇವರಿಗೆ:
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ:- ದಿನಾಂಕ: 9-10 ಅಕ್ಟೋಬರ್ 2003ರಂದು ಬೆಂಗಳೂರಿನಲ್ಲಿ ನಡೆದ ಜೀತ ಪದ್ಧತಿ ಕುರಿತ 2 ದಿನಗಳ ಕಾರ್ಯಗಾರದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಸಮಸಂಖ್ಯೆಯ ಪತ್ರದ ದಿನಾಂಕ:20.1.04.

****

ಜೀತಪದ್ಧತಿ ವಿಷಯ ಕುರಿತು, ದಿನಾಂಕ:9-10 ಅಕ್ಟೋಬರ್ 2003ರಂದು ಬೆಂಗಳೂರಿನಲ್ಲಿ ನಡೆದ 2 ದಿನಗಳ ಕಾರ್ಯಾಗಾರದಲ್ಲಿ ರಾಜ್ಯದ ಜೀತವಿಮುಕ್ತರುಗಳಿಗೆ ಅರೋಗ್ಯ ವಿಮೆಯನ್ನು ಒದಗಿಸಬೇಕು ಎಂಬ ಅಭಿಪ್ರಾಯವು ಶಿಫಾರಸ್ಸಾಗಿ ಮೂಡಿ ಬಂದಿರುತ್ತದೆ. ರಾಜ್ಯ ಸರ್ಕಾರವು ಸಹಕಾರ ಇಲಾಖೆಯ ವತಿಯಿಂದ ದಿನಾಂಕ:1.6.2003 ರಿಂದ ಜಾರಿಗೆ ತಂದಿರುವ ಯಶಸ್ವಿನಿ ರೈತ ಆರೋಗ್ಯ ಯೋಜನೆ ವಿಚಾರವು ನಿಮಗೆ ತಿಳಿದಿರುವ ವಿಷಯ. ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯು 1976 ರಲ್ಲಿ ಅನುಷ್ಠಾನಕ್ಕೆ ಬಂದ ದಿನದಿಂದ ಈವರೆಗೆ ಜೀತ ಪದ್ಧತಿಯಿಂದ ಬಿಡುಗಡೆ ಗೊಳಿಸಿರುವ ಸಾಕಷ್ಟು ಜೀತವಿಮುಕ್ತರುಗಳಿಗೆ ಲಭ್ಯತೆ ಅನುಸಾರ ಸರ್ಕಾರಿ ಜಮೀನುಗಳನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುತ್ತಾರೆ.

ಹಾಗೆ ಸರ್ಕಾರಿ ಜಮೀನುಗಳನ್ನು ಮಂಜೂರಾಗಿರುವಂತಹ ಹಾಗೂ ಖಾಸಗಿ ಜಮೀನುಗಳನ್ನು ಹೊಂದಿರುವಂತಹ ಎಲ್ಲಾ ಜೀತವಿಮುಕ್ತರುಗಳು ರೈತರು ಎಂದು ಪರಿಗಣಿಸಲ್ಪಡುವುದರಿಂದ ಅವರುಗಳನ್ನು ಯಾವುದಾದರೂ ಸ್ಥಳೀಯ ಸಹಕಾರ ಸಂಘದ ಸದಸ್ಯರನ್ನಾಗಿ ನೋಂದಣಿ ಮಾಡಿಸುವ ಮುಖಾಂತರ ಅವರುಗಳಿಗೆ ಯಶಸ್ವಿನಿ ಯೋಜನೆಯಡಿ ಆರೋಗ್ಯ ವಿಮೆ/ಭದ್ರತೆಯ ಸೌಲಭ್ಯವನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದೆ.

ಮೇಲ್ಕಂಡ ವಿಚಾರವನ್ನು ಗಂಭೀರಯುತವಾಗಿ ಪರಿಗಣಿಸಿ, ಅಗತ್ಯ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು, ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಿದೆ.

ತಮ್ಮ ವಿಶ್ವಾಸಿ,

ಸಹಿ/-
ನಿರ್ದೇಶಕರು,
ಸ್ವ ಉದ್ಯೋಗ ಕಾರ್ಯಕ್ರಮಗಳು
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ಸಂ:ಗ್ರಾಅಪ:17.ಆರ್‌ಬಿಎಲ್.2004

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ-2, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:08.11.2004

## ಸುತ್ತೋಲೆ

ವಿಷಯ: ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯಯೋಜನೆಯನ್ನು 2005-06ರಿಂದ ಜಾರಿಗೆ ಬರುವಂತೆ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ವರ್ಗಾವಣೆಗೊಳಿಸಿ, ಗ್ರಾಮ ಪಂಚಾಯತಿಗಳಿಗೆ ವಹಿಸಿ ಕಾರ್ಯ ಅನುಷ್ಠಾನಗೊಳಿಸುವ ಬಗ್ಗೆ- ಮಾರ್ಗಸೂಚಿಗಳು.

ಉಲ್ಲೇಖ: ಸರ್ಕಾರದ ಆದೇಶ ಸಂ:ಗ್ರಾಅಪ.146.ಯೋಉಮಾ.2004 ದಿನಾಂಕ:16.10.2004.

*****

ಕರ್ನಾಟಕ ವಿಧಾನಸಭೆ ಭರವಸೆ ಸಂಖ್ಯೆ. 27/2003 ರ ಸಂಬಂಧ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಆಡಳಿತ, ಹಣಕಾಸು ಹಾಗೂ ಸಿಬ್ಬಂದಿಯನ್ನು ಹಸ್ತಾಂತರಿಸುವಂತೆ ಹಾಗೂ ಜಿಲ್ಲಾ ವಲಯದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಿದ್ದು ಇದುವರೆಗೂ ರಾಜ್ಯ ವಲಯದಲ್ಲೇ ಮುಂದುವರೆಯುತ್ತಿರುವ ವಿವಿಧ ಕಾರ್ಯಕ್ರಮಗಳನ್ನು ಕೂಡಲೇ ಜಿಲ್ಲಾ ವಲಯಕ್ಕೆ ವರ್ಗಾಯಿಸಿ, ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ತರುವಂತೆ ಶಿಫಾರಸ್ಸು ಮಾಡಿರುತ್ತೆ. ಪೂರಕವಾಗಿ, ಉಲ್ಲೇಖದಲ್ಲಿನ ಸರ್ಕಾರಿ ಆದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಹಾಲಿ ರಾಜ್ಯ ವಲಯದ ಕಾರ್ಯಕ್ರಮವಾಗಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯನ್ನು ಜಿಲ್ಲಾ ವಲಯಕ್ಕೆ ವರ್ಗಾಯಿಸಲಾಗಿದೆ ಎಂದೂ ಹಾಗೂ ಅನುಬಂಧ-3ರ ಪ್ರಕಾರ ಗ್ರಾಮ ಪಂಚಾಯತಿಗಳಿಗೆ ಕಾರ್ಯ ಹಂಚಿಕೆ ಮಾಡಿ ವಹಿಸಲಾಗಿದೆ ಎಂದೂ ತಿಳಿಸಿರುತ್ತಾರೆ. ಇದಲ್ಲದೆ, ಸದರಿ ಆದೇಶದಲ್ಲಿ ಹಾಗೆ ವರ್ಗಾಯಿಸಲಾದ ಕಾರ್ಯಕ್ರಮಗಳು 2004-05 ನೇ ಸಾಲಿನಲ್ಲಿ ರಾಜ್ಯ ವಲಯದಲ್ಲೇ ಮುಂದುವರೆಯುವುದಾಗಿ ಹಾಗೂ 2005-06 ನೇ ಸಾಲಿನಿಂದ ಜಿಲ್ಲಾ ವಲಯ ಕಾರ್ಯಕ್ರಮಗಳಾಗಿ ಅನುದಾನದೊಂದಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಅಳವಡಿಸಬೇಕು ಎಂದು ಸೂಚಿಸಲಾಗಿದೆ.

1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯ ಕಲಂ 14 ರ ಅನ್ವಯ ಜಿಲ್ಲಾ ದಂಡಾಧಿಕಾರಿಯು ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಮುಖಾಂತರ ಜೀತವಿಮುಕ್ತರುಗಳಿಗೆ ಅಗತ್ಯ ಆರ್ಥಿಕ ಹಾಗೂ ಸಾಮಾಜಿಕ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ. 1978 ರಿಂದ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆ ಅನ್ವಯ ಜಿಲ್ಲಾ ದಂಡಾಧಿಕಾರಿಯೇ ಜೀತವಿಮುಕ್ತರುಗಳಿಗೆ ಅವಶ್ಯ ಪುನರ್ವಸತಿ ಕಾರ್ಯಕ್ರಮವನ್ನು ರೂಪಿಸಿ, ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ. ಸದರಿ ಯೋಜನೆ ಅನ್ವಯ, ಕೇಂದ್ರ ಪಾಲಿನ ಅನುದಾನ (ಶೇ.50) ಪಡೆಯಲು ಕೇಂದ್ರ ಸರ್ಕಾರಕ್ಕೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿ ಸಭೆ ನಡವಳಿಯೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ, 1977 ರ ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು ಅಡಿಯಲ್ಲಿ ಇಲಾಖಾವಾರು ವಿಷಯ ಹಂಚಿಕೆ ಮಾಡುವಾಗ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವಹಿಸಲಾಗಿದೆ.

ಪೂರಕವಾಗಿ, ಸರ್ಕಾರವು ಆದೇಶ ಸಂ:ಆರ್‌ಡಿಪಿ.65.ಆರ್‌ಬಿಎಲ್.85 ಬೆಂಗಳೂರು, ದಿನಾಂಕ:12.11.1987 ರಲ್ಲಿ ಪ್ರತಿ ಜಿಲ್ಲಾ ಮಟ್ಟದಲ್ಲಿ ಅಂದಿನ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿಯನ್ನು ಪುನರ್‌ರಚನೆ ಮಾಡಿ, ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯನ್ವಯ ಜೀತವಿಮುಕ್ತರ ಪುನರ್ವಸತಿಗೆ ಅಗತ್ಯ ಕ್ರಮಕೈಗೊಳ್ಳಲು ಆ ಸಮಿತಿಗೆ ಸಂಪೂರ್ಣ ಅಧಿಕಾರವನ್ನು ಪ್ರದತ್ತ ಮಾಡಿರುತ್ತದೆ. ಅದರಂತೆ ಹಾಲಿ ಜಿಲ್ಲಾ ಪಂಚಾಯತ್‌ಗಳ ಮುಖಾಂತರ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಕೇಂದ್ರ ಸರ್ಕಾರವು 2004 ಫೆಬ್ರವರಿ ಮಾಹೆಯಲ್ಲಿ ಹೊರತಂದಿರುವ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಹಾಗೂ ಪುನರ್ವಸತಿ ಕುರಿತ ಪುಸ್ತಕದಲ್ಲಿ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವಂತೆ ಸೂಚಿಸಿರುತ್ತದೆ.

1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆ ಹಾಗೂ ನಿಯಮಗಳು ಅಡಿಯಲ್ಲಿ ಅಥವಾ 1978 ರ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಯಾವ ವಲಯ ದಡಿ ನಿರ್ವಹಿಸಬೇಕೆಂಬ ಸ್ಪಷ್ಟ ನಿರ್ದೇಶನ ಇರುವುದಿಲ್ಲ. ಆದಾಗ್ಯೂ ಉಲ್ಲೇಖದಲ್ಲಿನ ಸರ್ಕಾರಿ ಆದೇಶ ದಿನಾಂಕ: 16.10.2004 ರಲ್ಲಿ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮವನ್ನು ರಾಜ್ಯ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯು ಶಿಫಾರಸ್ಸು ಮಾಡಿದೆ ಎಂಬ ಕಾರಣದಿಂದ ಜಿಲ್ಲಾ ವಲಯಕ್ಕೆ ವರ್ಗಾಯಿಸಿ, ಗ್ರಾಮ ಪಂಚಾಯತಿಗಳಿಗೆ

ಅನುಷ್ಠಾನ ಕಾರ್ಯ ಹಂಚಿಕೆ ಮಾಡಿರುವುದರಿಂದ, ಕೇಂದ್ರ ಸರ್ಕಾರವು ರೂಪಿಸಿರುವ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯನ್ನು ಕ್ಷೇತ್ರ ಮಟ್ಟದಲ್ಲಿ ಗ್ರಾಮ ಪಂಚಾಯತಿಗಳ ಮುಖಾಂತರ ಅನುಷ್ಠಾನಗೊಳಿಸ ಬೇಕಾಗಿರುತ್ತದೆ.

ಆದುದರಿಂದ, ಜೀತವಿಮುಕ್ತರ ಪುನರ್ವಸತಿಗೆ ಸಂಬಂಧಿಸಿದ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯನ್ನು ದಿನಾಂಕ:1-4-2005 ರಿಂದ ಅನ್ವಯವಾಗುವಂತೆ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ವರ್ಗಾಯಿಸಿ, ಜೀತವಿಮುಕ್ತರ ಪುನರ್ವಸತಿ ಕಾರ್ಯವನ್ನು ಜಿಲ್ಲಾ ವಲಯ ಕಾರ್ಯಕ್ರಮವಾಗಿ ಕ್ಷೇತ್ರ ಮಟ್ಟದಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಸೂಚಿಸಿದೆ.

1. ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದ ಆಯವ್ಯಯ ಅಂದಾಜು ಪುಸ್ತಕ (ಸಂಪುಟ-5ರ) ಅನ್ವಯ ನಿಗಧಿಪಡಿಸಲಾಗಿರುವ ಲೆಕ್ಕಶೀರ್ಷಿಕೆ 2230 - ಕಾರ್ಮಿಕ ಮತ್ತು ಉದ್ಯೋಗ - 01 - ಕಾರ್ಮಿಕ - 197 - ತಾಲ್ಲೂಕು ಪಂಚಾಯತಿಗಳಿಗೆ ಸಹಾಯ - 1 - ತಾಲ್ಲೂಕು ಪಂಚಾಯತಿಗಳು - 01 - ಜೀತದಾಳುಗಳ ಪುನರ್ವಸತಿ - 051 - ಸಾಮಾನ್ಯ ವೆಚ್ಚಗಳು ಆಗಿರುತ್ತೆ.

2. ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮವು ದಿನಾಂಕ:1.4.2005 ರಿಂದ ಜಿಲ್ಲಾ ವಲಯ ಕಾರ್ಯಕ್ರಮವಾಗಿ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಬರುವುದರಿಂದ, 2005-06 ನೇ ಸಾಲಿನಿಂದ ಈ ಕಾರ್ಯಕ್ರಮಕ್ಕೆ ಬೇಕಾಗುವ ಅಂದಾಜು ಅನುದಾನವನ್ನು ಆ ಸಾಲಿನ ಜಿಲ್ಲಾ ಪಂಚಾಯತ್ ಬೇಡಿಕೆಯಲ್ಲಿ ತಪ್ಪದೇ ಸೇರಿಸಿಕೊಳ್ಳುವುದು.

3. ಸರ್ಕಾರಿ ಅಧಿಸೂಚನೆ ಸಂ:ಸಂವ್ಯಾಶಾಇ.51.ಶಾಸನ.2000 ಬೆಂಗಳೂರು, ದಿನಾಂಕ:1.9.2001 ರಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58ಎ ಗೆ ಪೂರಕವಾಗಿ ಅನ್ವಯ ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಆ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಜೀತ ಪ್ರಕರಣ ಕಂಡುಬಂದಲ್ಲಿ, ವರದಿಯನ್ನು ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗೆ (ಇಲ್ಲವಾದಲ್ಲಿ, ಸಂಬಂಧಪಟ್ಟ ಕಂದಾಯ ಉಪ ವಿಭಾಗೀಯ ದಂಡಾಧಿಕಾರಿಗೆ) ಕಡ್ಡಾಯವಾಗಿ ಸಲ್ಲಿಸುವುದು.

4. ಕಂದಾಯ ಉಪ ವಿಭಾಗೀಯ ದಂಡಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಯಲ್ಲಿ ಕಂಡುಬರುವ ವರದಿಯಾಗುವ ಎಲ್ಲಾ ಪ್ರಕರಣಗಳಲ್ಲಿ, ನಿಯಮಾನುಸಾರ ಜೀತ ಕಾರ್ಮಿಕರುಗಳನ್ನು (ಬಾಲ ಜೀತ ಕಾರ್ಮಿಕರನ್ನು ಒಳಗೊಂಡಂತೆ) ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಿ, ಅವರುಗಳಿಗೆ ಜೀತವಿಮುಕ್ತ ಪ್ರಮಾಣಪತ್ರಗಳನ್ನು ತಪ್ಪದೇ ನೀಡುವುದು. ಹಾಗೂ ಅದರ ಪ್ರತಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಕಾರ್ಯದರ್ಶಿಗೆ ಕಳುಹಿಸುವುದು.

5. ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಅಂತಹ ಜೀತವಿಮುಕ್ತ ಪ್ರಮಾಣಪತ್ರಗಳು ಸ್ವೀಕೃತಿ ಆದ ಕೂಡಲೇ, ಆ ಪಂಚಾಯತಿಯ ವಿಶೇಷ ಗ್ರಾಮ ಸಭೆಯನ್ನು ಕರೆಯುವುದು. ಆ ಸಭೆಗೆ ಸಂಬಂಧಪಟ್ಟ ಜೀತವಿಮುಕ್ತರುಗಳನ್ನು ಹಾಗೂ ಆ ಪಂಚಾಯತಿ ವ್ಯಾಪ್ತಿಯ ಎಲ್ಲಾ ಇಲಾಖೆ ಸಿಬ್ಬಂದಿಯವರನ್ನು ತಪ್ಪದೇ ಆಹ್ವಾನಿಸುವುದು. ಆ ಸಭೆಯಲ್ಲಿ ಅಂತಹ ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಜೀತವಿಮುಕ್ತರುಗಳೊಂದಿಗೆ ಸಮಾಲೋಚಿಸಿ, ಸಂಕ್ಷಿಪ್ತ ಕ್ರಿಯಾ ಯೋಜನೆಯನ್ನು ತಯಾರಿಸಿ ಗ್ರಾಮಸಭೆ ನಡವಳಿಯೊಂದಿಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುವುದು.

6. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತ್‌ಗಳಿಂದ ಅಂತಹ ಯೋಜನೆ ವರದಿ ಬಂದ ಕೂಡಲೇ, ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿಯ ವಿಶೇಷ ಸಭೆಯನ್ನು ಕರೆದು, ಸದರಿ ಕ್ರಿಯಾ ಯೋಜನೆಯಂತೆ ನಿಯಮಾನುಸಾರ ವಿವಿಧ ಯೋಜನೆಗಳಡಿ ಪುನರ್ವಸತಿ ಕಲ್ಪಿಸಲು ಅನುಮೋದನೆ ನೀಡುವುದಲ್ಲದೆ, ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಂತೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಪರಾಮರ್ಶಕ ಸಮಿತಿ ಸಭೆ ನಡವಳಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದು.

7. ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ.50:50 ರ ಅನುಪಾತದಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳು ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದು.

8. ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮದ ಹೆಸರಿನಲ್ಲಿ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಬಿಡುಗಡೆ ಮಾಡುವ ಅನುದಾನವನ್ನು ಪ್ರತ್ಯೇಕ ಖಾತೆಗೆ ಜಮಾ ಮಾಡುವುದು.

9. ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಸದರಿ ಕಾರ್ಯಕ್ರಮದ ಖಾತೆಗೆ ಅನುದಾನ ಜಮಾ ಆದ ಕೂಡಲೇ, ಆ ಪಂಚಾಯತಿಯ ಗ್ರಾಮ ಸಭೆ ಕರೆದು, ಆ ಸಭೆಯಲ್ಲಿ ಈ ಹಿಂದೆ ಅನುಮೋದಿತ ಕ್ರಿಯಾ ಯೋಜನೆ ಅನ್ವಯ ಸಂಬಂಧಪಟ್ಟ ಜೀತವಿಮುಕ್ತರುಗಳಿಗೆ ಸೂಕ್ತ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವುದು.

10. ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಈ ಯೋಜನೆಗೆ ಸಂಬಂಧಿಸಿದ ಖಾತೆಯಲ್ಲಿ ಪ್ರತಿ ವರ್ಷದ ಮಾರ್ಚ್ ಮಾಹೆಯ ಅಂತ್ಯಕ್ಕೆ ಯಾವುದೇ ಕಾರಣಕ್ಕೂ ಅನುದಾನವನ್ನು ಬಾಕಿ ಉಳಸಿಕೊಳ್ಳದೇ / ಆದ್ಯರ್ಪಣೆ ಮಾಡದೇ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಜೀತವಿಮುಕ್ತರುಗಳ ಪುನರ್ವಸತಿ ಸೌಲಭ್ಯಕ್ಕಾಗಿ ತಪ್ಪದೇ ವಿನಿಯೋಗಿಸುವುದು.

11. ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಹಣ ಬಳಕೆ ಪ್ರಮಾಣ ಪತ್ರ ಹಾಗೂ ಜೀತವಿಮುಕ್ತರುಗಳಿಗೆ ಒದಗಿಸಲಾದ ಪುನರ್ವಸತಿ ಸೌಲಭ್ಯಗಳ ಸಂಕ್ಷಿಪ್ತ ಪ್ರಗತಿ ವರದಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಆರ್ಥಿಕ ವರ್ಷಾಂತ್ಯಕ್ಕೆ / ಸಂದರ್ಭಾನುಸಾರ ತಪ್ಪದೇ ಸಲ್ಲಿಸುವುದು.

12. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಹಾಗೆ ಗ್ರಾಮ ಪಂಚಾಯತಿಗಳಿಂದ ಸ್ವೀಕೃತವಾಗುವ ಹಣ ಬಳಕೆ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಸರ್ಕಾರವು ಬಿಡುಗಡೆ ಮಾಡಿದ ಅನುದಾನಕ್ಕೆ ಕ್ರೋಢೀಕೃತ ಪರಿಪೂರ್ಣ ಹಣ ಬಳಕೆ ಪ್ರಮಾಣ ಪತ್ರವನ್ನು ಪ್ರಗತಿ ವರದಿಯೊಂದಿಗೆ ಸರ್ಕಾರಕ್ಕೆ ಆರ್ಥಿಕ ವರ್ಷಾಂತ್ಯಕ್ಕೆ / ಸಂದರ್ಭನುಸಾರ ಸಲ್ಲಿಸುವುದು.

13. ಜೀತವಿಮುಕ್ತರಿಗೆ ಒದಗಿಸಲಾದ ಪುನರ್ವಸತಿ ಸೌಲಭ್ಯಗಳನ್ನು ಆಯಾ ಜಿಲ್ಲಾ ಮಟ್ಟದ ಮತ್ತು ಉಪ ವಿಭಾಗ ಮಟ್ಟದ ಜಾಗೃತ ಸಮಿತಿಗಳು ತಪಾಸಣೆ ಮಾಡತಕ್ಕದ್ದು ಮತ್ತು ಪ್ರತಿ ಜೀತವಿಮುಕ್ತರಿಗೆ ಪುನರ್ವಸತಿ ಸೌಲಭ್ಯ ಒದಗಿಸುವ ಪೂರ್ಣ ಜವಾಬ್ದಾರಿ ಸದರಿ ಸಮಿತಿಗಳದ್ದಾಗಿರುತ್ತದೆ.

14. 2003-04 ನೇ ಸಾಲಿನಲ್ಲಿ ಈಗಾಗಲೇ ಈ ಯೋಜನೆಯಡಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಅನುದಾನವನ್ನು 2004 ಡಿಸೆಂಬರ್ ಅಂತ್ಯದೊಳಗಾಗಿ ಸಂಬಂಧಪಟ್ಟ ಜೀತವಿಮುಕ್ತರುಗಳ ಪುನರ್ವಸತಿಗಾಗಿ ವಿನಿಯೋಗಿಸಿ, ಕ್ರೋಢೀಕೃತ ಪರಿಪೂರ್ಣ ಹಣ ಬಳಕೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ ತಪ್ಪದೇ ಸಲ್ಲಿಸುವುದು.

15. ಈ ಯೋಜನೆಯು 2004-05 ನೇ ಸಾಲಿನಲ್ಲಿ ರಾಜ್ಯ ವಲಯ ಕಾರ್ಯಕ್ರಮವಾಗಿ ಮುಂದುವರೆಯಲಿರುವುದರಿಂದ, ಈ ಸಾಲಿನಲ್ಲಿ ಈ ಯೋಜನೆಯಡಿ ಜೀತವಿಮುಕ್ತರ ಪುನರ್ವಸತಿಗಾಗಿ ಅನುದಾನ ಬಿಡುಗಡೆಯಾದಲ್ಲಿ, ಆ ಅನುದಾನವನ್ನು ಹಾಲಿ ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿ ಜೀತವಿಮುಕ್ತರಿಗೆ ಪುನರ್ವಸತಿ ಒದಗಿಸುವ ಮುಖಾಂತರ, 2005 ಮಾರ್ಚ್ ಅಂತ್ಯದೊಳಗೆ ವಿನಿಯೋಗಿಸಿ, ಯಾವುದೇ ಕಾರಣಕ್ಕೆ ಅದ್ಯರ್ಪಣೆ ಮಾಡದೇ, ಹಣ ಬಳಕೆ ಪ್ರಮಾಣಪತ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸುವುದು.

(ಟಿಪ್ಪಣಿ: ಕಾರ್ಯದರ್ಶಿ, ಗ್ರಾಅಪಂರಾಜ್ ಇಲಾಖೆ
ರವರಿಂದ ಅನುಮೋದಿಸಲ್ಪಟ್ಟಿದೆ)

ಸಹಿ/-
(ಬಿ.ಎಮ್.ಶಿವಪ್ರಕಾಶ್)
ನಿರ್ದೇಶಕರು,
ಸ್ವ ಉದ್ಯೋಗ ಕಾರ್ಯಕ್ರಮಗಳು
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
3. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು
4. ರಾಜ್ಯದ ಎಲ್ಲಾ ಕಂದಾಯ ಉಪವಿಭಾಗಗಳ ಉಪವಿಭಾಗಾಧಿಕಾರಿಗಳು ಹಾಗೂ ಉಪವಿಭಾಗೀಯ ದಂಡಾಧಿಕಾರಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- "ನಮ್ಮ ಭೂಮಿ-ನಮ್ಮ ತೋಟ"- ಭೂರಹಿತ ಕೃಷಿಕಾರ್ಮಿಕರ ಯೋಜನೆ.

****

**ಪ್ರಸ್ತಾವನೆ:**

1.0 ಗ್ರಾಮೀಣ ಪ್ರದೇಶಗಳಲ್ಲಿ ಜೀವನಾಧಾರಕ್ಕೆ ಭೂಮಿಯೇ ಮೂಲ ಸಂಪನ್ಮೂಲ. ಗ್ರಾಮಗಳಲ್ಲಿ ಭೂಮಿಯೇ ಸಾಮಾಜಿಕ ಸ್ಥಾನಮಾನದ ಸಂಕೇತವಾಗಿದೆ. ಭೂರಹಿತ ಕೃಷಿ ಕಾರ್ಮಿಕರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳ ಕನಿಷ್ಠ ಮಟ್ಟದಲ್ಲಿರುತ್ತಾರೆ. ಅಲ್ಲದೆ ಈ ಕೃಷಿ ಕಾರ್ಮಿಕರು ಭೂಮಾಲೀಕರ ಕೃಪೆಯ ಮೇಲೆ ಅವಲಂಬಿತರಾಗಿರುತ್ತಾರೆ. ಇವರ ಅಭಿವೃದ್ಧಿಗಾಗಿ ವಿಶೇಷ ಒತ್ತು ಕೊಡುವುದು ಅವಶ್ಯಕವಾಗಿದೆ. ಆದುದರಿಂದ ರಾಜ್ಯದಲ್ಲಿ ಇರುವ ಭೂರಹಿತ ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರ "ನಮ್ಮ ಭೂಮಿ-ನಮ್ಮ ತೋಟ" ಎಂಬ ಹೊಸ ಯೋಜನೆಯನ್ನು 2005-06ನೇ ಸಾಲಿನಿಂದ ಜಾರಿಗೆ ತರಲು ತೀರ್ಮಾನಿಸಿದೆ.

**2.0 ಯೋಜನೆಯ ಉದ್ದೇಶ:**

ಭೂರಹಿತ ಕೃಷಿ ಕಾರ್ಮಿಕರಿಗೆ ಕೈತೋಟ ಬೆಳೆಸಲು ಭೂಮಿಯನ್ನು ನೀಡಿ ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿರತೆಯನ್ನು ಸುಧಾರಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

**3.0 ಫಲಾನುಭವಿಗಳ ಆಯ್ಕೆ:**

ಸರ್ಕಾರವು ನಿಗದಿಪಡಿಸಿದ ಅರ್ಹತೆಯ ಮಾನದಂಡದ ಪ್ರಕಾರ ವಾರ್ಡ್ ಸಭೆಯ ಶಿಫಾರಸ್ಸುಗಳನ್ನು ಪರಿಗಣಿಸಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮಸಭೆಯಲ್ಲಿಯೇ ಮಾಡಲಾಗುವುದು. ಮುಖ್ಯವಾದ ಮಾನದಂಡಗಳು ಕೆಳಗಿನಂತಿವೆ:

**(ಅ)** ಕುಟುಂಬಗಳು ಕನಿಷ್ಠ ಪಕ್ಷ ಎರಡು ತಲೆಮಾರು ಯಾವುದೇ ಕೃಷಿ ಭೂಮಿಯನ್ನು ಹೊಂದಿರಬಾರದು.

**(ಆ)** ಜೀವನಕ್ಕಾಗಿ ಕೃಷಿ ಕೆಲಸದ ಮೇಲೆ ಅವಲಂಬಿತರಾಗಿರಬೇಕು.

**4.0 ಭೂಮಿಯ ಪ್ರಮಾಣ ಮತ್ತು ಲಕ್ಷಣ:**

ಒಂದು ಕುಟುಂಬಕ್ಕೆ ರೂ.6000/-ದಲ್ಲಿ ಖರೀದಿಸಬಹುದಾದ ಸುಮಾರು 5 ಗುಂಟೆ ಖುಷ್ಕಿ ಜಮೀನು ಅಥವಾ 2.5 ಗುಂಟೆ ನೀರಾವರಿ ಜಮೀನನ್ನು ನೀಡಲು ಪ್ರಸ್ತಾಪಿಸಿದೆ. ಜಮೀನು ರಸ್ತೆ ಬದಿಗೆ ಅಥವಾ ಗ್ರಾಮಕ್ಕೆ ಹತ್ತಿರವಾಗಿ ಇರಬೇಕು ಮತ್ತು ಫಲವತ್ತಾಗಿರಬೇಕು. ಈ ಕಾರ್ಯಕ್ರಮದಡಿ, ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ಅಥವಾ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೇರಿರುವ ಭೂಮಿಯನ್ನು ಖರೀದಿಸಲಾಗುವುದಿಲ್ಲ.

**5.0 ಭೂಮಿ ಖರೀದಿ ಮತ್ತು ಹಂಚಿಕೆ:**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಗ್ರಾಮ ಪಂಚಾಯತಿಯು ಜಮೀನನ್ನು ಗುರುತಿಸಿ, ಅಗತ್ಯವಿರುವ ಪ್ರಮಾಣದ ಭೂಮಿಯನ್ನು ಖರೀದಿಸುತ್ತದೆ. ಕಾರ್ಯಕ್ರಮದ ಅನುಷ್ಠಾನ, ಭೂಮಿ ಗುರುತಿಸುವಿಕೆ ಮತ್ತು ಖರೀದಿಗಾಗಿ, ಕನಿಷ್ಠ ಪಕ್ಷ ಮೂರು ಫಲಾನುಭವಿಗಳನ್ನು ಆಯ್ಕೆ ಮಾಡಲು ಸಮಿತಿಯು ನಾಮಕರಣ ಮಾಡುವುದು. ಗುರುತಿಸಿದ ಭೂಮಿಯ ಫಲವತ್ತತೆ, ಇರುವ ಸ್ಥಳ, ಮಾರುಕಟ್ಟೆ ಬೆಲೆ ಆಧರಿಸಿ, ಭೂಮಿಯ ಖರೀದಿ ದರವನ್ನು ತಹಸೀಲ್ದಾರ್‌ರವರು ನಿಗದಿಪಡಿಸುವರು. ಜಮೀನನ್ನು 20 ವರ್ಷಗಳ ಕಾಲ ಭೂಪರಿವರ್ತನೆ ಅಥವಾ ಹಸ್ತಾಂತರಿಸದಂತೆ ಷರತ್ತು ವಿಧಿಸಿ ಅರ್ಹ ಕುಟುಂಬಕ್ಕೆ ಗ್ರಾಮ ಪಂಚಾಯತಿಯು ಜಮೀನು ನೀಡುವುದು. ಪತಿ ಮತ್ತು ಪತ್ನಿಯುವರ ಹೆಸರಿನಲ್ಲಿ ಜಂಟಿ ಪಟ್ಟಾವನ್ನು ನೀಡಲಾಗುವುದು. ಸ್ವ ಸಹಾಯ ಗುಂಪಿನ ಅರ್ಹ ಸದಸ್ಯರು ಜಂಟಿ ಹೆಸರುಗಳಲ್ಲಿ ಪಟ್ಟಾವನ್ನು ನೀಡಬೇಕಾಗಿರುತ್ತದೆ. ಈ ಉದ್ದೇಶಕ್ಕಾಗಿ ಹೊಸ ಸ್ವ ಸಹಾಯ ಗುಂಪುಗಳನ್ನು ಸಹ ರಚಿಸಬಹುದಾಗಿರುತ್ತದೆ. ಆದಷ್ಟು ಮಟ್ಟಿಗೆ ಸಮಾನ ವಿಸ್ತೀರ್ಣದ ಪ್ಲಾಟುಗಳನ್ನು ಜಮೀನಿನ ಮೇಲೆ ಗುರುತಿಸಿ, ಹಂಚಿಕೆಯನ್ನು ಆದಷ್ಟು ಮಟ್ಟಿಗೆ ಚೀಟಿ ಎತ್ತುವ ಮೂಲಕ ಮಾಡಬಹುದಾಗಿರುತ್ತದೆ.

**6.0 ಭೂಮಿಯ ಅಭಿವೃದ್ಧಿ:**

ಈ ಕೆಳಕಂಡ ಸರ್ಕಾರದ ಇಲಾಖೆಗಳು ಈ ಕಾರ್ಯಕ್ರಮದಡಿ ಫಲಾನುಭವಿಗಳಿಗೆ ನೀಡಿದ ಜಮೀನಿನ ಅಭಿವೃದ್ಧಿಗೆ ಸರ್ವ ಪ್ರಯತ್ನ ಮಾಡಬೇಕು.

1) ಜಲಾನಯನ ಅಭಿವೃದ್ಧಿ ಇಲಾಖೆ; 2) ತೋಟಗಾರಿಕೆ ಇಲಾಖೆ; 3) ಕೃಷಿ ಇಲಾಖೆ; 4) ರೇಷ್ಮೆ ಇಲಾಖೆ; 5) ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ; 6) ಸಮಾಜಕಲ್ಯಾಣ / ಹಿಂದುಳಿದ ವರ್ಗಗಳ / ಅಲ್ಪಸಂಖ್ಯಾತ ಇಲಾಖೆ; 7) ಸಾಮಾಜಿಕ ಅರಣ್ಯ ಇಲಾಖೆ; 8) ವಸತಿ ಇಲಾಖೆ; 9) ಗ್ರಾಮೀಣಾಭಿವೃದ್ಧಿ ಇಲಾಖೆ ಆದಷ್ಟು ಮಟ್ಟಿಗೆ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಸೌಲಭ್ಯಗಳನ್ನು ಈ ಯೋಜನೆಯಡಿ ಭೂಮಿ ಪಡೆದ ಫಲಾನುಭವಿಗಳಿಗೆ ನೀಡಲು ಪ್ರಯತ್ನಿಸಲಾಗುವುದು. ಈ ಯೋಜನೆಯ ಉದ್ದೇಶವನ್ನು ಸಾರ್ಥಕಗೊಳಿಸಲು ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಯು ಸಮನ್ವಯದಿಂದ ಕೆಲಸ ಮಾಡುವುದು.

**7.0 ಖರ್ಚಿನ ಅಂದಾಜು:**

ನೀರಾವರಿ ಜಮೀನಿಗೆ ಒಂದು ಎಕರೆಗೆ ಸರಾಸರಿ ರೂ.1,00,000-00 ಮತ್ತು ಖುಷ್ಕಿ ಜಮೀನಿಗೆ ಒಂದು ಎಕರೆಗೆ ಸರಾಸರಿ ರೂ.50,000-00 ಗಳನ್ನು ಅಂದಾಜಿಸಲಾಗಿದೆ. ಬೇಕಾದ ಒಟ್ಟು ಜಮೀನಿನ ಹಂಚಿಕೆಯಲ್ಲಿ ಶೇಕಡಾ 80 ರಷ್ಟು ಖುಷ್ಕಿ ಮತ್ತು ಶೇಕಡಾ 20 ರಷ್ಟು ನೀರಾವರಿ ಭೂಮಿಯಾಗಿರಬಹುದು. ಈ ಕಾರ್ಯಕ್ರಮದಡಿ 2005-06 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ.20.00 ಕೋಟಿ ಅನುದಾನದಿಂದ 32,000 ಕೃಷಿ ಕಾರ್ಮಿಕರ ಕುಟುಂಬಗಳನ್ನು ಈ ಯೋಜನೆಯಡಿ ತರಬಹುದು.

**8.0 ಗ್ರಾಮ ಪಂಚಾಯತಿಗಳ ಆಯ್ಕೆ:**

ಮೊದಲ ವರ್ಷ ಈ ಯೋಜನೆಯಡಿ ಪ್ರತಿ ತಾಲ್ಲೂಕಿನಲ್ಲಿ ಎರಡರಿಂದ ಮೂರು ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಗುವುದು. ಸರ್ವ ಕುಟುಂಬ ಸಮೀಕ್ಷೆ / ಜನಗಣತಿಯ ಪ್ರಕಾರ, ಭೂರಹಿತ ಕೃಷಿ ಕಾರ್ಮಿಕರು ಹೆಚ್ಚಾಗಿರುವ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡುವುದು. ಆಯ್ದ ಗ್ರಾಮ ಪಂಚಾಯತಿಗಳು ಸಮಗ್ರ ಅಭಿವೃದ್ಧಿಗಾಗಿ, ಎಲ್ಲಾ ಕುಟುಂಬಗಳನ್ನು ಆಯ್ಕೆ ಮಾಡುವುದು. ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಯಲ್ಲಿಟ್ಟು ಅಂತಿಮ ಅನುಮೋದನೆ ಪಡೆಯಬೇಕು. ಜಿಲ್ಲಾ ಪಂಚಾಯತಿಗಳು, ಸಲ್ಲಿಸಿರುವ ಅಂದಾಜು ಪಟ್ಟಿಯ ಅನುಸಾರ ಅನುದಾನವನ್ನು ಹಂಚಿಕೆ ಮಾಡಲಾಗುವುದು. ಭೂಮಿಯ ದರ ಹಾಗೂ ಅರ್ಹ ಕುಟುಂಬಗಳ ಸಂಖ್ಯೆಗಳ ಆಧಾರದ ಮೇರೆಗೆ ಜಿಲ್ಲಾ ಪಂಚಾಯತಿಗಳು ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದು.

**9.0 ಮಾರ್ಗ ಸೂಚಿಗಳು:**

ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ, ಅವಶ್ಯವಿರುವ ವಿವರವಾದ ಮಾರ್ಗಸೂಚಿಗಳನ್ನು ಆದೇಶದ ಅನುಬಂಧದಲ್ಲಿ ಲಗತ್ತಿಸಿದೆ. ಈ ಯೋಜನೆಯ ನಿರೂಪಣೆ, ಅನುಷ್ಠಾನ, ಉಸ್ತುವಾರಿ ಮತ್ತು ಮೌಲ್ಯಮಾಪನಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು, ಈ ಮಾರ್ಗಸೂಚಿಗಳು ಗ್ರಾಮ ಪಂಚಾಯತಿಗಳಿಗೆ ಮತ್ತು ಇತರೆ ಅಧಿಕಾರಿಗಳಿಗೆ ಸಹಕಾರಿಯಾಗಿರುತ್ತದೆ.

10.0 ರಾಜ್ಯದಲ್ಲಿ 2005-06 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ರೂ.20.00 ಕೋಟಿಯ ನಮ್ಮ ಭೂಮಿ-ನಮ್ಮ ತೋಟ ಯೋಜನೆಯನ್ನು ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಸಚಿವ ಸಂಪುಟವು ದಿನಾಂಕ:15-9-2005 ರಂದು ಅನುಮೋದನೆಯನ್ನು ನೀಡಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂ: ಗ್ರಾಅಪ 5 ಸ್ವಉಕಾ 2005, ಬೆಂಗಳೂರು, ದಿನಾಂಕ: 28-09-2005**

ಮೇಲಿನ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ 2005-06 ನೇ ಸಾಲಿನಿಂದ ನಮ್ಮ ಭೂಮಿ-ನಮ್ಮ ತೋಟ ಎಂಬ ಹೊಸ ಯೋಜನೆಯನ್ನು ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
(ಜಿ. ಬಿ. ಹಿರೇಮಣಿಯವರ್)
ನಿರ್ದೇಶಕರು (ಸ್ವ ಉದ್ಯೋಗ ಕಾರ್ಯಕ್ರಮಗಳು)
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆ.

ಓದಲಾಗಿದೆ:- 1.ಜೀತಪದ್ಧತಿ/ಬಾಲಕಾರ್ಮಿಕ ವಿಷಯ ಕುರಿತು ದಿನಾಂಕ:9-10 ಅಕ್ಟೋಬರ್ 2003 ರಂದು ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು ಇಲ್ಲಿ ನಡೆದ 2 ದಿನಗಳ ಕಾರ್ಯಾಗಾರದ ಶಿಫಾರಸ್ಸುಗಳು.

2.ದಿನಾಂಕ:12.7.2004ರಂದು ನಡೆದ ರಾಜ್ಯದ ಉನ್ನತ ಅಧಿಕಾರದ ಸಮಿತಿಯ ಸಭೆ ನಡವಳಿ.

*****

**ಪ್ರಸ್ತಾವನೆ:**

1. ದಿನಾಂಕ:9-10 ಅಕ್ಟೋಬರ್ 2003 ರಂದು ಬೆಂಗಳೂರಿನಲ್ಲಿ ನಡೆದ ಕಾರ್ಯಾಗಾರದಲ್ಲಿ ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯವನ್ನು ಒದಗಿಸುವ ಕಾರ್ಯವು ಇನ್ನೂ ರೂಪುಗೊಳ್ಳುತ್ತಿರುವ ಸಮಯದಲ್ಲಿ ಅವರುಗಳು ಹೊಸ ಸಾಲಗಳಿಗೆ ಮತ್ತೆ ಮಾರು ಹೋಗದಂತೆ ತಡೆಯುವ ಸಲುವಾಗಿ ರಾಜ್ಯ ಸರ್ಕಾರವು ಜೀತವಿಮುಕ್ತರುಗಳಿಗೆ ಪಿಂಚಣಿ ನೀಡಲು ಒಂದು ಯೋಜನೆಯನ್ನು ಸಿದ್ಧಪಡಿಸಬೇಕೆಂದು ಶಿಫಾರಸ್ಸಾಗಿರುತ್ತೆ.

2. ಕಾರಣ ಜೀತಕ್ಕೆ ಒಳಗಾದವರನ್ನು ಜೀತ ಪದ್ಧತಿಯಿ0ದ ಬಿಡುಗಡೆಗೊಳಿಸಿದ ನ0ತರ, ಅವರುಗಳಿಗೆ ಸರಕಾರವು ಮಾನವೀಯ ದೃಷ್ಟಿಯಿಂದ ಹಾಗೂ ತತ್‌ಕ್ಷಣದಿಂದ ಮಾಹೆಯಾನ ರೂ.300/-ಗಳನ್ನು ಸಹಾಯಧನ ರೂಪದಲ್ಲಿ ಎರಡು ವರ್ಷಗಳ ಕಾಲ ಒದಗಿಸುವ ಸಲುವಾಗಿ ರಾಜ್ಯ ಸರ್ಕಾರವು 2005-06 ನೇ ಸಾಲಿನಿಂದ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲು ಸಚಿವ ಸಂಪುಟವು ದಿನಾಂಕ:08.12.2005 ರಂದು ಅನುಮೋದನೆಯನ್ನು ನೀಡಿದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂ: ಗ್ರಾಅಪ.15.ಆರ್‌ಬಿಎಲ್. 2004 ಬೆಂಗಳೂರು, ದಿನಾಂಕ: 21.01.2006.**

ಜೀತವಿಮುಕ್ತರ ಪುನರ್ವಸತಿಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿದ ನಂತರ, ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಿದ ಜೀತವಿಮುಕ್ತರುಗಳಿಗೆ ಜೀತ ಪದ್ಧತಿಯಿಂದ ಬಿಡುಗಡೆಗೊಂಡ ದಿನದಿಂದ ಮೊದಲ 2 ವರ್ಷಗಳು ಅಂದರೆ 24 ತಿಂಗಳುಗಳ ಅವಧಿಗೆ ಮಾತ್ರ ಮಾಹೆಯಾನ ರೂ.300/-ಗಳನ್ನು (ಮೂರು ನೂರು ರೂಪಾಯಿಗಳು) ಸಹಾಯಧನ ರೂಪದಲ್ಲಿ ಪಾವತಿ ಮಾಡಲು ಜೀತವಿಮುಕ್ತರ ಪುನರ್ವಸತಿ ಸಹಾಯಧನ ಎಂಬ ಹೊಸ ಯೋಜನೆಯನ್ನು 2005-06 ನೇ ಸಾಲಿನಿಂದ ಈ ಕೆಳಕಂಡ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

1) ಜೀತ ಪದ್ಧತಿಯಿಂದ ಬಿಡುಗಡೆಗೊಳ್ಳುವ ರಾಜ್ಯದ ಜೀತದಾಳುಗಳಿಗೆ ಮಾತ್ರ ಈ ಯೋಜನೆ ಅನ್ವಯಿಸತಕ್ಕದ್ದು.

2) ಯಾವುದೇ ಮಾಧ್ಯಮದ ಮುಖಾಂತರ ಜೀತದಾಳುಗಳ ಬಗ್ಗೆ ಮಾಹಿತಿ ಬಂದ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿ /ಉಪ ವಿಭಾಗಾಧಿಕಾರಿಯು 1976 ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆ ಅನ್ವಯ ತನಿಖೆ ನಡೆಸಿ, ಗರಿಷ್ಟ ಒಂದು ತಿಂಗಳ ಅವಧಿಯೊಳಗೆ ಅವರುಗಳನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸತಕ್ಕದ್ದು.

3) ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಿದ ದಿನವೇ ಜೀತವಿಮುಕ್ತರುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿ/ಉಪ ವಿಭಾಗ ಅಧಿಕಾರಿಯು ಜೀತವಿಮುಕ್ತ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಹಾಗೂ ಮಾಹಿತಿಯನ್ನು ಆ ದಿನವೇ ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಮತ್ತು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಿಗೆ ಕಳುಹಿಸ ತಕ್ಕದ್ದು.

4) ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ ವರದಿ ಅಧಾರದ ಮೇಲೆ ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿ ಆರ್ಥಿಕ ವರ್ಷದಲ್ಲಿ ಎರಡು ಬಾರಿಯಂತೆ ಎರಡು ವರ್ಷಗಳ ಕಾಲ ಪ್ರತಿ ಜೀತವಿಮುಕ್ತನಿಗೆ ಮಾಹೆಯಾನ ರೂ.300/-ರ ದರದಲ್ಲಿ ಬಿಡುಗಡೆ ಮಾಡಲಾಗುವ ಈ ಸಹಾಯಧನವನ್ನು ಕೂಡಲೇ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಸಂಪೂರ್ಣವಾಗಿ ಮರು ಬಿಡುಗಡೆ ಮಾಡತಕ್ಕದ್ದು.

5) ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯು ಅಂತಹ ಜೀತವಿಮುಕ್ತ ಪ್ರಮಾಣಪತ್ರದ ಆಧಾರದ ಮೇಲೆ ಆಯಾ ಜೀತವಿಮುಕ್ತರುಗಳಿಗೆ ಒಂದು ವಾರದೊಳಗೆ ಭಾವಚಿತ್ರ ಸಹಿತ ಗುರುತಿನ ಚೀಟಿಯನ್ನು ನೀಡತಕ್ಕದ್ದು ಹಾಗೂ ಗ್ರಾಮ ಪಂಚಾಯತಿಗೆ ಮೇಲ್ಕಂಡಂತೆ ಮರು ಬಿಡುಗಡೆಯಾಗುವ ಸದರಿ ಪುನರ್ವಸತಿ ಸಹಾಯಧನವನ್ನು ಆ ಗ್ರಾಮ ಪಂಚಾಯತಿ ಖಾತೆಯಿರುವ ಬ್ಯಾಂಕಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆ ತೆರೆದು ಆ ಖಾತೆಗೆ ಜಮಾ ಮಾಡತಕ್ಕದ್ದು.

6) ಹಾಗೆ ಬ್ಯಾಂಕಿಗೆ ಜಮಾ ಮಾಡಲಾದ ಪುನರ್ವಸತಿ ಸಹಾಯಧನದ ಒಟ್ಟು ಮೊತ್ತದ ಪೈಕಿ ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಪ್ರತಿ ಜೀತವಿಮುಕ್ತನ (ಆತನು/ಆಕೆಯು), ಹಾಲಿ ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಗೆ ಅಥವಾ ಗ್ರಾಮ ಪಂಚಾಯತಿ ಖಾತೆ ಇರುವ ಬ್ಯಾಂಕ್ ಬ್ರ್ಯಾಂಚಿನಲ್ಲಿ ಹೊಸದಾಗಿ ಖಾತೆ ತೆರೆಸುವ ಮೂಲಕ ಪ್ರತಿ ಮಾಹೆ ರೂ.300/-ರಂತೆ ಆ ಖಾತೆಗೆ ಜಮೆ ಮಾಡತಕ್ಕದ್ದು.

7) ಒಂದು ವೇಳೆ ಈ ಎರಡು ವರ್ಷದ ಅವಧಿಯಲ್ಲಿ ಪುನರ್ವಸತಿ ಸಹಾಯಧನ ಸ್ವೀಕರಿಸುತ್ತಿರುವ ಜೀತವಿಮುಕ್ತನು/ಳು ಮೃತಪಟ್ಟಲ್ಲಿ, ತಾಲ್ಲೂಕು ತಹಸೀಲ್ದಾರ್ ರವರಿಂದ ನೀಡಲ್ಪಡುವ ಧೃಢೀಕೃತ ಮರಣ ಸಮರ್ಥನಾ ಪತ್ರ ಹಾಗೂ ಕುಟುಂಬ ವಾರಸುದಾರರ ಪ್ರಮಾಣ ಪತ್ರಗಳ ಆಧಾರದ ಮೇಲೆ ಆತನ/ಆಕೆಯ ಕುಟುಂಬದ ಹಿರಿಯ ಸದಸ್ಯರಿಗೆ ಉಳಿದ ಅವಧಿಗೆ ಮಾತ್ರ ಮಂಜೂರು ಮಾಡಿ, ಪಾವತಿಸತಕ್ಕದ್ದು.

8) ಈ ಕಾರ್ಯಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2230 – ಕಾರ್ಮಿಕ ಮತ್ತು ಉದ್ಯೋಗ – 01 – ಕಾರ್ಮಿಕ – 198 – ಗ್ರಾಮ ಪಂಚಾಯತಿಗಳಿಗೆ ಸಹಾಯ – 1 – ಗ್ರಾಮ ಪಂಚಾಯತಿಗಳು – 01 – ಬ್ಲಾಕ್ ಅನುದಾನ (ಜೀತದಾಳುಗಳ ಪುನರ್ವಸತಿ) (ಯೋಜನೆ) ಗೆ ಜಮಾ ಮಾಡತಕ್ಕದ್ದು.

9) ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂ: ಆಇ 1492 ವೆಚ್ಚ 6/2004 ದಿನಾಂಕ:7.11.2005 ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ:ಗ್ರಾಅಪ. 543.ಪಿಬಿಎಸ್.05 ದಿನಾಂಕ:27.12.2005 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ವೀ.ಪ.ಬಳಿಗಾರ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ:10.ಎಸ್.ಜಿ.ವೈ.2004

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,
ದಿನಾಂಕ: 31ನೇ ಮಾರ್ಚ್ 2006

**ಸುತ್ತೋಲೆ**

ವಿಷಯ: ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ(ಎಸ್.ಜಿ.ಎಸ್.ವೈ)ಯ ನೆರವು ಪಡೆದ ಸ್ವ ಸಹಾಯ ಸಂಘಗಳ ಸದಸ್ಯರುಗಳಿಗೆ ಜನಶ್ರೀ ವಿಮಾ ಯೋಜನೆಯ ಸೌಲಭ್ಯವನ್ನು ಒದಗಿಸುವ ಕುರಿತು.

*****

ದಿನಾಂಕ:4/3/2006 ಮತ್ತು 6/3/2006 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಯೋಜನಾ ನಿರ್ದೇಶಕರುಗಳ ಸಭೆಯಲ್ಲಿ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ(ಎಸ್.ಜಿ.ಎಸ್.ವೈ)ಯ ನೆರವು ಪಡೆದ ಸ್ವ ಸಹಾಯ ಸಂಘಗಳ ಸದಸ್ಯರುಗಳಿಗೆ ಅತ್ಯಂತ ಉಪಯುಕ್ತವಾಗಿರುವ ಜನಶ್ರೀ ವಿಮಾ ಯೋಜನೆಯ ಸೌಲಭ್ಯವನ್ನು ಒದಗಿಸುವ ಬಗ್ಗೆ ತೀರ್ಮಾನಿಸಲಾಯಿತು. ಅದರಂತೆ ಸದರಿ ಯೋಜನೆಯಲ್ಲಿ ಈಗಾಗಲೇ ನೆರವು ಪಡೆದ ಫಲಾನುಭವಿಗಳನ್ನು ಹಾಗೂ 2006-07 ನೇ ಸಾಲಿನಲ್ಲಿ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ನೆರವು ಪಡೆಯಲಿರುವ ಸ್ವ ಸಹಾಯ ಸಂಘಗಳ ಫಲಾನುಭವಿಗಳನ್ನು ಜನಶ್ರೀ ವಿಮಾ ಯೋಜನೆಯ ಸೌಲಭ್ಯಕ್ಕೆ ಅಳವಡಿಸಲು ಸೂಚಿಸಿದೆ. ಜನಶ್ರೀ ವಿಮಾ ಯೋಜನೆಯ ಅಳವಡಿಕೆಯಲ್ಲಿ ಸಾಧಿಸಿದ ಪ್ರಗತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಸಹಿ/-
(ಜಿ. ಬಿ. ಹಿರೇಮಣಿಯವರ್)
ನಿರ್ದೇಶಕರು(ಸ್ವಉಕಾ) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ

1. ರಾಜ್ಯದ ಎಲ್ಲಾ ಜಿಲ್ಲಾಪಂಚಾಯತ್‌ಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ಜಿಲ್ಲೆಗಳ ಯೋಜನಾ ನಿರ್ದೇಶಕರು/ಉಪ ಕಾರ್ಯದರ್ಶಿಗಳು
3. ರಾಜ್ಯದ ಎಲ್ಲಾ ಜಿಲ್ಲಾಪಂಚಾಯತ್‌ಗಳ ಅಧ್ಯಕ್ಷರುಗಳಿಗೆ
4. ಇತರರು

## ಜನಶ್ರೀ ವಿಮಾ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲೂ/ಪಟ್ಟಣ ಪ್ರದೇಶಗಳಲ್ಲೂ ಕಷ್ಟಪಟ್ಟು ಜೀವಿಸುವ ಆರ್ಥಿಕವಾಗಿ ಬಡತನದ ರೇಖೆಯ ಕೆಳಗಿರುವ/ಸ್ವಲ್ಪವೇ ಮೇಲಿರುವ ಬಡಜನಗಳಿಗೆ ಅತಿ ಕಡಿಮೆ ಪ್ರೀಮಿಯಂನಿಂದ ಅತಿ ಹೆಚ್ಚಿನ ರಕ್ಷಣೆ ನೀಡಲೆಂದು ರೂಪಿಸಿರುವ ಯೋಜನೆಯೇ ಜನಶ್ರೀ ವಿಮಾ ಯೋಜನೆ.

ಬಡತನದಲ್ಲಿ ತನಗಾಗಿ ಒಂದು ವಿಮಾ ಪಾಲಿಸಿಯನ್ನು ತೆಗೆದುಕೊಂಡು ಅದರ ಪ್ರೀಮಿಯಂ ಕಟ್ಟಲಾಗದ ಬಡ ಜನರು ಎಷ್ಟೋ ಮಂದಿ ಇದ್ದಾರೆ. ಇನ್ಶೂರೆನ್ಸ್ ಮಾಡಿಸಿ ಅದರಿಂದ ದೊರೆಯುವ ಪ್ರತ್ಯೇಕವಾದ ಭದ್ರತಾ ಭಾವನೆ ಬಡ ಜನರಿಗೂ ದೊರಕಿಸಿಕೊಡುವ ಪ್ರಯತ್ನವೇ ಜನಶ್ರೀ ವಿಮಾ ಯೋಜನೆ.

### ಜನಶ್ರೀ ವಿಮಾ ಯೋಜನೆಯ ಮುಖ್ಯ ಅಂಶಗಳು:

1. ಈ ಸ್ಕೀಮು ದಿನಾಂಕ:10.08.2000 ದಂದು ಪ್ರಧಾನ ಮಂತ್ರಿಗಳಿಂದ ಪ್ರಾರಂಭಿಸಲ್ಪಟ್ಟಿತು.
2. ಈ ಸ್ಕೀಮು ಎಲ್.ಐ.ಸಿ. ಮೂಲಕ ಸರ್ಕಾರದವರು ತಿಳಿಸಿರುವ 37 ರೀತಿಯ ಉದ್ಯೋಗಿಗಳಿಗೆ/ಕೆಲಸ ಮಾಡುವವರಿಗೆ ಅನ್ವಯಿಸುತ್ತದೆ.
3. ಇದು ಅಲ್ಪಾದಾಯವರ್ಗದ ಜನರಿಗಾಗಿ ಇರುವುದರಿಂದ ಅವರ ಕೆಲಸಗಳನ್ನು ಗುರುತಿಸಿ, ಅವರ ನೋಡಲ್ ಏಜೆನ್ಸಿಯಾಗಿ ಎಲ್.ಐ.ಸಿ. ಜೊತೆ ವ್ಯವಹರಿಸಲು ಯೂನಿಯನ್ / ಅಸೋಸಿಯೇಷನ್ / ರೋಟರಿ / ಲಯನ್ಸ್ ಇನ್ನಿತರೆ ಸ್ವಯಂ ಸೇವಾ ಸಂಸ್ಥೆಗಳು / ಗ್ರಾಮ ಪಂಚಾಯಿತಿ ಮೂಲಕ ಮಾತ್ರವೇ ಈ ಗ್ರೂಪ್ ಸ್ಕೀಂ ಕೊಡಲ್ಪಡುತ್ತದೆ.

❖ ಈ ಪಾಲಿಸಿಯಲ್ಲಿ ಸೇರಬಯಸುವವರು ಗುರುತಿಸಿದ ಆಯಾ ಗುಂಪಿನ ಸಂಘದ ಸದಸ್ಯರಾಗಿರಬೇಕು.

❖ ಸದಸ್ಯರು 18 ವರ್ಷದಿಂದ 59 ವರ್ಷದೊಳಗೆ ಇರಬೇಕು. ಈ ವಯಸ್ಸು ನಿರ್ಧರಿಸಲು ನೋಡಲ್ ಏಜೆನ್ಸಿಯವರು ಸ್ಕೂಲ್ ಸರ್ಟಿಫಿಕೇಟ್ / ರೇಷನ್ ಕಾರ್ಡ್/ ವೋಟರ್ಸ್ ಲಿಸ್ಟ್ ಐಡೆಂಟಿಟಿ ಕಾರ್ಡ್ ಆಧಾರವಾಗಿ ಸ್ವೀಕರಿಸಬೇಕು.

❖ ಕನಿಷ್ಠ ಸದಸ್ಯರ ಸಂಖ್ಯೆ–25.

❖ ಸದಸ್ಯರು ಆರ್ಥಿಕವಾಗಿ ಬಡತನದ ರೇಖೆಯಿಂದ ಕೆಳಗೆ / ಅಥವಾ ಸ್ವಲ್ಪ ಮಾತ್ರ ಮೇಲಿರುವ ವರ್ಗದವರು ಆಗಿರಬೇಕು.

**ಪ್ರೀಮಿಯಂ:** ಪ್ರತಿ ಸದಸ್ಯರಿಗೂ ಒಂದು ವರ್ಷಕ್ಕೆ ರೂ.200 ಕಟ್ಟಬೇಕಾಗುತ್ತದೆ. ಇದರಲ್ಲಿ ರೂ.100/– ಸಬ್ಸಿಡಿಯಾಗಿ ಭಾರತ ಸರ್ಕಾರದ ಸಾಮಾಜಿಕ ನಿಧಿಯಿಂದ ಲಭಿಸುತ್ತದೆ. ಆದ್ದರಿಂದ ಪ್ರತಿ ಸದಸ್ಯರೂ ಕೇವಲ ರೂ.100/– ವಾರ್ಷಿಕ ಪ್ರೀಮಿಯಂ ಕಟ್ಟಿದರೆ ಸಾಕು. (ಡೆತ್ ಕ್ಲೈಮ್ ಆಧಾರದ ಪ್ರೀಮಿಯಂ ಅನ್ನು ಬದಲಾಯಿಸುವ ಹಕ್ಕು ಎಲ್.ಐ.ಸಿ.ಗೆ ಸೇರಿರುತ್ತದೆ.)

**ವಿಮಾ ರಕ್ಷಣೆ:** ಈ ಯೋಜನೆಯ ರಕ್ಷಣೆಯಡಿಯಲ್ಲಿ ಇರುವಾಗ ಮರಣ/ಅಪಘಾತ ಸಂಭವಿಸಿದಲ್ಲಿ ನಾಮಿನಿ ಅಥವಾ ವಾರಸುದಾರರಿಗೆ ನೀಡುವ ವಿಮಾ

**ರಕ್ಷಣೆಯ ವಿವರ:**

❖ ಸಹಜ ಮರಣ: (Natural Death) ರೂ.20,000/–

❖ ಅಪಘಾತದಿಂದ ಮರಣ (Death due to accident) ರೂ.50,000/–

❖ ಅಪಘಾತದಿಂದ ಪೂರ್ತಿ ಮತ್ತು ಶಾಶ್ವತ ಅಂಗವೈಕಲ್ಯ (Total and permanent disability due to accident) ರೂ.50,000/–

❖ ಅಪಘಾತದಿಂದ ಎರಡು ಕಣ್ಣು / ಎರಡು ಕಾಲು /ಎರಡು ಕೈ ಶಾಶ್ವತವಾಗಿ ಕಳೆದುಕೊಂಡರೆ ರೂ.50,000/–

❖ ಅಪಘಾತದಿಂದ ಒಂದು ಕಣ್ಣು, ಒಂದು ಕೈ, ಒಂದು ಕಾಲು ಕಳೆದುಕೊಂಡರೆ ರೂ.25,000/–

❖ ಮೊದಲೇ ಅಂಗವೈಕಲ್ಯತೆ ಉಳ್ಳವರಿಗೆ ಅಪಘಾತದ ಹಣ ದೊರೆಯುವುದಿಲ್ಲ.

ಈ ಪಾಲಿಸಿ ಪಡೆಯುವ ನೋಡಲ್ ಏಜೆನ್ಸಿಯವರ Master Proposal Form (Annexure-I) ಸದಸ್ಯರ ವಿವರಗಳು (Annexure-II) ಹಾಗೂ ಸದಸ್ಯರ ನಾಮಿನೇಷನ್ ವಿವರಗಳು (Annexure-III) ಭರ್ತಿ ಮಾಡಿ ಕೊಡಬೇಕು.

ಜನಶ್ರೀ ವಿಮಾ ಯೋಜನೆ ಪಾಲಿಸಿಗೆ ಸಂಬಂಧಿಸಿದ Definitions, Terms, Conditions (ವಿವರಗಳು, ನೀತಿ, ನಿಯಮಗಳು) ಮುಂತಾದ ವಿವರಗಳು, ಸ್ಕೀಮಿನಡಿಯಲ್ಲಿ ನೀಡುವ Master Policty in English Version ಯಂತೆ ಅನುಸರಿಸಲಾಗುವುದು.

ಜನಶ್ರೀ ವಿಮಾ ಯೋಜನೆ ಪಾಲಿಸಿಯು ಒಂದು ವರ್ಷಕ್ಕೆ ಅತ್ಯಂತ ಭದ್ರತೆ ಒದಗಿಸಲು ಮಾತ್ರವೇ ಇರುವುದು. ಆದ್ದರಿಂದ ಈ ಯೋಜನೆಯಲ್ಲಿ Refund/surrender Value/ Maturity Value ಮುಂತಾದವು ಲಭಿಸುವುದಿಲ್ಲ. ಇದರಿಂದ ಪ್ರತಿ ಸಂವತ್ಸರವೂ ಎಲ್.ಐ.ಸಿ. ಯವರು ಕಳಿಸುವ ರಿನ್ಯೂವಲ್ ನೋಟೀಸು ಪ್ರಕಾರ ಪ್ರೀಮಿಯಂ ಸಲ್ಲಿಸಿ ಪಾಲಿಸಿ ಮುಂದುವರಿಸಬೇಕು.

**ಈ ಸ್ಕೀಮಿನಡಿ ಗುರುತಿಸಲ್ಪಡುವ 37 ರೀತಿಯ ಉದ್ಯೋಗಿಗಳು:**

ಬೀಡಿ ಕಾರ್ಮಿಕರು, ಮೀನುಗಾರರು, ಹಮಾಲಿಗಳು, ಹಸ್ತ ಕುಶಲ ಕಾರ್ಮಿಕರು, ಟೈಲರುಗಳು (ಸ್ತ್ರೀಯರು ಮಾತ್ರ), ಹಾಲು ಉತ್ಪತ್ತಿದಾರರು, ರಿಕ್ಷಾ ತಳ್ಳುವವರು (ತುಳಿಯುವವರು), (ಹಾಗೂ) ಆಟೋ ಡ್ರೈವರ್‌ಗಳು, ವ್ಯವಸಾಯ ಕೂಲಿಗಾರರು, ಪೇಪರ್ ಉತ್ಪತ್ತಿಯ ಕಾರ್ಮಿಕರು, ಖಾದಿ (ಕೈ ಮಗ್ಗ) ಕಾರ್ಮಿಕರು, ಸಫಾಯಿ ಕಾರ್ಮಿಕರು, ಉಪ್ಪು ತಯಾರಿಕಾ ಕಾರ್ಮಿಕರು, ಅರಣ್ಯ ಕಾರ್ಮಿಕರು, ನೀರಾ ಇಳಿಸುವವರು, ಮುದ್ರಣ ಕಾರ್ಮಿಕರು, ಬಡಗಿ ಕಾರ್ಮಿಕರು, ಮೋಂಬತ್ತಿ ಮತ್ತು ರಸಾಯನ ತಯಾರು ಮಾಡುವ ಕಾರ್ಮಿಕರು, ಖನಿಜ ಸಂಬಂಧ ವಸ್ತು / ಮಣ್ಣು ಬೊಂಬೆ ತಯಾರು ಮಾಡುವವರು, ಇಟ್ಟಿಗೆ ತಯಾರು ಮಾಡುವ ಕಾರ್ಮಿಕರು, ವಿದ್ಯುತ್ ಚಾಲಿತ ಮಗ್ಗದ ಕಾರ್ಮಿಕರು, ಚರ್ಮ ಹದ ಮಾಡುವ ಕಾರ್ಮಿಕರು, ಪಾದರಕ್ಷೆ ತಯಾರು ಮಾಡುವ ಕಾರ್ಮಿಕರು, ರಬ್ಬರು (ಕಾರ್ಮಿಕರು), (ಮತ್ತು) ಕಲ್ಲಿದ್ದಲು ಕಾರ್ಮಿಕರು.

ಪಟ್ಟಣದಲ್ಲಿನ ಬಡ ಕಾರ್ಮಿಕರು, ಚರ್ಮ ವಸ್ತು ತಯಾರಿಸುವ ಕಾರ್ಮಿಕರು, ತೆಂಗಿನ ನಾರು ಪರಿಶ್ರಮ ಕಾರ್ಮಿಕರು, ಪಟಾಕಿ ತಯಾರಿಸುವ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ರೇಷ್ಮೆ ಪರಿಶ್ರಮ ಕಾರ್ಮಿಕರು, ಬಟ್ಟೆ ಪರಿಶ್ರಮ ಕಾರ್ಮಿಕರು, ಮರದ ವಸ್ತುಗಳನ್ನು ತಯಾರಿಸುವ ಕಾರ್ಮಿಕರು, ಹಪ್ಪಳ ತಯಾರಿಸುವ ಕಾರ್ಮಿಕರು (ಮಹಿಳಾ ಕಲ್ಯಾಣ ಸಂಘಗಳ ಮುಖಾಂತರ) ಸ್ವಉದ್ಯೋಗ ಅಂಗವಿಕಲರು, ಗುಡ್ಡಗಾಡು ಪ್ರದೇಶದ ಸ್ತ್ರೀಯರು, ಖಂಡಸಾರಿ ಪದಾರ್ಥಗಳನ್ನು ತಯಾರಿಸುವ ಕಾರ್ಮಿಕರು.

**ವಿವರಗಳಾಗಿ ಸಂಪರ್ಕಿಸಬಹುದು...:**

ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಪಿಂಚಣಿ ಮತ್ತು ಸಮೂಹ ವಿಮಾ ಘಟಕ.

## ಕರ್ನಾಟಕ ಸರ್ಕಾರ

ಸಂ:ಗ್ರಾಅಪ 47 ಉಖಾಂಯೋ 06

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ:12-01-2007

ಗೆ:
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

ವಿಷಯ: ಜೀತ ವಿಮುಕ್ತರಿಗೆ, ಅಂಗವಿಕಲರಿಗೆ ಮತ್ತು ಬಾಲ ಕಾರ್ಮಿಕರ ಪೋಷಕರಿಗೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡುವ ಬಗ್ಗೆ.

****

ಸಾಮಾಜಿಕ ನ್ಯಾಯ ಒದಗಿಸುವ ಹಿನ್ನೆಲೆಯಲ್ಲಿ ಜೀತ ವಿಮುಕ್ತರಿಗೆ, ಅಂಗವಿಕಲರಿಗೆ ಮತ್ತು ಬಾಲ ಕಾರ್ಮಿಕರ ಪೋಷಕರಿಗೆ ಆದ್ಯತೆಯ ಮೇರೆಗೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಇತ್ಯಾದಿಗಳಲ್ಲಿ ಉದ್ಯೋಗಾವಕಾಶಗಳನ್ನು / ಸೌಲಭ್ಯಗಳನ್ನು ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ.

ಆದಕಾರಣ, ಇವುಗಳ ಬಗ್ಗೆ ತಮ್ಮ ವೈಯಕ್ತಿಕ ಗಮನವನ್ನು ಹರಿಸಿ ಈ ವರ್ಗಗಳ ಶೇಕಡಾ 100 ರಷ್ಟು ಕುಟುಂಬಗಳಿಗೆ ಉದ್ಯೋಗ / ಸೌಲಭ್ಯಗಳು ಆದ್ಯತೆಯ ಮೇರೆಗೆ ದೊರೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರತಿ ತಿಂಗಳೂ ವರದಿಯನ್ನು ಈ ಕೆಳಗೆ ನಿಗದಿ ಪಡಿಸಿರುವ ನಮೂನೆಯ ಪ್ರಕಾರ ಸಲ್ಲಿಸಲು ಸೂಚಿಸಿದೆ.

### ನಮೂನೆ

### ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಸೌಲಭ್ಯ / ಉದ್ಯೋಗ ಪಡೆದ ಜೀತಮುಕ್ತ, ಅಂಗವಿಕಲ, ಬಾಲಕಾರ್ಮಿಕ ಕುಟುಂಬಗಳ ವಿವರ

ಜಿಲ್ಲೆ :

ತಾಲ್ಲೂಕು :
ತಿಂಗಳು:

| ಕ್ರ. ಸಂ. | ಗ್ರಾಮ ಪಂಚಾಯತಿ | ಕುಟುಂಬಗಳ ಸಂಖ್ಯೆ | | | ತಿಂಗಳಲ್ಲಿ ಸೌಲಭ್ಯ/ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ | | | ಸೌಲಭ್ಯ/ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ(ಸಂಚಿತ) | | |
|---|---|---|---|---|---|---|---|---|---|---|
| | | ಜೀತ ಮುಕ್ತ | ಅಂಗ ವಿಕಲ | ಬಾಲ ಕಾರ್ಮಿಕ | ಜೀತ ಮುಕ್ತ | ಅಂಗ ವಿಕಲ | ಬಾಲ ಕಾರ್ಮಿಕ | ಜೀತ ಮುಕ್ತ | ಅಂಗ ವಿಕಲ | ಬಾಲ ಕಾರ್ಮಿಕ |
| 1 | 2 | 3 | 4 | 5 | 6 | 7 | 8 | 9 | 10 | 11 |

ತಮ್ಮ ವಿಶ್ವಾಸಿ,
ಸಹಿ/-
(ಎಂ.ಆರ್. ಶ್ರೀನಿವಾಸ ಮೂರ್ತಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.

## ಕರ್ನಾಟಕ ಸರ್ಕಾರ

ಸಂ:ಗ್ರಾಅಪ.7.ಆರ್‌ಬಿಎಲ್.2007

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ-2, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15-06-2007.

### ಸುತ್ತೋಲೆ

ವಿಷಯ: ಜೀತ ಪದ್ಧತಿ ನಿರ್ಮೂಲನೆ ನಿಟ್ಟಿನಲ್ಲಿ ಜೀತ ಪ್ರಕರಣಗಳನ್ನು ಗುರುತಿಸುವ ಹಾಗೂ ವರದಿ ಸಲ್ಲಿಸುವ ಬಗ್ಗೆ ಗ್ರಾಮ ಪಂಚಾಯತಿಗಳ ಕರ್ತವ್ಯ ಕುರಿತು.

ಉಲ್ಲೇಖ: ದಿನಾಂಕ:15.03.2006 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಅಧಿಕಾರ ಸಮಿತಿಯ ಸಭೆಯ ನಡವಳಿ.

*****

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ಪ್ರಕರಣ 58ಎ ಸೇರ್ಪಡೆ ಮುಖಾಂತರ ಪ್ರತಿ ಗ್ರಾಮ ಪಂಚಾಯಿತಿಗೆ ಆ ಪಂಚಾಯತಿ ವ್ಯಾಪ್ತಿಯ ಪ್ರದೇಶದಲ್ಲಿ ಜೀತ ಪದ್ಧತಿ ಆಚರಣೆಯಲ್ಲಿದೆ ಎಂದು ಕಂಡು ಬರುವ ಯಾವುದೇ ಪ್ರಕರಣದ ಬಗ್ಗೆ ವರದಿ ಸಲ್ಲಿಸುವ ಕಾರ್ಯವನ್ನು ಕಡ್ಡಾಯ ಮಾಡಲಾಗಿದೆ. ಈ ಕಾರ್ಯ ನಿರ್ವಹಿಸಲು ವಿಫಲರಾದಲ್ಲಿ ಈ ಅಧಿನಿಯಮದ 268ನೇ ಪ್ರಕರಣದ ಅನ್ವಯ ಆ ಗ್ರಾಮ ಪಂಚಾಯತಿಗೆ ವಿಧಿಸಲಾದ ಕರ್ತವ್ಯಗಳ ನೆರವೇರಿಕೆಯಲ್ಲಿ ಉಂಟಾಗಿರುವ ಲೋಪ ಎಂದು ಪರಿಗಣಿಸುವ ಸಾಧ್ಯತೆ ಇದೆ.

ಆದುದರಿಂದ, ಪ್ರತಿ ಗ್ರಾಮ ಪಂಚಾಯತಿಯು ತನ್ನ ಎಲ್ಲಾ ಸದಸ್ಯರುಗಳನ್ನು ಈ ಜೀತ ಪದ್ಧತಿ ನಿರ್ಮೂಲನೆ ವಿಚಾರದಲ್ಲಿ ಜವಾಬ್ದಾರಿಯುತವಾಗಿ ತೊಡಗಿಸಿಕೊಳ್ಳುವ ಸಲುವಾಗಿ ಈ ಕೆಳಕಂಡ ಕರ್ತವ್ಯಗಳನ್ನು ಜಾಗರೂಕತೆಯಿಂದ ತಪ್ಪದೇ ನಿರ್ವಹಿಸುವಂತೆ ಸೂಚಿಸಲಾಗಿದೆ.

1. ಪ್ರತಿ ಗ್ರಾಮ ಪಂಚಾಯತಿಯು ತನ್ನ ಪ್ರದೇಶ ವ್ಯಾಪ್ತಿಯಲ್ಲಿ ಜೀತ ಪದ್ಧತಿ ಆಚರಣೆಯಲ್ಲಿದೆ ಎಂದು ಯಾವುದೇ ಸಂಶಯಾಸ್ಪದ ಪ್ರಕರಣ ಕಂಡು ಬಂದ ಕೂಡಲೇ (ಸಾಧ್ಯವಾದಲ್ಲಿ: ಅದೇ ದಿನ) ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ವರದಿ ನಮೂನೆಯಲ್ಲಿ ಮಾಹಿತಿಯನ್ನು ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗೆ ಸಲ್ಲಿಸಿ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯ ಗಮನಕ್ಕೆ ತರುವುದು.
2. ತಾಲ್ಲೂಕು ದಂಡಾಧಿಕಾರಿಯು ಈ ರೀತಿಯ ಮಾಹಿತಿ ಯಾವುದೇ ಗ್ರಾಮ ಪಂಚಾಯತಿಯಿಂದ ಸ್ವೀಕೃತವಾದ ಕೂಡಲೇ (ಸಾಧ್ಯವಾದಲ್ಲಿ: ಅದೇ ದಿನ) ಸಂಬಂಧಪಟ್ಟ ಉಪವಿಭಾಗೀಯ ದಂಡಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಗಮನಕ್ಕೆ ತಂದು, ಅಂತಹ ಪ್ರಕರಣಗಳ ಬಗ್ಗೆ ಕೂಡಲೇ ತಪಾಸಣೆ ನಡೆಸುವುದು.
3. ತಾಲ್ಲೂಕು ದಂಡಾಧಿಕಾರಿಯು ಹೀಗೆ ಗ್ರಾಮ ಪಂಚಾಯತಿಗಳಿಂದ ಸ್ವೀಕೃತವಾಗುವ ವರದಿಗಳನ್ನು ಕ್ರೋಢೀಕರಿಸಿ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗೆ ಕಳುಹಿಸಿಕೊಡುವುದು.
4. ಪ್ರತಿ ಗ್ರಾಮ ಪಂಚಾಯತಿಯು ತಾನು ಮೇಲ್ಕಂಡಂತೆ ಸಲ್ಲಿಸುವ ಮಾ... ನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ, ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಸಭೆಯಲ್ಲಿ ಕಡ್ಡಾಯವಾಗಿ ಜೀತ ಪದ್ಧತಿ ನಿರ್ಮೂಲನೆ ಹಾಗೂ ಜೀತ ಪ್ರಕರಣಗಳ ಅಸ್ತಿತ್ವದ ಬಗ್ಗೆ ವಿಚಾರ ಮಾಡಿ, ನಡವಳಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಡವಳಿ ನಮೂನೆಯಲ್ಲೇ ಭರ್ತಿಮಾಡಿ, ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗೆ ಸಲ್ಲಿಸುವುದು ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯ ಗಮನಕ್ಕೆ ತರುವುದು.
5. ತಾಲ್ಲೂಕು ದಂಡಾಧಿಕಾರಿಯು ಇಂತಹ ನಡವಳಿಗಳು ಗ್ರಾಮ ಪಂಚಾಯತಿಗಳಿಂದ ಸ್ವೀಕೃತಿಯಾದ ಕೂಡಲೇ ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಣ ಮಾಡಿ, ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗೆ ಕಳುಹಿಸಿ ಕೊಡುವುದು.
6. ಮೇಲ್ಕಂಡಂತೆ ನಿಯತಕಾಲಿಕವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಈ ಅಧಿನಿಯಮದ ಪ್ರಕರಣ 268 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಸೂಚಿಸಿದೆ.

ಸಹಿ/-
(ಎಂ.ಆರ್. ಶ್ರೀನಿವಾಸಮೂರ್ತಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು (ಈ ಸುತ್ತೋಲೆಯ ಸಂಗತಿಯನ್ನು ನಿಮ್ಮ ವ್ಯಾಪ್ತಿಯೊಳಗೆ ಬರುವ ಎಲ್ಲಾ ಉಪವಿಭಾಗೀಯ ದಂಡಾಧಿಕಾರಿಗಳ ಹಾಗೂ ತಾಲ್ಲೂಕು ದಂಡಾಧಿಕಾರಿಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ).
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಈ ಸುತ್ತೋಲೆಯ ಸಂಗತಿಯನ್ನು ನಿಮ್ಮ ವ್ಯಾಪ್ತಿಯೊಳಗೆ ಬರುವ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಹಾಗೂ ಕಾರ್ಯದರ್ಶಿಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ).

## ಜೀತ ಪದ್ಧತಿ ಆಚರಣೆಯಲ್ಲಿದೆ ಎಂದು ಕಂಡುಬಂದ ಸಂಶಯಾಸ್ಪದ ಪ್ರಕರಣಗಳ ವರದಿ ನಮೂನೆ

ಜಿಲ್ಲಾ ಪಂಚಾಯತಿ: ತಾಲೂಕು ಪಂಚಾಯತಿ: ದಿನಾಂಕ:

| ಕ್ರ. ಸಂ. | ಗ್ರಾಮಪಂಚಾಯತಿ ಹೆಸರು | ಗ್ರಾಮ | ಜೀತದಾಳುವೆಂದು ಕಂಡುಬಂದ | | | | | |
|---|---|---|---|---|---|---|---|---|
| | | | ವ್ಯಕ್ತಿಯ ಹೆಸರು | ತಂದೆ/ತಾಯಿ/ಗಂಡನ ಹೆಸರು | ವಯಸ್ಸು | ಜಾತಿ | ನಿರ್ವಹಿಸುತ್ತಿದ್ದ ಕಸುಬು/ಉದ್ಯೋಗ | ಸ್ಥಳ (ಮಾಲೀಕರ ಹೆಸರು ಮತ್ತು ಪೂರ್ಣ ವಿಳಾಸ) |
| 1 | 2 | 3 | 4 | 5 | 6 | 7 | 8 | 9 |
| | | | | | | | | |

ಗ್ರಾಮ ಪಂಚಾಯತಿ ಅಧ್ಯಕ್ಷರ ಸಹಿ
(ಹೆಸರು ಮತ್ತು ಮೊಹರು)

ಗ್ರಾಮಪಂಚಾಯತಿ ಕಾರ್ಯದರ್ಶಿ ಸಹಿ
(ಹೆಸರು ಮತ್ತು ಮೊಹರು)

ವಿ.ಸೂ: ಯಾವುದೇ ಸಂಶಯಾಸ್ಪದ ಜೀತದಾಳು ಕಂಡುಬಂದ ಕೂಡಲೇ ಈ ನಮೂನೆಯಲ್ಲಿ ವರದಿಯನ್ನು ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗೆ ಸಲ್ಲಿಸತಕ್ಕದ್ದು.

# ಗ್ರಾಮ ಪಂಚಾಯತಿಯ ಸಭೆಯ ನಡವಳ ನಮೂನೆ

(ಗ್ರಾಮ ಪಂಚಾಯತಿಯ ಸಭೆಯ ದಿನಾಂಕ:___________________)

ಮಾರ್ಚ್/ಜೂನ್/ಸೆಪ್ಟೆಂಬರ್/ಡಿಸೆಂಬರ್ ಅಂತ್ಯಕ್ಕೆ (ಪ್ರತಿ ಮೂರು ತಿಂಗಳಗೊಮ್ಮೆ)

..............................................ಜಿಲ್ಲಾ ಪಂಚಾಯತಿಯ ........................................ ತಾಲ್ಲೂಕು ಪಂಚಾಯತಿಯ
..............................................ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಗ್ರಾಮಗಳ.............................

.......................................................................................................................................................

.................................... ..........................................................................................ಯಾವುದೇ ಪ್ರದೇಶ ಭಾಗದಲ್ಲಿ
........................................(ವರ್ಷ)ದ ......................................................................... (ಮಾಹೆ)ಗಳಲ್ಲಿ
ಯಾವುದೇ ಮನೆಯಲ್ಲಿ / ಔದ್ಯೋಗದಡಿ ಜೀತ ಪದ್ಧತಿ ಅಸ್ಥಿತ್ವದಲ್ಲಿ ಇರುವಂತಹ / ಪ್ರವರ್ತನೆಗೊಂಡಿರುವಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.

**ಅಥವಾ**

.........................................................................................ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಈ ಕೆಳಗೆ ಸೂಚಿಸಿದ ಮಾಹಿತಿಯಂತೆ ಜೀತ ಪದ್ಧತಿ ಪ್ರಕರಣಗಳು ಇರುವುದಾಗಿ ತಿಳಿದುಬಂದಿರುತ್ತದೆ.

| ಕ್ರ.ಸಂ. | ಜೀತಪದ್ಧತಿಯಲ್ಲಿರುವ ವ್ಯಕ್ತಿಗಳ ಹೆಸರು | ಜೀತಪದ್ಧತಿಯನ್ನು ಹೊಂದಿರುವ ಮಾಲೀಕರ ಅಥವಾ ಉದ್ಯಮದ ಹೆಸರು ಮತ್ತು ವಿಳಾಸ | ಜೀತಪದ್ಧತಿಯ ಕೆಲಸಗಾರರನ್ನು ತೊಡಗಿಸಿರುವ ಕೆಲಸ |
|---|---|---|---|
| 1 | | | |
| 2 | | | |
| 3 | | | |
| 4 | | | |

ಎಂದು ಧೃಡೀಕರಿಸಿ, ಸತ್ಯಾಪನೆ ಮಾಡಲಾಗಿದೆ.

ಗ್ರಾಮ ಪಂಚಾಯತಿ ಅಧ್ಯಕ್ಷರ ಸಹಿ
(ಹೆಸರು ಮತ್ತು ಮೊಹರುನೊಂದಿಗೆ)

ಗ್ರಾಮ ಪಂಚಾಯತಿ ಕಾರ್ಯದರ್ಶಿ ಸಹಿ
(ಹೆಸರು ಮತ್ತು ಮೊಹರುನೊಂದಿಗೆ)

<u>ಕರ್ನಾಟಕ ಸರ್ಕಾರ</u>

ಸಂ.ಗ್ರಾಅಪ.1.ಆರ್‌ಬಿಎಲ್:2008

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ-2, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22-01-2008.

**ಇಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

**ಗೆ,**
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ಬೆಂಗಳೂರು ಗ್ರಾಮಾಂತರ/ಚಿಕ್ಕಬಳ್ಳಾಪುರ/ಗುಲ್ಬರ್ಗಾ/
ಕೋಲಾರ/ಮಂಡ್ಯ/ಮೈಸೂರು/ರಾಮನಗರಂ/ತುಮಕೂರು.

ಮಾನ್ಯರೇ,

ವಿಷಯ: ವಿಮುಕ್ತಿ ಟ್ರಸ್ಟ್, ಬೆಂಗಳೂರು ಇವರ ಮನವಿಗಳನ್ನು ಪರಿಶೀಲಿಸಿ, ಜೀತವಿಮುಕ್ತರುಗಳಿಗೆ ಸೌಲಭ್ಯ ಒದಗಿಸುವ ಬಗ್ಗೆ.

ಉಲ್ಲೇಖ: ಶ್ರೀ.ಕಿರಣ ಕಮಲ ಪ್ರಸಾದ, ಕಾರ್ಯದರ್ಶಿ, ವಿಮುಕ್ತಿ ಟ್ರಸ್ಟ್, ಬೆಂಗಳೂರು ಇವರ ಮನವಿಗಳ ದಿನಾಂಕ 29-12-2007.

*****

ಮೇಲ್ಕಂಡ ವಿಷಯ ಕುರಿತಂತೆ, ಶ್ರೀ.ಕಿರಣ ಕಮಲ ಪ್ರಸಾದ, ಕಾರ್ಯದರ್ಶಿ, ವಿಮುಕ್ತಿ ಟ್ರಸ್ಟ್, ಬೆಂಗಳೂರು ಇವರು ಉಲ್ಲೇಖದನ್ವಯ ಜೀತವಿಮುಕ್ತರುಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳೊಂದಿಗೆ ಸಲ್ಲಿಸಿರುವ ನಿಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ತಾಲ್ಲೂಕು ಪಂಚಾಯಿತಿಗಳ ಫಲಾನುಭವಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಫಲಾನುಭವಿಗಳು ಜೀತ ವಿಮುಕ್ತರೇ ಎಂಬುದನ್ನು ಖಾತರಿ ಪಡಿಸಿಕೊಂಡು, ಅವರುಗಳಿಗೆ ಕೆಳಕಂಡ ಪ್ರಸ್ತಾಪಿತ ಸೌಲಭ್ಯಗಳನ್ನು ಈಗಾಗಲೇ ಒದಗಿಸದಿದ್ದಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಅಡಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಕೋರುತ್ತೇನೆ.

1. ನಿವೇಶನ ಹಂಚಿಕೆ
2. ಮನೆ ಕಟ್ಟಿಕೊಳ್ಳಲು ಆರ್ಥಿಕ ಸಹಾಯ
3. ನಮ್ಮ ಭೂಮಿ ನಮ್ಮ ತೋಟ ಯೋಜನೆಯಡಿ ಲಭ್ಯತೆ ಅನುಸಾರ ಜಮೀನು ಮಂಜೂರಾತಿ
4. ಕನಿಷ್ಠ ಕೂಲಿ ವೇತನ ಸೌಲಭ್ಯದ ಉದ್ಯೋಗ
5. ಜೀತ ವಿಮುಕ್ತರುಗಳ ಸ್ವಸಹಾಯ ಗುಂಪುಗಳ ರಚನೆ ಮುಖಾಂತರ ಎಸ್‌ಜಿಎಸ್‌ವೈ ಯೋಜನೆಯಡಿ ಸಾಲ ಮತ್ತು ಸಹಾಯ ಧನದ ವ್ಯವಸ್ಥೆ

ತಮ್ಮ ವಿಶ್ವಾಸಿ,
ಸಹಿ/-
(ಬಿ.ಎನ್.ಕೃಷ್ಣಯ್ಯ)
ನಿರ್ದೇಶಕರು,
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು
ಶ್ರೀ.ಕಿರಣ ಕಮಲ ಪ್ರಸಾದ, ಕಾರ್ಯದರ್ಶಿ, ವಿಮುಕ್ತಿ ಟ್ರಸ್ಟ್, ನಂ.1289, ಐಸೆಕ್ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು – 560072 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

## ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ

ಕಾರ್ಪೊರೇಟ್ ಕಛೇರಿ,

ಯೋಜನೆ, ಅಭಿವೃದ್ಧಿ ಮತ್ತು ಮಾರ್ಕೆಟಿಂಗ್ ವಿಭಾಗ,

ಅಂಚೆ ಪೆಟ್ಟಿಗೆ ಸಂ.9941, 1ನೇ ಮಹಡಿ,

ಗಾಂಧಿನಗರ, ಬೆಂಗಳೂರು-560 009

ಸಂಖ್ಯೆ.250/2928/SLBC/03-04/F 295 ದಿನಾಂಕ: 9-9-04

ನಿರ್ದೇಶಕರು,

ಸ್ವ ಉದ್ಯೋಗ ಕಾರ್ಯಕ್ರಮಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

3ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.

ಮಾನ್ಯರೆ

ವಿಷಯ: ಜೀತಪದ್ಧತಿ ಮತ್ತು ಬಾಲಕಾರ್ಮಿಕತೆ ವಿಷಯಗಳ ಕುರಿತು ಕಾರ್ಯಾಗಾರ

ಉಲ್ಲೇಖ: ನಿಮ್ಮ ಪತ್ರ ದಿನಾಂಕ:30-08-04.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಮೇಲೆ ಉಲ್ಲೇಖಿಸಿದ ಪತ್ರವು ನಮಗೆ ತಲುಪಿದೆ. ಇದಕ್ಕೆ ಸಂಬಂಧಪಟ್ಟಂತೆ ವಿಧಾನಸೌಧದಲ್ಲಿಯ ಕಾರ್ಮಿಕ ಇಲಾಖೆಯ ವಿಶೇಷ ಅಧಿಕಾರಿ ಮತ್ತು ಉಪ ಕಾರ್ಯದರ್ಶಿಯವರ ದಿನಾಂಕ:3.6.2004 ರ ಪತ್ರಕ್ಕೆ ನಮ್ಮ ಪತ್ರ ಸಂ.105 ದಿನಾಂಕ:12.8.2004 ರ ಮೂಲಕ ಇತ್ತೀಚಿಗಿನ ಬೆಳವಣಿಗೆ ಕುರಿತು ವಿಷಯಗಳನ್ನು ತಿಳಿಸಿದ್ದೇವೆ. ಜೀತದಾಳುಗಳ ಪುನರ್ವಸತಿಗೆ ಬ್ಯಾಂಕಿನಿಂದ ಸಾಲಕ್ಕೋಸ್ಕರ ಏನೇ ಅರ್ಜಿ ಬಂದರೂ ಅದನ್ನು ಸಹಾನುಭೂತಿಯಿಂದ ಪರಿಗಣಿಸಬೇಕೆಂಬುದಾಗಿ ನಾವು ಎಲ್ಲಾ ಜಿಲ್ಲಾ ಲೀಡ್ ಮ್ಯಾನೇಜರುಗಳಿಗೆ ವಿನಂತಿಸಿದ್ದೇವೆ. ಸಾಧ್ಯವಾದಷ್ಟು ಮಟ್ಟಿಗೆ ಜೀತದಾಳುಗಳಿಗೆ ಅವಶ್ಯಕವಾಗಿರುವ ಸಾಲಗಳನ್ನು ಸರ್ಕಾರ ಪುರಸ್ಕೃತವಾದ ಯೋಜನೆಗಳೊಂದರಲ್ಲಿ ಸಮೀಕರಿಸುವಂತೆ ಕೇಳಿಕೊಳ್ಳಲಾಗಿದೆ. ಇದನ್ನು ಡಿಸಿಸಿ/ಬಿಎಲ್‌ಬಿಸಿಯ ಸಭೆಗಳಲ್ಲಿ ನಿಯತಕಾಲಿಕವಾಗಿ ನಿರ್ವಹಣೆ ಮಾಡಬೇಕು.

2004 ರ ಮಾರ್ಚ್ ತಿಂಗಳೊಳಗಾಗಿ 23 ಮಂದಿ ಬಿಡುಗಡೆಗೊಳಿಸಿದ ಜೀತದಾಳುಗಳಿಗೆ 9.44 ಲಕ್ಷ ರೂಪಾಯಿಗಳ ಸೌಲಭ್ಯಗಳನ್ನು ಒದಗಿಸಲಾಗಿದೆ. ಮುಂದಿನ ಬೆಳವಣಿಗೆಗಳ ಬಗ್ಗೆ ಮಾಹಿತಿಯನ್ನು ನಿಮಗೆ ನಿಯತಕಾಲಿಕವಾಗಿ ನೀಡಲಾಗುವುದು.

ತಮ್ಮ ವಿಶ್ವಾಸಿ,

ಸಹಿ/-

ಹಿರಿಯ ಪ್ರಬಂಧಕರು- SLBC

ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ

ಅನುಬಂಧ: 9.7

## ಕೋಷ್ಟಕ -1

### 31.03.1993ರಲ್ಲಿದ್ದಂತೆ ರಾಜ್ಯವಾರು ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಅಂಕಿ ಅಂಶಗಳು

(ಮೂಲ: ಕಾರ್ಮಿಕ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ)

| ಕ್ರಮ ಸಂಖ್ಯೆ | ರಾಜ್ಯದ ಹೆಸರು | ಗುರುತಿಸಿ ಬಿಡುಗಡೆ-ಗೊಳಿಸಲಾದ ಜೀತದಾಳು ಗಳು | ಪುನರ್ವಸತಿ -ಗೊಳಿಸಲಾದ ಜೀತದಾಳುಗಳು | ಪತ್ತೆ ಹಚ್ಚ -ಲಾಗದ ಜೀತದಾಳು -ಗಳು | ಪುನರ್ವಸತಿಗೆ ಬಾಕಿ ಇರುವ ಜೀತದಾಳು -ಗಳು |
|---|---|---|---|---|---|
| 1. | ಆಂಧ್ರಪ್ರದೇಶ | 35934 | 25753 | - | 10181 |
| 2. | ಬಿಹಾರ | 12986 | 11479 | 1116 | 391 |
| 3. | ಕರ್ನಾಟಕ | 62708 | 54078 | 6180 | 2450 |
| 4. | ಮಧ್ಯಪ್ರದೇಶ | 12804 | 11814 | 936 | 54 |
| 5. | ಒರಿಸ್ಸಾ | 49971 | 46769 | 3176 | 26 |
| 6. | ರಾಜಸ್ಥಾನ | 7478 | 5804 | 1533 | 141 |
| 7. | ತಮಿಳುನಾಡು | 38886 | 38813 | 6 | 67 |
| 8. | ಮಹಾರಾಷ್ಟ್ರ | 1382 | 1300 | 82 | - |
| 9. | ಉತ್ತರ ಪ್ರದೇಶ | 27489 | 27469 | 20 | - |
| 10. | ಕೇರಳ | 823 | 710 | 113 | - |
| 11. | ಹರ್ಯಾಣ | 544 | 21 | 523 | - |
| 12. | ಗುಜರಾತ್ | 64 | 64 | - | - |
| | ಒಟ್ಟು | 2,51,069 | 2,24,074 | 13,685 | 13,310 |

## ಕೋಷ್ಟಕ -2

### 28.02.1995ರಲ್ಲಿದ್ದಂತೆ ಕರ್ನಾಟಕ ರಾಜ್ಯದಲ್ಲಿ ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಅಂಕಿ ಅಂಶಗಳು (ಜಿಲ್ಲಾವಾರು)

(ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಗುರುತಿಸಿ ಬಿಡುಗಡೆಗೊಳಿಸಲಾದ ಜೀತದಾಳುಗಳು | ಪುನರ್ವಸತಿಗೊಳಿಸ ಲಾದ ಜೀತದಾಳುಗಳು | ಪತ್ತೆ ಹಚ್ಚ ಲಾಗದ ಜೀತದಾಳುಗಳು | ಪುನರ್ವಸತಿಗೆ ಬಾಕಿ ಇರುವ ಜೀತದಾಳುಗಳು |
|---|---|---|---|---|---|
| 1 | ಬೆಂಗಳೂರು ಗ್ರಾ | 6132 | 4788 | 1263 | 81 |
| 2 | ಬೆಂಗಳೂರು ನ | 2787 | 2590 | 197 | – |
| 3 | ಬೆಳಗಾವಿ | 602 | 575 | 27 | – |
| 4 | ಬಳ್ಳಾರಿ | 12 | 12 | – | – |
| 5 | ಬೀದರ | 451 | 435 | 16 | – |
| 6 | ಬಿಜಾಪುರ | 2756 | 2370 | 386 | – |
| 7 | ಚಿಕ್ಕಮಗಳೂರು | 385 | 265 | 120 | – |
| 8 | ಚಿತ್ರದುರ್ಗ | 4819 | 4204 | 615 | – |
| 9 | ದಕ್ಷಿಣ ಕನ್ನಡ | 57 | 50 | 7 | – |
| 10 | ಧಾರವಾಡ | 2937 | 2617 | 320 | – |
| 11 | ಗುಲ್ಬರ್ಗ | 5217 | 4998 | 219 | – |
| 12 | ಹಾಸನ | 22644 | 20710 | 1934 | – |
| 13 | ಕೊಡಗು | 9236 | 8357 | 850 | 21 |
| 14 | ಕೋಲಾರ | 2046 | 1730 | 316 | – |
| 15 | ಮಂಡ್ಯ | 8 | 5 | 3 | – |
| 16 | ಮೈಸೂರು | 1252 | 1180 | 72 | – |
| 17 | ರಾಯಚೂರು | 19 | 10 | 9 | – |
| 18 | ಶಿವಮೊಗ್ಗ | 49 | 47 | 2 | – |
| 19 | ತುಮಕೂರು | – | – | – | – |
| 20 | ಉತ್ತರ ಕನ್ನಡ | 123 | 103 | 20 | – |
| | ಒಟ್ಟು | 61532 | 55046 | 6376 | 102 |

ಕೋಷ್ಟಕ –3

31.03.2003ರಲ್ಲಿದ್ದಂತೆ ರಾಜ್ಯವಾರು ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಅಂಕಿ ಅಂಶಗಳು

(ಮೂಲ: ಕಾರ್ಮಿಕ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ)

| | ಮಾರ್ಚ್ 1993 ತನಕ | | | 2002–03 | | | |
|---|---|---|---|---|---|---|---|
| ಕ್ರ. ಸಂ. | ರಾಜ್ಯದ ಹೆಸರು | ಗುರುತಿಸಿ ಬಿಡುಗಡೆ ಗೊಳಿಸಲಾದ ಜೀತದಾಳುಗಳ ಸಂಖ್ಯೆ | ಶೇಕಡವಾರು | ಗುರುತಿಸಿ ಬಿಡುಗಡೆ ಗೊಳಿಸಲಾದ ಜೀತದಾಳುಗಳ ಸಂಖ್ಯೆ | ಶೇಕಡವಾರು | ಪುನರ್ವಸತಿ ಗೊಳಿಸಿದ ಜೀತದಾಳುಗಳ ಸಂಖ್ಯೆ | ಶೇಕಡವಾರು |
| 1. | ಆಂಧ್ರ ಪದೇಶ | 36289 | 14.43 | 36289 | 12.82 | 29552 | 11.29 |
| 2 | ಬಿಹಾರ | 12986 | 5.16 | 13112 | 4.63 | 12396 | 4.74 |
| 3 | ಕರ್ನಾಟಕ | 62708 | 24.95 | 63583 | 22.45 | 56106 | 21.43 |
| 4 | ಮಧ್ಯಪ್ರದೇಶ | 12804 | 5.09 | 12928 | 4.57 | 12021 | 4.59 |
| 5 | ಒರಿಸ್ಸಾ | 49971 | 19.86 | 49971 | 17.65 | 46483 | 17.76 |
| 6 | ರಾಜಸ್ಥಾನ | 7478 | 2.97 | 7478 | 2.64 | 6321 | 2.41 |
| 7 | ತಮಿಳುನಾಡು | 38886 | 15.47 | 65573 | 23.16 | 65573 | 25.05 |
| 8 | ಮಹಾರಾಷ್ಟ್ರ | 1382 | 0.55 | 1401 | 0.49 | 1319 | 0.5 |
| 9 | ಉತ್ತರ ಪ್ರದೇಶ | 27489 | 10.94 | 27797 | 9.87 | 27797 | 10.62 |
| 10 | ಕೇರಳ | 833 | 0.33 | 823 | 0.92 | 710 | 0.27 |
| 11 | ಹರ್ಯಾಣ | 544 | 0.22 | 544 | 0.19 | 28 | 0.01 |
| 12 | ಗುಜರಾತ್ | 64 | 0.03 | 64 | 0.02 | 64 | 0.02 |
| 13 | ಅರುಣಾಚಲ ಪ್ರದೇಶ | – | – | 3526 | 1.24 | 2992 | 1.14 |
| 14 | ಪಂಜಾಬ್ | – | – | 69 | 0.03 | 69 | 0.03 |
| | ಒಟ್ಟು | 251424 | 100 | 283158 | 100 | 261791 | 100 |

ಕೋಷ್ಟಕ -4

## 01.01.2001ರಲ್ಲಿದ್ದಂತೆ ಕರ್ನಾಟಕ ರಾಜ್ಯದಲ್ಲಿ ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಅಂಕಿ ಅಂಶಗಳು (ಜಿಲ್ಲಾವಾರು)

(ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು)

| 01.01.2001ರಲ್ಲಿದ್ದಂತೆ ಜೀತದಾಳುಗಳ ಸಂಖ್ಯೆ | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಗುರುತಿಸಿ ಬಿಡುಗಡೆ ಗೊಳಿಸಲಾದ ಜೀತದಾಳುಗಳು | ಪುನರ್ವಸತಿ ಗೊಳಿಸಲಾದ ಜೀತದಾಳುಗಳು | ಪತ್ತೆ ಹಚ್ಚಲಾಗದ ಜೀತದಾಳುಗಳು | ಉಳಿದ ಜೀತದಾಳು -ಗಳು | ಪುನರ್ವಸತಿಗೆ ಬಳಸಿದ ಹಣ ಲಕ್ಷಗಳಲ್ಲಿ |
| 1. | ಬೆಂಗಳೂರು(ಗ್ರಾ) | 6132 | 5004 | 1128 | – | 337.634 |
| 2. | ಬೆಂಗಳೂರು(ನ) | 2802 | 2604 | 198 | – | 139.325 |
| 3. | ಬಳ್ಳಾರಿ | 602 | 575 | 27 | – | 22.976 |
| 4. | ಬೀದರ | 12 | 10 | 2 | – | 0.400 |
| 5. | ಬಿಜಾಪುರ | 591 | 557 | 34 | – | 5.433 |
| 6. | ಬಾಗಲಕೋಟೆ | 197 | 53 | 144 | – | 1.330 |
| 7. | ದಕ್ಷಿಣ ಕನ್ನಡ | 385 | 265 | 120 | – | 10.600 |
| 8. | ಉಡುಪಿ | – | – | – | – | – |
| 9. | ಹಾಸನ | 4910 | 4295 | 615 | – | 144.350 |
| 10. | ಚಿಕ್ಕಮಗಳೂರು | 2756 | 2363 | 393 | – | 95.689 |
| 11. | ಕೊಡಗು | 57 | 57 | – | – | 2.437 |
| 12. | ಕೋಲಾರ | 2957 | 2637 | 320 | – | 110.945 |
| 13. | ಮಂಡ್ಯ | 5352 | 5132 | 220 | – | 286.060 |
| 14. | ಮೈಸೂರು | 15206 | 14151 | 1934 | – | 782.70 |
| 15. | ಚಾಮರಾಜನಗರ | 7438 | 6559 | – | – | 362.395 |
| 16. | ಶಿವಮೊಗ್ಗ | 8851 | 8051 | 800 | – | 398.232 |
| 17. | ತುಮಕೂರು | 2046 | 1768 | 278 | – | 70.300 |
| 18. | ಉತ್ತರ ಕನ್ನಡ | 8 | 5 | 3 | – | 0.125 |
| 19. | ಚಿತ್ರದುರ್ಗ | 1074 | 1006 | 68 | – | 42.945 |
| 20. | ದಾವಣಗೆರೆ | 178 | 178 | – | – | 7.08 |
| 21. | ಬೆಳಗಾವಿ | 19 | 10 | 9 | – | 0.400 |
| 22. | ಗುಲ್ಬರ್ಗಾ | 49 | 47 | 2 | – | 1.190 |
| 23. | ಧಾರವಾಡ | – | – | – | – | – |
| 24. | ಹಾವೇರಿ | – | – | – | – | – |
| 25. | ಗದಗ | – | – | – | – | – |
| 26. | ರಾಯಚೂರು | 106 | 88 | 18 | – | 4.120 |
| 27. | ಕೊಪ್ಪಳ | 17 | 15 | 2 | – | – |
| | ಒಟ್ಟು | 61745 | 55430 | 6315 | – | 2827.120 |

**ಕೋಷ್ಟಕ -೫**

**2000 ರಿಂದ 2002ರಲ್ಲಿ ಕರ್ನಾಟಕ ರಾಜ್ಯದಲ್ಲಿ ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಅಂಕಿ ಅಂಶಗಳು (ಜಿಲ್ಲಾವಾರು) (31.03.2002ರಲ್ಲಿ)**

| ಕ್ರ.ಸಂ. | ಜಿಲ್ಲೆಯ ಹೆಸರು | ಗುರುತಿಸಲಾದ ಮತ್ತು ಬಿಡುಗಡೆಗೊಳಿಸಿದ ಜೀತದಾಳುಗಳ ಸಂಖ್ಯೆ | | | | ಹೊರ ರಾಜ್ಯಗಳಿಗೆ ಹಿಂದಿರುಗಿಸಲ್ಪಟ್ಟ ಜೀತದಾಳುಗಳು | ಪುನರ್ವಸತಿ ಗೊಳಿಸಲಾದ ಜೀತದಾಳುಗಳು | ಹಾಲಿ ಪತ್ತೆಹಚ್ಚಲಾದ, ಈ ಮೊದಲೇ ಗುರುತಿಸಿ ಬಿಡುಗಡೆಗೊಳಿಸಿದ ಜೀತದಾಳುಗಳು | ಪುನರ್ವಸತಿ ಗೊಳಿಸಬೇಕಾದ ಜೀತದಾಳುಗಳು |
|---|---|---|---|---|---|---|---|---|---|
| | | 1990–2000 | 2000–2001 | 2001–2002 | ಒಟ್ಟು | | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | ಬಾಗಲಕೋಟೆ | 0 | 2 | 0 | 2 | 0 | 0 | 0 | 2 |
| 2 | ಬೆಂಗಳೂರು ಗ್ರಾ | 0 | 27 | 144 | 171 | 0 | 0 | 15 | 186 |
| 3 | ಬೆಂಗಳೂರು ನ | 0 | 8 | 0 | 8 | 3 | 0 | 0 | 5 |
| 4 | ಬೆಳಗಾವಿ | 0 | 0 | 0 | 0 | 0 | 0 | 0 | 0 |
| 5 | ಬಳ್ಳಾರಿ | 0 | 2 | 1 | 3 | 0 | 0 | 0 | 3 |
| 6 | ಬೀದರ | 0 | 0 | 9 | 9 | 9 | 0 | 0 | 0 |
| 7 | ಬಿಜಾಪುರ | 0 | 0 | 0 | 0 | 0 | 0 | 0 | 0 |
| 8 | ಚಾಮರಾಜನಗರ | 0 | 72 | 20 | 92 | 0 | 0 | 0 | 92 |
| 9 | ಚಿಕ್ಕಮಗಳೂರು | 0 | 0 | 0 | 0 | 0 | 0 | 0 | 0 |
| 10 | ಚಿತ್ರದುರ್ಗ | 0 | 0 | 0 | 0 | 0 | 0 | 0 | 0 |
| 11 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 0 | 0 |
| 12 | ದಾವಣಗೆರೆ | 0 | 0 | 0 | 0 | 0 | 0 | 0 | 0 |
| 13 | ಧಾರವಾಡ | 0 | 0 | 0 | 0 | 0 | 0 | 0 | 0 |
| 14 | ಗದಗ | 0 | 0 | 0 | 0 | 0 | 0 | 0 | 0 |
| 15 | ಗುಲ್ಬರ್ಗ | 0 | 0 | 0 | 0 | 0 | 0 | 0 | 0 |
| 16 | ಹಾಸನ | 0 | 44 | 0 | 44 | 0 | 0 | 0 | 44 |
| 17 | ಹಾವೇರಿ | 0 | 0 | 0 | 0 | 0 | 0 | 0 | 0 |
| 18 | ಕೊಡಗು | 0 | 1 | 0 | 1 | 0 | 0 | 0 | 1 |
| 19 | ಕೋಲಾರ | 0 | 370 | 0 | 370 | 0 | 0 | 0 | 370 |
| 20 | ಕೊಪ್ಪಳ | 0 | 49 | 1 | 50 | 44 | 0 | 0 | 6 |
| 21 | ಮಂಡ್ಯ | 0 | 45 | 3 | 48 | 0 | 36 | 0 | 12 |
| 22 | ಮೈಸೂರು | 0 | 516 | 272 | 788 | 0 | 0 | 0 | 788 |
| 23 | ರಾಯಚೂರು | 0 | 0 | 0 | 0 | 0 | 0 | 0 | 0 |
| 24 | ಶಿವಮೊಗ್ಗ | 0 | 13 | 0 | 13 | 13 | 0 | 0 | 0 |
| 25 | ತುಮಕೂರು* | 2 | 361 | 0 | 363 | 0 | 0 | 0 | 363 |
| 26 | ಉಡುಪಿ | 0 | 1 | 0 | 1 | 0 | 0 | 0 | 1 |
| 27 | ಉತ್ತರ ಕನ್ನಡ | 0 | 0 | 0 | 0 | 0 | 0 | 0 | 0 |
| | ಒಟ್ಟು | 2 | 1511 | 450 | 1963 | 69 | 36 | 15 | 1873 |

* ತರುವಾಯ ಈ ಪ್ರಕರಣಗಳು ಜೀತಪದ್ಧತಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಕಂಡುಬಂದಿರುತ್ತದೆ.

## ಕೋಷ್ಟಕ –6

### 1999–2000 ರಿಂದ 2003–2004ರ ವರೆಗೆ ಗುರುತಿಸಿದ ಜೀತದಾಳುಗಳ ಪುನರ್ವಸತಿಯ ವಿವರಗಳು (ಜಿಲ್ಲಾವಾರು)

| ಕ್ರ. ಸಂ. | ಜಿಲ್ಲೆ | ಗುರುತಿಸಿದ ಮತ್ತು ಬಿಡುಗಡೆಗೊಳಿಸಿದ ಜೀತದಾಳುಗಳು | | | | | | ಬೇರೆ ರಾಜ್ಯದ ಸ್ವಂತ ಊರುಗಳಿಗೆ ರವಾನಿಸಿದ್ದು | ಹಿಂದೆ ಗುರುತಿಸಿ ಬಿಡುಗಡೆಗೊಳಿಸಿದವರನ್ನು ಪತ್ತೆಹಚ್ಚಿದ್ದು | ಪುನರ್ವಸತಿ ಕ್ರಮ ಜರುಗಿಸಿರುವುದು | ಪುನರ್ವಸತಿ ಕ್ರಮ ಜರುಗಿಸಬೇಕಾಗಿರುವುದು | ಪುನರ್ವಸತಿಗೆ ಬೇಕಾಗಿರುವ ಅನುದಾನ (ಲಕ್ಷ ರೂಪಾಯಿಗಳಲ್ಲಿ) | | |
|---|---|---|---|---|---|---|---|---|---|---|---|---|---|---|
| | | 1999-200 | 2000-0 | 2001-02 | 2002-0 | 2003-04 | ಒಟ್ಟು | | | | | ಒಟ್ಟು | ಕೇಂದ್ರ ಪಾಲು | ರಾಜ್ಯ ಪಾಲು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 1 | ಬಾಗಲಕೋಟೆ | 0 | 2 | 0 | 0 | 0 | 2 | 0 | 0 | 2 | 0 | 0.00 | 0.00 | 0.00 |
| 2 | ಬೆಂಗಳೂರು (ಗ್ರಾ) | 0 | 27 | 144 | 3 | 0 | 174 | 0 | 15 | 186 | 3 | 0.60 | 0.30 | 0.30 |
| 3. | ಬೆಂಗಳೂರು (ನ) | 0 | 8 | 0 | 0 | 16 | 24 | 19 | 0 | 5 | 0 | 0.00 | 0.00 | 0.00 |
| 4 | ಬೆಳಗಾವಿ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 5 | ಬಳ್ಳಾರಿ | 0 | 2 | 1 | 0 | 0 | 3 | 0 | 0 | 3 | 0 | 0.00 | 0.00 | 0.00 |
| 6 | ಬೀದರ | 0 | 0 | 9 | 0 | 2 | 11 | 11 | 0 | 0 | 0 | 0.00 | 0.00 | 0.00 |
| 7 | ಬಿಜಾಪುರ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 8 | ಚಾಮರಾಜನಗರ | 0 | 72 | 20 | 0 | 0 | 92 | 0 | 0 | 92 | 0 | 0.00 | 0.00 | 0.00 |
| 9 | ಚಿಕ್ಕಮಗಳೂರು | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 10 | ಚಿತ್ರದುರ್ಗ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 11 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 12 | ದಾವಣಗೆರೆ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 13 | ಧಾರವಾಡ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 14 | ಗದಗ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 15 | ಗುಲ್ಬರ್ಗ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 16 | ಹಾಸನ | 0 | 44 | 0 | 0 | 0 | 44 | 0 | 0 | 43 | 1 | 0.20 | 0.10 | 0.10 |
| 17 | ಹಾವೇರಿ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 18 | ಕೊಡಗು | 0 | 1 | 0 | 0 | 0 | 1 | 0 | 0 | 0 | 1 | 0.20 | 0.10 | 0.10 |
| 19 | ಕೋಲಾರ | 0 | 370 | 0 | 0 | 0 | 370 | 0 | 0 | 370 | 0 | 0.00 | 0.00 | 0.00 |
| 20 | ಕೊಪ್ಪಳ | 0 | 49 | 1 | 0 | 0 | 50 | 44 | 0 | 6 | 0 | 0.00 | 0.00 | 0.00 |
| 21 | ಮಂಡ್ಯ | 0 | 45 | 3 | 0 | 0 | 48 | 0 | 0 | 48 | 0 | 0.00 | 0.00 | 0.00 |
| 22 | ಮೈಸೂರು | 0 | 516 | 272 | 0 | 1 | 789 | 0 | 0 | 783 | 6 | 1.20 | 0.60 | 0.60 |
| 23 | ರಾಯಚೂರು | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| 24 | ಶಿವಮೊಗ್ಗ | 0 | 13 | 0 | 0 | 0 | 13 | 13 | 0 | 0 | 0 | 0.00 | 0.00 | 0.00 |
| 25 | ತುಮಕೂರು* | 2 | 361 | 0 | 3 | 52 | 418 | 0 | 0 | 351 | 67 | 13.40 | 6.70 | 6.70 |
| 26 | ಉಡುಪಿ | 0 | 1 | 0 | 0 | 0 | 1 | 0 | 0 | 1 | 0 | 0.00 | 0.00 | 0.00 |
| 27 | ಉತ್ತರ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0.00 | 0.00 | 0.00 |
| | ಒಟ್ಟು | 2 | 1511 | 450 | 6 | 71 | 2040 | 87 | 15 | 1890 | 78 | 15.60 | 7.80 | 7.80 |

* ತರುವಾಯ ಈ ಪ್ರಕರಣಗಳು ಜೀತಪದ್ಧತಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಕಂಡುಬಂದಿರುತ್ತದೆ.

## ಕೋಷ್ಟಕ -7

### 1976 ರಿಂದ 2005 ರವರೆಗೆ ಕರ್ನಾಟಕ ರಾಜ್ಯದಲ್ಲಿ ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಹಾಗೂ ಅಪರಾಧಿಗಳ ಮೇಲೆ ಹೂಡಿದ ದಾವೆಗಳ ವಿವರಗಳು - (ಜಿಲ್ಲಾವಾರು)

| ಕ್ರ. ಸಂ | ಜಿಲ್ಲೆಯ ಹೆಸರು | ಗುರುತಿಸಿದ ಮತ್ತು ಬಿಡುಗಡೆಗೊಳಿಸಿದ ಜೀತದಾಳುಗಳು | | | | | | | ಪುನರ್ವಸತಿಗೊಳಿಸಿದ ಜೀತದಾಳುಗಳು | | | | | | | ಪುನರ್ವಸತಿಗೆ ಬಳಸಿದ ಹಣ (ಲಕ್ಷ ರೂಪಾಯಿಗಳಲ್ಲಿ) | | | | | | | ಅಪರಾಧಿಗಳಮೇಲೆ ಹೂಡಿದ ದಾವೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮಾರ್ಚ್ 2000ದ ವರೆಗೆ | 2000-01 | 2001-02 | 2002-03 | 2003-04 | 2004-05 | ಒಟ್ಟು | ಮಾರ್ಚ್ 2000ದ ವರೆಗೆ | 2000-01 | 2001-02 | 2002-03 | 2003-04 | 2004-05 | ಒಟ್ಟು | ಮಾರ್ಚ್ 2000ದ ವರೆಗೆ | 2000-01 | 2001-02 | 2002-03 | 2003-04 | 2004-05 | ಒಟ್ಟು | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 |
| 1 | ಬಾಗಲಕೋಟೆ | 197 | 2 | 0 | 0 | 0 | 0 | 199 | 53 | 0 | 0 | 0 | 2 | 0 | 55 | 1.330 | 0 | 0 | 0 | 0.40 | 0 | 1.730 | 0 |
| 2 | ಬೆಂಗಳೂರು (ಗ್ರಾ) | 6132 | 27 | 144 | 3 | 0 | 0 | 6306 | 5004 | 0 | 0 | 0 | 186 | 0 | 5190 | 337.634 | 0 | 0 | 0 | 37.20 | 0 | 374.834 | 3 |
| 3 | ಬೆಂಗಳೂರು (ನ) | 2802 | 8 | 0 | 0 | 16 | 0 | 2826 | 2604 | 0 | 0 | 0 | 5 | 0 | 2609 | 139.325 | 0 | 0 | 0 | 1.00 | 0 | 140.325 | 5 |
| 4 | ಬೆಳಗಾವಿ | 19 | 0 | 0 | 0 | 0 | 0 | 19 | 10 | 0 | 0 | 0 | 0 | 0 | 10 | 0.400 | 0 | 0 | 0 | 0 | 0 | 0.400 | 0 |
| 5 | ಬಳ್ಳಾರಿ | 602 | 2 | 1 | 0 | 0 | 0 | 605 | 575 | 0 | 0 | 0 | 3 | 0 | 578 | 22.976 | 0 | 0 | 0 | 0.60 | 0 | 23.576 | 3 |
| 6 | ಬೀದರ | 12 | 0 | 9 | 0 | 2 | 0 | 23 | 10 | 0 | 0 | 0 | 0 | 0 | 10 | 0.400 | 0 | 0 | 0 | 0 | 0 | 0.400 | 0 |
| 7 | ಬಿಜಾಪುರ | 591 | 0 | 0 | 0 | 0 | 0 | 591 | 557 | 0 | 0 | 0 | 0 | 0 | 557 | 5.433 | 0 | 0 | 0 | 0 | 0 | 5.433 | 0 |
| 8 | ಚಾಮರಾಜನಗರ | 7438 | 72 | 20 | 0 | 0 | 0 | 7530 | 6559 | 0 | 0 | 0 | 92 | 0 | 6651 | 362.395 | 0 | 0 | 0 | 18.40 | 0 | 380.795 | 0 |
| 9 | ಚಿಕ್ಕಮಗಳೂರು | 2756 | 0 | 0 | 0 | 0 | 0 | 2756 | 2363 | 0 | 0 | 0 | 0 | 0 | 2363 | 95.689 | 0 | 0 | 0 | 0 | 0 | 95.689 | 0 |
| 10 | ಚಿತ್ರದುರ್ಗ | 1074 | 0 | 0 | 0 | 0 | 0 | 1074 | 1006 | 0 | 0 | 0 | 0 | 0 | 1006 | 42.945 | 0 | 0 | 0 | 0 | 0 | 42.945 | 0 |
| 11 | ದಕ್ಷಿಣ ಕನ್ನಡ | 385 | 0 | 0 | 0 | 0 | 0 | 385 | 265 | 0 | 0 | 0 | 0 | 0 | 265 | 10.600 | 0 | 0 | 0 | 0 | 0 | 10.600 | 0 |
| 12 | ದಾವಣಗೆರೆ | 3795 | 0 | 0 | 0 | 0 | 0 | 3795 | 3615 | 0 | 0 | 0 | 0 | 0 | 3615 | 185.891 | 0 | 0 | 0 | 0 | 0 | 185.891 | 27 |
| 13 | ಧಾರವಾಡ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0.000 | 0 |
| 14 | ಗದಗ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0.000 | 0 |
| 15 | ಗುಲ್ಬರ್ಗ | 49 | 0 | 0 | 0 | 0 | 0 | 49 | 47 | 0 | 0 | 0 | 0 | 0 | 47 | 1.190 | 0 | 0 | 0 | 0 | 0 | 1.190 | 0 |
| 16 | ಹಾಸನ | 4910 | 44 | 0 | 0 | 0 | 0 | 4954 | 4295 | 0 | 0 | 0 | 43 | 0 | 4338 | 144.350 | 0 | 0 | 0 | 8.60 | 0 | 152.950 | 48 |
| 17 | ಹಾವೇರಿ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0.000 | 0 |
| 18 | ಕೊಡಗು | 57 | 1 | 0 | 0 | 0 | 0 | 58 | 57 | 0 | 0 | 0 | 0 | 0 | 57 | 2.437 | 0 | 0 | 0 | 0 | 0 | 2.437 | 1 |
| 19 | ಕೋಲಾರ | 2957 | 370 | 0 | 0 | | 0 | 3327 | 2637 | 0 | 0 | 0 | 370 | 0 | 3007 | 110.945 | 0 | 0 | 0 | 74.00 | 0 | 184.945 | 20 |
| 20 | ಕೊಪ್ಪಳ | 17 | 49 | 1 | 0 | 0 | 0 | 67 | 15 | 0 | 0 | 0 | 6 | 0 | 21 | 0.600 | 0 | 0 | 0 | 1.20 | 0 | 1.800 | 50 |
| 21 | ಮಂಡ್ಯ | 5316 | 45 | 3 | 0 | 0 | 0 | 5364 | 5096 | 0 | 0 | 36 | 12 | 0 | 5144 | 278.860 | 0 | 0 | 7.20 | 2.40 | 0 | 288.460 | 1 |
| 22 | ಮೈಸೂರು | 15206 | 516 | 272 | 0 | 1 | 21 | 16016 | 14151 | 0 | 0 | 0 | 783 | 0 | 14934 | 782.700 | 0 | 0 | 0 | 156.60 | 0 | 939.300 | 70 |
| 23 | ರಾಯಚೂರು | 106 | 0 | 0 | 0 | 0 | 0 | 106 | 88 | 0 | 0 | 0 | 0 | 0 | 88 | 3.520 | 0 | 0 | 0 | 0 | 0 | 3.520 | 0 |
| 24 | ಶಿವಮೊಗ್ಗ | 5234 | 13 | 0 | 0 | 0 | 0 | 5247 | 4614 | 0 | 0 | 0 | 0 | 0 | 4614 | 219.421 | 0 | 0 | 0 | 0 | 0 | 219.421 | 2 |
| 25 | ತುಮಕೂರು | 2046 | 361 | 0 | 3 | 52 | 4 | 2466 | 1768 | 0 | 0 | 0 | 351 | 64 | 2183 | 70.300 | 0 | 0 | 0 | 70.20 | 6.40 | 146.900 | 26 |
| 26 | ಉಡುಪಿ | 0 | 1 | 0 | 0 | 0 | 0 | 1 | 0 | 0 | 0 | 0 | 1 | 0 | 1 | 0 | 0 | 0 | 0 | 0.20 | 0 | 0.200 | 0 |
| 27 | ಉತ್ತರ ಕನ್ನಡ | 8 | 0 | 0 | 0 | 0 | 0 | 8 | 5 | 0 | 0 | 0 | 0 | 0 | 5 | 0.125 | 0 | 0 | 0 | 0 | 0 | 0.125 | 0 |
| | ಒಟ್ಟು | 61709 | 1511 | 450 | 6 | 71 | 25 | 63772 | 55394 | 0 | 0 | 36 | 1854 | 64 | 57348 | 2819.466 | 0 | 0 | 7.20 | 370.80 | 6.40 | 3203.866 | 256 |